ಭಾನುವಾರ, ಜನವರಿ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 2 | ಪುಟ 18

www.prajavani.net · /prajavani.net · @prajavani · /prajavani · http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಈ ವರ್ಷ ತಂತ್ರಜ್ಞಾನ ನಮ್ಮ ಬದುಕಿನಲ್ಲಿ ಮಾಡಬಹುದಾದ ಚಮತ್ಕಾರಗಳು

ಪಿಎಂ- ಕಿಸಾನ್ ಸಮ್ಮಾನ್: ರಾಜ್ಯಕ್ಕೆ ₹ 685.28 ಕೋಟಿ 9
ಸಿ.ಎಂ ಬಸವರಾಜ ಬೊಮ್ಮಾಯಿಗೆ ಸಿದ್ದರಾಮಯ್ಯ ಪತ್ರ
ವಾಣಿಜ್ಯ ಎಲ್‌ಪಿಜಿ ದರ ಇಳಿಕೆ 9
‘ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಿ’ 8

# ಬಯಲುಸೀಮೆ: ಜೀವಜಲಕ್ಕೆ ನಂಜು

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಬಯಲುಸೀಮೆಯ ಜನರು ಕೃಷಿ ಮತ್ತು ಕುಡಿಯುವ ನೀರಿಗೆ ಪ್ರಮುಖವಾಗಿ ಕೊಳವೆಬಾವಿಗಳನ್ನೇ ಆಶ್ರಯಿಸಿದ್ದಾರೆ. ಜನರಿಗೆ ಜೀವನಾಧಾರವಾಗಿರುವ ಕೊಳವೆಬಾವಿಗಳ ನೀರು ದಿನದಿಂದ ದಿನಕ್ಕೆ ವಿಷಮಯವಾಗುತ್ತಿದೆ. ರಾಜ್ಯ ಅಂತರ್ಜಲ ನಿರ್ದೇಶನಾಲಯ ಮತ್ತು ಸಣ್ಣ ನೀರಾವರಿ ಇಲಾಖೆಯ ಪ್ರಕಾರ 2019ರಿಂದ ರಾಜ್ಯದಲ್ಲಿ ಅಂತರ್ಜಲ ಮಟ್ಟ ಗಣನೀಯವಾಗಿ ಹೆಚ್ಚಿದೆ. ಈ ಆಶಾದಾಯಕ ಬೆಳವಣಿಗೆಯ ನಡುವೆಯೇ ಬಹಳಷ್ಟು ತಾಲ್ಲೂಕುಗಳ ನೀರಿನಲ್ಲಿ ಫ್ಲೋರೈಡ್, ಯುರೇನಿಯಂ, ಆರ್ಸೆನಿಕ್ ಅಂಶ ಸುರಕ್ಷಿತ ಮಟ್ಟಕ್ಕಿಂತಲೂ ಹೆಚ್ಚಿದೆ.

ಎಷ್ಟೇ ಅಂತರ್ಜಲ ಮರುಪೂರಣ ಯೋಜನೆಗಳು, ಅರಿವಿನ ಕಾರ್ಯಕ್ರಮಗಳು ನಡೆದರೂ ನೀರಿನ ಮಹತ್ವ ಇಂದಿಗೂ ನಾಗರಿಕರಿಗೆ ಅರ್ಥವಾಗಿಲ್ಲ. ನೀರಿನ ಬೇಕಾಬಿಟ್ಟಿ ಬಳಕೆ ಹೆಚ್ಚಿದೆ. ಅಂತರ್ಜಲ ಅತಿಬಳಕೆಯ ತಾಲ್ಲೂಕುಗಳಲ್ಲಿ ಕೊಳವೆಬಾವಿಗಳನ್ನು ಕೊರೆಯಬಾರದು ಎನ್ನುವ ಸರ್ಕಾರದ ಆದೇಶ ಕಡತಕ್ಕೆ ಮಾತ್ರ ಸೀಮಿತವಾಗಿದೆ. ನೆಲದ ಆಳದಿಂದ ಮೇಲಕ್ಕೆತ್ತಿ ಕುಡಿಯುತ್ತಿರುವ ನೀರು ಆಪತ್ತನ್ನು ತಂದೊಡ್ಡುತ್ತಿದೆ.

4ನೇ ಪುಟ ನೋಡಿ

**ಒಳನೋಟ**

ವಿಷವಾಗುತ್ತಿದೆ ಕುಡಿಯುವ ನೀರು

ಪ್ರತಿಕ್ರಿಯಿಸಿ: 9606038256
feedback@prajavani.co.in

### ಸಾವಿರ ಮೈಕ್ರೊಗ್ರಾಂಗೂ ಹೆಚ್ಚಿನ ಯುರೇನಿಯಂ

ಯುರೇನಿಯಂಗೆ ಸಂಬಂಧಿಸಿದಂತೆ 73 ಹಳ್ಳಿಗಳಲ್ಲಿ ನಡೆದ ಅಧ್ಯಯನ ಬಯಲು ಸೀಮೆಯ ಹಲವು ಹಳ್ಳಿಗಳ ಜನರು ವಿಷಯುಕ್ತ ನೀರನ್ನು ಕುಡಿಯುತ್ತಿದ್ದಾರೆ ಎನ್ನುವ ಮಾಹಿತಿ ನೀಡುತ್ತದೆ. 57 ಹಳ್ಳಿಗಳ ಕೊಳವೆಬಾವಿಗಳ ನೀರಿನಲ್ಲಿ 30 ಮೈಕ್ರೊಗ್ರಾಂಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಯುರೇನಿಯಂ ಪ್ರಮಾಣವಿದೆ. 48 ಹಳ್ಳಿಗಳಲ್ಲಿ 60 ಮೈಕ್ರೊಗ್ರಾಂ ಮೀರಿದೆ.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಫ್ಲೋರೈಡ್ ನೀರಿನ ಪರಿಣಾಮ ಕಲಬುರಗಿ ತಾಲ್ಲೂಕಿನ ಹೊನ್ನಕಿರಣಗಿಯ ಬಾಲಕಿಯ ಹಲ್ಲುಗಳು ಹಳದಿಯಾಗಿವೆ

ನೀರಿನ ಗುಣಮಟ್ಟ ಪರೀಕ್ಷೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಪ್ರಯೋಗಾಲಯ ಸ್ಥಾಪನೆಗೆ ಮುಂದಾಗಿದ್ದೇವೆ. ಪ್ರಯೋಗಾಲಯದ ಮೂಲಕ ಆ ಜಿಲ್ಲೆಯ ನೀರು ಕುಡಿಯಲು ಯೋಗ್ಯವೊ, ಅಲ್ಲವೊ, ನೀರಿನ ಗುಣಮಟ್ಟ ಹೇಗಿದೆ ಎನ್ನುವುದು ತಿಳಿಯಲಿದೆ. ಈಗಾಗಲೇ ಪ್ರಯೋಗಾಲಯ ಸ್ಥಾಪನೆಯ ಪ್ರಕ್ರಿಯೆಗಳು ಆರಂಭವಾಗಿದೆ. ಮುಂದಿನ 3-4 ತಿಂಗಳಲ್ಲಿ ಎಲ್ಲ ಜಿಲ್ಲೆಗಳಲ್ಲೂ ಕಾರ್ಯಾರಂಭ ಮಾಡಲಿವೆ. ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಗೂ ಇದರಿಂದ ಅನುಕೂಲ ಆಗುತ್ತದೆ.

**ಕೆ.ಎಸ್.ಈಶ್ವರಪ್ಪ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

## ಹೊನ್ನಕಿರಣಗಿ ಗ್ರಾಮದಲ್ಲಿ ಫ್ಲೋರೈಡ್‌ಯುಕ್ತ ನೀರು
# ಅಂಗ ಊನ, ಅಕಾಲ ಮುಪ್ಪು!

• ಸಂತೋಷ ಈ. ಚಿನಗುಡಿ

ಕಲಬುರಗಿ: ತಾಲ್ಲೂಕಿನ ಹೊನ್ನಕಿರಣಗಿ ಗ್ರಾಮದ ಕಾವ್ಯಾಗೆ (ಹೆಸರು ಬದಲಿಸಲಾಗಿದೆ) ಈಗ 17 ವರ್ಷ. ಪ್ರಥಮ ಪಿಯು ವಿದ್ಯಾರ್ಥಿನಿಯಾದ ಅವರು ನಡೆದು ಕಾಲೇಜು ತಲುಪುವಷ್ಟರಲ್ಲಿ ಸುಸ್ತಾಗುತ್ತಾರೆ. ಕುಡಿಯುವ ನೀರಿನಲ್ಲಿನ ಫ್ಲೋರೈಡ್ ಅಂಶ ಅವರ ಕಾಲುಗಳ ಸಾಮರ್ಥ್ಯವನ್ನು ಕಸಿದುಕೊಂಡಿದೆ.

ಕಾವ್ಯಾ ಅಷ್ಟೇ ಅಲ್ಲ; ಶಾಲಾ–ಕಾಲೇಜಿಗೆ ಹೋಗುವ ಈ ಊರಿನ ಶೇ 60ರಷ್ಟು ಮಕ್ಕಳು ದೈಹಿಕವಾಗಿ ಸದೃಢವಾಗಿಲ್ಲ. ಕೆಲವರ ಕಾಲುಗಳು ವಕ್ರವಾಗಿದ್ದರೆ, ಕೆಲವರ ಹಲ್ಲು ಹಳದಿಯಾಗಿವೆ. ಕಾಲುಗಳ ಚೈತನ್ಯ ಕಡಿಮೆಯಾಗಿದ್ದರಿಂದ ಇಲ್ಲಿನ ಮಕ್ಕಳು ಆಟೋಟಗಳಲ್ಲೂ ಸಾಧನೆ ಮಾಡಲು ಆಗಿಲ್ಲ.

ಲವಲವಿಕೆಯಿಂದ ಇರಬೇಕಿದ್ದ ಮಕ್ಕಳು ಮತ್ತು ಯುವಜನರ ಕಥೆ ಹೀಗಿದ್ದರೆ, ಮಧ್ಯವಯಸ್ಕರು, ಹಿರಿಯರ ಸ್ಥಿತಿ ಇನ್ನೂ ಗಂಭೀರ. ಹೊನ್ನಕಿರಣಗಿಯಲ್ಲಿ 10 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದ್ದು, ಶೇ 50ರಷ್ಟು ಮಂದಿ ಒಂದಿಲ್ಲೊಂದು ಕಾಯಿಲೆಯಿಂದ ಬಳಲುತ್ತಿದ್ದಾರೆ. 35 ವರ್ಷ ಮೀರುವ ಮುನ್ನವೇ ಹಲವರು ಕಿಡ್ನಿ ಸ್ಟೋನ್‌ಗಳಿಂದ (ಮೂತ್ರಪಿಂಡದಲ್ಲಿ ಹರಳು) ಬಳಲುತ್ತಿದ್ದಾರೆ. ಗರ್ಭಿಣಿ– ಬಾಣಂತಿಯರಿಗೆ ರಕ್ತಹೀನತೆ ಕಾಡುತ್ತಿದೆ. 50 ವರ್ಷ ಆಸುಪಾಸಿನವರಿಗೆ ಕತ್ತು ನೋವು ಇದೆ. ಬೆನ್ನು ಬಾಗಿದೆ, ಕೀಲು ಸವೆದಿದೆ. ಅಕಾಲ ಮುಪ್ಪು ಆವರಿಸಿದೆ.

4ನೇ ಪುಟ ನೋಡಿ

## ನೋಂದಣಿ ವೇಳೆ ಸಿಗಲಿದೆ ರಿಯಾಯಿತಿ
# ಆಸ್ತಿ ಖರೀದಿಸುವವರಿಗೆ ಒಳ್ಳೆ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ಖರೀದಿ, ಕರಾರು ಪತ್ರ, ಭೋಗ್ಯ ಪತ್ರಗಳನ್ನು ನೋಂದಣಿ ಮಾಡಿಸುವಾಗ ಪಾವತಿಸುವ ನೋಂದಣಿ ಮತ್ತು ಮುದ್ರಾಂಕ ಶುಲ್ಕದಲ್ಲಿ ರಿಯಾಯಿತಿ ಪಡೆಯಲು ಅನುವಾಗುವಂತೆ ಮಾರ್ಗಸೂಚಿ ದರವನ್ನು ಶೇ 10ರಷ್ಟು ಕಡಿತಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ ಈ ವಿಷಯ ತಿಳಿಸಿದರು.

‘ರಾಜ್ಯದಾದ್ಯಂತ ಈ ರಿಯಾಯಿತಿ ಅನ್ವಯವಾಗಲಿದೆ. ಶನಿವಾರದಿಂದ (ಜ. 1) ಮಾರ್ಚ್ 31ರವರೆಗೆ ಜಾರಿಯಲ್ಲಿ ಇರಲಿದೆ. ಕೃಷಿ ಜಮೀನು, ಕೃಷಿಯೇತರ ಜಮೀನು, ನಿವೇಶನ, ಕಟ್ಟಡ, ಅಪಾರ್ಟ್‌ಮೆಂಟ್, ಫ್ಲ್ಯಾಟ್ ಸೇರಿದಂತೆ ಎಲ್ಲ ವಿಧದ ಸ್ಥಿರಾಸ್ತಿಗಳ ನೋಂದಣಿ ವೇಳೆ ಕಡಿತಗೊಳಿಸಿದ ಮಾರ್ಗಸೂಚಿ ದರವನ್ನೇ ಪರಿಗಣಿಸಿ, ನೋಂದಣಿ ಮತ್ತು ಮುದ್ರಾಂಕ ಶುಲ್ಕ ನಿಗದಿಪಡಿಸಲಾಗುವುದು’ ಎಂದರು.

‘ಆಯಾ ಪ್ರದೇಶಗಳಲ್ಲಿರುವ ಮಾರ್ಗಸೂಚಿ ದರದ ಪ್ರಕಾರ ಈ ನಿಯಮ ಅನ್ವಯವಾಗಲಿದೆ. ಈ ನಿರ್ಧಾರದಿಂದ ರಾಜ್ಯದ ಲಕ್ಷಾಂತರ ಜನರಿಗೆ ಲಾಭವಾಗಲಿದೆ’ ಎಂದು ಹೇಳಿದರು.

8ನೇ ಪುಟ ನೋಡಿ

### ‘ಕೈಗಾರಿಕಾ ಜಮೀನು: 10 ವರ್ಷಕ್ಕೇ ಕ್ರಯಪತ್ರ’

ಬೆಂಗಳೂರು: ಕೈಗಾರಿಕಾ ಉದ್ದೇಶಗಳಿಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮೂಲಕ ಹಂಚಿಕೆ ಮಾಡುವ ಎರಡು ಎಕರೆಗೂ ಹೆಚ್ಚು ವಿಸ್ತೀರ್ಣದ ಜಮೀನುಗಳ ನಿರ್ಬಂಧಿತ ಅವಧಿಯನ್ನು ಸಡಿಲಿಸಿ, 10 ವರ್ಷದಲ್ಲೇ ಶುದ್ಧ ಕ್ರಯಪತ್ರ ಮಾಡಿಕೊಡುವುದಕ್ಕೆ ಪೂರಕವಾಗಿ ಕೆಐಎಡಿಬಿ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ ತಿಳಿಸಿದ್ದಾರೆ.

ಈ ಬಗ್ಗೆ ಶನಿವಾರ ಮಾಹಿತಿ ನೀಡಿರುವ ಅವರು, ‘ಈಗ ಇರುವ ಕಾಯ್ದೆಯ ಪ್ರಕಾರ ಕೈಗಾರಿಕಾ ಜಮೀನನ್ನು 99 ವರ್ಷಗಳವರೆಗೂ ಶುದ್ಧ ಕ್ರಯಪತ್ರ ಮಾಡಿಕೊಡಲು ಅವಕಾಶವಿಲ್ಲ. ಇದರಿಂದ ಹೂಡಿಕೆದಾರರಿಗೆ ತೊಂದರೆ ಆಗುತ್ತಿದೆ. ಇದರ ನಿವಾರಣೆಗೆ ನಿರ್ಬಂಧಿತ ಅವಧಿಯನ್ನು 10 ವರ್ಷಕ್ಕೆ ತಗ್ಗಿಸಲಾಗುವುದು’ ಎಂದಿದ್ದಾರೆ. ಹೂಡಿಕೆದಾರರು ರಾಜ್ಯದಲ್ಲಿ ಉದ್ಯಮ ಆರಂಭಿಸಲು ಹಿಂಜರಿಯುತ್ತಿದ್ದಾರೆ. ಸಮಸ್ಯೆ ಪರಿಹರಿಸಲು ಕೆಐಎಡಿಬಿ ಕಾಯ್ದೆಗೆ ತಿದ್ದುಪಡಿ ತರಲು ತೀರ್ಮಾನಿಸಲಾಗಿದೆ. ಇತ್ತೀಚೆಗೆ ನಡೆದ ಸಂಪುಟ ಸಭೆಯಲ್ಲಿ ಈ ಪ್ರಸ್ತಾವಕ್ಕೆ ಒಪ್ಪಿಗೆಯನ್ನೂ ನೀಡಲಾಗಿದೆ ಎಂದು ತಿಳಿಸಿದ್ದಾರೆ.

**ಎರಡೇ ವರ್ಷ ನಿರ್ಬಂಧ:** ಕೆಐಎಡಿಬಿ ಹಂಚಿಕೆ ಮಾಡುವ ಜಮೀನಿನಲ್ಲಿ ಕೈಗಾರಿಕೆ ಸ್ಥಾಪಿಸಿ, ಎರಡು ವರ್ಷಗಳವರೆಗೆ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರೆ ಶುದ್ಧ ಕ್ರಯಪತ್ರ ಪಡೆಯಲು 10 ವರ್ಷಗಳವರೆಗೂ ಕಾಯಬೇಕಿಲ್ಲ. ಅಂತಹ ಉದ್ಯಮಿಗಳಿಗೆ ಎರಡೇ ವರ್ಷಕ್ಕೆ ಕ್ರಯಪತ್ರ ವಿತರಿಸಲಾಗುವುದು ಎಂದು ಹೇಳಿದ್ದಾರೆ.

### ಲೆಕ್ಕಾಚಾರ ಹೇಗೆ?

ರಾಜ್ಯದಲ್ಲಿ ಯಾವುದೇ ಸ್ಥಿರಾಸ್ತಿಯ ಖರೀದಿಗೆ ಸಂಬಂಧಿಸಿದಂತೆ ಶುದ್ಧ ಕ್ರಯಪತ್ರ, ಭೋಗ್ಯದ ಕರಾರು, ದಾನಪತ್ರ, ಅಡಮಾನ ಪತ್ರ, ಲೀಸ್ ಕಂ ಸೇಲ್ ಡೀಡ್, ಹಿಸ್ಸಾ ಪತ್ರಗಳನ್ನು ನೋಂದಣಿ ಮಾಡುವಾಗ ಆ ಆಸ್ತಿಯ ಮಾರ್ಗಸೂಚಿ ದರದ (ನೋಂದಣಿ ಮತ್ತು ಮುದ್ರಾಂಕ ಇಲಾಖೆ ನಿಗದಿಪಡಿಸುವ ಕನಿಷ್ಠ ಮಾರಾಟ ದರ) ಶೇ 5ರಷ್ಟು ಮುದ್ರಾಂಕ (ಸ್ಟ್ಯಾಂಪ್), ಶೇ 1ರಷ್ಟು ನೋಂದಣಿ ಶುಲ್ಕ ವಿಧಿಸಲಾಗುತ್ತಿದೆ.

8ನೇ ಪುಟ ನೋಡಿ




### ತಿರುಪತಿ: ವಿಶ್ವದಲ್ಲೇ ದುಬಾರಿ ಬೆಲೆಯ ಸೇವೆ?

ಹೈದರಾಬಾದ್: ತಿರುಪತಿಯ ತಿರುಮಲ ವೆಂಕಟೇಶ್ವರ ದೇವಸ್ಥಾನದಲ್ಲಿನ ₹ 1 ಕೋಟಿಯಿಂದ ₹ 1.5 ಕೋಟಿ ಬೆಲೆಯ ಉದಯಾಸ್ತಮಾನ ಸೇವೆಯು ವಿಶ್ವದಲ್ಲೇ ಅತ್ಯಂತ ದುಬಾರಿ ಸೇವೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

ದೇವಸ್ಥಾನದ ಆಡಳಿತ ಮಂಡಳಿಯು ವಿಶ್ವದ ಅತ್ಯಂತ ದುಬಾರಿ ಸೇವೆಯನ್ನು ಕಾರ್ಯಗತಗೊಳಿಸಲು ಯೋಜಿಸುತ್ತಿದ್ದು, ಈ ಸೇವೆಯಲ್ಲಿ ಭಕ್ತ ಮತ್ತು ಅವರ ಕುಟುಂಬದ ಐವರು ಸದಸ್ಯರು ಗರ್ಭಗುಡಿ ಮತ್ತು ಗೊತ್ತುಪಡಿಸಿದ ಇತರ ಪ್ರದೇಶಗಳಲ್ಲಿ ಕುಳಿತುಕೊಳ್ಳಲು ಅನುವು ಮಾಡಿಕೊಡಲಿದೆ. ಸುಪ್ರಭಾತದಿಂದ ಆರಂಭವಾಗಿ ಏಕಾಂತದವರೆಗಿನ ಮುಕ್ತಾಯದ ಹಂತದವರೆಗಿನ ಎಲ್ಲಾ ದೈನಂದಿನ ಆಚರಣೆಗಳನ್ನು ಈ ಸೇವೆಯಲ್ಲಿ ವೀಕ್ಷಿಸಬಹುದಾಗಿದೆ ಎಂದು ದೇವಾಲಯದ ಅಧಿಕಾರಿಗಳು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

8ನೇ ಪುಟ ನೋಡಿ

**ಚಿನಕುರುಳಿ**

ಪ್ರಕಾಶ್ ಶೆಟ್ಟಿ

# ವೈಷ್ಣೋದೇವಿ ದೇಗುಲದಲ್ಲಿ ಕಾಲ್ತುಳಿತ: 12 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಜಮ್ಮು: ಇಲ್ಲಿನ ಪ್ರಸಿದ್ಧ ಮಾತಾ ವೈಷ್ಣೋದೇವಿ ದೇಗುಲದಲ್ಲಿ ಹೊಸ ವರ್ಷದ ದಿನವಾದ ಶನಿವಾರ ಕಾಲ್ತುಳಿತ ಉಂಟಾಗಿದ್ದು, ಘಟನೆಯಲ್ಲಿ 12 ಯಾತ್ರಾರ್ಥಿಗಳು ಮೃತಪಟ್ಟಿದ್ದು, 14 ಮಂದಿ ಗಾಯಗೊಂಡಿದ್ದಾರೆ.

‘ಶುಕ್ರವಾರ ಮಧ್ಯರಾತ್ರಿ 2.45 ರ ಸುಮಾರಿಗೆ ಈ ಘಟನೆ ಸಂಭವಿಸಿದ್ದು, ಹೊಸ ವರ್ಷವನ್ನು ಭಕ್ತಿಪೂರ್ವಕವಾಗಿ ಬರಮಾಡಿಕೊಳ್ಳಲು ಅಪಾರ ಸಂಖ್ಯೆಯ ಭಕ್ತರು ಕಟ್ರಾದಲ್ಲಿರುವ ತ್ರಿಕೂಟ ಬೆಟ್ಟಗಳ ವೈಷ್ಣೋದೇವಿ ಗುಹಾ ದೇಗುಲದಲ್ಲಿ ನೆರೆದಿದ್ದರು. ದೇವರ ದರ್ಶನಕ್ಕಾಗಿ ಸಾಲುಗಟ್ಟಿ ನಿಂತಿದ್ದ ವೇಳೆ ಯಾತ್ರಾರ್ಥಿಗಳ ನಡುವೆ ವಾಗ್ವಾದ ನಡೆದಿದ್ದು ತಳ್ಳಾಟ ನಡೆದಿದೆ. ಈ ವೇಳೆ ನೂಕುನುಗ್ಗಲು ಉಂಟಾಗಿ ದುರ್ಘಟನೆ ಸಂಭವಿಸಿದೆ’ ಎಂದು ಜಮ್ಮು ಮತ್ತು ಕಾಶ್ಮೀರದ ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಆರಂಭಿಸಿ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನೂ ಕೆಲವರ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗಬಹುದು’ ಎಂದು ಮೂಲಗಳು ತಿಳಿಸಿವೆ.

ಮೃತಪಟ್ಟವರಲ್ಲಿ ಉತ್ತರ ಪ್ರದೇಶದ ಏಳು ಮಂದಿ, ದೆಹಲಿಯ ಮೂವರು ಮತ್ತು ಹರಿಯಾಣದ ಇಬ್ಬರು ಸೇರಿದ್ದಾರೆ. ಘಟನೆಯನ್ನು ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ನೇತೃತ್ವದಲ್ಲಿ ಉನ್ನತ ಮಟ್ಟದ ತನಿಖೆಗೆ ಆದೇಶಿಸಿದ್ದು, ಮಾತಾ ವೈಷ್ಣೋದೇವಿ ದೇಗುಲದ ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡವರಿಗೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಸಂತಾಪ ಸೂಚಿಸಿದ್ದಾರೆ.

ಕಾಲ್ತುಳಿತದ ಬಳಿಕ ಬಂಧುಗಳಿಗಾಗಿ ಹುಡುಕಾಡಿ ರೋದಿಸಿದ ಯುವತಿಯರು
–ಪಿಟಿಐ ಚಿತ್ರ

8ನೇ ಪುಟ ನೋಡಿ

# ಕೋವಿಡ್ ಏರಿಕೆ: ತಾತ್ಕಾಲಿಕ ಆಸ್ಪತ್ರೆ ನಿರ್ಮಿಸಲು ಸೂಚನೆ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19 ಪ್ರಕರಣಗಳು ಭಾರಿ ಏರಿಕೆ ದಾಖಲಿಸಿವೆ. ಶನಿವಾರ ಬೆಳಿಗ್ಗೆ ಕೊನೆಗೊಂಡಂತೆ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 22,775 ಜನರಲ್ಲಿ ಸೋಂಕು ಪತ್ತೆಯಾಗಿದ್ದು, ಅಕ್ಟೋಬರ್ 6ರ ಬಳಿಕ ದಾಖಲಾದ ಅತ್ಯಧಿಕ ಸಂಖ್ಯೆಯಿದು.



ಕೋವಿಡ್ ಪ್ರಕರಣಗಳು ಕ್ಷಿಪ್ರವಾಗಿ ಏರಿಕೆ ಕಾಣುತ್ತಿರುವ ಹಿನ್ನೆಲೆಯಲ್ಲಿ, ತಾತ್ಕಾಲಿಕ ಆಸ್ಪತ್ರೆಗಳ ನಿರ್ಮಾಣ ಆರಂಭಿಸುವಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಶನಿವಾರ ನಿರ್ದೇಶನ ನೀಡಿದೆ. ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆರೋಗ್ಯ ಮೂಲಸೌಕರ್ಯಗಳನ್ನು ತುರ್ತಾಗಿ ಮೇಲ್ದರ್ಜೆಗೆ ಏರಿಸಬೇಕಿರುವುದು ಸದ್ಯದ ಅಗತ್ಯ ಎಂದು ಆರೋಗ್ಯ ಇಲಾಖೆ ಕಾರ್ಯದರ್ಶಿ ರಾಜೇಶ್ ಭೂಷಣ್ ಒತ್ತಿ ಹೇಳಿದ್ದಾರೆ. ಆಸ್ಪತ್ರೆಗಳನ್ನು ಶೀಘ್ರವಾಗಿ ನಿರ್ಮಿಸಲು ಡಿಆರ್‌ಡಿಒ, ಸಿಎಸ್‌ಐಆರ್, ಖಾಸಗಿಯವರು, ಎನ್‌ಜಿಒಗಳ ನೆರವು ಪಡೆಯಬೇಕು ಎಂದು ಸೂಚಿಸಿದ್ದಾರೆ.

ದೇಶದಲ್ಲಿ ಸಕ್ರಿಯ ಕೋವಿಡ್ ಪ್ರಕರಣಗಳು 1 ಲಕ್ಷದ ಗಡಿಯನ್ನು ದಾಟಿವೆ. ಮಹಾರಾಷ್ಟ್ರದಲ್ಲಿ ಅತಿಹೆಚ್ಚು ಅಂದರೆ 9,170 ಪ್ರಕರಣಗಳು ವರದಿಯಾಗಿವೆ. ದೆಹಲಿಯಲ್ಲಿ 2,716 ಸೋಂಕಿತರು ಕಂಡುಬಂದಿದ್ದು, ಕೋವಿಡ್ ದೃಢಪಡುವ ಪ್ರಮಾಣ ಶೇ 3.64ಕ್ಕೆ ಹೆಚ್ಚಳವಾಗಿದೆ. ಹಿಂದಿನ ದಿನಕ್ಕೆ ಹೋಲಿಸಿದರೆ ಪ್ರಕರಣಗಳ ಪ್ರಮಾಣ ಶೇ 51ರಷ್ಟು ಹೆಚ್ಚಳವಾಗಿದೆ.

24 ಗಂಟೆಗಳಲ್ಲಿ ದೇಶದ 161 ಜನರಲ್ಲಿ ಹೊಸದಾಗಿ ಓಮೈಕ್ರಾನ್ ಸೋಂಕು ಪತ್ತೆಯಾಗಿದ್ದು, ಒಟ್ಟು ಸಂಖ್ಯೆ 1,431ಕ್ಕೆ ಏರಿಕೆಯಾಗಿದೆ.

ಮಹಾರಾಷ್ಟ್ರದ 10ಕ್ಕೂ ಹೆಚ್ಚು ಸಚಿವರು ಮತ್ತು 20 ಶಾಸಕರಿಗೆ ಕೋವಿಡ್-19 ದೃಢಪಟ್ಟಿದೆ ಎಂದು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಶನಿವಾರ ತಿಳಿಸಿದ್ದಾರೆ.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳ ಇದೇ ರೀತಿ ಮುಂದುವರಿದರೆ ಕಠಿಣ ನಿರ್ಬಂಧಗಳನ್ನು ವಿಧಿಸಲಾಗುವುದು ಎಂದು ತಿಳಿಸಿದ್ದಾರೆ.

## ವಿದೇಶಿ ದೇಣಿಗೆ: ಎನ್‌ಜಿಒಗಳ ಪರವಾನಗಿ ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯದಲ್ಲಿನ ಕರ್ನಾಟಕ ಸೆಂಟ್ರಲ್ ಡಯಾಸಿಸ್, ಬಯೋಕಾನ್ ಫೌಂಡೇಷನ್, ಸಿಟಿಜನ್ ಆಕ್ಷನ್ ಗ್ರೂಪ್, ಅಜೀಂ ಪ್ರೇಮ್‌ಜಿ ಫೌಂಡೇಷನ್ ಮತ್ತು ಎಚ್‌.ಡಿ. ಕುಮಾರಸ್ವಾಮಿ ಸಹ್ರಯಾಲಯ ಟ್ರಸ್ಟ್ ಹಾಗೂ ಇತರ 736 ಸಂಸ್ಥೆಗಳನ್ನು ಒಳಗೊಂಡಂತೆ ದೇಶದ ಸಾವಿರಾರು ಸರ್ಕಾರೇತರ ಸಂಸ್ಥೆಗಳು ವಿದೇಶಿ ದೇಣಿಗೆ ಪಡೆಯುವ ಪರವಾನಗಿ ಕಳೆದುಕೊಂಡಿವೆ.

12,500ಕ್ಕೂ ಹೆಚ್ಚು ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ) ವಿದೇಶಿ ದೇಣಿಗೆ ಪಡೆಯುವ ಅನುಮತಿಯನ್ನು ಕಳೆದುಕೊಂಡಿವೆ. ಈ ಪೈಕಿ 5,933 ಸಂಸ್ಥೆಗಳು 2021ರ ಡಿ.31ರಂದು ಅನುಮತಿ ಕಳೆದುಕೊಂಡಿವೆ.

8ನೇ ಪುಟ ನೋಡಿ

# ಇನ್ನೂ 5 ಮಾರ್ಗಗಳಲ್ಲಿ ವಜ್ರ ಬಸ್ ಸೇವೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಯಾಣಿಕರ ಅನುಕೂಲಕ್ಕಾಗಿ ಜ.3ರಿಂದ ಹೆಚ್ಚುವರಿಯಾಗಿ ಐದು ಮಾರ್ಗಗಳಲ್ಲಿ 'ವಜ್ರ' ಹವಾನಿಯಂತ್ರಿತ ಬಸ್‌ಗಳ ಸೇವೆಯನ್ನು ಬಿಎಂಟಿಸಿ ಆರಂಭಿಸಲಿದೆ.

ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್, ಕೆಂಪೇಗೌಡ ಬಸ್ ನಿಲ್ದಾಣದಿಂದ ಜನಪ್ರಿಯ ಟೌನ್‌ಶಿಪ್, ಕಾವೇರಿ ಭವನದಿಂದ ಡಿ.ಕ್ರಾಸ್‌ಗೆ (ದೊಡ್ಡಬಳ್ಳಾಪುರ), ಕೆಂಪೇಗೌಡ ಬಸ್ ನಿಲ್ದಾಣದಿಂದ ವೈಟ್‌ಫೀಲ್ಡ್ ಟಿಟಿಎಂಸಿ, ಹೆಬ್ಬಾಳದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗಿನ ಮಾರ್ಗಗಳಲ್ಲಿ ಈ ಸೇವೆ ಆರಂಭಿಸಲಾಗುವುದು ಎಂದು ಬಿಎಂಟಿಸಿ ಪ್ರಕಟಣೆ ತಿಳಿಸಿದೆ.

ಕೆಂಪೇಗೌಡ ಬಸ್ ನಿಲ್ದಾಣದಿಂದ ಕಾಡುಗೋಡಿ ಬಸ್ ನಿಲ್ದಾಣದವರೆಗೆ ಮತ್ತು ಬನಶಂಕರಿ ಟಿಟಿಎಂಸಿಯಿಂದ ಐಟಿಪಿಎಲ್‌ವರೆಗೆ ಹವಾನಿಯಂತ್ರಿತ ಸಾರಿಗೆ ಸೇವೆಗಳ ಸಂಖ್ಯೆಯನ್ನು ಹೆಚ್ಚಿಸ-ಲಾಗುವುದು ಎಂದು ತಿಳಿಸಲಾಗಿದೆ.


## ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್‌ರಸ್ತೆ), ಮಲ್ಲೇಶ್ವರಂ, ಬೆಂಗಳೂರು–560 003.

### ಸ್ಥಿರಾಸ್ತಿಯ ಬಹಿರಂಗ ಹರಾಜು ಇಸ್ತಿಹಾರು

**ಶ್ರೀಮತಿ ಕೆ.ಎಸ್. ವಿಜಯಲಕ್ಷ್ಮಿ(ಅ.ನಂ.ಬಿ2104 ಆರ್‌ಇಜಿ 11848)** ಇವರು ಮರಣ ಹೊಂದಿದ್ದು, ಇವರ ಕಾನೂನು ವಾರಸುದಾರರಾದ 1(ಎ) **ಶ್ರೀ ಜೈಪ್ರಕಾಶ್ ಬಾಬು ಕೆ.ಎಸ್, ಮೊದಲನೇ ಮಗ 1(ಬಿ) ಶ್ರೀ ಚೇತನ್ ಪ್ರಸಾದ್ ಬಾಬು ಕೆ.ಎಸ್. ಎರಡನೇ ಮಗ, ಮನೆ ನಂ. 278 (ಹಳೇ ನಂ.14) ಅಕ್ಕಮಹಾದೇವಿ ರಸ್ತೆ, ವಾರ್ಡ್ ನಂ.29 ಪಿಐಡಿ ನಂ 29-68-278, ಕಾಟನ್ ಪೇಟೆ, ಅಕ್ಕಿಪೇಟೆ ಮುಖ್ಯ ರಸ್ತೆ, ಬೆಂಗಳೂರು-560053..** ಇವರುಗಳು ಮೇಲ್ಕಂಡ **ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ,** ಬಸವೇಶ್ವರನಗರ ಶಾಖೆಯಲ್ಲಿ ತಮ್ಮ ಸ್ಥಿರಾಸ್ತಿಯನ್ನು ಬ್ಯಾಂಕಿಗೆ ಈಡು ಮಾಡಿ ಸಾಲವನ್ನು ಪಡೆದಿದ್ದರು. ಸದರಿ ಸಾಲಗಾರರು ಸಾಲದ ಕರಾರಿನ ರೀತ್ಯಾ ಸಕಾಲದಲ್ಲಿ ಸಾಲ ಮರುಪಾವತಿ ಮಾಡದೆ ಸುಸ್ತಿದಾರರಾಗಿದ್ದರಿಂದ ಇವರ ವಿರುದ್ಧ ಸಾಲದ ಹಣ ವಸೂಲಾತಿಗಾಗಿ ಸಹಕಾರ ಸಂಘಗಳ ಕಲಂ 70 ರ ರೀತ್ಯಾ ಸಾಲ ವಸೂಲಾತಿಗಾಗಿ ದಾವಾವನ್ನು ಹೂಡಲಾಗಿತ್ತು. ಈ ದಾವಾದ ಪ್ರಕಾರ ವ್ಯಾಜ್ಯ **ಸಂಖ್ಯೆ:.ಜೆಆರ್‌ಡಿ/ಯುಬಿಎಫ್ /951/2018-19, ದಿನಾಂಕ:16.10.2019 ರಂತೆ** ಸಾಲಗಾರರ ಸ್ಥಿರಾಸ್ತಿಯನ್ನು ಬಹಿರಂಗ ಹರಾಜು ಮಾಡುವ ಮೂಲಕ ಸ್ಥಿರ ಸ್ವತ್ತನ್ನು ಮಾರಾಟ ಮಾಡಿ ಸಾಲದ ಮೊಬಲಗಿಗೆ ಶೇ 18% ರಂತೆ ಬಡ್ಡಿ, ದಾವಾ ಫೀ ಅಮಲ್ಜಾರಿ ಫೀ ಮತ್ತು ಇತ್ಯಾದಿಗಳನ್ನು ವಸೂಲಿ ಮಾಡಿಕೊಳ್ಳುವಂತೆ ತೀರ್ಪನ್ನು ನೀಡಲಾಗಿದೆ. ಈ ತೀರ್ಪಿನ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ-441) ಹಾಗೂ ವಸೂಲಾಧಿಕಾರಿಗಳು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ನಂ.132. ಕೆ.ಹೆಚ್.ರಸ್ತೆ, ಬೆಂಗಳೂರು-560027. ರವರು ತಮ್ಮ ಹುಕುಂ **ಸಿ.ಇ.ಪಿ.ನಂ.ಎಆರ್‌ಇ/ಯುಬಿಎಫ್/419/2019-2020** ದಿನಾಂಕ:30-12-2019 ರ ಪ್ರಕಾರ ಬ್ಯಾಂಕಿನ ಮಾರಾಟಾಧಿಕಾರಿಯವರಿಗೆ ಅಮಲ್ಜಾರಿ ಕ್ರಮ ನಡೆಸುವಂತೆ ಅಧಿಕಾರ ನೀಡಿರುತ್ತಾರೆ. ಈ ಆದೇಶದ ಪ್ರಕಾರ **ಈ ಕೆಳಕಂಡ ಸ್ವತ್ತಿನ ಬಹಿರಂಗ ಹರಾಜನ್ನು ಸ್ವತ್ತಿನ ಸ್ಥಳದಲ್ಲಿಯೇ ದಿನಾಂಕ:06-01-2022 ರಂದು ಗುರುವಾರ ಬೆಳಗ್ಗೆ 11.00 ಘಂಟೆಗೆ** ಸಹಕಾರ ಸಂಘಗಳ ನಿಯಮಾನುಸಾರ ಮಾರಾಟ ಷರತ್ತಿಗೆ ಒಳಪಟ್ಟು ಹರಾಜನ್ನು ನಡೆಸಲಾಗುತ್ತದೆ. ಹರಾಜಿನಲ್ಲಿ ಪಾಲ್ಗೊಳ್ಳುವವರು ಷರತ್ತಿಗೆ ಒಳಪಟ್ಟಂತೆ ಪಾಲ್ಗೊಳ್ಳಬಹುದು.

| ಕ್ರಮ ಸಂಖ್ಯೆ | ಸಾಲ ಪಡೆದವರ ಹೆಸರು ಅ ನಂ. | ಸಿ.ಇ.ಪಿ.ನಂ ಮತ್ತು ದಿನಾಂಕ | ಹರಾಜು ಮಾಡುವ ಆಸ್ತಿಯ ವಿವರ | ಹರಾಜು ಮಾಡುವ ದಿನಾಂಕ ಮತ್ತು ಸಮಯ | ಹರಾಜು ಮಾಡುವ ಸ್ಥಳ | ಸುಸ್ತಿದಾರರಿಂದ ವಸೂಲಾಗ ಬೇಕಾಗಿರುವ ಮೊಬಲಗು |
|---|---|---|---|---|---|---|
| 1. | ಶ್ರೀಮತಿ ಕೆ.ಎಸ್.ವಿಜಯಲಕ್ಷ್ಮಿ ಅ ನಂ.ಬಿ2104 ಆರ್‌ಇಜಿ ನಂ.11848 ಇವರು ಮರಣ ಹೊಂದಿದ್ದು, ಇವರ ಕಾನೂನು ವಾರಸುದಾರರಾದ 1(ಎ) ಶ್ರೀ ಜೈಪ್ರಕಾಶ್ ಬಾಬು ಕೆ.ಎಸ್. ಮೊದಲನೇ ಮಗ 1(ಬಿ) ಶ್ರೀ ಚೇತನ್ ಪ್ರಸಾದ್ ಬಾಬು, ಕೆ.ಎಸ್. ಎರಡನೇ ಮಗ | ಸಿ.ಇ.ಪಿ.ನಂ. ಎಆರ್‌ಇ/ ಯುಬಿಎಫ್/419/ 2019-2020 ದಿನಾಂಕ: 30-12-2019 | ಮನೆ ನಂ.278 (ಹಳೇ ನಂ.14) ಅಕ್ಕಮಹಾದೇವಿ ರಸ್ತೆ, ವಾರ್ಡ ನಂ.29 ಪಿಐಡಿ ನಂ. 29-68-278, ಕಾಟನ್ ಪೇಟೆ, ಅಕ್ಕಿಪೇಟೆ ಮುಖ್ಯ ರಸ್ತೆ, ಬೆಂಗಳೂರು-560053. ಚಕ್ಕು ಬಂಧಿ : ಪೂರ್ವಕ್ಕೆ: ಕೆ.ಪಿ.ಮುನಿರಾಜುರವರ ಸ್ವತ್ತು, ಪಶ್ಚಿಮಕ್ಕೆ : ಜ್ಯೋತಿ ಬಾಯಿರವರ ಸ್ವತ್ತು, ಉತ್ತರಕ್ಕೆ: ಬಳ್ಳಾರಿ ಬಸಪ್ಪರವರ ಹೋಟೆಲ್, ದಕ್ಷಿಣಕ್ಕೆ: ಸಾಮಾನ್ಯ ಪ್ರವೇಶಕ್ಕೆ ಆರು ಅಡಿ ಅಗಲದ ಜಾಗವನ್ನು ಹೊದಿದ್ದು ಸ್ವತ್ತುಗಳಾದ 276, 276,/1, 277 ಮತ್ತು 279 ಕ್ಕು ಸಾಮಾನ್ಯ ಪ್ರವೇಶಕ್ಕೆ ಅನ್ವಯಿಸುತ್ತದೆ. ಅಳತೆ: ಪೂರ್ವ-ಪಶ್ಚಿಮ : 31.ft.9 Inches+29ft./2 ಉತ್ತರ-ದಕ್ಷಿಣ : 23.ft.+22.ft.6 Inches/2 ಒಟ್ಟು 691 ಚದರ ಅಡಿಗಳು. ನೆಲಮಹಡಿ ಮೊದಲನೇ ಮಹಡಿ ಎರಡನೇ ಮಹಡಿಗಳು ಹೊಂದಿರುವ ವಸತಿ ಕಟ್ಟಡದ ಬಿಲ್ಡ್ ಅಪ್ ಪ್ರದೇಶ ಸರಿ ಸುಮಾರು 1800 ಚದರ ಅಡಿಗಳು. | 06-01-2022 ಗುರುವಾರ ಬೆಳಗ್ಗೆ 11.00 ಘಂಟೆಗೆ | ಆಸ್ತಿ ಇರುವ ಸ್ಥಳದಲ್ಲಿ ಮನೆ ನಂ.278 (ಹಳೇನಂ.14) ಅಕ್ಕಮಹಾದೇವಿ ರಸ್ತೆ, ವಾರ್ಡನಂ. 29 ಪಿಐಡಿ ನಂ. 29-68-278, ಕಾಟನ್ ಪೇಟೆ, ಅಕ್ಕಿಪೇಟೆ ಮುಖ್ಯ ರಸ್ತೆ, ಬೆಂಗಳೂರು 560053. | ರೂ.54,93,627/- (ಅಸಲು ಮತ್ತು ಬಡ್ಡಿ ಸೇರಿ ದಿನಾಂಕ: 21-10-2021 ರವರೆಗೆ) ಮತ್ತು ಮುಂದುವರೆದ ಬಡ್ಡಿ ಹಾಗೂ ಮುಂದುವರೆದ ಇತರೆ ವೆಚ್ಚಗಳು. |

ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಲ್ಲಾಗಲೀ ಅಥವಾ ಮಾರಾಟಾಧಿಕಾರಿಯವರಲ್ಲಾಗಲೀ ಪಡೆಯಬಹುದು. ಹಾಗೂ ಡಿಕ್ರಿ ಅವಾರ್ಡಿನ ತಾರೀಖಿನಿಂದ ಹರಾಜು ತಾರೀಖಿನವರೆಗೆ ಡಿಕ್ರಿ ಮೊಬಲಗು ಹಾಗೂ ಬಡ್ಡಿ ಮತ್ತು ಇತರೆ ಖರ್ಚುಗಳು ಸುಸ್ತಿದಾರರಿಂದ ಬರಬೇಕಾಗಿರುತ್ತದೆ. (ಅಂದಿನಿಂದ ಅವರು ಪಾವತಿ ಮಾಡಿರುವುದನ್ನು ಕಳೆದು) ಸದರೀ ಹರಾಜನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು.(ನಿ.441), ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,ನಂ 132. ಕೆ.ಹೆಚ್.ರಸ್ತೆ. ಬೆಂಗಳೂರು-27 ಇವರ ಹುಕುಂ ಮೇರೆಗೆ ಹೊರಡಿಸಲಾಗಿದೆ. ದೂರವಾಣಿ: 08023564151 /23563302 ಮೊಬೈಲ್ : 6363581188.

**ಹರಾಜಿನ ಷರತ್ತುಗಳು**

1. ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಹರಾಜಿನ ಮುನ್ನ ಇ.ಎಂ.ಡಿ.ಯಾಗಿ ರೂ.25,000/-ಗಳನ್ನು ಮಾರಾಟಾಧಿಕಾರಿಯವರಲ್ಲಾಗಲೀ ಅಥವಾ ಬ್ಯಾಂಕಿನಲ್ಲಾಗಲೀ ನಗದು/ಡಿಡಿ ಮೂಲಕ ಪಾವತಿಸಿ ರಸೀದಿ ಪಡೆದು ಹರಾಜಿನಲ್ಲಿ ಭಾಗವಹಿಸತಕ್ಕದ್ದು.
2. ಹರಾಜಿನಲ್ಲಿ ಹೆಚ್ಚಿನ ಬಿಡ್ ನಿಂತವರು (Higher Bidder) ಹರಾಜು ಮೊಬಲಗಿನ ಶೇ.15% ರಷ್ಟು ಹಣವನ್ನು ಸ್ಥಳದಲ್ಲಿಯೇ ನಗದು /ಡಿಡಿ ಮೂಲಕ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು. ಉಳಿದ ಮೊಬಲಗನ್ನು ಮತ್ತು ಇದಕ್ಕೆ ತಗಲುವ ಸ್ಟ್ಯಾಂಪ್ ಪೇಪರ್ ಹಾಗೂ ಇತರೆ ವೆಚ್ಚಗಳ ಮೊಬಲಗನ್ನು ಬಿಡ್ ಮಾಡಿದ 45 ದಿವಸಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್ ದಿವಸ ಪಾವತಿಯಾಗಿರುವ ಮೊಬಲಗನ್ನು ವಾಪಸು ಕೊಡಲಾಗುವುದಿಲ್ಲ. ಇದನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಹರಾಜಿನ ಇತರೆ ಷರತ್ತುಗಳನ್ನು ಫಾರಂ.8 ರಲ್ಲಿ ಪ್ರಕಟಿಸಿ ಬಹಿರಂಗ ಪಡಿಸಿರುತ್ತೆ.
4. ನಿವೇಶನ ಮತ್ತು ಕಟ್ಟಡದ ವಿಸ್ತೀರ್ಣದ ವಿಷಯದಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ಬ್ಯಾಂಕಿನವರು ಜವಬ್ದಾರರಲ್ಲವೆಂಬುದನ್ನು ತಿಳಿದಿರತಕ್ಕದ್ದು.
5. ಮೇಲ್ಕಂಡ ಸ್ವತ್ತನ್ನು ಯಾವ ಸ್ಥಿತಿಯಲ್ಲಿದೆಯೋ ಹಾಗೆಯೇ ಹರಾಜು ಮಾಡಲಾಗುವುದು. ಇದನ್ನು ಬಿಡ್ದುದಾರರು ತಿಳಿದಿರತಕ್ಕದ್ದು.
6. ಸರ್ಕಾರಿ ಮಾರ್ಗದರ್ಶಿ ದರಕ್ಕಿಂತ ಕಡಿಮೆ ಮೊಬಲಗಿಗೆ ಬಿಡ್ (ಸವಾಲು) ಮಾಡಿದರೆ ಆ ಆಸ್ತಿಯನ್ನು ಬಿಡ್ ದಾರರಿಗೆ ಬಿಡುವುದು ಅಥವಾ ಬಿಡದಿರುವುದು ಕೆ.ಸಿ.ಎಸ್.ರೂಲ್ಸ್ 38(6)ರ ಪ್ರಕಾರ ಮಾರಾಟಾಧಿಕಾರಿಯವರ ವಿವೇಚನೆಗೆ ಬಿಟ್ಟಿರುತ್ತದೆ.
7. ಹರಾಜು ಒಪ್ಪುವುದು ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರ ಮಾರಾಟಾಧಿಕಾರಿಯವರಿಗೆ ಸೇರಿರುತ್ತದೆ.
8. ಸುಸ್ತಿದಾರರು ಹರಾಜಿಗೆ ಮುನ್ನ ಪೂರ್ಣ ಸಾಲ ಮತ್ತು ಸಾಲದ ಬಡ್ಡಿ ಇತರೆ ಮೊಬಲಗನ್ನು ಮರು ಪಾವತಿ ಮಾಡಿದರೆ ಬಹಿರಂಗ ಹರಾಜನ್ನು ರದ್ದುಗೊಳಿಸಲಾಗುವುದು.

ಸಹಿ/- ಅಧಿಕೃತ ಅಧಿಕಾರಿ / ಮಾರಾಟಾಧಿಕಾರಿ
ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್‌ರಸ್ತೆ), ಮಲ್ಲೇಶ್ವರಂ, ಬೆಂಗಳೂರು-560003
ದೂ : 080 23564151 / 23563302. ಮೊ : 6363581188.

ದಿನಾಂಕ: 01-01-2022
ಸ್ಥಳ : ಬೆಂಗಳೂರು


# 'ಶೋಷಣೆ ರಹಿತ ಆರ್ಥಿಕತೆ ಸಹಕಾರ ಕ್ಷೇತ್ರದ ಆಶಯ'

ಪ್ರಜಾವಾಣಿ ವಾರ್ತೆ

**ಯಲಹಂಕ:** ಹುಣಸಮಾರನಹಳ್ಳಿಯ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಸ್ಥೆಯಲ್ಲಿ ಶನಿವಾರ ಸಹಕಾರ ದಿನ ಆಚರಿಸಲಾಯಿತು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅಧ್ಯಕ್ಷ ಆರ್.ರವಿ-ಚಂದ್ರ,'ಶೋಷಣೆ ರಹಿತವಾಗಿ ಆರ್ಥಿಕ ಚೈತನ್ಯ ಕಲ್ಪಿಸುವುದೇ ಸಹಕಾರ ಚಳವಳಿಯ ಮೂಲ ಉದ್ದೇಶ. ಸ್ಪರ್ಧಾತ್ಮಕ ಆರ್ಥಿಕ ಜಗತ್ತಿನಲ್ಲಿ ಉನ್ನತ ಸೇವೆ ಮತ್ತು ಸುಸ್ಥಿರ ಅಭಿವೃದ್ಧಿ ಸಾಧಿಸುವಲ್ಲಿ ಷೇರುದಾರರ ನಂಬಿಕೆ ಮತ್ತು ವಿಶ್ವಾಸ ಪ್ರಮುಖ ಪಾತ್ರ ವಹಿಸುತ್ತದೆ' ಎಂದು ಅಭಿಪ್ರಾಯಪಟ್ಟರು.

'ಸಹಕಾರ ಸಂಘಗಳಿಗೆ ಸ್ವಾತಂತ್ರ್ಯ ಇಲ್ಲದಿರುವ ಕಾರಣಕ್ಕೆ ಸಹಕಾರಿ ಕ್ಷೇತ್ರ ನಿರೀಕ್ಷಿತ ಮಟ್ಟದಲ್ಲಿ ಬೆಳವಣಿಗೆ ಸಾಧಿಸಿಲ್ಲ ಎನ್ನುವ ಅಪಸ್ವರಗಳು ಕೇಳಿ ಬರುತ್ತಿವೆ. ಆದರೂ, ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮ ಪ್ರಗತಿ ಸಾಧಿಸಿವೆ' ಎಂದರು.

ಮಾಜಿ ಅಧ್ಯಕ್ಷರಾದ ಬಿ. ಪುಟ್ಟಶಾಮಪ್ಪ, ಬಿ.ಆರ್.ಬೈರೇಗೌಡ, ನಿರ್ದೇಶಕರಾದ ಡಿ. ಸುರೇಶ್, ವೀರೇಶ್, ಕೆ.ಪಿ. ರವಿಕುಮಾರ್, ಎ. ಸಣ್ಣವೀರಣ್ಣ, ಮಂಗಳ, ಕೆ.ಜೆ.ಶ್ವೇತಾ, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಿ.ಎಸ್. ವೆಂಕಟಾಚಲಪತಿ ಇದ್ದರು.


## AIR FORCE SCHOOL HEBBAL

HQTC(U) AF, JC Nagar Post, Bengaluru-06
(Under the aegis of the IAF Educational & Cultural Society)

Interested candidates may apply for the following vacancies:

**Regular–** TGT Social Studies - 01, TGT Computer -01 HM – 01, Helpers (MTS) – 04 (02 male & 02 female)

**Contractual**
PGT History - 01, PGT Political Science - 01, PGT Psychology - 01 PGT Legal Studies – 01, TGT Maths -01, TGT Special Educator -01, PRT- 02, NTT – 04

**Empanelment**
PGT Physics - 01, TGT Computer – 01, PRT Computer - 01, PRT- 02, NTT - 01

Last date for submission of application along with all copies of testimonials (educational and experience certificates) is 21 Jan 2022.

For QRs, application, pay scale & more details please log on to www.afshebbal.ac.in

CHAIRMAN



## ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

Estd : 1976

ಆಡಳಿತ ಕಛೇರಿ: ನಂ.195/33, ಶ್ರೀ ಸುಧಾ ರಜತ ಭವನ, ಆರ್.ವಿ.ರಸ್ತೆ , ಜಯನಗರ, ಬೆಂಗಳೂರು-560 004.
ದೂರವಾಣಿ : 080-26565651, 26560195 ಫ್ಯಾಕ್ಸ್ : 26567189
Email:generalmanager@srisudhabank.com Website : www.srisudhabank.com

**ಶುಭಾಷಯಗಳು**

ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು-560004ರ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು ಬ್ಯಾಂಕಿನ ಎಲ್ಲಾ ಸದಸ್ಯರು ಹಾಗೂ ಗ್ರಾಹಕರಿಗೆ 2022ನೇ ಇಸವಿಯ ನೂತನ ವರ್ಷ ಪ್ರಾರಂಭದ ಈ ಶುಭ ಸಂದರ್ಭದಲ್ಲಿ ದೈವಾನುಗ್ರಹದಿಂದ ಸುಖ ಶಾಂತಿ ದೊರಯಲೆಂದು ಹೃದಯಪೂರ್ವಕವಾಗಿ ಹಾರೈಸುತ್ತೇವೆ.

| 31/12/2021 ಕ್ಕಿರುವಂತೆ ಎನ್.ಪಿ.ಎ ಪ್ರಮಾಣ | | ಗಡು ಠೇವಣಿಗಳಿಗೆ ಬಡ್ಡಿದರ | ಸಾಲ ಮತ್ತು ಮುಂಗಡಗಳ ಬಡ್ಡಿದರ |
|---|---|---|---|
| Gross NPA | 4.13% | 7% | ಭದ್ರತಾ ಸಾಲದ ಬಡ್ಡಿದರ 10% ರಿಂದ 12% |
| Net NPA | 0 | ಸಂಘ ಸಂಸ್ಥೆ ಹಾಗೂ ಹಿರಿಯ ನಾಗರಿಕರಿಗೆ 7.50% | ಭದ್ರತಾ ರಹಿತ ಸಾಲದ ಬಡ್ಡಿದರ 15.50% ರಿಂದ 16% |

ಸ್ಥಳ : ಬೆಂಗಳೂರು
ದಿ: 01-01-2022

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
ಪ್ರಧಾನ ವ್ಯವಸ್ಥಾಪಕರು
ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್.,



ಕಟ್ಟಕಡೆಯ ಜನರ ಕಷ್ಟಕ್ಕೆ ಮಿಡಿವ ಕಾಂಗ್ರೆಸ್ ಕಟ್ಟಾಳು ಆರ್.ಕೆ.ರಮೇಶ್ ● ಸಮಾಜಮುಖಿ ಕಾರ್ಯದಲ್ಲಿ ಸದಾ ಮುಂದು

# ಜನ ಸೇವೆಗೆ ಜೈ– ಪಕ್ಷ ಸಂಘಟನೆಗೂ ಸೈ

ಸಮಾಜಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡು, ಸಮಾಜಮುಖಿ ಚಿಂತನೆಗಳನ್ನು ಮೈಗೂಡಿಸಿಕೊಂಡು, ಸಮಾಜದಲ್ಲಿ ಮನುಷ್ಯನಾಗಿ ಭೂಮಿಗೆ ಬಂದ ಮೇಲೆ ತನ್ನ ಕೈಲಾದ ಸೇವೆಯನ್ನು ಜನರಿಗೆ ಮಾಡಲೇಬೇಕೆಂಬ ಚಿಂತನೆಗಳನ್ನು ಅಳವಡಿಸಿಕೊಂಡಿರುವ ಅಪರೂಪದ ವ್ಯಕ್ತಿ ಆರ್.ಕೆ.ರಮೇಶ್. ಕ್ಷೇತ್ರದ ಜನರೇ ನನ್ನ ದೇವರು ಎಂದು ಪರಿಭಾವಿಸಿ ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಿ, ಅವರ ಮನೆಯ ಮಗನಾಗಿ, ದಿನದ 24 ಗಂಟೆಯೂ ಅವರ ಸೇವೆಗೆ ತನ್ನನ್ನು ಅರ್ಪಿಸಿಕೊಂಡಿರುವ ಜನನಾಯಕ ಅವರು. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಿತ್ಯ ನಿರಂತರವಾಗಿ ಸಾರ್ವಜನಿಕರ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರನ್ನು, ಸಂಘ-ಸಂಸ್ಥೆಗಳನ್ನು ಹುರಿದುಂಬಿಸಿ, ಬಡವರು, ರೈತರು, ಕಾರ್ಮಿಕರು, ನೊಂದವರು, ಕೂಲಿಕಾರ್ಮಿಕರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ಜನಸಾಮಾನ್ಯರ ಒಳಿತಿಗಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜನ ಸೇವೆಯಲ್ಲೇ ಭಗವಂತನನ್ನು ಕಾಣಬಹುದು ಎಂದು ನಂಬಿರುವ ಹಸನ್ಮುಖಿಆರ್.ಕೆ.ರಮೇಶ್, ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ, ಹಸನ್ಮುಖಿಯಾಗಿ ಅನುದಿನವೂ ಚಟುವಟಿಕೆಯಲ್ಲಿ ನಿರತರಾಗಿರುತ್ತಾರೆ. ದೊಡ್ಡವರು, ಚಿಕ್ಕವರು, ಜಾತಿ, ಮತ, ಧರ್ಮಗಳೆಂಬ ಬೇಧವಿಲ್ಲದೇ 'ನೀನು ಏನು ಮಾಡುತ್ತಿದ್ದೀಯಾ' ಎಂದೂ ಕೇಳದೆ, ನಿರಂತರವಾಗಿ ಸಮಾಜಮುಖಿ ಕೆಲಸಗಳಲ್ಲಿ ಸದಾ ಕಾರ್ಯೋನ್ಮುಖರಾಗಿದ್ದಾರೆ. ಕೊರೋನಾ ಪ್ರಥಮ ಅಲೆಯು ಎಲ್ಲೆಡೆ ವ್ಯಾಪ್ತಿಸಿದ ಸಂದರ್ಭದಲ್ಲಿ ಸರ್ಕಾರ ಲಾಕ್ ಡೌನ್ ಘೋಷಣೆ ಮಾಡುತ್ತಿದ್ದಂತೆ, ಆಡಳಿತಾರೂಢ ಪಕ್ಷದ ಶಾಸಕರು, ಜನಪ್ರತಿನಿಧಿಗಳು ಮನೆಯಲ್ಲೇ ಅಡಗಿ ಕುಳಿತಿದ್ದಾಗ, ಕೋವಿಡ್ ಸಂತ್ರಸ್ತರಿಗೆ ಆಹಾರ, ಔಷಧಿ, ಧವಸ ಧಾನ್ಯ, ದಿನಬಳಕೆಯ ಸಾಮಗ್ರಿಗಳು ಸಿಗದ ಪರಿಸ್ಥಿತಿ ನಿರ್ಮಾಣವಾಗಿದ್ದಾಗ, ಮತ್ತೊಂದೆಡೆ ಕಟ್ಟಡ ಕಾರ್ಮಿಕರು, ಬೀದಿ ವ್ಯಾಪಾರಿಗಳು, ಚಿಂದಿ ಆಯುವವರ ಬದುಕು ದುಸ್ತರವಾಗಿದ್ದ ಸಂದರ್ಭದಲ್ಲಿ, ತನ್ನ ಜೀವದ ಹಂಗನ್ನು ತೊರೆದು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಜನರಸೇವೆಗೆ ಮುಂದೆ ಬಂದವರು ಆರ್.ಕೆ.ರಮೇಶ್ ಅವರು. ರೈತರು ತಾವು ಬೆಳೆದ ಬೆಳೆಗೆ, ತರಕಾರಿ, ಸೊಪ್ಪುಗಳಿಗೆ ಬೆಲೆ ಸಿಗದೆ, ವ್ಯಾಪಾರವಿಲ್ಲದೆ ಪರಿತಪಿಸುತ್ತಿದ್ದಾಗ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಂಸದ ಡಿ.ಕೆ.ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಅವರ ಜೊತೆಗೂಡಿ, ನೇರವಾಗಿ ರೈತರ ತೋಟಗಳಿಗೆ ಭೇಟಿ ನೀಡಿ, ಸಾವಿರಾರು ಕ್ವಿಂಟಲ್ ವಿವಿಧ ಬಗೆಯ ತರಕಾರಿಗಳನ್ನು ಖರೀದಿಸಿ, ಕ್ಷೇತ್ರ ವ್ಯಾಪ್ತಿಯಲ್ಲಿ 2 ಲಕ್ಷ ಕುಟುಂಬಗಳಿಗೆ ಉಚಿತವಾಗಿ ವಿತರಣೆ ಮಾಡಿದ್ದಾರೆ. ಉಚಿತ ನೋಟ್ ಬುಕ್, ಲೇಖನ ಸಾಮಗ್ರಿ, ಸ್ಕೂಲ್ ಬ್ಯಾಗ್‌ಗಳನ್ನು ಸಾವಿರಾರು ವಿದ್ಯಾರ್ಥಿಗಳಿಗೆ ನೀಡಿದ್ದಾರೆ. ವಿವಿಧ ಕಾಯಿಲೆಗಳಿಂದ ಬಳಲುತ್ತಿದ್ದ ಮತ್ತು ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆಯಲು ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದವರನ್ನು ಗಮನಿಸಿ, ಕಾಂಗ್ರೆಸ್ ನಾಯಕರು, ಕಾರ್ಯಕರ್ತರನ್ನು ಸಂಪರ್ಕಿಸಿ ಹಾಗೂ ಸಂಸದ ಡಿ.ಕೆ.ಸುರೇಶ್, ರಾಮಲಿಂಗಾರೆಡ್ಡಿ ಮಾರ್ಗದರ್ಶನ, ಸಲಹೆ, ಸೂಚನೆ ಪಡೆದು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ವಾರ್ಡ್ ಗಳು, ಪಂಚಾಯಿತಿಯ ಪ್ರಮುಖ ಸ್ಥಳ, ಗ್ರಾಮ, ಬೀದಿಗಳಲ್ಲಿ ಆರೋಗ್ಯ ಶಿಬಿರ, ನೇತ್ರ ಚಿಕಿತ್ಸೆ, ದಂತ ಪರೀಕ್ಷೆ, ಉಚಿತವಾಗಿ ಕನ್ನಡಕ ಮತ್ತು ಔಷಧಿ ವಿತರಣೆ, ಹೃದ್ರೋಗ, ನರರೋಗದಂತಹ ವಿವಿಧ ಕಾಯಿಲೆಗಳಿಗೆ ಚಿಕಿತ್ಸೆ ದೊರಕಿಸಿಕೊಟ್ಟಿದ್ದಾರೆ.

ಬಡವರಿಗೆ ಉಚಿತ ಆಹಾರ ಧಾನ್ಯ ಕಿಟ್ ನೀಡುವ ಕಾರ್ಯಕ್ರಮದಲ್ಲಿ ಸಂಸದ ಡಿ.ಕೆ.ಸುರೇಶ್ ಹಾಗೂ ಪಕ್ಷದ ಸ್ಥಳೀಯ ಮುಖಂಡರ ಜೊತೆ ಆರ್.ಕೆ.ರಮೇಶ್

ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಸಂಸದ ಡಿ.ಕೆ.ಸುರೇಶ್ ಜೊತೆ ರೈತರ ಹೊಲದಿಂದಲೇ ತರಕಾರಿ ನೇರ ಖರೀದಿಯಲ್ಲಿ ತೊಡಗಿರುವ ಆರ್.ಕೆ.ರಮೇಶ್

ಆರ್.ಕೆ.ರಮೇಶ್ ನೇತೃತ್ವದಲ್ಲಿ ಬಡವರಿಗೆ ಆಹಾರ ಧಾನ್ಯ ವಿತರಿಸುವ ಕಾರ್ಯಕ್ರಮದ ಸಿದ್ಧತೆಯ ಪರಿಶೀಲನೆಯಲ್ಲಿ ತೊಡಗಿರುವ ರಾಮಲಿಂಗಾ ರೆಡ್ಡಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಗ್ರಾಮಗಳ ಅಭಿವೃದ್ಧಿ, ಪರಿಸರ ಕಾಳಜಿ, ನಾಡಿನ ನೆಲ-ಜಲ, ಸಂಸ್ಕೃತಿ ವಿಚಾರ ಬಂದಾಗ ಮುಂಚೂಣಿಯಲ್ಲಿ ನಿಂತು ಹೋರಾಟ ನಡೆಸಿದ್ದಾರೆ. ಸಾವಿರಾರು ಜನರಿಗೆ ಉಚಿತ ಕನ್ನಡಕ ವಿತರಣೆ, ಹಲವಾರು ಜನರಿಗೆ ಉಚಿತ ಹೃದಯ ಚಿಕಿತ್ಸೆ, ನೂರಾರು ಜನರಿಗೆ ನೇತ್ರ ಶಸ್ತ್ರಚಿಕಿತ್ಸೆ, ಜೊತೆಗೆ ಕಾಂಗ್ರೆಸ್ ಮುಖಂಡರಿಗೆ ಸೂಚನೆ ನೀಡಿ ಹತ್ತಾರು ಕಡೆ ಉಚಿತ ಆರೋಗ್ಯ ತಪಾಸಣೆ, ಚಿಕಿತ್ಸೆ, ಉಚಿತ ಔಷಧಿ ದೊರಕಿಸಿಕೊಟ್ಟಿದ್ದಾರೆ. ಹಲವಾರು ಕಡೆ ರಕ್ತದಾನ ಶಿಬಿರ ಹಮ್ಮಿಕೊಂಡು, ನೂರಾರು ಬಾಟಲ್ ರಕ್ತ ಸಂಗ್ರಹಿಸಿ ರಕ್ತನಿಧಿಗಳಿಗೆ ನೀಡಿದ್ದಾರೆ, ಕೆರೆಗಳ ಸಂರಕ್ಷಣೆ, ನೀರುಗಾಲುವೆ, ಒತ್ತುವರಿ ತೆರವುಗೊಳಿಸಲು ಹೋರಾಡಿದ್ದಾರೆ. ನೂರಾರು ಎಕರೆ ವಿಸ್ತೀರ್ಣದ ಹೆನ್ನಾಗರ ಕೆರೆಗೆ ಭಾರಿ ಇತಿಹಾಸವಿದೆ. ಈ ಕೆರೆ ಇತ್ತೀಚಿಗೆ ಕೆರೆಕೋಡಿ ಬಿದ್ದು, ನೀರು ಹೊರ ಹೋಗಲು ಸಾಧ್ಯವಾಗದೆ, ರೈತರ ಜಮೀನಿಗೆ ನುಗ್ಗಿ ಅಪಾರ ಪ್ರಮಾಣದ ನಷ್ಟವುಂಟಾಗಿತ್ತು. ಕೆರೆ ಕಲುಷಿತಗೊಂಡಿದ್ದರ ವಿರುದ್ಧ ಹಲವಾರು ಗ್ರಾಮಸ್ಥರು ರಾಜಾಪುರ ಮಠದ ಶ್ರೀರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಹೋರಾಟ ನಡೆಸಿದಾಗ ಅದರಲ್ಲಿ ಪಾಲ್ಗೊಂಡು, ಕೆರೆ ಅಭಿವೃದ್ಧಿ ಚಾಲನೆ ನೀಡಲು ಮುಂದಾಗಿದ್ದಾರೆ. ನಗರ ಗ್ರಾಮೀಣ ಭಾಗದಲ್ಲಿ ಕ್ರೀಡೆಗಳಿಗೆ ಉತ್ತೇಜನ, ಪ್ರೋತ್ಸಾಹ ನೀಡುತ್ತಾ ಬಂದಿದ್ದು, ನೂರಾರು ಪಂದ್ಯಾವಳಿಗೆ ಪ್ರೋತ್ಸಾಹ ನೀಡಿದ್ದಾರೆ, ಹಲವಾರು ದೇವಸ್ಥಾನಗಳ ಅಭಿವೃದ್ಧಿ , ಜೀರ್ಣೋದ್ದಾರಕ್ಕೆ ಸಹಾಯಹಸ್ತ ನೀಡಿದ್ದಾರೆ. ಪುರಾತನ ದೇವಾಲಯಗಳ ಸಂರಕ್ಷಣೆಗೂ ಕೈಜೋಡಿಸಿದ್ದಾರೆ. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಾಗರೀಕರು ಸಹ ಆರ್. ಕೆ. ರಮೇಶ್ ಅವರು ಜನಸೇವೆಗೆ ಪ್ರೋತ್ಸಾಹ, ಬೆಂಬಲ ನೀಡುತ್ತಿದ್ದು, ಮುಂದೆಯೂ ಸಹ, ಸಾಕಷ್ಟು ಸೇವೆ ಅಭಿವೃದ್ಧಿಗಾಗಿ ಬೆಂಬಲ ನೀಡಲು ಮುಂದಾಗಿದ್ದಾರೆ. ರಮೇಶ್ ಅವರಂತಹ ಹಸನ್ಮುಖಿ, ಸಮಾಜಸೇವೆಗೆ, ಅಭಿವೃದ್ಧಿಗಾಗಿ ಇಂತಹ ವ್ಯಕ್ತಿಗಳು ಬೇಕಾಗಿದ್ದಾರೆ ಎನ್ನುತ್ತಾರೆ ನಾಗರಿಕರು.

## ಕೊರೊನಾ ಕಾಲದಲ್ಲಿ ಕಷ್ಟಕ್ಕೆ ಮಿಡಿದ ಕರಣಾಳು

ಕೊರೊನಾದಿಂದ ಉದ್ಯೋಗವಿಲ್ಲದೆ, ಕೂಲಿ ಸಿಗದೆ, ವ್ಯಾಪಾರವಿಲ್ಲದೆ, ಮನೆ ಬಾಡಿಗೆ ಕಟ್ಟಲು ಸಾಧ್ಯವಾಗದೆ, ಸಣ್ಣಪುಟ್ಟ ಕಾಯಿಲೆಗಳು ಬಂದು ಚಿಕಿತ್ಸೆ ಪಡೆಯಲು ಹಣವಿಲ್ಲದೆ, ಔಷಧಿ ತೆಗೆದುಕೊಳ್ಳಲು ಸಾಧ್ಯವಾಗದೇ, ಕೈಚೆಲ್ಲಿ ಕುಳಿತ್ತಿದ್ದ ಕಡುಬಡವರಿಗೆ ಅನೇಕ ರೀತಿಯ ಸಹಾಯ ಮಾಡಿ ಮಾನವೀಯತೆ ತೋರಿದ್ದಾರೆ. ಆಡಳಿತ ಪಕ್ಷದ ಅಧಿಕಾರದಲ್ಲಿರುವ ಜನಪ್ರತಿನಿಧಿಗಳು, ಬಡವರು, ಜನಸಾಮಾನ್ಯರ ಕಷ್ಟ ಮತ್ತು ಲಸಿಕೆ ಸಿಗದೆ ಪರದಾಡುತ್ತಿದ್ದ ಸಂದರ್ಭದಲ್ಲಿ ಆರ್.ಕೆ.ರಮೇಶ್ ಅವರು ವೈಯಕ್ತಿಕವಾಗಿ ಲಸಿಕೆ ಖರೀದಿಸಿ, ಸಾವಿರಾರು ಜನರಿಗೆ ಲಸಿಕೆ ಹಾಕಿಸಲು ನೆರವಾಗಿದ್ದಾರೆ. ಕೋವಿಡ್ ನಿಂದ ಮೃತಪಟ್ಟ ನೂರಾರು ಬಡಕುಟುಂಬಗಳ ಬಳಿ ತೆರಳಿ, ಸಾಂತ್ವನ ಹೇಳಿ, ವೈಯಕ್ತಿಕವಾಗಿ ₹ 10 ಸಾವಿರದಿಂದ ₹ 25 ಸಾವಿರದವರೆಗೆ ಆರ್ಥಿಕ ನೆರವು ನೀಡಿದ್ದಾರೆ. ಅತ್ಯಂತ ಕಡುಬಡತನದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಸಹಾಯ ಹಸ್ತ ಚಾಚಿದ್ದಾರೆ. ಇವರೊಂದಿಗೆ ಕ್ಷೇತ್ರದ ಮುಖಂಡರು, ಕಾರ್ಯಕರ್ತರು ಬಡವರಿಗೆ ಉಚಿತ ದಿನಸಿ ಕಿಟ್, ಔಷಧಿ ವಿತರಣೆ, ಊಟ, ಧನಸಹಾಯ ಮಾಡಿದ್ದಾರೆ.

## 'ಪಂಚಾಯಿತಿ ವರಮಾನ ₹10 ಕೋಟಿಗೆ ಏರಿಕೆ'

ಹೆನ್ನಾಗರ ಗ್ರಾಮ ಪಂಚಾಯಿತಿಗೆ ಆರ್. ಕೆ.ರಮೇಶ್ ಸಹೋದರ ಆರ್.ಕೆ. ಕೇಶವರೆಡ್ಡಿ ಅವರು ಅಧ್ಯಕ್ಷರಾದ ಆರಂಭದಲ್ಲಿ ಕೇವಲ ₹ 50 ಲಕ್ಷ ವರಮಾನ ಇತ್ತು. ಅವರು ಅಧ್ಯಕ್ಷರಾದ ಮೇಲೆ ವಾರ್ಷಿಕ ₹ 10 ಕೋಟಿ ವರಮಾನ ಬರುವಂತೆ ಮಾಡಿದ್ದಾರೆ. ಅಭಿವೃದ್ಧಿ, ಜನಸೇವೆ ಮಾಡುವ ಮೂಲಕ ದೇವರನ್ನು ಕಾಣಬಹುದು ಎಂಬ ಚಿಂತನೆ ಮೈಗೂಡಿಸಿಕೊಂಡಿದ್ದಾರೆ.

## ಜಿಗಣಿಯಲ್ಲಿ ಕಾಂಗ್ರೆಸ್ ಕೈ ಹಿಡಿದ ಮತದಾರ

ಕಾಂಗ್ರೆಸ್ ಸರ್ಕಾರವಿದ್ದಾಗ ಜಿಗಣಿಯನ್ನು ಪುರಸಭೆಯನ್ನಾಗಿಸಲಾಯಿತು. ಸರ್ಕಾರಿ ಆಸ್ಪತ್ರೆ, ಪೊಲೀಸ್ ಠಾಣೆ, ದ್ವಿಪಥ ರಸ್ತೆ, ಹೀಗೆ ಹಲವಾರು ಯೋಜನೆಗಳನ್ನು ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಮಂಜೂರು ಮಾಡಲಾಗಿತ್ತು. ಇದರಿಂದಾಗಿ ಜಿಗಣಿ ಪರಿಸರ ಅಭಿವೃದ್ಧಿ ಕಂಡಿರುವುದು ಬಿಟ್ಟರೆ, ಬಿಜೆಪಿ ಸರ್ಕಾರದಿಂದ ಅಭಿವೃದ್ಧಿ ಕಂಡಿಲ್ಲ. ಜನಸೇವೆ ನಿಸ್ವಾರ್ಥದಿಂದ ಮಾಡುವ ಸ್ಥಳೀಯ ಜನಪರ ವ್ಯಕ್ತಿ ಬೇಕಾಗಿದೆ, ಎಂಬುದನ್ನು ಮನಗಂಡು ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್, ಸಂಸದ ಡಿ.ಕೆ. ಸುರೇಶ್, ರಾಮಲಿಂಗಾರೆಡ್ಡಿ ನಾಯಕತ್ವದ ತಂಡಕ್ಕೆ ಈ ಬಾರಿ ಬಹುಮತವನ್ನು ಜಿಗಣಿಯಲ್ಲಿ ಮತದಾರರು ನೀಡಿದ್ದಾರೆ.

ಜಿಗಣಿ ಪುರಸಭೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಬರಲು ಕಾರಣಕರ್ತರಾದ ಮತದಾರ ಬಂಧುಗಳಿಗೆ, ಪಕ್ಷದ ಕಾರ್ಯಕರ್ತರಿಗೆ, ಧನ್ಯವಾದ. ಪುರಸಭಾ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳಿಗೆ ಅಭಿನಂದನೆ

- ಆರ್.ಕೆ.ರಮೇಶ್

## ಸೋಮೇಶ್ವರ ದೇವರಿಗೆ ಬೆಳ್ಳಿ ಕಿರೀಟ

ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆಯಲ್ಲಿರುವ ಪುರಾತನ ಕಾಲದ ಶ್ರೀ ಸೋಮೇಶ್ವರ ದೇವರಿಗೆ ಬೆಳ್ಳಿ ಕಿರೀಟ ಧಾರಣೆಯನ್ನು ಮಾಡಿಸುವ ಆರ್.ಕೆ.ರಮೇಶ್ ಹಾಗೂ ಕುಟುಂಬ ಧಾರ್ಮಿಕ ಕೈಂಕರ್ಯದಲ್ಲೂ ಮೇಲ್ಪಂಕ್ತಿ ಹಾಕಿಕೊಟ್ಟಿದೆ. ಲಕ್ಷಾಂತರ ಜನರ ಧಾರ್ಮಿಕ ಭಾವನೆಗೆ ಸ್ಪಂದಿಸಿದೆ

## ಹೊಸ ವರ್ಷ, ಸಂಕ್ರಾಂತಿ ಹಬ್ಬದ ಶುಭಾಶಯ

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಾಗರಿಕ ಬಂಧುಗಳಿಗೆ ಮತ್ತು ನಾಡಿನ ಜನತೆಗೆ ಹೊಸವರ್ಷದ ಹಾಗೂ ಸಂಕ್ರಾತಿ ಹಬ್ಬದ ಶುಭಾಶಯಗಳು

- ಆರ್.ಕೆ.ರಮೇಶ್




### ಕೆಜಿ ಜಾಜೂರಿನಲ್ಲಿ ಅಕ್ರಮ ಗಣಿಗಾರಿಕೆ ದೂರು, ಅಧಿಕಾರಿಗಳಿಂದ ಪರಿಶೀಲನೆ

# ಸ್ಫೋಟ ಮಾಡದಂತೆ ತಾತ್ಕಾಲಿಕ ತಡೆ

ಪ್ರಜಾವಾಣಿ ವಾರ್ತೆ

**ದಾಬಸ್ ಪೇಟೆ:** ಕೆಜಿ ಜಾಜೂರಿನಲ್ಲಿ ಕಲ್ಲು ಕ್ವಾರಿಗಳಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸಲಾಗುತ್ತಿದೆ. ಸ್ಫೋಟ ನಡೆಸುವುದರಿಂದ ಗ್ರಾಮದ ಮನೆಗಳು ಬಿರುಕು ಬಿಟ್ಟಿವೆ ಎಂದು ಸಾರ್ವಜನಿಕ-ರಿಂದ ದೂರಿದ್ದಾರೆ.

ನರಸೀಪುರ ಗ್ರಾಮ ಪಂಚಾಯಿತಿ ಅಧಿಕಾರಿ ಉಮಾಶಂಕರ್ ಹಾಗೂ ಪಂಚಾಯತಿ ಸದಸ್ಯರು ಈ ದೂರಿನ ಆಧಾರದಲ್ಲಿ ಕ್ರಷರ್ ಮೇಲೆ ದಾಳಿ ನಡೆಸಿದರು.

ಕ್ರಷರ್ ನಡೆಸಲು ಇಲಾಖೆಯಿಂದ ಅನುಮತಿ ಪಡೆದ ದಾಖಲೆ ನೀಡುವವರೆಗೆ ಸ್ಫೋಟ ಹಾಗೂ ಗಣಿಗಾರಿಕೆ ನಡೆಸದಂತೆ ಕ್ವಾರಿ ಮಾಲೀಕರಿಗೆ ಸೂಚನೆ ನೀಡಿದರು.

ಕಲ್ಲುಗಣಿಗಾರಿಕೆ ನಡೆಸುತ್ತಿದ್ದ ಜಾಗಕ್ಕೆ ಪಂಚಾಯಿತಿ ಅಧಿಕಾರಿಗಳು ಮತ್ತು ಸದಸ್ಯರು ಭೇಟಿ ನೀಡಿ ಪರಿಶೀಲಿಸಿದರು

**ಮುಖ್ಯಾಂಶಗಳು**
- ಪರವಾನಗಿ ಹಾಜರುಪಡಿಸದಿದ್ದರೆ ಕ್ರಮದ ಎಚ್ಚರಿಕೆ
- ಅಕ್ರಮವಾಗಿ ಸ್ಫೋಟ, ಗಣಿ ನಡೆಸುತ್ತಿರುವ ಆರೋಪ
- ಮನೆಗಳಿಗೆ ಹಾನಿ ಕುರಿತು ಸ್ಥಳೀಯರಿಂದ ದೂರು

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲೂಕು ನರಸೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆಜಿ ಜಾಜೂರು ಗ್ರಾಮದ ಸರ್ವೆ ನಂಬರ್ 22ರಲ್ಲಿ ಎಸ್ಎಲ್ಆರ್ ಸ್ಟೋನ್ ಕ್ರಷರ್ ಸಂಸ್ಥೆಯವರು ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾರೆ ಮತ್ತು ಸ್ಫೋಟ ಮಾಡುತ್ತಿರುವ ಬಗ್ಗೆ ಗ್ರಾಮಸ್ಥರು ನರಸೀಪುರ ಗ್ರಾಮ ಪಂಚಾಯಿತಿಗೆ ದೂರು ನೀಡಿದ್ದರು.

'ಕಲ್ಲು ಸ್ಫೋಟ ನಡೆಸುತ್ತಿರುವುದರಿಂದ ಗ್ರಾಮದ ರೈತರಿಗೆ ಮತ್ತು ಮನೆಗಳಿಗೆ ಹಾನಿಯಾಗುತ್ತಿದೆ. ಇದರ ಬಗ್ಗೆ ಪಂಚಾಯಿತಿಗೆ ದೂರು ನೀಡಿದ್ದೇವೆ. ಕ್ರಷರ್ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸ್ಥಳೀಯರಾದ ಸಂಪತ್ ಕುಮಾರ್ ಒತ್ತಾಯಿಸಿದರು.

'ಸಾರ್ವಜನಿಕರ ದೂರಿನ ಆಧಾರದ ಮೇಲೆ ಕ್ರಷರ್ ಜಾಗಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ಕ್ರಷರ್ ನಡೆಸಲು ಪಡೆದ ಪರವಾನಗಿಯನ್ನು ಮಾಲೀಕರು ಹಾಜರು ಪಡಿಸದಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಿದ್ದೇವೆ' ಎಂದು ಪಿಡಿಒ ಉಮಾಶಂಕರ್ ತಿಳಿಸಿದರು.

# 'ತಂತ್ರಜ್ಞಾನಕ್ಕೆ ತಕ್ಕಂತೆ ಕೌಶಲ ಬೆಳೆಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಎಂಜಿನಿಯರಿಂಗ್ ಕ್ಷೇತ್ರದಲ್ಲಿ ತ್ವರಿತಗತಿಯಲ್ಲಿ ಹೊಸ ಬೆಳವಣಿಗೆಗಳಾಗುತ್ತಿವೆ. ತಂತ್ರಜ್ಞಾನ-ಕ್ಕೆ ತಕ್ಕಂತೆ ಎಂಜಿನಿಯರ್‌ಗಳು ಸಹ ಬದಲಾಗಬೇಕು ಮತ್ತು ಹೊಸ ಕೌಶಲ ಬೆಳೆಸಿಕೊಳ್ಳಬೇಕು' ಎಂದು ಕರ್ನಾಟಕ ಆವಿಷ್ಕಾರ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಎಚ್.ಪಿ.ಖಿಂಚಾ ಹೇಳಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆಯೋಜಿಸಿದ್ದ ಕಾರ್ಯ-ಕ್ರಮದಲ್ಲಿ ಮೊದಲ ವರ್ಷದ ಎಂಜಿನಿಯರಿಂಗ್ ತರಗತಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬೆಳವಣಿಗೆಯಾಗುತ್ತಿವೆ. ಕೃತಕ ಬುದ್ಧಿಮತ್ತೆ, ಮೆಷೀನ್ ಲರ್ನಿಂಗ್ ವಿಷಯಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ' ಎಂದರು.

'ಮೊದಲು ಉಪನ್ಯಾಸಕರು ಬೋಧನೆ ಮಾಡಿ ಸುಮ್ಮನಾಗುತ್ತಿದ್ದರು.

> **ಎಂಜಿನಿಯರಿಂಗ್ ಕ್ರಿಯಾತ್ಮಕವಾಗಿರಬೇಕು. ಪರಿಸರ ರಕ್ಷಣೆಯ ಬಗ್ಗೆ ಎಂಜಿನಿಯರ್‌ಗಳು ಕಾಳಜಿ ವಹಿಸಬೇಕು**
> **ಎಂ.ಆರ್.ಸೀತಾರಾಂ**
> ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ

ಇಂದು ಕಾಲ ಬದಲಾಗಿದೆ. ಕಲಿಕೆಯ ಮೂಲಕ ಬೋಧನೆ ಆಗಬೇಕಿದೆ. ಇದಕ್ಕಾಗಿ ಉಪನ್ಯಾಸಕರು ಸಂಶೋಧನೆ ಕೈಗೊಂಡು ಕ್ರಿಯಾಯೋಜನೆ ರೂಪಿಸಬೇಕು' ಎಂದು ಸಲಹೆ ನೀಡಿದರು.

ವಿಜ್ಞಾನಿ ಎ.ಕೆ.ಆತ್ರೆ, 'ಹಳೇ ಕಾಲದ ಎಂಜಿನಿಯರಿಂಗ್ ಕೋರ್ಸ್‌ಗೂ ಪ್ರಸ್ತುತ ಎಂಜಿನಿಯರಿಂಗ್ ಕೋರ್ಸ್‌ಗೂ ಬಹಳ ವ್ಯತ್ಯಾಸ ಇದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರಿ ಬದಲಾವಣೆಗಳಾಗಿವೆ. ಈ ಬಗ್ಗೆ ಎಂಜಿನಿಯರ್ ವಿದ್ಯಾರ್ಥಿಗಳು ಸಹ ನಿರಂತರವಾಗಿ ಗಮನಹರಿಸಬೇಕು' ಎಂದು ಕಿವಿಮಾತು ಹೇಳಿದರು.

ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎಂ.ಆರ್.ಸೀತಾರಾಂ, ಕಾರ್ಯದರ್ಶಿ ಬಿ.ಎಸ್.ರಾಮ್ ಪ್ರಸಾದ್, ಕುಲಸಚಿವರಾದ ಡಾ.ಅರ್ಚನಾ ಇದ್ದರು.

ನಗರದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ ಮೊದಲ ವರ್ಷದ ಎಂಜಿನಿಯರಿಂಗ್ ತರಗತಿಗಳ ಕಾರ್ಯಕ್ರಮವನ್ನು ಕರ್ನಾಟಕ ಆವಿಷ್ಕಾರ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಎಚ್.ಪಿ.ಖಿಂಚಾ ಉದ್ಘಾಟಿಸಿದರು. ಅರವಿಂದ ಬಿ. ಜತ್ತಿ, ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎಂ.ಆರ್.ಸೀತಾರಾಂ, ವಿಜ್ಞಾನಿ ಡಾ. ಆತ್ರೆ, ಡಾ.ಎಂ.ಆರ್.ಜಯರಾಮ್ ಇದ್ದರು

## ಅಮೃತ್‌ಗೆ 'ರಾಜಂ ವೈದ್ಯರತ್ನಂ ಸಂಗೀತ ಗುರು' ಪ್ರಶಸ್ತಿ

**ಬೆಂಗಳೂರು:** ಚೆನ್ನೈನ ಪ್ರತಿಷ್ಠಿತ ಕಾರ್ತಿಕ್ ಫೈನ್ ಆರ್ಟ್ಸ್‌ನ 47ನೇ ವರ್ಷದ ಸಂಗೀತ ಉತ್ಸವ ಪ್ರಯುಕ್ತ ವಿವಿಧ ಸಾಧಕರಿಗೆ ದತ್ತಿ ಪ್ರಶಸ್ತಿಗಳನ್ನು ಘೋಷಿಸಲಾಗಿದ್ದು, ಬೆಂಗಳೂರಿನ ಖಂಜಿರ ವಾದಕ ಅಮೃತ್ ಖಂಜಿರ ಅವರು ತಾಳವಾದ್ಯ ವಿಭಾಗದಲ್ಲಿ 'ರಾಜಂ ವೈದ್ಯರತ್ನಂ ಸಂಗೀತ ಗುರು' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಅಮೃತ್

ಭಾನುವಾರ (ಜ.2) ಸಂಜೆ ಕಾರ್ತಿಕ್ ಫೈನ್ ಆರ್ಟ್ಸ್ ಅಧ್ಯಕ್ಷ ಕೆ.ಎಂ. ನರಸಿಂಹನ್ ಅವರು ಚೆನ್ನೈಯ ಭಾರತೀಯ ವಿದ್ಯಾಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

## '3ನೇ ಸೆಮಿಸ್ಟರ್ ಪ್ರವೇಶ ಪ್ರಕ್ರಿಯೆ ಆರಂಭ'

**ಬೆಂಗಳೂರು:** 'ಬಿಎಂಎಸ್ ಸಂಜೆ ತಾಂತ್ರಿಕ ವಿದ್ಯಾಲಯಕ್ಕೆ ಎರಡನೇ ಪಾಳಿಯ ತರಗತಿ ನಡೆಸಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಅನುಮತಿ ನೀಡಿದ್ದು, ಪ್ರವೇಶ ಪ್ರಕ್ರಿಯೆ ನಡೆಯುತ್ತಿದೆ' ಎಂದು ಬಿಎಂಎಸ್ ಸಂಜೆ ಕಾಲೇಜಿನ ಪ್ರಾಂಶುಪಾಲ ರುದ್ರ ನಾಯ್ಕ್ ತಿಳಿಸಿದ್ದಾರೆ.

'ಬಿಎಂಎಸ್ ಸಂಜೆ ತಾಂತ್ರಿಕ ವಿದ್ಯಾಲಯವನ್ನು ಮುಚ್ಚಲಾಗಿದೆ ಎಂಬ ವದಂತಿಯಿಂದ ವಿದ್ಯಾರ್ಥಿಗಳು ಆತಂಕಕ್ಕೀಡಾಗಿದ್ದಾರೆ. ಇದು ಸತ್ಯಕ್ಕೆ ದೂರವಾಗಿದೆ. ಎಐಸಿಟಿಇ ಆದೇಶದಂತೆ ಬಿಎಂಎಸ್ ಹಗಲು ಕಾಲೇಜಿನ ಸಹಯೋಗದೊಂದಿಗೆ ಸಂಜೆ ಕಾಲೇಜು ಕೂಡ ನಡೆಯಲಿದೆ. 2021-22ನೇ ಸಾಲಿನ ಮೂರನೇ ಸೆಮಿಸ್ಟರ್ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

## ಪ್ರಸಾದ ಸೇವಿಸಿದ 50 ಜನ ಅಸ್ವಸ್ಥ

**ಶ್ರೀನಿವಾಸಪುರ:** ಹೊಸ ವರ್ಷದ ಪ್ರಯುಕ್ತ ತಾಲ್ಲೂಕಿನ ಬೀರಗಾನಹಳ್ಳಿ ಗ್ರಾಮದಲ್ಲಿ ಶನಿವಾರ ಗಂಗಮ್ಮ ದೇವಸ್ಥಾನದಲ್ಲಿ ವಿತರಿಸಲಾದ ಪ್ರಸಾದ ಸೇವಿಸಿ 13 ಮಕ್ಕಳು ಮಕ್ಕಳು ಸೇರಿದಂತೆ 50 ಗ್ರಾಮಸ್ಥರು ಅಸ್ವಸ್ಥ-ಗೊಂಡಿದ್ದಾರೆ.

ದೇವಸ್ಥಾನದಲ್ಲಿ ಮಧ್ಯಾಹ್ನ ವಿತರಿಸಲಾದ ಚಿತ್ರಾನ್ನ ಮತ್ತು ಕೇಸರಿಬಾತ್ ಸೇವಿಸಿದ ಗ್ರಾಮಸ್ಥರಿಗೆ ಸಂಜೆ ವಾಂತಿ, ಭೇದಿ ಆರಂಭವಾಗಿದೆ. ತಕ್ಷಣ ಎಲ್ಲರನ್ನೂ ಶ್ರೀವಾಸಪು ತಾಲ್ಲೂಕು ಸರ್ಕಾರಿ ಆಸ್ಪತ್ರೆ ಮತ್ತು ಯಲ್ದೂರು ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಸ್ವಸ್ಥರಿಗೆ ಚಿಕಿತ್ಸೆ ನೀಡಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಾಲ್ಲೂಕು ವೈದ್ಯಾಧಿಕಾರಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

WANTED
MARKETING MANAGER/ EXECUTIVES
to promote educational activities in our group of Institution Immediately, selected candidates will get
Rs. 50,000/- Salary per month + Incentive.
Experienced and interested candidates can contact.
8970067700, 9108411808
SET
SMT. PUSHPA SHAMANUR MAHALINGAPPA RESIDENTIAL
CBSE / ICSE SCHOOL & PU SCIENCE COLLEGE
# 5335, 1st Main Swami Vivekananda Extention, Near BIET, Davangere - 577004.
www.spsmrs.org mail-id: spsmrsjobs@gmail.com

## ನಗರದಲ್ಲಿ ಇಂದು

**ಸಾಚಿ ಆರ್ಯ ಅವರ 'ದಿ ವೇ ದಿ ವರ್ಲ್ಡ್ ಈಸ್' ಪುಸ್ತಕ ಬಿಡುಗಡೆ:** ಸಿ.ಎನ್.ರಾಮಚಂದ್ರನ್, ಅಧ್ಯಕ್ಷತೆ–ಬಿ.ಎನ್ ಸುಮಿತ್ರಾ ಬಾಯಿ, ಆಯೋಜನೆ–ರೀತಿ ಪ್ರಕಾಶನ, ಸ್ಥಳ–ಭಾನು ನೆನಪಿನ ನಾಣಿ ಅಂಗಳ, ಸುಚಿತ್ರ-ಪುರವಂಕರ ಸಿನಿಮಾ ಸಂಸ್ಥೆ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

**ಗೀತಾ ಜಯಂತಿ:** ಉದ್ಘಾಟನೆ–ಕೆ.ವಿ. ಲಕ್ಷ್ಮಣಮೂರ್ತಿ, ಅಧ್ಯಕ್ಷತೆ–ಎಲ್. ಮಂಜುನಾಥ ಸ್ವಾಮಿ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ–ಎಂ.ವಿ. ರಾಮಸ್ವಾಮಿ ರಾಜು, ಕವಿಗೋಷ್ಠಿ ಉದ್ಘಾಟನೆ–ಎಸ್.ಜಿ.ಮಾಲತಿ ಶೆಟ್ಟಿ, ಅಥಿತಿಗಳು–ಎಚ್.ಗೋಪಾಲಕೃಷ್ಣ, ಎಸ್.ಅಂಬುಜಾ ಪ್ರಕಾಶ್, ಆಯೋಜನೆ–ವಿದ್ಯಾಗಣಪತಿ ಗಮಕ ಶಿಕ್ಷಣಾಲಯ ಮತ್ತು ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ–ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

**ಅಪ್ಪು ನುಡಿನಮನ:** ಸಾನ್ನಿಧ್ಯ–ವಿಖ್ಯಾತಾನಂದ ಸ್ವಾಮೀಜಿ, ಅಧ್ಯಕ್ಷತೆ–ಎಂ.ತಿಮ್ಮೇಗೌಡ, ಅತಿಥಿಗಳು–ಬಿ.ಕೆ. ಶಿವರಾಂ, ಮುನಿರತ್ನ, ಜೆ.ಪಿ. ಸುಧಾಕರ್, ಎಸ್.ಎಂ.ಚಿನ್ನೇಗೌಡ, ಆರ್.ಪಿ.ಪ್ರಕಾಶ್, ಗೋವಿಂದ ಬಾಬು ಪೂಜಾರಿ, ವಿ.ಸಿ.ಚಂದ್ರು, ಟಿ. ಶಿವಕುಮಾರ್, ಆಯೋಜನೆ–ಬೆಂಗಳೂರು ದಕ್ಷಿಣ ತಾಲ್ಲೂಕು ಆರ್ಯ ಈಡಿಗರ ಸಂಘ, ಸ್ಥಳ–ಹಯಗ್ರೀವ ಧಾರ್ಮಿಕ ಮಂದಿರ, ಪುಷ್ಪಗಿರಿನಗರ, ಹೊಸಕೆರೆಹಳ್ಳಿ, ಬೆಳಿಗ್ಗೆ 10.30

**ಎಚ್ಎಎಲ್ ಸಾಧಕರಿಗೆ ಅಭಿನಂದನೆ ಹಾಗೂ ರಮಾ ಫಣಿಭಟ್ ಗೋಪಿ ಅವರ 'ಭಾವಲೋಕ' ಪುಸ್ತಕ ಬಿಡುಗಡೆ:** ಅಧ್ಯಕ್ಷತೆ–ವಸುಂಧರ ಭೂಪತಿ, ಅಭಿನಂದನೆ–ರಾ.ನಂ. ಚಂದ್ರಶೇಖರ, ರಾಮನ್‌ತಳಿ ಸುಧಾಕರನ್, ಅತಿಥಿಗಳು–ಆರ್. ಶ್ರೀನಿವಾಸನ್, ಕುಸುಮ ರಾಜಶೇಖರ್, ಬಿ.ಎನ್.ಶಿವಲಿಂಗ, ಎಸ್. ರಾಜುಹಾಸನ್, ಆಯೋಜನೆ ಮತ್ತು ಸ್ಥಳ–ಎಚ್ಎಎಲ್ ಕೇಂದ್ರೀಯ ಕನ್ನಡ ಸಂಘ, ಎಚ್ಎಎಲ್, ಬೆಳಿಗ್ಗೆ 11

**ಎಂ.ಎನ್.ಪಾಟೀಲ ಅವರ 'ಅಘೋರಿ' ಚಿತ್ರಕಲಾ ಪ್ರದರ್ಶನ:** ಉದ್ಘಾಟನೆ–ಎ. ಎಂ.ಪ್ರಕಾಶ್, ಅತಿಥಿಗಳು – ನಿಜಲಿಂಗಪ್ಪ ಅಲವಿ, ಬಸವರಾಜ್ ಎಸ್.ಅರಗಿ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಕೆಜಿಎಲ್‌ಡಿ ಆರ್ಟ್ ಗ್ಯಾಲರಿ, ಹೊಯ್ಸಳ ನಗರ, ಸುಂಕದಕಟ್ಟೆ, ಬೆಳಿಗ್ಗೆ 11.30

**ವೆಂಕಟೇಶ ನಾಟ್ಯ ಮಂದಿರದ ವಾರ್ಷಿಕೋತ್ಸವ:** ಸನ್ಮಾನ–ಕುಸುಮಾ ಎನ್.ರಾವ್, ಎನ್. ಗಣೇಶ್, ಅತಿಥಿಗಳು–ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ, ಎಸ್. ರಂಗಪ್ಪ, ಸಂಸ್ಥೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 4



ಅದಿತಿ ಸ್ವಾಮಿನಾಥನ್

**ಸಮ್ಮಿಲನ:** ಭರತನಾಟ್ಯ ಪ್ರವೇಶ–ಅದಿತಿ ಸ್ವಾಮಿನಾಥನ್, ಅತಿಥಿಗಳು–ಜ್ಯೋತಿ ಪಟ್ಟಾಭಿರಾಮ್, ಪ್ರೊ.ಸಹನಾ ದಾಸ್, ಆಯೋಜನೆ–ಭಾರತ ನೃತ್ಯ ಸಂಗೀತ ಅಕಾಡೆಮಿ, ಸ್ಥಳ–ಗಾಯನ ಸಮಾಜ, ಬಸವನಗುಡಿ, ಸಂಜೆ 6

| PRM/KA/RERA/1251/472/PR/221221/004599 | PRM/KA/RERA/1251/309/PR/211209/004576 | PRM/KA/RERA/1251/446/PR/190722/002710 | PRM/KA/RERA/1251/446/PR/210312/004002 | PRM/KA/RERA/1251/308/PR/201201/003733 | PRM/KA/RERA/1251/309/PR/181122/002151 | PRM/KA/RERA/1251/309/PR/180120/001878 |
|---|---|---|---|---|---|---|
| SASMARA | STAVAM | SOVEREIGN | SKYSHUBHAM | SAHARA | SYNERGY | SKYCITY |
| 2 & 3-BHK, G+3 FLOORS | 2 & 3-BHK, G+3 FLOORS | 1, 2 & 3-BHK, G+4 FLOORS | 2 & 3-BHK, G+14 FLOORS | 2-BHK, G+4 FLOORS | 2 & 3-BHK, G+3 FLOORS | 3-BHK, G+19 FLOORS |
| HEBBAL | YELAHANKA | KITHAGANUR | K R PURAM | SARJAPURA | KOGILU CROSS | THANISANDRA MN RD |
| ₹ 47.70 - 81.25 Lacs# | ₹ 31.22 - 53.90 Lacs# | ₹ 30.36 - 58.82 Lacs# | ₹ 39.36 - 65.42 Lacs# | ₹ 31.00 - 38.96 Lacs# | ₹ 35.16 - 57.20 Lacs# | ₹ 1.11 - 1.37 Crores# |

# Prices mentioned are base price and may vary with dimensions, floors, and availability. Brand names mentioned in this advertisement are for demarcation & not for promotion. Travel time may vary as per the route followed. For more details/information about the projects, visit: www.rera.karnataka.gov.in

8880 465 465 ಡಿಎಸ್ ಮ್ಯಾಕ್ಸ್ www.dsmaxproperties.com

# ಜೀವಜಲಕ್ಕೆ ನಂಜು

ಒಂದನೇ ಪುಟದಿಂದ

ಭಾರತೀಯ ವಿಜ್ಞಾನ ಸಂಸ್ಥೆಯ ವಾಯುಗುಣ ಬದಲಾವಣೆ ಕೇಂದ್ರ ಹಾಗೂ ಮಂಗಳೂರು ವಿಶ್ವವಿದ್ಯಾಲಯದ ಪರಿಸರ ವಿಕಿರಣಶೀಲತೆಯಲ್ಲಿ ಸುಧಾರಿತ ಸಂಶೋಧನಾ ಕೇಂದ್ರದ ಅಧ್ಯಯನ ತಂಡಗಳು ರಾಜ್ಯದ 13 ಜಿಲ್ಲೆಗಳ 73 ಹಳ್ಳಿಗಳಲ್ಲಿ ಅಂತರ್ಜಲದಲ್ಲಿ ಯುರೇನಿಯಂ ಕುರಿತು ನಡೆಸಿದ ಅಧ್ಯಯನವು ಬಯಲುಸೀಮೆಯ ನೀರು ಕುಡಿಯಲು ಯೋಗ್ಯವಲ್ಲ ಎನ್ನುವುದನ್ನು ಸಾರಿ ಹೇಳುತ್ತಿದೆ. 2019 ಮತ್ತು 2020ರ ನಡುವೆ ಈ ಅಧ್ಯಯನ ನಡೆದಿದೆ.

ಕಲಬುರಗಿ, ಯಾದಗಿರಿ, ಬಾಗಲ ಕೋಟೆ, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ತುಮಕೂರು, ಚಿಕ್ಕ ಬಳ್ಳಾಪುರ, ಕೋಲಾರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ ಜಿಲ್ಲೆಯ ಒಟ್ಟು 73 ಹಳ್ಳಿಗಳ ನೀರಿನಲ್ಲಿ ಯುರೇನಿಯಂ ಅಂಶ ಇರುವ ಬಗ್ಗೆ ಅಧ್ಯಯನ ಬೆಳಕು ಚೆಲ್ಲಿದೆ.

**ಯಾವ ಪ್ರಮಾಣ:** ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಒಂದು ಲೀಟರ್ ನೀರಿನಲ್ಲಿ 30 ಮೈಕ್ರೊಗ್ರಾಮ್‌ಗಿಂತಲೂ ಕಡಿಮೆ ಮತ್ತು ಅಣುಶಕ್ತಿ ನಿಯಂತ್ರಣ ಮಂಡಳಿ ಪ್ರಕಾರ 60 ಮೈಕ್ರೊಗ್ರಾಮ್‌ಗಿಂತಲೂ ಕಡಿಮೆ ಪ್ರಮಾಣದಲ್ಲಿ ಯುರೇನಿಯಂ ಅಂಶ ಇರಬಹುದು. ಆದರೆ, ಅಧ್ಯಯನಕ್ಕೆ ಒಳಪಟ್ಟ ಬಹಳಷ್ಟು ಗ್ರಾಮಗಳಲ್ಲಿ ಇದಕ್ಕೆ ಮೀರಿದ ಮತ್ತು ಅಪಾಯಕಾರಿ ಮಟ್ಟದಲ್ಲಿ ಯುರೇನಿಯಂ ಪ್ರಮಾಣ ವಿದೆ. ಈ ಹಳ್ಳಿಗಳ ಸುತ್ತ ಕೈಗಾರಿಕೆಗಳೂ ಇಲ್ಲ. ಇಲ್ಲಿನ ಜನರು ಕುಡಿಯುವ ನೀರಿಗೆ ಕೊಳವೆಬಾವಿಗಳನ್ನು ಹೆಚ್ಚಾಗಿ ಆಶ್ರಯಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರಕ್ಕೆ ನೀರು ಪೂರೈಸುತ್ತಿರುವ ಕೆಲ ಕೊಳವೆಬಾವಿಗಳ ನೀರು ಕುಡಿಯಲು ಯೋಗ್ಯವಾಗಿಲ್ಲ ಎನ್ನುತಿದೆ ವರದಿ. ಈ ಕೊಳವೆಬಾವಿಗಳ ಒಂದು ಲೀಟರ್ ನೀರಿನಲ್ಲಿ ಯುರೇನಿಯಂ ಪ್ರಮಾಣ 1 ಸಾವಿರ ಮೈಕ್ರೊಗ್ರಾಂ ಮೀರಿದೆ.

**ಮಿತಿ ಮೀರಿದ ಬಳಕೆ:** ಸಣ್ಣ ನೀರಾವರಿ ಇಲಾಖೆಯು 2017ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಅಧಿಕೃತ 1,18,763 ಕೊಳವೆಬಾವಿಗಳಿದ್ದವು. ಕೊಳವೆಬಾವಿಗಳ ಮತ್ತೊಂದು ಸಮಗ್ರ ಸಮೀಕ್ಷೆ 2022ರಲ್ಲಿ ನಡೆಯಬೇಕಿದೆ.

2017ರ ಸಮೀಕ್ಷೆಯ ಒಟ್ಟು ಬೋರ್‌ವೆಲ್‌ಗಳ ಪೈಕಿ ಸುಮಾರು 40,186 ಕೊಳವೆಬಾವಿಗಳ ಆಳ 150 ಮೀಟರ್. ರಾಜ್ಯದಲ್ಲಿರುವ ಕೊಳವೆಬಾವಿಗಳ ನಿಖರ ಸಂಖ್ಯೆಗಳ ಮಾಹಿತಿ ಅಂತರ್ಜಲ ಪ್ರಾಧಿಕಾರ ಸೇರಿದಂತೆ ಸಂಬಂಧ ಯಾವುದೇ ಇಲಾಖೆಯಲ್ಲೂ ಲಭ್ಯವಿಲ್ಲ.

ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್ ಕೊರೆಯುವುದರ ಮೇಲೆ ಯಾವುದೇ ನಿಯಂತ್ರಣವಿಲ್ಲ. ಅದೇ ರೀತಿ ಮಿತಿ ಮೀರಿ ಅಂತರ್ಜಲವನ್ನು ತೆಗೆಯಲಾಗುತ್ತಿದೆ. 2017ರಲ್ಲಿ 365.03 ಟಿಎಂಸಿ ಅಡಿ ಮತ್ತು 2020ರಲ್ಲಿ 375.47 ಟಿಎಂಸಿ ಅಡಿ ಅಂತರ್ಜಲ ತೆಗೆದು ಬಳಸಲಾಗಿದೆ.

ಅದರಲ್ಲೂ ಬಯಲು ಸೀಮೆಯ ಬಹಳಷ್ಟು ಜಿಲ್ಲೆಗಳಲ್ಲಿ ಶಾಶ್ವತ ನೀರಾವರಿ ಯೋಜನೆಗಳಿಲ್ಲ. ಆಳವಾಗಿ ಕೊಳವೆಬಾವಿ ಕೊರೆದು ನೀರು ಮೇಲೆತ್ತುತ್ತಿರುವುದು, ಸರ್ಕಾರ ಇದಕ್ಕೆ ಕಡಿವಾಣ ಹಾಕದಿರುವುದು ನೀರು ಮತ್ತು ಆರೋಗ್ಯದ ವಿಚಾರದಲ್ಲಿ ಈ ಜಿಲ್ಲೆಗಳ ಜನರು ಮತ್ತಷ್ಟು ಆಪತ್ತಿಗೆ ಒಳಗಾಗುವ ಸಾಧ್ಯತೆಯನ್ನು ಹೆಚ್ಚಿಸಿದೆ.

ಭವಿಷ್ಯದ ಹಿತ ಮತ್ತು ವಿಷಮುಕ್ತ ನೀರು ಕುಡಿಯುವ ಉದ್ದೇಶದಿಂದ ಹೆಚ್ಚಿರುವ ಅಂತರ್ಜಲ ಮಟ್ಟವನ್ನು ಸ್ಥಿರವಾಗಿ ಮತ್ತು ಸುರಕ್ಷಿತವಾಗಿ ಕಾಪಾಡಿಕೊಳ್ಳಲು ಸಾಧ್ಯವೇ ಎನ್ನುವ ಪ್ರಶ್ನೆಗೆ ಅಧಿಕಾರಿಗಳು, ಜಲತಜ್ಞರ ಬಳಿಯೂ ಉತ್ತರವಿಲ್ಲ!

### ಶೇ 25ರಷ್ಟು ಭಾಗದಲ್ಲಿ ಅಂತರ್ಜಲ ಅತಿ ಬಳಕೆ

ರಾಜ್ಯದ ಒಟ್ಟು ಭೂಭಾಗದಲ್ಲಿ ಶೇ 25ರಷ್ಟು ಭಾಗದಲ್ಲಿ ಅಂತರ್ಜಲ ಅತಿ ಬಳಕೆಯಾಗಿದೆ. ಶೇ 7ರಷ್ಟು ಭೂಭಾಗದಲ್ಲಿ ಅಂತರ್ಜಲ ಮಟ್ಟ ಗಂಭೀರ ಪರಿಸ್ಥಿತಿಯಲ್ಲಿದೆ. ಬಯಲು ಸೀಮೆಯಲ್ಲಿಯೇ ಅಂತರ್ಜಲ ಆಪತ್ತಿನಲ್ಲಿದೆ ಎಂದು ಅಧ್ಯಯನಗಳು ತಿಳಿಸಿವೆ.

### ಸಾವಿರ ಮೈಕ್ರೊಗ್ರಾಂಗೂ ಹೆಚ್ಚಿನ ಯುರೇನಿಯಂ

ಒಂದನೇ ಪುಟದಿಂದ

ಬಾಗೇಪಲ್ಲಿ ತಾಲ್ಲೂಕಿನ ಮದ್ದಲಕಾನೆ, ಜಿ. ಮದ್ದೇಪಲ್ಲಿ, ತಿಮ್ಮಂಪಲ್ಲಿ, ಯಲ್ಲಂಪಲ್ಲಿ, ಪೋತೇಪಲ್ಲಿ, ಚಿಂತಾಮಣಿ ನಗರ, ಮಧುಗಿರಿ ತಾಲ್ಲೂಕಿನ ಬಡವನಹಳ್ಳಿ, ಮೊಳಕಾಲ್ಮುರು ತಾಲ್ಲೂಕಿನ ಕಾಡಸಿದ್ದಾಪುರ ಗ್ರಾಮಗಳ ನೀರಿನಲ್ಲಿ ಯುರೇನಿಯಂ ಪ್ರಮಾಣ ಒಂದು ಸಾವಿರ ಮೈಕ್ರೊಗ್ರಾಂ ಮೀರಿದೆ.

# ಕ್ಯಾನ್ ಮಾಫಿಯಾ

## ಮನೆ ಮನೆಗೆ ವಿಷಯುಕ್ತ ನೀರು

ಪ್ರಜಾವಾಣಿ ವಾರ್ತೆ

**ಕಲಬುರಗಿ:** ಕುಡಿಯುವ ನೀರು ಪೂರೈಸುವ ಘಟಕಗಳು ಐಎಸ್‌ಐ ಗುರುತು ಹೊಂದಿರುವುದು ಕಡ್ಡಾಯ ಎಂಬ ಆದೇಶ ಪೂರ್ಣಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ. ಬೆಂಗಳೂರೂ ಸೇರಿ ರಾಜ್ಯದ ಎಲ್ಲಾ ನಗರ, ತಾಲ್ಲೂಕು ಕೇಂದ್ರಗಳಲ್ಲಿ ಕ್ಯಾನ್‌ಗಳ ಮೂಲಕ ವಿಷಯುಕ್ತ ನೀರು ಪೂರೈಕೆಯಾಗುತ್ತಿದೆ.

ಕಲಬುರಗಿ ನಗರದಲ್ಲಿ 44 ನೀರು ಶುದ್ಧೀಕರಣ ಘಟಕಗಳು ಅನುಮತಿ ಪಡೆದಿದ್ದು, ಅವುಗಳಲ್ಲಿ 22ಕ್ಕೆ ಮಾತ್ರ ಐಎಸ್‌ಐ ಮಾರ್ಕ್ ಇದೆ. ಜಿಲ್ಲೆಯಾದ್ಯಂತ 400ಕ್ಕೂ ಹೆಚ್ಚು ಅನಧಿಕೃತ ನೀರು ಸರಬರಾಜು ಘಟಕಗಳಿವೆ. 20 ಲೀಟರ್ ನೀರಿನ ಒಂದು ಕ್ಯಾನ್‌ಗೆ ₹ 10 ರಿಂದ ₹ 20 ಪಡೆಯುತ್ತಾರೆ. ಅಧಿಕೃತ ಘಟಕಗಳ ನೀರಿಗೆ ₹ 30ರಿಂದ ₹ 50ರವರೆಗೂ ದರವಿದೆ. ಒಂದು ವರ್ಷದ ಅವಧಿಯಲ್ಲಿ 18 ಅನಧಿಕೃತ ಘಟಕಗಳ ವಿರುದ್ಧ ಕ್ರಮ ಜರುಗಿಸಿ ಬೀಗ ಹಾಕಿಸಲಾಗಿದೆ.

ಕಲ್ಯಾಣ ಕರ್ನಾಟಕದ ಏಳೂ ಜಿಲ್ಲೆಗಳಲ್ಲಿ 'ಕ್ಯಾನ್ ಮಾಫಿಯಾ' ವ್ಯಾಪಕವಾಗಿದೆ. ಇಲ್ಲಿನ ನೀರಿನಲ್ಲಿ ಕ್ಯಾಲ್ಸಿಯಂ ಪ್ರಮಾಣ ಹೆಚ್ಚಾಗಿದೆ. ಈ ನೀರು ಕುಡಿಯುವುದರಿಂದ ಮೂತ್ರಪಿಂಡದಲ್ಲಿ ಕಲ್ಲು, ಕರುಳುಬೇನೆ, ಚರ್ಮರೋಗ ಹಾಗೂ ಕೂದಲು ಉದುರುವಂಥ ಸಮಸ್ಯೆ ಕಾಡುತ್ತವೆ. ಸುಣ್ಣದಕಲ್ಲಿನ ಅಂಶವೂ ಹೆಚ್ಚಿರುವ ಕಾರಣ ಬೋರ್‌ವೆಲ್ ನೀರಿನಲ್ಲಿ ಫ್ಲೋರೈಡ್ ಪ್ರಮಾಣ ಹೆಚ್ಚಿದೆ. ನೀರು ಪೂರೈಸುವ ಘಟಕಗಳು ಇಂಥದ್ದೇ ಬೋರ್‌ವೆಲ್‌ಗಳ ಮೂಲಕ ಕ್ಯಾನ್‌ನಲ್ಲಿ ನೀರು ತುಂಬಿಸಿ, ಮನೆಗಳಿಗೆ ತಲುಪಿಸುತ್ತಾರೆ.

ಕಿತ್ತೂರು ಕರ್ನಾಟಕ ಭಾಗದ ಏಳು ಜಿಲ್ಲೆಗಳಲ್ಲೂ ಜಿಲ್ಲಾ ಪಂಚಾಯಿತಿ ಮತ್ತು ನಗರಸಭೆಗಳಿಂದ ಸ್ಥಾಪಿಸಿರುವ ಶುದ್ಧ ನೀರಿನ ಘಟಕಗಳು ಕೆಟ್ಟಿರುವ ಕಾರಣ ಹಳ್ಳಿಗಳ ಜನರೂ ಕ್ಯಾನ್ ನೀರಿಗೆ ಮೊರೆ ಹೋಗಿದ್ದಾರೆ.

ಮೈಸೂರು, ಶಿವಮೊಗ್ಗ, ಬೆಳಗಾವಿ, ಗದಗ, ಹಾವೇರಿ, ಕೊಡಗು, ಮಂಡ್ಯದಲ್ಲಿ ಐಎಸ್‌ಐ ದೃಢೀಕೃತ ಘಟಕಗಳು ಬೆರಳೆಣಿಕೆಯಷ್ಟು ಇವೆ. ಈ ಜಿಲ್ಲಾ ಕೇಂದ್ರಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳು ಹೆಚ್ಚಿವೆ. ವಿಜಯಪುರದಲ್ಲಿ ಐಎಸ್‌ಐ ದೃಢೀಕರಣ ಪ್ರಮಾಣ ಪತ್ರ ಪಡೆದ 24 ಆರ್‌ಒ ಘಟಕಗಳಿವೆ. ಈ ವರ್ಷ 27 ಘಟಕಗಳ ಮೇಲೆ ದಾಳಿ ಮಾಡಿ ದೂರು ದಾಖಲಿಸಿಕೊಂಡು, ₹ 7.27 ಲಕ್ಷ ದಂಡ ವಸೂಲಿ ಮಾಡಲಾಗಿದೆ.

### ಶುದ್ಧ ನೀರು ಹೇಗಿರಬೇಕು?

ಐಎಸ್‌ಐ ಮಾರ್ಕಿಂಗ್ ಇಲ್ಲದೇ ನೀರು ಸರಬರಾಜು ಮಾಡುವಂತಿಲ್ಲ. ಇಂಥ ಘಟಕ ತೆರೆಯುವುದು ಶಿಕ್ಷಾರ್ಹ ಅಪರಾಧ ಎಂದು 2012ರಲ್ಲಿಯೇ ಸುಪ್ರೀಂ ಕೋರ್ಟ್ ಆದೇಶ ನೀಡಿದೆ.

ಕ್ಯಾನ್ ನೀರು ಸರಬರಾಜು ಘಟಕಗಳು ಪ್ರತಿವರ್ಷ ಐಎಸ್‌ಐ ಮಾನ್ಯತೆಗೆ ಒಳಪಡಬೇಕು. ಇದರ ಅನುಮತಿ ನವೀಕರಣಕ್ಕೆ ₹ 1.5 ಲಕ್ಷ ವೆಚ್ಚವಾಗುತ್ತದೆ. ಅಲ್ಲದೇ ಪ್ರತಿ ತಿಂಗಳು ಆಯಾ ಆಹಾರ ಸುರಕ್ಷತಾ ಇಲಾಖೆ ಪ್ರಯೋಗಾಲಯದಲ್ಲೂ ನೀರು ತಪಾಸಣೆ ಮಾಡಿಸಬೇಕು. ಈ ರೀತಿ ಒಮ್ಮೆ ತಪಾಸಣೆ ಮಾಡಿಸಲು ₹ 48 ಸಾವಿರ ವೆಚ್ಚವಾಗುತ್ತದೆ.

'ನಮ್ಮ ಘಟಕದಲ್ಲೂ ನಾಲ್ಕು ಜೈವಿಕ ಹಾಗೂ ಎಂಟು ರಾಸಾಯನಿಕ ಪ್ಯಾರಾಮೀಟರ್‌ಗಳಿವೆ. ಪ್ರತಿದಿನ ಈ 11 ಪ್ಯಾರಾಮೀಟರ್‌ನಲ್ಲಿ ನಾವು ನೀರು ತಪಾಸಣೆ ಮಾಡಲೇಬೇಕು. ಆಮ್ಲಜನಕ, ಸಾರಜನಕ, ಫ್ಲೋರೈಡ್, ಲವಣಾಂಶ ಸೇರಿ ಯಾವುದು ಎಷ್ಟು ಪ್ರಮಾಣದಲ್ಲಿ ಇರಬೇಕು ಎಂಬುದನ್ನು ತಿಳಿಯಲು ಈ ಪ್ಯಾರಾಮೀಟರ್ ಅಳವಡಿಕೆ ಅಗತ್ಯ' ಎಂಬ ಮಾಹಿತಿಯನ್ನು ಈ ಘಟಕದ ಮಾಲೀಕರೇ ನೀಡುತ್ತಾರೆ.

ಒಬ್ಬನೇ ವ್ಯಕ್ತಿ ಮೂರು– ನಾಲ್ಕು ಹೆಸರಿನಲ್ಲಿ ಘಟಕ ತೆರೆದಿರುತ್ತಾರೆ. ದಾವಣಗೆರೆಯಲ್ಲಿ ಶುದ್ಧೀಕರಣ ಘಟಕದಲ್ಲಿ ₹ 5ಕ್ಕೆ ಸಿಗುವ ನೀರನ್ನೇ ತುಂಬಿಸಿಕೊಂಡು ₹ 30ಕ್ಕೆ ಮಾರುವವರೂ ಇದ್ದಾರೆ ಎನ್ನುವುದು ಗೃಹಿಣಿಯರ ಮಾಹಿತಿ.

ಮಲೆನಾಡಿನ ಉಡುಪಿ, ದಕ್ಷಿಣಕನ್ನಡ, ಚಿಕ್ಕಮಗಳೂರು ಕಡೆಗಳಲ್ಲಿ ನದಿ ನೀರು ಹಾಗೂ ತೆರೆದಬಾವಿಗಳು ಹೆಚ್ಚಾಗಿರುವ ಕಾರಣ ಕ್ಯಾನ್ ಮಾಫಿಯಾ ತಲೆಯೆತ್ತಿಲ್ಲ.

ಕಲಬುರಗಿ ತಾಲ್ಲೂಕಿನ ಹೊನ್ನಕಿರಣಗಿಯ ಶಾಲೆ ಬಳಿ ಇರುವ ಫ್ಲೋರೈಡ್‌ಯುಕ್ತ ಬೋರ್‌ವೆಲ್ ನೀರು ಕುಡಿದ ಮಕ್ಕಳು
ಪ್ರಜಾವಾಣಿ ಚಿತ್ರ: ಮಲ್ಲಿಕಾರ್ಜುನ

# ಜವಾಬ್ದಾರಿಯಿಂದ ಜಾರಿಕೊಳ್ಳುವ ಏಜೆನ್ಸಿ

**ಚಿತ್ರದುರ್ಗ/ಮೈಸೂರು:** ಗ್ರಾಮೀಣ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿನ (ಆರ್‌ಒ) ಘಟಕಗಳನ್ನು ಸ್ಥಾಪಿಸುವ ಖಾಸಗಿ ಏಜೆನ್ಸಿಗಳು ನಿರ್ವಹಣೆಯ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿವೆ. ಘಟಕವಿದ್ದರೂ ಶುದ್ಧ ಕುಡಿಯುವ ನೀರಿಗೆ ಜನರು ಪರದಾಡುವ ಪರಿಸ್ಥಿತಿ ಜೀವಂತವಾಗಿದೆ.

ಘಟಕ ಸ್ಥಾಪಿಸುವ ಖಾಸಗಿ ಏಜೆನ್ಸಿಗಳು ಐದು ವರ್ಷ ನಿರ್ವಹಣೆ ಮಾಡಬೇಕು ಎಂಬುದು ನಿಯಮ. ಅವಧಿ ಪೂರ್ಣಗೊಂಡ ಬಳಿಕ ಮರು ಟೆಂಡರ್ ಕರೆದು ನಿರ್ವಹಣೆಯ ಹೊಣೆಯನ್ನು ಹೊಸದಾಗಿ ನೀಡಬೇಕು. ಕಾಮಗಾರಿ ಪೂರ್ಣಗೊಂಡ ಬಳಿಕ ಖಾಸಗಿ ಏಜೆನ್ಸಿಗಳು ಘಟಕಗಳತ್ತ ತಿರುಗಿ ನೋಡುತ್ತಿಲ್ಲ.

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್), ಸಂಸದರು, ಶಾಸಕರ ಅನುದಾನ ಹಾಗೂ ಸಹಕಾರ ಸಂಘಗಳ ನೆರವಿನಿಂದ ಘಟಕಗಳನ್ನು ಸ್ಥಾಪಿಸಲಾಗಿದೆ. ಘಟಕಗಳ ಮೇಲೆ ನಿಗಾ ಇಡಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಸರ್ಕಾರ ಹೊಣೆಗಾರಿಕೆ ನಿಗದಿ ಮಾಡಿದೆ. ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸಿದ 'ಸ್ಮಾರ್ಟ್ ಅಕ್ವಾ ಏಜೆನ್ಸಿ'ಯನ್ನು ಚಿತ್ರದುರ್ಗದಲ್ಲಿ ಕಪ್ಪುಪಟ್ಟಿಗೆ ಸೇರಿಸಲಾಗಿದೆ.

₹ 1, ₹ 2, ₹ 5 ನಾಣ್ಯ ಬಳಸಿ 20 ಲೀಟರ್ ನೀರು ಪಡೆಯುವ ವ್ಯವಸ್ಥೆ ಘಟಕಗಳಲ್ಲಿದೆ. ಇಲ್ಲಿ ಸಂಗ್ರಹವಾಗುವ ಹಣದಲ್ಲಿ ಘಟಕ ನಿರ್ವಹಿಸಬೇಕು. ಒಮ್ಮೆ ಮಾತ್ರ ಸರ್ಕಾರ ನಿರ್ವಹಣೆಯ ವೆಚ್ಚವನ್ನು ಭರಿಸಲಿದೆ. ನಾಣ್ಯದ ಬದಲು 'ಸ್ಮಾರ್ಟ್ ಕಾರ್ಡ್' ವ್ಯವಸ್ಥೆಯನ್ನು ಕೆಲ ಏಜೆನ್ಸಿಗಳು ಅನುಷ್ಠಾನಕ್ಕೆ ತಂದಿವೆ. ಇದಕ್ಕೆ ಗ್ರಾಮೀಣ ಪ್ರದೇಶದ ಜನರಿಂದ ವಿರೋಧ ವ್ಯಕ್ತವಾಗಿದೆ.

ಘಟಕಗಳ ಸ್ಥಿತಿ ಅರಿಯಲು ಕರ್ನಾಟಕ ರಾಜ್ಯ ರಿಮೋಟ್ ಸೆನ್ಸಿಂಗ್ ಬೋರ್ಡ್ 'ಆ್ಯಪ್' ಅಭಿವೃದ್ಧಿಪಡಿಸಿದೆ. ಚಿತ್ರದುರ್ಗ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗಿದೆ. ಘಟಕಗಳ 'ಭೌಗೋಳಿಕ ಸೂಚಿಕೆ' (ಜಿಯಾಗ್ರಾಫಿಕಲ್ ಇಂಡಿಕೇಷನ್) ಆಧಾರದ ಮೇರೆಗೆ ಇದರ ನಿರ್ವಹಣೆಯ ಮೇಲೆ ನಿತ್ಯ ನಿಗಾ ಇಡಲಾಗುತ್ತದೆ. ಇಷ್ಟೆಲ್ಲಾ ಆದರೂ ಘಟಕಗಳು ಜನರಿಗೆ ಸಮರ್ಪಕವಾಗಿ ನೀರು ಒದಗಿಸುತ್ತಿಲ್ಲ.

ಮೈಸೂರು ಜಿಲ್ಲೆಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಕಿಡಿಗೇಡಿಗಳು ಹಾನಿ ಮಾಡುವುದು, ಮೋಟಾರ್ ಮತ್ತಿತ್ತರ ಪರಿಕರಗಳನ್ನು ನಾಶಪಡಿಸುವುದು ಮಾಮೂಲಿಯಾಗಿದೆ. ಇದರಿಂದ ನಿರ್ವಹಣೆ ಪಡೆದ ಗುತ್ತಿಗೆದಾರರು ಹೈರಾಣಾಗಿದ್ದಾರೆ.

# ಅತಿವೃಷ್ಟಿಯಾದರೂ ಕುಸಿದ ಅಂತರ್ಜಲ ಮಟ್ಟ!

**ಬಾಗಲಕೋಟೆ:** ಈ ವರ್ಷ ರಾಜ್ಯದ ಹಲವು ಜಿಲ್ಲೆಗಳು ಅತಿವೃಷ್ಟಿ ಹಾಗೂ ಪ್ರವಾಹದ ಸಂಕಷ್ಟ ಎದುರಿಸಿದ್ದರೂ ಬಾಗಲಕೋಟೆ ಜಿಲ್ಲೆಯಲ್ಲಿ ಮಾತ್ರ ಅಂತರ್ಜಲ ಮಟ್ಟ ಇಳಿಕೆಯಾಗಿದೆ.

2020ರ ನವೆಂಬರ್‌ನಿಂದ 2021ರ ನವೆಂಬರ್ ಅವಧಿಯಲ್ಲಿ ಅಂತರ್ಜಲ ಮಟ್ಟ ಜಿಲ್ಲೆಯಲ್ಲಿ ಸರಾಸರಿ 1.20 ಮೀಟರ್ ಇಳಿಕೆಯಾಗಿದೆ ಎಂದು ಹಿರಿಯ ಭೂ ವಿಜ್ಞಾನಿ ಮಹೇಶ ಬಿರಾಜನವರ ಹೇಳುತ್ತಾರೆ.

'ಮಳೆ ಹೆಚ್ಚು ಆಗಿದೆ ಎಂದರೆ ಅಂತರ್ಜಲ ಮಟ್ಟ ಹೆಚ್ಚಾಗಬೇಕಿದೆ ಎಂದೇನೂ ಇಲ್ಲ. ನಮ್ಮಲ್ಲಿ ಬಿದ್ದ ಮಳೆಯ ನೀರನ್ನು ಹಿಡಿದಿಡುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಜಿಲ್ಲೆಯಲ್ಲಿ ನದಿಗಳ ಪಾತ್ರ ಇಲ್ಲವೇ ಆಲಮಟ್ಟಿ ಜಲಾಶಯದ ಹಿನ್ನೀರಿನ ಪಕ್ಕದಲ್ಲಿ ಮಾತ್ರ ಒಂದಷ್ಟು ಅಂತರ್ಜಲ ಮಟ್ಟ ಹೆಚ್ಚುತ್ತದೆ. ಅದು ಕೂಡ 5 ಕಿ.ಮೀನಷ್ಟು ಸುತ್ತಳತೆಯಲ್ಲಿ ಅಂತರ್ಜಲ ಹೆಚ್ಚಬಹುದು' ಎಂದು ಮಾಹಿತಿ ನೀಡಿದರು.

ಬಾದಾಮಿ ತಾಲ್ಲೂಕಿನಲ್ಲಿ 600 ಅಡಿಯವರೆಗೆ ಕೊರೆಸಿದರೆ ಮಾತ್ರ ಒಂದಷ್ಟು ನೀರಿನ ಪಸೆ ಕಾಣಸಿಗುತ್ತದೆ. ಅಲ್ಲಿ ಅಂತರ್ಜಲ ಬಳಕೆ ಅತಿಯಾದ ಕಾರಣ ಕೊಳವೆ ಬಾವಿ ಕೊರೆಸಲು ಅನುಮತಿ ಕಡ್ಡಾಯ. ಇನ್ನು ಹುನಗುಂದ ತಾಲ್ಲೂಕಿನಲ್ಲಿ ಗ್ರಾನೈಟ್ ಗಣಿಗಳಿರುವ ಕಾರಣ ನೀರಿನಲ್ಲಿ ಫ್ಲೋರೈಡ್ ಅಂಶ ಸಾಮಾನ್ಯ.

'ಕುಡಿಯಲು ನೀರು ಯೋಗ್ಯವಿಲ್ಲದ ಕಡೆ ಬಹುಗ್ರಾಮ ಯೋಜನೆ (ಎಂವಿಎಸ್) ಹಾಗೂ ಜಲಜೀವನ ಮಿಷನ್‌ನ ಜಲಧಾರೆ ಮೂಲಕ ಆಲಮಟ್ಟಿ ಜಲಾಶಯದ ಹಿನ್ನೀರು ಪ್ರದೇಶದ ಮನೆಗಳಿಗೆ ನೀರು ಪೂರೈಸುತ್ತಿದ್ದೇವೆ' ಎಂದು ಜಿಲ್ಲಾ ಪಂಚಾಯಿತಿಯ ಗ್ರಾಮೀಣ ಕುಡಿಯುವ ನೀರು ವಿಭಾಗದ ಅಧಿಕಾರಿ ಶ್ರೀನಿವಾಸ ಹೇಳುತ್ತಾರೆ.

ಉಳಿದಂತೆ ಉತ್ತರ ಕರ್ನಾಟಕದ ಬೆಳಗಾವಿ, ಗದಗ, ಹಾವೇರಿ, ಧಾರವಾಡ ಮತ್ತಿತರ ಜಿಲ್ಲೆಗಳಲ್ಲಿ ಇಂತಹ ಸಮಸ್ಯೆ ಕಂಡುಬಂದಿಲ್ಲ.

# ಮಳೆಯಿಂದ ಹೆಚ್ಚಳವಾದ ಅಂತರ್ಜಲ

• ಎಸ್.ರವಿಪ್ರಕಾಶ್

**ಬೆಂಗಳೂರು:** ರಾಜ್ಯ ಅಂತರ್ಜಲ ನಿರ್ದೇಶನಾಲಯ ಮತ್ತು ಸಣ್ಣ ನೀರಾವರಿ ಇಲಾಖೆಯು 'ಅಂತರ್ಜಲ ಸಂಪನ್ಮೂಲ ಮೌಲೀಕರಣ ವರದಿ'ಯನ್ನು ಎರಡು ತಿಂಗಳ ಹಿಂದೆ (ನವೆಂಬರ್‌ನಲ್ಲಿ) ಬಿಡುಗಡೆ ಮಾಡಿದ್ದು, ರಾಜ್ಯವ್ಯಾಪಿ 1,342 ಕೇಂದ್ರಗಳಲ್ಲಿ ಸಂಗ್ರಹಿಸಿರುವ ಮಾಹಿತಿ ಪ್ರಕಾರ 2019ರಿಂದ ಈಚೆಗೆ ಅಂತರ್ಜಲ ಮಟ್ಟ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ.

1,342 ಕೇಂದ್ರಗಳ 1,290 ಬಾವಿಗಳಲ್ಲಿ ಅಂದರೆ ಶೇ 97ರಷ್ಟು ನೀರಿನ ಮಟ್ಟ (2019ರ ಮೇ ತಿಂಗಳಿಂದ ನವೆಂಬರ್) ಏರಿಕೆ ಆಗಿದ್ದರೆ, 43 ಕೇಂದ್ರಗಳಲ್ಲಿ ಅಂದರೆ ಶೇ 3ರಷ್ಟು ಬಾವಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ. 2021ರಲ್ಲಿ ಕಳೆದ 50 ವರ್ಷಗಳಲ್ಲೇ ಅತ್ಯಧಿಕ ಮಳೆ ಆಗಿದ್ದರಿಂದ ಶೇ 82ರಷ್ಟು ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಏರಿಕೆಯಾಗಿದೆ.

ಕಳೆದ ಹತ್ತು ವರ್ಷಗಳ (2011ರಿಂದ 2021) ಸರಾಸರಿ ತೆಗೆದುಕೊಂಡಾಗ 147 ತಾಲ್ಲೂಕುಗಳಲ್ಲಿ ಅಂತರ್ಜಲ ಪ್ರಮಾಣ ಏರಿಕೆ ಆಗಿದೆ. ಆದರೂ, 50 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಕಡಿಮೆ ಇದೆ. ಅಂತರ್ಜಲ ಹೆಚ್ಚಳಕ್ಕೆ ಈ ವರ್ಷ ಅತ್ಯಧಿಕ ಮಳೆ ಆಗಿದ್ದು ಒಂದು ಕಾರಣವಾಗಿದ್ದರೆ, ಮಳೆ ಅವಧಿಯಲ್ಲಿ (ಸುಮಾರು ಮೂರು ತಿಂಗಳು) ರೈತರು ನೀರಾವರಿ ಪಂಪ್‌ಸೆಟ್‌ಗಳನ್ನು ಬಳಸಲಿಲ್ಲ. ಇದರಿಂದಾಗಿ ಅಂತರ್ಜಲ ಮರುಪೂರಣ ಗರಿಷ್ಠ ಮಟ್ಟದಲ್ಲಾಗಿದೆ ಎನ್ನುತ್ತಾರೆ ಅಂತರ್ಜಲ ನಿರ್ದೇಶನಾಲಯದ ಅಧಿಕಾರಿಗಳು.

**ಅಂತರ್ಜಲ ಅಧಿಕ ಬಳಕೆ:** ರಾಜ್ಯದ 52 ತಾಲ್ಲೂಕುಗಳಲ್ಲಿ ಅಂತರ್ಜಲವನ್ನು ಅತ್ಯಧಿಕ ಮಟ್ಟದಲ್ಲಿ ಬಳಕೆ ಮಾಡಲಾಗಿದೆ. ಇದರಲ್ಲಿ 10 ತಾಲ್ಲೂಕುಗಳಲ್ಲಿ ಅತ್ಯಧಿಕ, 35 ತಾಲ್ಲೂಕುಗಳಲ್ಲಿ ಸುಮಾರಾಗಿ ಬಳಕೆ ಮಾಡಲಾಗಿದೆ. 135 ತಾಲ್ಲೂಕುಗಳಲ್ಲಿ ಸುರಕ್ಷಿತ ಪ್ರಮಾಣದಲ್ಲಿದೆ.

ರಾಜ್ಯದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಅಂತರ್ಜಲ ಬಳಸುತ್ತಿರುವ ತಾಲ್ಲೂಕುಗಳೆಂದರೆ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ, ಬೆಂಗಳೂರು ನಗರ ಜಿಲ್ಲೆಯ ಯಲಹಂಕ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಕಾಗವಾಡ, ಬಳ್ಳಾರಿ ಜಿಲ್ಲೆಯ ಕೊಟ್ಟೂರು, ಚಾಮರಾಜನಗರ ಜಿಲ್ಲೆಯ ಚಾಮರಾಜನಗರ, ತುಮಕೂರು ಜಿಲ್ಲೆಯ ಶಿರಾ ಮತ್ತು ಕೊಪ್ಪಳ ಜಿಲ್ಲೆಯ ಕುಕನೂರು.

### ಅಂತರ್ಜಲ ಪ್ರಮಾಣ




# ಅಂಗ ಊನ, ಅಕಾಲ ಮುಪ್ಪು!

ಒಂದನೇ ಪುಟದಿಂದ

'ನನಗೀಗ 39 ವರ್ಷ. ತಾಸಗಟ್ಟಲೇ ಒಂದೇ ಜಾಗದಲ್ಲಿ ಕುಂತ್ರ ಬೆನ್ನು ನೋಯ್ತದ. ಮೈಲಿ ದೂರ ಹೋದ್ರೂ ತ್ರಾಸ್ ಆಲಾತದ. ಬೈಕ್ ಮ್ಯಾಲ್ ಹೋದರಂತೂ ಬೆನ್ನು ಚಳಕ್ ಅಂತದ. ಒಬ್ಬರೂ ನೆಟ್ಟಪುಟ್ಟ ಇಲ್ಲರಿ ನಮ್ಮೂರಾಗ...' ಎಂದು ನೋವು ತೋಡಿಕೊಂಡರು ಸಿದ್ದರಾಮಪ್ಪ ಪೊಲೀಸ್ ಪಾಟೀಲ.

ಫ್ಲೋರೈಡ್ ಪ್ರಮಾಣವನ್ನು ಪಿಪಿಎಂ (ಪಾರ್ಟ್ಸ್ ಪರ್ ಮಿಲಿಲೀಟರ್)ನಲ್ಲಿ ಅಳೆಯುತ್ತಾರೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಒಂದು ಮಿಲಿಲೀಟರ್ ನೀರಿಗೆ 0.5 ಪಿಪಿಎಂನಷ್ಟು ಫ್ಲೋರೈಡ್ ಇದ್ದರೆ ಸುರಕ್ಷಿತವೆಂದು ಮಾನದಂಡವನ್ನು ನಿಗದಿಪಡಿಸಲಾಗಿದೆ. ಬ್ಯುರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ (ಬಿಐಎಸ್) ಇದನ್ನು ತುಸು ಪರಿಷ್ಕರಿಸಿದೆ. 0.5ರಿಂದ 1 ಪಿಪಿಎಂವರೆಗೆ ಫ್ಲೋರೈಡ್ ಇದ್ದರೆ ಅದು ಕುಡಿಯಲು ಯೋಗ್ಯ ನೀರು, ಇದಕ್ಕಿಂತ ಕಡಿಮೆಯೂ ಮತ್ತು ಹೆಚ್ಚೂ ಇರಬಾರದು ಎಂದು ತಿಳಿಸಿದೆ. ಹೊನ್ನಕಿರಣಗಿಯ ನೀರಿನಲ್ಲಿ ಇದರ ಪ್ರಮಾಣ 2.5 ಪಿಪಿಎಂ ಇದೆ.

ಎಲ್ಲಿರುತ್ತದೆ ಈ ವಿಷ?: ಗಣಿಗಾರಿಕೆ ಪ್ರದೇಶದ ನೀರಿನಲ್ಲಿ ಫ್ಲೋರೈಡ್ ಹೆಚ್ಚಾಗಿ ಕಂಡುಬರುತ್ತದೆ. ಹೊನ್ನಕಿರಣಗಿಯೂ ಸೇರಿ ಕಲಬುರಗಿ ಜಿಲ್ಲೆಯ ಬಹುತೇಕ ಗ್ರಾಮಗಳ ಆಳದಲ್ಲಿ ಸುಣ್ಣದಕಲ್ಲು ಯಥೇಚ್ಛವಾಗಿದೆ. ಇಲ್ಲಿನ ಬೋರ್‌ವೆಲ್ ನೀರನ್ನು ಕುಡಿಯುವ ಎಲ್ಲರಲ್ಲೂ ಫ್ಲೋರೋಸಿಸ್ ಕಂಡುಬರುತ್ತದೆ.

## ಗುಂಡಣ್ಣ

## 25 ವರ್ಷಗಳ ಹಿಂದೆ

ಗುರುವಾರ, 2-1-1997

• **ಸಿಪಿಪಿ ನಾಯಕತ್ವ ವಹಿಸಿಕೊಳ್ಳಲು ಕೇಸರಿಗೆ ಕಾರ್ಯಕಾರಿಣಿ ಮನವಿ**

**ನವದೆಹಲಿ, ಜ. 1**– ಕಳೆದ ಎರಡು ವಾರಗಳಿಂದ ತೀವ್ರ ಬಿಕ್ಕಟ್ಟು ಉಂಟು ಮಾಡಿ ಕುತೂಹಲ ಕೆರಳಿಸಿರುವ ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕತ್ವವನ್ನು ವಹಿಸಿಕೊಳ್ಳುವಂತೆ ಸೀತಾರಾಂ ಕೇಸರಿ ಅವರಿಗೆ ಇಂದು ರಾತ್ರಿ ನಡೆದ ಪಕ್ಷದ ಕಾರ್ಯಕಾರಿಣಿ ಸಭೆಯು ಮನವಿ ಮಾಡಿತು. ಇದರಿಂದಾಗಿ ಬಹುತೇಕ ಮಟ್ಟಿಗೆ ಕೇಸರಿ ಅವರು ಒಮ್ಮತದಿಂದ ಆಯ್ಕೆಯಾಗುವುದು ಖಚಿತವಾದಂತಾಯಿತು.ಸಭೆಯಲ್ಲಿ ಕೈಗೊಂಡ ತೀರ್ಮಾನವನ್ನು ಪಕ್ಷದ ವಕ್ತಾರ ವಿ.ಎನ್. ಗಾಡ್ಗೀಳ್ ಅವರು ವರದಿಗಾರರಿಗೆ ತಿಳಿಸಿದರು.

## 50 ವರ್ಷಗಳ ಹಿಂದೆ

ಭಾನುವಾರ, 2-1-1972

• **ಸ್ವತಂತ್ರ ತಾಯಿನಾಡಿಗೆ ಬಾಂಗ್ಲಾ ನಿರಾಶ್ರಿತ ವಾಪಸು ಪ್ರಾರಂಭ**

**ಬನಗಾಂವ್ (ಪಶ್ಚಿಮ ಬಂಗಾಳ) ಜ. 1**– ಸುಮಾರು ಇಪ್ಪತ್ತೈದು ಸಾವಿರ ಮಂದಿ ನಿರಾಶ್ರಿತರು ಇಂದು ಭಾರತಕ್ಕೆ ವಿದಾಯ ಹೇಳಿ ಸ್ವತಂತ್ರ ನಾಡಿಗೆ ಹಿಂದಿರುಗುವ ಹಿಗ್ಗಿನಿಂದ ಮಾತೃಭೂಮಿಗೆ ಪ್ರಯಾಣ ಆರಂಭಿಸಿದರು.

ಇಂದು ಹೊಸ ವರ್ಷದ ಉದಯವಾದಂತೆ ನಿರಾಶ್ರಿತರ ಬಾಳಿನಲ್ಲೂ ಹೊಸ ಅಧ್ಯಾಯದ ಆರಂಭ. ಸೂರ್ಯೋದಯವಾದಂತೆ ಬಾಂಗ್ಲಾ ದೇಶದ ನಿರಾಶ್ರಿತರಲ್ಲಿ ಸ್ವತಂತ್ರ ನಾಡಿಗೆ ಹಿಂದಿರುಗುವ ಸಂಭ್ರಮ ಕಂಡು ಬಂದಿತು. ಎರಡು ವಿಶೇಷ ರೈಲುಗಳು ಇಲ್ಲಿಂದ ಜೆಸ್ಸೂರಿಗೆ ಹೊರಟವು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡ್ಡಿ

ಭಾನುವಾರ ಜನವರಿ 2, 2022

**ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ – ಹೇಮಂತ ಋತು ಧನುರ್ಮಾಸದ 17 ನೇ ದಿನ ತಿಥಿ:** (ಮಾರ್ಗಶಿರ ಕೃಷ್ಣ) ಅಮಾವಾಸ್ಯೆ ಗಂ. 24-04 ನಕ್ಷತ್ರ: ಮೂಲ ಗಂ. 16-23 ಯೋಗ: ವೃದ್ಧಿ ಗಂ. 09-42, ಧ್ರುವ ಗಂ. 29-29 ಕರಣ: ಚತುಷ್ಪಾದ್ ಗಂ. 13-53, ನಾಗವಾನ್ ಗಂ. 24-04. ರಾಹುಕಾಲ : ಸಂಜೆ 04:30 – 06:00 ಸೂರ್ಯೋದಯ : 06-57 ಸೂರ್ಯಾಸ್ತ : 06-11 ಮುಸ್ಲಿಂ ದಿನಾಂಕ : 28 ಜುಮಾದುಲ್ಲಾವಲ್ ದಿನ ವಿಶೇಷ : ಎಳ್ಳಮವಾಸ್ಯೆ, ವಕುಲ ಅಮಾವಾಸ್ಯೆ (ಒಡಿಶಾ) ಅದೃಷ್ಟ ಸಂಖ್ಯೆ: 5, 8

**ಮೇಷ :** ವಿದೇಶ ವ್ಯಾಸಾಂಗದ ಅಭಿಲಾಷಿಗಳಿಗೆ ಶುಭ ಸುದ್ದಿ. ರಬ್ಬರ್, ಪ್ಲಾಸ್ಟಿಕ್ ಸಂಬಂಧಿತ ವ್ಯಾಪಾರದಲ್ಲಿರುವವರು ವೃತ್ತಿಯಲ್ಲಿ ಹೆಚ್ಚಿನ ಏಳಿಗೆ ಕಂಡು ನೆಮ್ಮದಿಯನ್ನು ಕಾಣುವರು.

**ವೃಷಭ:** ಅಧಿಕಾರಿಗಳಿಗೆ ಸಹಾಯಕ ದರ್ಜೆಯವರಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು. ತರಕಾರಿ, ಹಣ್ಣು, ಹೂವು ವ್ಯಾಪಾರಿಗಳಿಗೆ ಉದ್ಯೋಗದಲ್ಲಿ ಲಾಭ ಬರುತ್ತದೆ.

**ಮಿಥುನ:** ಭೂಮಿಗೆ ಸಂಬಂಧಿಸಿದಂತೆ ವ್ಯವಹಾರ ನೆಡೆಸುವವರಿಗೆ ಶುಭ ದಿನವಾಗಲಿದೆ. ಮನೆಯಲ್ಲಿ ಎಲ್ಲರ ಆರೋಗ್ಯ ಚೆನ್ನಾಗಿದ್ದು, ಮನಸ್ಸಿಗೆ ನೆಮ್ಮದಿ ಇರುವುದು.

**ಕರ್ಕಾಟಕ:** ನಿಮ್ಮ ಸಹೋದ್ಯೋಗಿಗಳಿಂದ ಮಾರ್ಗದರ್ಶನವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಹಣಕಾಸಿನ ಹೊಸ ಮೂಲವೊಂದು ಸೃಷ್ಟಿಯಾಗುವುದು.

**ಸಿಂಹ:** ಇಂದು ನೀವು ಭೇಟಿ ಮಾಡುವ ವ್ಯಕ್ತಿಯ ಸಾಂಗತ್ಯ ಸಾರ್ಥಕ ಎನಿಸುವುದು. ಮನೆಯನ್ನು ನವೀಕರಿಸುವಂತಹ ಆಲೋಚನೆಯಲ್ಲಿ ತೊಡಗುವಿರಿ. ಸಾಂಸಾರಿಕ ಸ್ಥಿತಿಗತಿ ಉತ್ತಮವಾಗಿರುತ್ತದೆ.

**ಕನ್ಯಾ :** ಹೊಸ ಜನರ ಭೇಟಿಯಾಗುವುದು ಹಾಗೂ ಹೊಸ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ನೀವು ಬಹಳಷ್ಟು ಜಾಣತನ ತೋರಬೇಕಾಗುವುದು.

**ತುಲಾ :** ಇತ್ತೀಚಿನ ದಿನದಲ್ಲಿ ಸಹೋದರರಲ್ಲಿ ಮೂಡಿದ ಭಿನ್ನಾಭಿಪ್ರಾಯವು ತಂದೆ ತಾಯಿಯ ಹಿತವಚನಗಳಿಂದ ಉತ್ತಮವಾಗಿ ಭಾಂದವ್ಯ ಬೆಳೆಯಲಿದೆ. ವ್ಯಾಪಾರ ವ್ಯವಹಾರಗಳಿಂದ ಸಮಾಧಾನಕರ

**ವೃಶ್ಚಿಕ:** ಸಾಮಾಜಿಕ ಕ್ಷೇತ್ರದಲ್ಲಿ ಹೆಸರು ಸಂಪಾದನೆ ಮಾಡುವ ಅಪೇಕ್ಷಿಗಳಿಗೆ ಹಲವಾರು ಉತ್ತಮ ಅವಕಾಶಗಳು ಎದುರಾಗಲಿದೆ. ಜಾಣ್ಮೆ ತೋರಿದಲ್ಲಿ ಅದೃಷ್ಟ ನಿಮ್ಮದಾಗಲಿದೆ. ಗುರು ಹಿರಿಯರ ಆಶೀರ್ವಾದ ಪಡೆಯಿರಿ.

**ಧನು:** ಉದರ ವ್ಯಾಧಿ ಅಥವಾ ಜೀರ್ಣಾಂಗಕ್ಕೆ ಸಂಬಂಧಿಸದಂತೆ ಅನಾರೋಗ್ಯ ಎದುರಾಗಬಹುದು. ನೀವು ಯೋಚಿಸುವ ಪ್ರತಿಯೊಂದು ಕೆಲಸ-ಕಾರ್ಯಗಳು ಪ್ರಕೃತ ವಿಳಂಬ ರೀತಿಯಲ್ಲಿ ನಡೆದರೂ ಮುಂದೆ ಯಶಸ್ಸು ಸಿಗುವುದು.

**ಮಕರ:** ಜಾಹೀರಾತುಗಳ ಮೂಲಕ ವಹಿವಾಟನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಮಾಡಬಹುದು. ನಿಮ್ಮನ್ನು ನೀವೇ ವಿಮರ್ಶಿಕೊಳ್ಳಬೇಕಾದ ಸ್ಥಿತಿ ಬರಲಿದೆ.

**ಕುಂಭ:** ಆರ್ಥಿಕವಾಗಿ ಬಲಿಷ್ಠರಾಗುವಿರಿ. ಕೃಷಿಯ ಮೇಲೆ ಹೆಚ್ಚು ಬಂಡವಾಳ ಹೂಡುವಿಕೆ ಲಾಭದಾಯಕವಾದದ್ದು. ಯೋಗ್ಯ ವಯಸ್ಕರಿಗೆ ವಿವಾಹ ನಿಶ್ಚಯವಾಗುವುದು.

**ಮೀನ:** ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಲಭ್ಯವಾಗಲಿದೆ. ಕೌಟುಂಬಿಕ ಸಮಸ್ಯೆಗಳಿಗೆ ತಾಳ್ಮೆಯಂತಹ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿ. ಇಂದು ಸ್ನೇಹಿತರ ಹತ್ತಿರ ನಿಮ್ಮ ಯಾವುದೇ ಗೌಪ್ಯತೆಯನ್ನು ಹಂಚಿಕೊಳ್ಳಬೇಡಿ.

## ಪದಬಂಧ 4826

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಕಪಟಿ ಇಲ್ಲಿದ್ದಾನೆ (4)
3.ಅಧಿಕಾರ ಕಳೆದುಕೊಳ್ಳುವಿಕೆ (4)
5.ಒಳ್ಳೆಯ ನುಡಿ (3)
6.ಮಗನು ಅರಿತಿರುವ ವೇದ! (3)
8.ಜೋಪಾನ ಎಂದು ಹೀಗೆನ್ನಿ (3)
9.ವಿವಾದವಿಲ್ಲದೇ ನಡೆದ ಲಗ್ನ (3)
10.ಹಡಗಿನ ಮುಖ್ಯಾಧಿಕಾರಿ (3)
12.ರಾತ್ರಿಗೊಂದು ಪರ್ಯಾಯ ಪದ (3)
12.ರಾತ್ರಿಗೊಂದು ಪರ್ಯಾಯ ಪದ (3)
15.ಮರ್ಯಾದೆಯನ್ನು ಹೊಂದಿರುವ ಶಂಕೆ! (4)

**ಮೇಲಿಂದ ಕೆಳಕ್ಕೆ**
1.ನಾದಿನಿ ತಿರುಗಿರುವಾಗ ಕೇಳಿದ ಧ್ವನಿ! (3)
2.ಜಿಪುಣನ ಹತ್ತಿರವಿರುವ ಅರ್ಹಂತ (2)
3.ಎರಡು ಸೇರಿನ ಅಳತೆ (2)
4.ನೃತ್ಯಕ್ಕೆ ಮೀಸಲಾದ ಒಂದು ಸಂಗೀತ ರಚನೆ (3)
7. ಮನಸ್ಸನ್ನು ಹತೋಟಿಯಲ್ಲಿಡುವುದು (5)
8.ಮಂದಿಗೆಲ್ಲ ಈತ ಒಡೆಯ (5)
9.ಆಗಸದಲ್ಲಿ ಹಾರುವ ಲೋಹದ ಹಕ್ಕಿ (3)
11.ಕಣ್ಣು ಇಲ್ಲಿದೆ (3)
12.ಭೂಮಿಗಿರುವ ಇನ್ನೊಂದು ಹೆಸರು(2)
13.ನಗು ಪದದ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ(2)



### 4825ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಅನುಭೋಗ 3.ಹಸುಗೂಸು 5.ತಿಮಿರ 7.ಮಾನ 8.ವಸ್ತು 11.ಗರ 13.ಮಾಸು 14.ಕಡಿತ 16.ಕರ್ಮಾಂತರ 17.ಮಧುಕರ

**ಮೇಲಿಂದ ಕೆಳಕ್ಕೆ:**
1.ಅನುಭವ 2.ಗತಿ 3.ಹರ 4.ಸುದಿನ 6.ಮಿದುಳು 7.ಮಾವಟಿಗ 9.ಸ್ತುತಿಯಿಸು 10.ತಕ್ಕಡಿ 12.ರತ್ನಾಕರ 13.ಮಾದಕ 14.ಕರ 15.ತಮ

## ಸುಡೊಕು 5212

| | | | | | | | | |
|---|---|---|---|---|---|---|---|---|
| | 4 | | 1 | | 3 | 5 | | 7 |
| 7 | | 6 | 4 | | | | 3 | 1 |
| | 3 | | | | 7 | 4 | | |
| 6 | 1 | | | | 4 | | | |
| | | | 8 | 1 | 2 | 6 | | 4 |
| 8 | 2 | | | | | | 1 | |
| | | 3 | | 2 | | 9 | | 8 |
| 9 | | | 3 | | 6 | | 7 | |
| 4 | | 1 | | 8 | | | 6 | |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5211 ಸುಡೊಕು

| | | | | | | | | |
|---|---|---|---|---|---|---|---|---|
| 3 | 5 | 2 | 1 | 9 | 4 | 8 | 6 | 7 |
| 6 | 1 | 4 | 5 | 8 | 7 | 9 | 3 | 2 |
| 7 | 9 | 8 | 6 | 3 | 2 | 5 | 1 | 4 |
| 2 | 7 | 9 | 8 | 1 | 3 | 6 | 4 | 5 |
| 1 | 3 | 6 | 7 | 4 | 5 | 2 | 9 | 8 |
| 4 | 8 | 5 | 9 | 2 | 6 | 3 | 7 | 1 |
| 5 | 4 | 1 | 2 | 6 | 9 | 7 | 8 | 3 |
| 9 | 2 | 3 | 4 | 7 | 8 | 1 | 5 | 6 |
| 8 | 6 | 7 | 3 | 5 | 1 | 4 | 2 | 9 |

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.




ಎಂಜಿನಿಯರ್‌ಗಳ ಅಮಾನತಿಗೆ ಸಚಿವ ವಿ.ಸುನೀಲ್ ಕುಮಾರ್ ಸೂಚನೆ

# ಗ್ರಾಮ ಜ್ಯೋತಿ ಅನುಷ್ಠಾನ ಲೋಪ: ಸಮಗ್ರ ತನಿಖೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಅನುಷ್ಠಾನದಲ್ಲಿ ಲೋಪಗಳಾಗಿವೆ. ತಪ್ಪಿತಸ್ಥ ಎಂಜಿನಿಯರ್‌ಗಳನ್ನು ತಕ್ಷಣ ಅಮಾನತುಗೊಳಿಸಲಾಗುವುದು. ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗುವುದು ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ನಡೆದ ಗ್ರಾಮ ಜ್ಯೋತಿ ಯೋಜನೆ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳ ಜತೆ ಚರ್ಚಿಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ನಿರಂತರ ಜ್ಯೋತಿ ಯೋಜನೆಯ ಫೀಡರ್‌ಗಳ ಅಳವಡಿಕೆ ಕಾರ್ಯ ಸಮರ್ಪಕವಾಗಿ ನಡೆದಿಲ್ಲ. ₹ 224 ಕೋಟಿ ಮೊತ್ತದ ಈ ಯೋಜನೆ ಅನುಷ್ಠಾನದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಕಾಣುತ್ತಿದೆ. ವಿದ್ಯುತ್ ಕಂಬಗಳನ್ನು ನಿಗದಿತ ಆಳದಲ್ಲಿ ಅಳವಡಿಸಿಲ್ಲ. ಸಮರ್ಪಕವಾಗಿ ಭೂಮಿ ಅಗೆದಿಲ್ಲ. ಕಾರ್ಮಿಕ ಕಾಯ್ದೆಯ ನಿಯಮಗಳನ್ನು ಪಾಲನೆ ಮಾಡಿಲ್ಲ. ವಿವಿಧ ಹಂತಗಳಲ್ಲಿ ಇಂತಹ ಹಲವು ದೋಷಗಳು ಕಂಡುಬಂದಿವೆ. ಹಾಗಾಗಿ ತಪ್ಪಿತಸ್ಥ ಅಧಿಕಾರಿಗಳನ್ನು ತಕ್ಷಣ ಅಮಾನತುಗೊಳಿಸಲು ಸೂಚಿಸಲಾಗಿದೆ. ಯೋಜನೆ ಅನುಷ್ಠಾನ ಕುರಿತು ಎಸಿಬಿ ಅಥವಾ ಇಲಾಖೆಯಿಂದ ಸಮಗ್ರ ತನಿಖೆ ನಡೆಸುವ ಕುರಿತು ಪ್ರಧಾನ ಕಾರ್ಯದರ್ಶಿ ಜತೆ ಚರ್ಚಿಸಿ, ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್‌.ಈಶ್ವರಪ್ಪ ಮಾತನಾಡಿದರು. ಇಂಧನ ಸಚಿವ ವಿ.ಸುನೀಲ್ ಕುಮಾರ್, ವಿಧಾನಪರಿಷತ್ ಸದಸ್ಯರಾದ ಆಯನೂರು ಮಂಜುನಾಥ್, ರುದ್ರೇಗೌಡ ಇದ್ದಾರೆ.

ಸಭೆಯಲ್ಲಿ ಮಾತನಾಡಿದ ಉಸ್ತುವಾರಿ ಸಚಿವ ಕೆ.ಎಸ್. ಈಶ್ವರಪ್ಪ, 'ಕಾಮಗಾರಿಗೂ, ಗುತ್ತಿಗೆದಾರನಿಗೆ ಬಿಡುಗಡೆಯಾಗಿರುವ ಹಣಕ್ಕೂ ₹ 12.21 ಕೋಟಿ ವ್ಯತ್ಯಾಸವಿದೆ. ಇಷ್ಟು ವ್ಯತ್ಯಾಸವಿದ್ದರೂ ಕಾಮಗಾರಿ ಪೂರ್ಣಗೊಳಿಸಿರುವ ಪ್ರಮಾಣ ಪತ್ರ ನೀಡಲಾಗಿದೆ. 676 ಹಳ್ಳಿಗಳಲ್ಲಿ ಕಾಮಗಾರಿ ನಡೆಸಲಾಗಿದೆ. 90 ಕಡೆ ಪ್ರಧಾನಿ ನರೇಂದ್ರ ಮೋದಿ ಅವರ ಬೋರ್ಡ್ ಹಾಕಲಾಗಿದೆ. ಉಳಿದ ಹಳ್ಳಿಗಳಲ್ಲಿ ಪ್ರಧಾನಿ ಮೋದಿ ಅವರ ಭಾವಚಿತ್ರ ಹಾಕಿಲ್ಲ' ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ವಿಧಾನಪರಿಷತ್ ಸದಸ್ಯರಾದ ಅಯನೂರು ಮಂಜುನಾಥ್, ರುದ್ರೇಗೌಡ, ಮೇಯರ್ ಸುನಿತಾ ಅಣ್ಣಪ್ಪ, ಜಿಲ್ಲಾಧಿಕಾರಿ ಕೆ.ಬಿ. ಶಿವಕುಮಾರ್, ಮೆಸ್ಕಾಂ ಅಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತಿತರರು ಇದ್ದರು.

## ಕೊರಗರ ಮೇಲಿನ ಹಲ್ಲೆ: ತನಿಖೆ ಸಿಐಡಿಗೆ

ಕೋಟ (ಬ್ರಹ್ಮಾವರ): ಬ್ರಹ್ಮಾವರ ತಾಲ್ಲೂಕಿನ ಕೋಟತಟ್ಟು ಕೊರಗ ಕಾಲೊನಿಯಲ್ಲಿ ಈಚೆಗೆ ಪೊಲೀಸರು ಲಾಠಿ ಪ್ರಹಾರ ನಡೆಸಿದ ಪ್ರಕರಣವನ್ನು ಸಿಐಡಿ ತನಿಖೆಗೆ ನೀಡಿರುವುದಾಗಿ ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಕಾಲೊನಿಗೆ ಶನಿವಾರ ಭೇಟಿ ನೀಡಿದ ಸಚಿವರು, ಲಾಠಿ ಪ್ರಹಾರದಿಂದ ಗಾಯಗೊಂಡವರಿಗೆ ತಲಾ ₹2 ಲಕ್ಷ ಪರಿಹಾರ ಘೋಷಿಸಿದರು. ಈ ಪೈಕಿ 6 ಕುಟುಂಬಗಳಿಗೆ ತಲಾ ₹50 ಸಾವಿರದ ಚೆಕ್ ಅನ್ನು ಸ್ಥಳದಲ್ಲಿಯೇ ವಿತರಿಸಿದರು. ಕೋಟ ಠಾಣೆಯಲ್ಲಿ ಕೊರಗರ ವಿರುದ್ಧ ದಾಖಲಾದ ದೂರನ್ನು ಹಿಂಪಡೆಯುವುದಾಗಿ ಭರವಸೆ ನೀಡಿದರು.

ಕೊರಗ ಸಮುದಾಯದವರಿಂದ ಘಟನೆಯ ಬಗ್ಗೆ ಮಾಹಿತಿ ಪಡೆದ ಅವರು, 'ಭವಿಷ್ಯದಲ್ಲಿ ಇಂಥ ಘಟನೆಗಳು ನಡೆಯದಂತೆ ಎಚ್ಚರ ವಹಿಸಲಾಗುವುದು. ಸಮುದಾಯದ ಯಾರೂ ಹೆದರುವ ಅಗತ್ಯವಿಲ್ಲ' ಎಂದು ಧೈರ್ಯ ತುಂಬಿದರು.

ಸಚಿವ ಕೋಟ ಶ್ರೀನಿವಾಸ ಪೂಜಾರಿ, ಮುಖಂಡರಾದ ಕಿರಣ್ ಕುಮಾರ್ ಕೊಡ್ಗಿ, ಉಡುಪಿ ಜಿಲ್ಲಾಧಿಕಾರಿ ಕೂರ್ಮಾ ರಾವ್ ಎಂ., ಎಸ್ಪಿ ವಿಷ್ಣುವರ್ಧನ್ ಇದ್ದರು.

ಕೋಟ ಕೊರಗರ ಕಾಲೊನಿಗೆ ಗೃಹ ಸಚಿವ ಅರಗ ಜ್ಞಾನೇಂದ್ರ ಶನಿವಾರ ಭೇಟಿ ನೀಡಿದರು. ಸಚಿವ ಕೋಟ ಶ್ರೀನಿವಾಸ ಪೂಜಾರಿ, ಜಿಲ್ಲಾಧಿಕಾರಿ ಎಂ. ಕೂರ್ಮಾರಾವ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಇದ್ದರು

# ಹಿಂದೂ ದೇಗುಲಗಳ ಆಡಳಿತಕ್ಕೂ ಪ್ರತ್ಯೇಕ ವ್ಯವಸ್ಥೆ ಬೇಕು: ರಾಮದಾಸ್

ಮೈಸೂರು: 'ಮುಸ್ಲಿಂ ಧಾರ್ಮಿಕ ಕೇಂದ್ರಗಳ ಆಡಳಿತಕ್ಕೆ ವಕ್ಫ್ ಬೋರ್ಡ್, ಕ್ರೈಸ್ತರ ಧಾರ್ಮಿಕ ಕೇಂದ್ರಗಳ ಆಡಳಿತಕ್ಕೆ ಪ್ರತ್ಯೇಕ ವ್ಯವಸ್ಥೆ ಇದೆ. ಹಿಂದೂ ದೇಗುಲಗಳ ಆಡಳಿತ, ಅಭಿವೃದ್ಧಿಗೆ ಏಕೆ ಪ್ರತ್ಯೇಕ ವ್ಯವಸ್ಥೆ ಇರಬಾರದು? ಬೇರೆ ಯಾವುದೋ ಒಂದು ವೋಟ್ ಬ್ಯಾಂಕ್ ಓಲೈಕೆಗಾಗಿ, ರಾಜಕೀಯ ಕಾರಣಗಳಿಗಾಗಿ ಕಾಂಗ್ರೆಸ್ ಅದನ್ನು ವಿರೋಧಿಸುತ್ತಿದೆ' ಎಂದು ಶಾಸಕ ಎಸ್.ಎ.ರಾಮದಾಸ್ ಟೀಕಿಸಿದರು.

'ಹಿಂದೂ ದೇಗುಲಗಳ ಮೇಲಿನ ಸರ್ಕಾರದ ಹಿಡಿತವನ್ನು ಸಡಿಲಗೊಳಿಸಿ, ಕಾನೂನಿನ ಕಟ್ಟುಪಾಡುಗಳಿಂದ ಮುಕ್ತಗೊಳಿಸಲು ಮುಂದಾಗಿರುವುದು ಒಳ್ಳೆಯ ಬೆಳವಣಿಗೆ. ಆಯಾ ಪ್ರದೇಶದ ದೇಗುಲಗಳ ಆದಾಯವನ್ನು ಅದೇ ಪ್ರದೇಶದ ಅಭಿವೃದ್ಧಿಗೆ ಬಳಸಿಕೊಳ್ಳಬೇಕೆಂಬುದು ಅದರ ಉದ್ದೇಶ. ದೇಗುಲದ ಆಸ್ತಿಯನ್ನು ಖಾಸಗಿಯವರಿಗೇನು ಕೊಡುತ್ತಿಲ್ಲ. ಬಿಜೆಪಿ ಸರ್ಕಾರ ಆ ಸಂಬಂಧ ಖಂಡಿತ ಕಾನೂನು ರೂಪಿಸಲಿದೆ' ಎಂದು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕಾಯ್ದೆ ಹಿಂಪಡೆಯಲಾಗುವುದು' ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, 'ಕಾಂಗ್ರೆಸ್ ಪಕ್ಷದವರು ಕನಸು ಕಾಣುತ್ತಿದ್ದಾರೆ. ಮುಂದಿನ ಚುನಾವಣೆವರೆಗೆ ಕನಸು ಕಾಣಲು ಯಾವುದೇ ಅಭ್ಯಂತರ ಇಲ್ಲ' ಎಂದು ವ್ಯಂಗ್ಯವಾಡಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನುಡಿದಂತೆ ನಡೆಯುವವರು. ಸಂಕ್ರಾಂತಿ ನಂತರ ಸಂಘಟನೆ, ಅಭಿವೃದ್ಧಿ ವಿಚಾರವಾಗಿ ಕ್ರಾಂತಿಯಾಗಲಿದೆ. ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಇಲ್ಲ' ಎಂದು ರಾಮದಾಸ್ ಅವರು ಹೇಳಿದರು.

## 'ಮತಾಂತರ ನಿಷೇಧ ಕಾಯ್ದೆ; ಕೀಳುಮಟ್ಟದ ಗಿಮಿಕ್'

ಮೈಸೂರು: 'ಮತಾಂತರ ನಿಷೇಧ ಮಸೂದೆಯು ಆರ್‌ಎಸ್‌ಎಸ್‌ನ ಅಜೆಂಡಾವಲ್ಲದೆ ಬೇರೇನೂ ಅಲ್ಲ. ಆಡಳಿತ ಪಕ್ಷವೊಂದು ಹೀಗೆ ಕೀಳುಮಟ್ಟದ ಗಿಮಿಕ್ ಮಾಡುತ್ತಿರುವುದು ಸರಿಯಲ್ಲ' ಎಂದು ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಪ್ರೊ.ಎಲ್.ಹನುಮಂತಯ್ಯ ಕಿಡಿಕಾರಿದರು.

ಶನಿವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಬಲವಂತದಿಂದ ಎಷ್ಟು ಮಂದಿ ಮತಾಂತರ ಆಗಿದ್ದಾರೆ ಎಂಬ ಮಾಹಿತಿಯನ್ನು ಸರ್ಕಾರ ಜನರ ಮುಂದಿಡಲಿ. ಮುಸ್ಲಿಮರು, ಕ್ರೈಸ್ತರು ಮತ್ತು ಬೌದ್ಧರ ಜನಸಂಖ್ಯೆ ಎಷ್ಟು ಜಾಸ್ತಿ ಆಗಿದೆ? ಅದರಲ್ಲಿ ಎಷ್ಟು ಮಂದಿ ಬಲವಂತದ ಮತಾಂತರಕ್ಕೆ ಒಳಗಾಗಿದ್ದಾರೆ? ಆಮಿಷಕ್ಕೆ ಒಳಗಾಗಿ ದುಡ್ಡು ತೆಗೆದುಕೊಂಡವರು ಎಷ್ಟು? ಈ ಕುರಿತ ಅಂಕಿ–ಸಂಖ್ಯೆಗಳ ದಾಖಲೆಯನ್ನು ಸರ್ಕಾರ ಬಿಡುಗಡೆಗೊಳಿಸಬೇಕು' ಎಂದು ಆಗ್ರಹಿಸಿದರು.

'ದೇಶದಲ್ಲಿ ಕ್ರೈಸ್ತರ ಜನಸಂಖ್ಯೆ ಕಡಿಮೆಯಾಗಿದೆಯೇ ಹೊರತು, ಹೆಚ್ಚಾಗಿಲ್ಲ. 1951ರಲ್ಲಿ ಇದ್ದ ಜನಸಂಖ್ಯೆಗೆ ಹೋಲಿಸಿದರೆ ಶೇ 0.04 ರಷ್ಟು ಕಡಿಮೆಯಾಗಿದೆ. ಮತಾಂತರ ದೊಡ್ಡ ಪ್ರಮಾಣದಲ್ಲಿ ಆಗಿದ್ದರೆ ಜನಸಂಖ್ಯೆ ಇಮ್ಮಡಿಯಾಗಬೇಕಿತ್ತು. ಸರ್ಕಾರ ತನ್ನ ವೈಫಲ್ಯಗಳನ್ನು ಮುಚ್ಚಿಟ್ಟು, ಜನರ ಗಮನ ಬೇರೆಡೆ ಸೆಳೆಯಲು ಕಾಯ್ದೆ ಜಾರಿಗೊಳಿಸುತ್ತಿದೆ' ಎಂದು ದೂರಿದರು.

## ಮತಾಂತರದ ಅಂಕಿ– ಸಂಖ್ಯೆ ಕೊಡಿ: ಸಿಂಧ್ಯ

ಮಂಗಳೂರು: 'ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸುವ ಮೊದಲು 10 ವರ್ಷ ಗಳಲ್ಲಿ ಎಷ್ಟು ಮಂದಿ ಮತಾಂತರ ಆಗಿದ್ದಾರೆ ಎಂಬ ಅಂಕಿ– ಸಂಖ್ಯೆ ಯನ್ನು ಸರ್ಕಾರ ಜನರ ಮುಂದಿಡಬೇಕು' ಎಂದು ಮುಖಂಡ ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯ ಶನಿವಾರ ಒತ್ತಾಯಿಸಿದರು. ಇಲ್ಲಿಯ ಪತ್ರಿಕಾ ಭವನದಲ್ಲಿ ಮಾತನಾಡಿದರು.

## ಶಾಸಕ ರಾಜೂಗೌಡಗೆ ಪಿತೃ ವಿಯೋಗ

ಸುರಪುರ (ಯಾದಗಿರಿ ಜಿಲ್ಲೆ): ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ, ಶಾಸಕ ನರಸಿಂಹನಾಯಕ (ರಾಜೂಗೌಡ) ಅವರ ತಂದೆ ಶಂಭನಗೌಡ ಧರ್ಮಗೌಡ ಪಾಟೀಲ (78) ಶನಿವಾರ ಅವರ ನಿವಾಸದಲ್ಲಿ ನಿಧನರಾದರು.

ಅವರಿಗೆ ರಾಜೂಗೌಡ ಸೇರಿ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಭಾನುವಾರ (ಜ.2) ಮಧ್ಯಾಹ್ನ 12 ಗಂಟೆಗೆ ಹುಣಸಗಿ ತಾಲ್ಲೂಕಿನ ಕೊಡೇಕಲ್ ಗ್ರಾಮದ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಅವರು ಅಬಕಾರಿ ಇಲಾಖೆಯ ಡಿವೈಎಸ್‌ಪಿಯಾಗಿ 2004ರಲ್ಲಿ ನಿವೃತ್ತರಾಗಿದ್ದರು.

## 'ಸಿದ್ದರಾಮಯ್ಯ ಭಂಡ'

ಬಾಗಲಕೋಟೆ : 'ಮುಖ್ಯಮಂತ್ರಿ ಆಗಿದ್ದಾಗ ಮತಾಂತರ ನಿಷೇಧ ಮಸೂದೆಗೆ ಸಹಿ ಹಾಕಿದ್ದ ಸಿದ್ದರಾಮಯ್ಯ ಈಗ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅವರೊಬ್ಬ ಭಂಡ ಹಾಗೂ ಡಬಲ್ ಸ್ಟ್ಯಾಂಡರ್ಡ್ ವ್ಯಕ್ತಿ' ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಶನಿವಾರ ಇಲ್ಲಿ ವಾಗ್ದಾಳಿ ನಡೆಸಿದರು.

## ಭಾರತ–ಪಾಕ್ ನಡುವೆ ಪರಮಾಣು ಸ್ಥಾವರಗಳ ಪಟ್ಟಿ ವಿನಿಮಯ

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ನಡುವಣ ದ್ವಿಪಕ್ಷೀಯ ಒಪ್ಪಂದವೊಂದರಂತೆ ಉಭಯ ರಾಷ್ಟ್ರಗಳು ಹೊಂದಿರುವ ಪರಮಾಣು ಸ್ಥಾವರಗಳ ಪಟ್ಟಿಯನ್ನು ಶನಿವಾರ ವಿನಿಮಯ ಮಾಡಿಕೊಂಡವು.

ಎರಡು ರಾಷ್ಟ್ರಗಳ ನಡುವಿನ ದಾಳಿಯಲ್ಲಿ ಪರಮಾಣು ಬಳಕೆಯನ್ನು ಈ ಒಪ್ಪಂದವು ನಿರ್ಬಂಧಿಸುತ್ತದೆ.

ಭಾರತ ಮತ್ತು ಪಾಕಿಸ್ತಾನದ ನಡುವೆ ಪರಮಾಣು ದಾಳಿಯನ್ನು ನಿಷೇಧಿಸುವ ಒಪ್ಪಂದದ ಅಡಿಯಲ್ಲಿ ಉಭಯ ರಾಷ್ಟ್ರಗಳು ತಮ್ಮಲ್ಲಿನ ಪರಮಾಣು ಸ್ಥಾವರ ಸಂಖ್ಯೆಗಳ ಪಟ್ಟಿಯನ್ನು ವಿನಿಮಯ ಮಾಡಿಕೊಂಡಿವೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಹೇಳಿದೆ.

ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿನ ರಾಜತಾಂತ್ರಿಕ ಅಧಿಕಾರಿಗಳ ಮೂಲಕ ಅಧಿಕಾರಿಗಳು ಏಕಕಾಲದಲ್ಲಿ ಈ ವಿನಿಮಯ ಮಾಡಿಕೊಂಡರು.

ಎರಡು ರಾಷ್ಟ್ರಗಳ ನಡುವೆ 1991ರಲ್ಲಿ ಈ ಒಪ್ಪಂದ ಏರ್ಪಟ್ಟಿದೆ. ಇದರಂತೆ ಎರಡು ರಾಷ್ಟ್ರಗಳು ಪ್ರತಿ ವರ್ಷ ಜನವರಿ 1 ರಂದು ತಮ್ಮಲ್ಲಿನ ಪರಮಾಣು ಸ್ಥಾವರಗಳ ಸಂಖ್ಯೆ ಕುರಿತು ಪರಸ್ಪರ ಮಾಹಿತಿ ಹಂಚಿಕೊಳ್ಳಬೇಕು.

'ದ್ವಿಪಕ್ಷೀಯ ಒಪ್ಪಂದದಂತೆ ಭಾರತ ಮತ್ತು ಪಾಕಿಸ್ತಾನ ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿನ ರಾಜತಾಂತ್ರಿಕ ವಾಹಿನಿಗಳ ಮೂಲಕ ಏಕಕಾಲದಲ್ಲಿ ತಮ್ಮಲ್ಲಿನ ಪರಮಾಣು ಸ್ಥಾವರಗಳ ಸಂಖ್ಯೆಯ ಪಟ್ಟಿಯನ್ನು ಇಂದು ಹಂಚಿಕೊಂಡವು' ಎಂದು ಎಂಇಎ ಹೇಳಿಕೆಯೊಂದರಲ್ಲಿ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

**Fourth Year Anniversary**

**B.R. GOPALAKRISHNA REDDY**
Bellandur
21.09.1970 – 02.01.2018
Remembered by:
Mother, Wife, Children, Brothers, Sisters, Relatives & Friends.
Mob.: 99451 86966

**21ನೇ ವರ್ಷದ ಪುಣ್ಯಸ್ಮರಣೆ**

ಬೋಜರೆಡ್ಡಿಯವರ
ಶ್ರೀಮತಿ ದೊಡ್ಡತಾಯಮ್ಮ W/o ಶ್ರೀ.ವೆಂಕಟಸ್ವಾಮಿ ರೆಡ್ಡಿ
ನಿಧನ: 02–01–2001 (ದೊಡ್ಡಬಾಣಸವಾಡಿ)

ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾಹಸಿರು ಮತ್ತು ಸ್ಫೂರ್ತಿದಾಯಕ.
ಸದಾ ಸ್ಮರಿಸುವ
ಮಗ: ಬಿ.ವಿ.ಶ್ರೀನಿವಾಸರೆಡ್ಡಿ (ಮರಿ)
ಸೊಸೆ: ಶೈಲಜ,
ಮೊಮ್ಮಕ್ಕಳು: ವಿಜಯ್, ವಿನಯ್, ಶ್ವೇತ & ರೂಪಶ್ರೀ
ಮರಿಮಗಳು: ತ್ರಿಶಿಕಾ ರೆಡ್ಡಿ.

**7ನೇ ವರ್ಷದ ಪುಣ್ಯಸ್ಮರಣೆ**

ಜನನ: 01.11.1941 – ಮರಣ: 02.01.2015
ಭೋಜರೆಡ್ಡಿಯವರ
ಶ್ರೀ ಬಿ.ವಿ. ನಾರಾಯಣ ರೆಡ್ಡಿ
ಪುಣ್ಯ ತಿಥಿ: 02.01.2022 ಮಧ್ಯಾಹ್ನ 3.00 ಗಂಟೆಗೆ ಮೃತರ ಸ್ವಗೃಹದಲ್ಲಿ
ದುಃಖತಪ್ತರು: ಧರ್ಮಪತ್ನಿ, ಎಚ್. ಜಿ ರತಿದೇವಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು

**ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು**

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

LOOKING FOR JOB OPPORTUNITY
Refer Classifieds on Wednesday



# 30 ಐಎಎಸ್ ಅಧಿಕಾರಿಗಳಿಗೆ ಬಡ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 1997ರಿಂದ 2018ರ ಅವಧಿಯಲ್ಲಿನ ಐದು ಬ್ಯಾಚ್‌ಗಳ 30 ಐಎಎಸ್ ಅಧಿಕಾರಿಗಳಿಗೆ ಬಡ್ತಿ ನೀಡಿ ಶುಕ್ರವಾರ ಆದೇಶ ಹೊರಡಿಸಲಾಗಿದೆ. ಬಡ್ತಿ ಹೊಂದಿದ ಎಲ್ಲರನ್ನೂ ಅದೇ ಹುದ್ದೆಗಳಲ್ಲಿ ಮುಂದುವರಿಸಲಾಗಿದೆ.

1997ರ ಬ್ಯಾಚ್‌ನ ಐಎಎಸ್ ಅಧಿಕಾರಿಗಳಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಡಾ.ಎಸ್. ಸೆಲ್ವಕುಮಾರ್, ಐಎಂಎ ಪ್ರಕರಣದ ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯಾಗಿರುವ ಹರ್ಷ ಗುಪ್ತ ಮತ್ತು ಬೆಳಗಾವಿ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಅವರಿಗೆ 'ಹಿರಿಯ ಆಡಳಿತಾತ್ಮಕ ವೇತನ ಶ್ರೇಣಿ'ಗೆ ಬಡ್ತಿ ನೀಡಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿದ್ದ ಸೆಲ್ವಕುಮಾರ್ ಅವರಿಗೆ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಲಾಗಿದೆ.

ಹರ್ಷ ಗುಪ್ತ ಮತ್ತು ಬಿಸ್ವಾಸ್ ಅವರ ಹುದ್ದೆಗಳನ್ನು ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಸಮ ಎಂದು ಘೋಷಿಸಲಾಗಿದೆ.

2006ರ ಬ್ಯಾಚ್‌ನ ಐವರು ಐಎಎಸ್ ಅಧಿಕಾರಿಗಳಿಗೆ ಸೂಪರ್ ಟೈಂ ವೇತನ ಶ್ರೇಣಿಗೆ, 2009ರ ಬ್ಯಾಚ್‌ನ ಐವರು ಅಧಿಕಾರಿಗಳಿಗೆ ಆಯ್ಕೆ ಶ್ರೇಣಿಗೆ ಬಡ್ತಿ ನೀಡಲಾಗಿದೆ. 2013ರ ಬ್ಯಾಚ್‌ನ ಎಂಟು ಅಧಿಕಾರಿಗಳಿಗೆ ಕಿರಿಯ ಆಡಳಿತಾತ್ಮಕ ವೇತನ ಶ್ರೇಣಿಗೆ ಮತ್ತು 2018ರ ಬ್ಯಾಚ್‌ನ ಒಂಬತ್ತು ಅಧಿಕಾರಿಗಳಿಗೆ 'ಸೀನಿಯರ್ ಟೈಂ ವೇತನ ಶ್ರೇಣಿ'ಗೆ ಬಡ್ತಿ ನೀಡಿ ಆದೇಶ ಹೊರಡಿಸಲಾಗಿದೆ.

## ಸಿಸಿಬಿಯಿಂದ ಸಂದೀಪ್ ಪಾಟೀಲ್ ವರ್ಗ

2004ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ್ ಅವರನ್ನು ಸಿಸಿಬಿ ಜಂಟಿ ಕಮಿಷನರ್ ಹುದ್ದೆಯಿಂದ ವರ್ಗಾವಣೆ ಮಾಡಿದ್ದು, ಬೆಂಗಳೂರು ಪಶ್ಚಿಮ ವಲಯದ ಹೆಚ್ಚುವರಿ ಪೊಲೀಸ್ ಕಮಿಷನರ್ ಹುದ್ದೆಗೆ ನೇಮಿಸಲಾಗಿದೆ.

ಜಾರಿ ನಿರ್ದೇಶನಾಲಯದಲ್ಲಿ ನಿಯೋಜನೆ ಮೇಲೆ ಕೆಲಸ ಮಾಡುತ್ತಿದ್ದ 2005ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ರಮಣ ಗುಪ್ತ ರಾಜ್ಯ ಸೇವೆಗೆ ಮರಳಿದ್ದಾರೆ. ಅವರನ್ನು ಸಿಸಿಬಿ ಜಂಟಿ ಕಮಿಷನರ್ ಹುದ್ದೆಗೆ ವರ್ಗ ಮಾಡಲಾಗಿದೆ. ಸಂದೀಪ್ ಪಾಟೀಲ 2019ರ ಆಗಸ್ಟ್‌ನಿಂದಲೂ ಸಿಸಿಬಿ ಜಂಟಿ ಕಮಿಷನರ್ ಹುದ್ದೆಯಲ್ಲಿದ್ದರು. ಬಿಟ್ ಕಾಯಿನ್ ಹ್ಯಾಕಿಂಗ್ ಪ್ರಕರಣಗಳ ತನಿಖೆ, ಹ್ಯಾಕರ್ ಶ್ರೀಕೃಷ್ಣ ರಮೇಶ್ ಪೊಲೀಸ್ ವಶದಲ್ಲಿದ್ದಾಗ ನಡೆದಿವೆ ಎನ್ನಲಾದ ಅಕ್ರಮಗಳ ಕುರಿತು ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆ ನಡೆಯುತ್ತಿದೆ. ಈ ಕಾರಣಕ್ಕಾಗಿಯೇ ಸಿಸಿಬಿ ಜಂಟಿ ಕಮಿಷನರ್ ಬದಲಾವಣೆ ನಡೆದಿದೆ ಎಂಬ ಮಾತು ಪೊಲೀಸ್ ಇಲಾಖೆಯೊಳಗೆ ಚಾಲ್ತಿಯಲ್ಲಿದೆ.

## 'ತ್ರಿಪುರಾದಲ್ಲಿನ ಭಾರತ, ಬಾಂಗ್ಲಾ ಗಡಿಗೆ ಮುಂದಿನ ವರ್ಷ ಬೇಲಿ ಪೂರ್ಣ'

**ಅಗರ್ತಲಾ, ತ್ರಿಪುರಾ (ಪಿಟಿಐ):** ಸೂಕ್ತ ಭದ್ರತೆಗಾಗಿ ಮುಂದಿನ ವರ್ಷದ ವೇಳೆಗೆ ತ್ರಿಪುರಾದಲ್ಲಿನ ಭಾರತ–ಬಾಂಗ್ಲಾದೇಶ ಗಡಿಗೆ ಸಂಪೂರ್ಣ ಬೇಲಿ ಹಾಕಲಾಗುವುದು ಎಂದು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಉನ್ನತಾಧಿಕಾರಿಯೊಬ್ಬರು ಶನಿವಾರ ಹೇಳಿದ್ದಾರೆ.

856 ಕಿ.ಮೀ.ಉದ್ದದ ಭಾರತ–ಬಾಂಗ್ಲಾದೇಶ ಗಡಿಗೆ ಈಗಾಗಲೇ ಶೇ 80–85 ರಷ್ಟು ಬೇಲಿ ಹಾಕಲಾಗಿದೆ ಎಂದು ಬಿಎಸ್‌ಎಫ್‌ನ ಇನ್‌ಸ್ಪೆಕ್ಟರ್ ಜನರಲ್ ಸುಶಾಂತ್ ಕುಮಾರ್‌ನಾಥ್ ಹೇಳಿದರು.

'ಕಳೆದ ವರ್ಷ ತ್ರಿಪುರಾದ ಪೂರ್ವ ವಲಯದಲ್ಲಿ ಬೇಲಿ ಹಾಕುವ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಆದ್ಯತೆಯ ಮೇರೆಗೆ 31 ಕಿ.ಮೀ. ಉದ್ದದ ಸುರಂಗ ಕೊರೆಯುವ ಕಾಮಗಾರಿ ಕೈಗೊಳ್ಳಲಾಗಿದೆ. ರಾಜ್ಯದ ಪಶ್ಚಿಮ ವಲಯದಲ್ಲಿ 10 ಕಿ.ಮೀ. ಏಕಸಾಲು ಬೇಲಿ ಹಾಕಲಾಗಿದೆ' ಎಂದು ಅವರು ಸುದ್ದಿಗಾರರಿಗೆ ಹೇಳಿದರು.

## ಪಿಎಸಿ ಅಧ್ಯಕ್ಷರಾಗಿ ಕೃಷ್ಣ ಬೈರೇಗೌಡ



ಕೃಷ್ಣ ಬೈರೇಗೌಡ

**ಬೆಂಗಳೂರು:** ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ (ಪಿಎಸಿ) ಅಧ್ಯಕ್ಷರನ್ನಾಗಿ ಕಾಂಗ್ರೆಸ್ ಶಾಸಕ ಕೃಷ್ಣ ಬೈರೇಗೌಡ ಅವರನ್ನು ನೇಮಿಸಿ ವಿಧಾನ ಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಶನಿವಾರ ಆದೇಶ ಹೊರಡಿಸಿದ್ದಾರೆ.

ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಅವರನ್ನು ಪಿಎಸಿ ಅಧ್ಯಕ್ಷರನ್ನಾಗಿ ನೇಮಿಸಿ ಡಿಸೆಂಬರ್ 27ರಂದು ಆದೇಶ ಹೊರಡಿಸಲಾಗಿತ್ತು. ಆದರೆ, ಪಿಎಸಿ ಅಧ್ಯಕ್ಷ ಸ್ಥಾನವನ್ನು ಒಪ್ಪಿಕೊಳ್ಳಲು ನಿರಾಕರಿಸಿದ್ದ ಅವರು, ಬೇರೊಬ್ಬರನ್ನು ನೇಮಿಸುವಂತೆ ಕಾಗೇರಿ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು.

ಕೃಷ್ಣಬೈರೇಗೌಡ ಅವರನ್ನು ಪಿಎಸಿಯ ನೂತನ ಅಧ್ಯಕ್ಷರನ್ನಾಗಿ ನೇಮಿಸುವಂತೆ ಸಿದ್ದರಾಮಯ್ಯ ಪತ್ರ ಬರೆದಿದ್ದರು. ಬಳಿಕ ವಿಧಾನಸಭೆಯ ಅಧ್ಯಕ್ಷರು ಪರಿಷ್ಕೃತ ಆದೇಶ ಹೊರಡಿಸಿದ್ದಾರೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಸೇರಿದ 20 ಸದಸ್ಯರು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಸದಸ್ಯರಾಗಿದ್ದಾರೆ. ವಿಧಾನಸಭೆಯ 16 ಮತ್ತು ವಿಧಾನ ಪರಿಷತ್‌ನ ನಾಲ್ವರು ಸದಸ್ಯರು ಸಮಿತಿಯಲ್ಲಿದ್ದಾರೆ.

## 'ವಿದ್ಯುತ್ ಪರಿವರ್ತಕ ಬದಲಾವಣೆಯಲ್ಲಿ ಗುರಿ ಸಾಧನೆ'

ಸುನೀಲ್ ಕುಮಾರ್

**ಬೆಂಗಳೂರು:** ತಾವು ಇಂಧನ ಇಲಾಖೆಯ ಜವಾಬ್ದಾರಿ ವಹಿಸಿಕೊಂಡ ಬಳಿಕ ಕೃಷಿ ನೀರಾವರಿ ಪಂಪ್‌ಸೆಟ್‌ಗಳ 27,637 ವಿದ್ಯುತ್ ಪರಿವರ್ತಕಗಳನ್ನು ಬದಲಾವಣೆ ಮಾಡಿದ್ದು, ರೈತರಿಗೆ ತ್ವರಿತ ಸೇವೆ ನೀಡುವ ಭರವಸೆಯ ಗುರಿ ಸಾಧಿಸಲಾಗಿದೆ ಎಂದು ಇಂಧನ ಸಚಿವ ವಿ. ಸುನೀಲ್‌ಕುಮಾರ್ ತಿಳಿಸಿದ್ದಾರೆ.

'ವಿಫಲಗೊಂಡ ವಿದ್ಯುತ್ ಪರಿವರ್ತಕಗಳನ್ನು 24 ಗಂಟೆಗಳೊಳಗೆ ಬದಲಾವಣೆ ಮಾಡುವ ಭರವಸೆ ನೀಡಿದ್ದೆ. ನಾನು ಸಚಿವನಾದ ಬಳಿಕ ವಿದ್ಯುತ್ ಪರಿವರ್ತಕಗಳ ಬದಲಾವಣೆ ಕೋರಿ 27,650 ಕೋರಿಕೆಗಳು ಬಂದಿವೆ. ಅವುಗಳಲ್ಲಿ 27,637 ಪರಿವರ್ತಕಗಳ ಬದಲಾವಣೆ ಮಾಡಲಾಗಿದೆ. ಈ ಪೈಕಿ 21,145 ಪರಿವರ್ತಕಗಳನ್ನು ದೂರು ಸ್ವೀಕರಿಸಿದ 24 ಗಂಟೆಗಳೊಳಗೆ ಬದಲಾವಣೆ ಮಾಡಲಾಗಿದೆ. 6,492 ಪರಿವರ್ತಕಗಳನ್ನು 24 ಗಂಟೆಗಳ ನಂತರದ ಕೆಲವೇ ಗಂಟೆಗಳೊಳಗೆ ಬದಲಾಯಿಸಲಾಗಿದೆ' ಎಂದು ಹೇಳಿದ್ದಾರೆ.

ಹಿಂದೆ ವಿದ್ಯುತ್ ಪರಿವರ್ತಕಗಳನ್ನು ಬದಲಾವಣೆ ಮಾಡಿಸಲು ರೈತರು ವರ್ಷಾನುಗಟ್ಟಲೆ ಅಲೆದಾಡಬೇಕಿದ್ದ ಪರಿಸ್ಥಿತಿ ಇತ್ತು. ಅದಕ್ಕೆ ಇತಿಶ್ರೀ ಹಾಡಲು ನಿರ್ಧರಿಸಿ, ವಿದ್ಯುತ್ ಪರಿವರ್ತಕಗಳ ಬ್ಯಾಂಕ್ ಸ್ಥಾಪಿಸಲಾಗಿದೆ. ಬಳಿಕ ರೈತರಿಗೆ ತ್ವರಿತ ಸೇವೆ ಲಭಿಸುತ್ತಿದೆ. ರಸ್ತೆ ಸಂಪರ್ಕ ಸೇರಿದಂತೆ ಇತರ ಸಮಸ್ಯೆಗಳ ಕಾರಣದಿಂದ ಕೆಲವು ಪ್ರಕರಣಗಳಲ್ಲಿ ತುಸು ತಡವಾಗಿದೆ. ಬಹುತೇಕ ಶೇಕಡ 100ರಷ್ಟು ಸಾಧನೆ ದಾಖಲಾಗಿದೆ ಎಂದು ತಿಳಿಸಿದ್ದಾರೆ.

## ಬಾಲಕನಿಗೆ ಲೈಂಗಿಕ ಕಿರುಕುಳ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

**ಕೂಡ್ಲಿಗಿ:** ಏಳು ವರ್ಷದ ಬಾಲಕನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ 17 ವರ್ಷದ ಬಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಬಾಲಕ ಹೊಲದ ಬಳಿ ಇದ್ದಾಗ ಆರೋಪಿ ಈ ಕೃತ್ಯ ಎಸಗಿದ್ದಾನೆ. ಈ ಬಗ್ಗೆ ಸಂತ್ರಸ್ತ ಬಾಲಕನ ತಂದೆ ದೂರು ನೀಡಿದ್ದರು.

ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ–ಪಂಗಡದ ವಿರುದ್ಧ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ, ಇಲಾಖೆ)
**ಕಾರ್ಯನಿರ್ವಾಹಕ ಇಂಜಿನಿಯರ್‌ರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ**
ಸಂಃಕಾನಿಇಂ/ಲೋಇ/ವಿಬಿ/ಎಸ್.ಸಿ.ಪಿ/ಟಿ.ಎಸ್.ಪಿ/ಜೆಇ:4/2021–22/3931 ದಿನಾಂಕ: 30–12–2021
:: ಪಬ್ಲಿಕ್–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ ::
ಕರ್ನಾಟಕ ರಾಜ್ಯಪಾಲರ ಪರವಾಗಿ 2021–22 ನೇ ಸಾಲಿನ ಲೆಕ್ಕ ಶಿರ್ಷಿಕೆ ಎಸ್.ಸಿ.ಪಿ / ಟಿ.ಎಸ್.ಪಿ. ಅಡಿಯ ಕನಿಷ್ಠ ರೂ. 256.89 ಲಕ್ಷಗಳ ಮತ್ತು ಗರಿಷ್ಠ ರೂ. 260.59 ಲಕ್ಷಗಳ ಮೊತ್ತದ ಕಾಮಗಾರಿಗಳ ವರ್ಕ್ ಇಂಡೆಂಟ್: KPWD/2021-22/RD//WORK_INDENT144225 ಮತ್ತು 144246 ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಾಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.
ಪೋರ್ಟಾಲ್‌ನ http://eproc.karnataka.gov.in ರಿಂದ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 14.01.2022 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸುವುದು.
ವಿಶೇಷ ಸೂಚನೆ: –//ಯು.ಡಿ.ಐ ನಂಬರ ಹೊಂದಿರುವ ಟರ್ನಓವರ್ ಸರ್ಟಿಫಿಕೆಟ್ ಗಳನ್ನು ಮಾತ್ರ ಪರಿಗಣಿಸಲಾಗುವುದು ಎಂದು ಗುತ್ತಿಗೆದಾರರ ಗಮನಕ್ಕೆ ತರಲಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ
ವಾ.ಸಾ.ಸಂ.ಇ/ಬೀದರ/240/ಎಂಸಿ&ಎ/2021–22

ಕರ್ನಾಟಕ ಸರ್ಕಾರ
**ಮೀನುಗಾರಿಕೆ ಇಲಾಖೆ**
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ಡಾ: ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–01, ದೂರವಾಣಿ ಸಂಖ್ಯೆ: 080–22864681/4604, ಫ್ಯಾಕ್ಸ್: 080–22864619, ಇ–ಮೇಲ್ : dfkarnataka@rediffmail.com ವೆಬ್‌ಸೈಟ್: https://fisheries.karnataka.gov.in
ಸಂಖ್ಯೆ: DOF-TECHOBRS/18/2021, E-495610 ದಿನಾಂಕ: 27.12.2021
ಕರ್ನಾಟಕ ಸರ್ಕಾರದ ಮೀನುಗಾರಿಕೆ ಇಲಾಖೆಯು "ಕರ್ನಾಟಕದಲ್ಲಿ ಆಳ ಸಮುದ್ರದ ಮೀನುಗಾರಿಕೆ ಬೋಟ್ ಗಳ ನಿರ್ಮಾಣಕ್ಕಾಗಿ ಬೋಟ್ ಬಿಲ್ಡಿಂಗ್ ಯಾರ್ಡ್ಗಳ ಎಂಪನೆಲ್ಡ್ ಪಟ್ಟಿಯಲ್ಲಿ ತಮ್ಮ ಸಂಸ್ಥೆಗಳನ್ನು ಸೇರಿಸಲು ದೋಣಿ ನಿರ್ಮಾಣದಲ್ಲಿ ತೊಡಗಿರುವ ಆಸಕ್ತ ಸಂಸ್ಥೆಗಳು ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸಲ್ಲಿಸಲು ಅರ್ಜಿ ಆಹ್ವಾನಿಸಲಾಗಿದೆ.

| | | |
|---|---|---|
| ಇ.ಓ.ಐ ಶುಲ್ಕ | ಅರ್ಜಿ ಸಲ್ಲಿಸುವ ಸಮಯದಲ್ಲಿ ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು ರವರಿಗೆ ಡಿಡಿ ರೂಪದಲ್ಲಿ ಪಾವತಿಸಬೇಕಾದ ಮೊತ್ತ ರೂ. 2000/–(ರೂ ಎರಡು ಸಾವಿರ ಮಾತ್ರ). | |
| ಪ್ರಶ್ನೆಗಳು | ಅರ್ಜಿದಾರರು ಇಮೇಲ್ ಮೂಲಕ ಪ್ರಶ್ನೆಗಳನ್ನು / ವಿಚಾರಣೆಗಳನ್ನು dfkarnataka@rediffmail.com ಕಳುಹಿಸುವುದು **ಸೂಚನೆ:** ದಯವಿಟ್ಟು ಇಮೇಲ್ ವಿಷಯವನ್ನು ಈ ರೀತಿ ಇರಿಸುವುದು "ಇ.ಓ.ಐ ಗೆ ಪ್ರಶ್ನೆಗಳು / ವಿಚಾರಣೆಗಳು–ಕರ್ನಾಟಕದ ಆಳ ಸಮುದ್ರ ಮೀನುಗಾರಿಕೆ ಬೋಟಗಳ ನಿರ್ಮಾಣಕ್ಕಾಗಿ ಬೋಟ್ ಬಿಲ್ಡಿಂಗ್ ಯಾರ್ಡಗಳ ಎಂಪನೆಲ್ಡ್ | |
| ಇ.ಓ.ಐ. ವೇಳಾಪಟ್ಟಿ | ಪ್ರಮುಖ ಚಟುವಟಿಕೆಗಳು | ಡೆಡ್ ಲೈನ್ |
| | ಇ.ಓ.ಐ. ದಾಖಲೆ ವಿತರಣೆ | 27.12.2021 |
| | ಪೂರ್ವ ಸಲ್ಲಿಕೆ ಸಭೆ | 10.01.2022 ರ 15.00 ಗಂಟೆಗೆ |
| | ಇ.ಓ.ಐ. ಸಲ್ಲಿಕೆಗೆ ಕೊನೆಯ ದಿನಾಂಕ | 16.01.2022 ರಂದು 17.00 ಗಂಟೆಯೊಳಗೆ |
| ಮೀನುಗಾರಿಕೆ ನಿರ್ದೇಶಕರ ಕಛೇರಿ ವಿಳಾಸ | ಮೀನುಗಾರಿಕೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂಸಂ. 080 – 2286 4681 | |
| ಉಸ್ತುವಾರಿ ಅಧಿಕಾರಿ | ಕೇಂದ್ರ ಕಛೇರಿ: ಶ್ರೀಮತಿ ದೀಪಾಂಜಲಿ, ಮೀನುಗಾರಿಕೆ ಉಪ ನಿರ್ದೇಶಕರು, ಬೆಂಗಳೂರು. ಮೊ ಸಂ: +91 9480997197 | |
| ಇ.ಓ.ಐ. ಡೌನ್ ಲೋಡ್ ಮಾಡಿಕೊಳ್ಳಲು ವೆಬ್ ಸೈಟ್ | https://fisheries.karnataka.gov.in | |

ಇ.ಓ.ಐ. ಗಳನ್ನು ಯಾವುದೇ ಕಾರಣಗಳನ್ನು ನೀಡದೆ ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ
ಸಹಿ/–
ನಿರ್ದೇಶಕರು, ಮೀನುಗಾರಿಕೆ ಇಲಾಖೆ.
ವಾಸಾಸಂಇ/ಬೆಂ.ನ/ಶಿರಡಿ ಸಾಯಿ/2644/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಅರಣ್ಯ ಇಲಾಖೆ
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ**
ಸಂಶೋಧನಾ ಉಪ ವಿಭಾಗ, ಬೆಂಗಳೂರುರವರ ಕಛೇರಿ
1ನೇ ಅಡ್ಡ ರಸ್ತೆ, ಅರಕೆರೆ ಮೈಕೊ ಬಡಾವಣೆ, ದೊರೆಸಾನಿಪಾಳ್ಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076.
ಫೋನ್: 080-26587663, 26492218 | ಇ–ಮೇಲ್: eefrbangalore@gmail.com
ಸಂ.: ಎ4–ಎಸ್.ಎ.ಎಸ್–ಸಿಆರ್–04/2022–24 ದಿನಾಂಕ: 29.12.2022
**ಸಂಕ್ಷಿಪ್ತ ಟೆಂಡರ್ ಹಾಗೂ ಹರಾಜು ಪ್ರಕಟಣೆ**
**ವಿಷಯ: ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ, ಬೆಂಗಳೂರು ಘಟಕಕ್ಕೆ ಸಂಬಂಧಿಸಿದ ಕಿರು ಅರಣ್ಯ ಉತ್ಪನ್ನಗಳನ್ನು 2021–22 ಹಾಗೂ 2022–23ನೇ ಸಾಲಿಗೆ ಟೆಂಡರ್–ಕಂ–ಹರಾಜಿನ ಮೂಲಕ ವಿಲೇವಾರಿ ಮಾಡುವ ಬಗ್ಗೆ.**
ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ವೃತ್ತಕ್ಕೆ ಸಂಬಂಧಿಸಿದ ಸಂಶೋಧನಾ ವಲಯಗಳಲ್ಲಿನ ಸಂಶೋಧನಾ ಕೇಂದ್ರಗಳಲ್ಲಿನ ಕಿರು ಅರಣ್ಯ ಉತ್ಪನ್ನ ನೀಲಗಿರಿ ಸಿಟ್ರಾಡೋರಾ ಎಲೆಗಳ ಫಸಲನ್ನು 2021–23ನೇ ಸಾಲಿಗೆ ಅಂದರೆ ದಿನಾಂಕ: 15.01.2022 ರಿಂದ 31.12.2023ರ (2 ವರ್ಷ) ಅವಧಿಗೆ ಅಥವಾ ಟೆಂಡರ್ ಕಂ ಹರಾಜು ಒಪ್ಪಿಗೆಯಾಗಿ ಕರಾರು ಮಾಡಿಕೊಂಡ ದಿನದಿಂದ ದಿನಾಂಕ: 31.12.2023 ರವರೆಗೆ ಸಂಗ್ರಹಿಸುವ ಹಕ್ಕನ್ನು ಅರಣ್ಯ ಸಂರಕ್ಷಣಾಧಿಕಾರಿಗಳು, ಸಂಶೋಧನೆ, ಬೆಂಗಳೂರು ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಚೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗಿನ ತಪ್ಸೀಲಿನಲ್ಲಿ ಸೂಚಿಸಿರುವ ಪ್ರಕಾರ ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ದಿನಾಂಕ: 05.01.2022 ರಂದು ಮಾರಾಟ ಮಾಡುವರು. ಸದರಿ ದಿನಾಂಕದಂದು ಕಾರಾಣಾಂತರದಿಂದ ಟೆಂಡರ್–ಕಂ–ಹರಾಜು ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ದಿನಾಂಕ: 10.01.2022 ರಂದು ಎರಡನೇ ಬಾರಿಗೆ ಮಾರಾಟ ಮಾಡುವರು. ಅರಣ್ಯ ಗುತ್ತಿಗೆದಾರರು ಭಾಗವಹಿಸಿ ಪಡೆಯಬಹುದು. ಪ್ರಕಟಿಸಿರುವ ಅರಣ್ಯ ಉತ್ಪನ್ನವು ತಪ್ಸೀಲಿನಲ್ಲಿ (Schedul) ಸೂಚಿಸಿರುವ ಸಂಶೋಧನಾ ಕೇಂದ್ರಗಳಿಗೆ ಮಾತ್ರ ಸಂಬಂಧಿಸಿರುತ್ತದೆ.
ತಪ್ಸೀಲು
1) **ಫಸಲು ರೂಡಿಸುವ ಪ್ರದೇಶ:** ಹೊಸಕೋಟೆ ಸಂಶೋಧನಾ ವಲಯದ, ನಲ್ಲಾಳ–ಎ, ಬಿ, ಸಿ ಬ್ಲಾಕ್ ಮತ್ತು ಗೊಟ್ಟಿಪುರ ಸಂಶೋಧನಾ ಕೇಂದ್ರಗಳಲ್ಲಿರುವ 3430 ಮರಗಳು. 2) **ಮಾರಾಟ ಮಾಡುವ ಸ್ಥಳ:** ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ, ದೊರೆಸಾನಿಪಾಳ್ಯ, ಅರಕೆರೆ ಮೈಕೋ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–76. 3) **ಟೆಂಡರ್ ಸ್ವೀಕರಿಸುವ ದಿನಾಂಕ ಮತ್ತು ವೇಳೆ:** ನೀಲಗಿರಿ ಸಿಟ್ರಿಡೋರಾ ಎಲೆ ಮಾರಾಟ ದಿನಾಂಕ: **05.01.2022 ರಂದು ಮಧ್ಯಾಹ್ನ 3:00 ಗಂಟೆಯವರೆಗೆ.** 4) **ಹರಾಜಿನ ದಿನಾಂಕ ಮತ್ತು ವೇಳೆ:** ದಿನಾಂಕ: **05.01.2022 ರಂದು ಮಧ್ಯಾಹ್ನ 3:00 ಗಂಟೆಯವರೆಗೆ.** 5) **ಟೆಂಡರ್ ಫಾರಂ ಜೊತೆ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ: a)** ಟೆಂಡರ್ ಫಾರಂ ಜೊತೆ ರೂ. 8150/– (ಎಂಟು ಸಾವಿರದ ನೂರೈವತ್ತು ಮಾತ್ರ) ಮೊಬಲಗಿನ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ ಲಗತ್ತಿಸಿರಬೇಕು. **b)** ಹರಾಜಿನಲ್ಲಿ ಭಾಗವಹಿಸುವವರು ರೂ. 8150/– (ಎಂಟು ಸಾವಿರದ ನೂರೈವತ್ತು ಮಾತ್ರ) ನಗದು ಹಣವನ್ನು ಹರಾಜಿಗೆ ಮುಂಚಿತವಾಗಿ ಪಾವತಿಸುವುದು.
ಹೆಚ್ಚಿನ ಮಾಹಿತಿಯನ್ನು ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ಟೆಂಡರ್ ನಮೂನೆಯನ್ನು ದಿನಾಂಕ: 05.01.2022 ಮತ್ತು 10.01.2022 ರಂದು 1:00 ಗಂಟೆಯವರೆಗೆ ಕಚೇರಿ ವೇಳೆಯಲ್ಲಿ ನೀಡಲಾಗುವುದು. ಒಂದು ಟೆಂಡರ್ ಫಾರಂನ ಬೆಲೆ ರೂ. 200.00 (ತೆರಿಗೆ ಪ್ರತ್ಯೇಕ). ಒಂದೊಂದು ಕೆಲಸಕ್ಕೆ ಸಂಚಕಾರ ಠೇವಣಿಯನ್ನು ಡಿಡಿ ರೂಪದಲ್ಲಿ ಕ್ರ.ಸಂ. ಸಂಖ್ಯೆ: 5 ರಲ್ಲಿರುವಂತೆ ಪ್ರತ್ಯೇಕವಾಗಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಟೆಂಡರ್ ನಡೆಯಬಹುದಾದ ಸಂದರ್ಭದಲ್ಲಿ ಟೆಂಡರ್ ನಮೂನೆಗಳನ್ನು ಆಯಾ ದಿನಾಂಕದಂದು ಮಧ್ಯಾಹ್ನ 1:00 ಗಂಟೆಯವರೆಗೆ ಪಡೆಯಬಹದಾಗಿದೆ.
ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನಾ ಉಪ ವಿಭಾಗ, ಬೆಂಗಳೂರು
ವಾಸಾಸಂಇ/ಬೆಂ.ನ./ಜಿಎ/2625/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ಉದ್ಯೋಗಾವಕಾಶ**

**General**

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸಗಳಿಗೆ ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th, SSLC, PUC, ITI, Degree Pass/ Fail ಆದವರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/ PF ನೊಂದಿಗೆ ಸಂಬಳ:16,500/ ರಿಂದ 45,000/ ದವರೆಗೆ: 9742260055, 9538133533

ಬೆಂಗಳೂರಿನಲ್ಲಿರುವ ಗಾರ್ಮೆಂಟ್ಸ್, ಪ್ರಿಂಟಿಂಗ್ ಕೆಲಸಕ್ಕೆ ಹೆಲ್ಪರ್ ಬೇಕಾಗಿದ್ದಾರೆ. ವಸತಿ ಉಚಿತ, ಸಂಬಳ 10,000 - 15,000ರೂ (ವಯಸ್ಸು-35 ವರ್ಷದೊಳಗೆ). 8217554932.

**Marketing & Sales**

JINDAL STEELS: Marketing Head, with Minimum 3years Experience in Marketing, willing to Travel and have Good Communication Skills Background: Steel, Cement, Construction, Building material Salary: as per experience Contact number: 8861225521/ 7411091740 Contact person: Aarushi/ Sonali Mail: hrjindal921@gmail.com / hr@jindalsteels.co.in

**Situation Required**

REPUTED PVT Ltd Courier Company Require Manager Sales/Operations with Experience Email: nagalakshmi.srihari@gmail.com, hemanth012022@gmail.com

**Wanted**

ತಕ್ಷಣ_ಬೇಕಾಗಿದ್ದಾರೆ 7TH, 10th, PUC, Diploma, any Degree, ITI, Pass/ Fail ಉಚಿತ ಊಟ+ವಸತಿ. ಸಂಬಳ 16,00060,000. ಫೋ 9886639846, 7624918246.

**ರೆಂಟಲ್ ಪ್ರಾಪರ್ಟೀಸ್**

**Accommodation Available**

**Flats**

2 BHK Flat for Rent KG Road RR Nagar Near Global Village Contact: 7259781646

**ಬಿಲ್ಡರ್ ಎಸೆನ್ಷಿಯಲ್**

**Water Proofing Materials**

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

**ರಿಯಲ್ ಎಸ್ಟೇಟ್ ಸೆಲ್ಲಿಂಗ್**

**Mysore**

GOVIANU LUXURIA, High-end Luxury Flats in Mysore, Zoo Road, near Mysore Mall, Rera-003588, www.govianu.com. 8103990990

**ಸಮಾಜಸೇವೆ**

**Others**

ಅಂಗವಿಕಲರಿಗೆ ಉಚಿತ ತರಬೇತಿ: ಸಮರ್ಥನಂ ಅಂಗವಿಕಲರ ಸಂಸ್ಥೆ ಅಂಗವಿಕಲರಿಗಾಗಿ ವಸತಿಯುತ ವಿಶೇಷ ಕೌಶಲ ತರಬೇತಿ ಹಾಗೂ ಉದ್ಯೋಗವಕಾಶಗಳನ್ನು ಕಲ್ಪಿಸುತ್ತಿದೆ. ಹತ್ತನೇ ತರಗತಿ ಪೂರ್ಣಗೊಳಿಸಿದ 18 ರಿಂದ 35 ವರ್ಷದೊಳಗಿನ ಆಸಕ್ತ ಅಂಗವಿಕಲರು ತರಬೇತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9449864693, 9480812139

**ಭವಿಷ್ಯ**

**Astrology**

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★ನಂ.1 ಸ್ತ್ರೀಪುರುಷ★ ವಶೀಕರಣ ಸ್ಪೆಷಲಿಸ್ಟ್.ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ.ಪಂಡಿತ್. ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ,ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

WEEKEND CORNER

**EMBROIDERY MACHINE FOR SALE**
Barudan
9 Colour 20 Heads
well running and maintained
Model : 2003 Area: 300 x 600 1 Nos.
Model : 2006 Area: 300 x 1000 2 Nos.
Contact Mobile:
+ 91 9786675750, Tirupur

**ಸ್ಪರ್ಧಾಚೈತ್ರ ತರಬೇತಿ ಕೇಂದ್ರ**
ವಿಜಯನಗರದಲ್ಲಿ ಪ್ರಪ್ರಥಮವಾಗಿ ಸ್ಪರ್ಧಾಲೋಕದಲ್ಲಿ 22 ವರ್ಷಗಳ ಪ್ರತಿಷ್ಠಿತ ತರಬೇತಿ ಸಂಸ್ಥೆ
SINCE 1999
New Batch - Monday, 03rd Jan. @ 10:00 am
IAS, KAS, PSI, FDA, B.Ed (CET), Group-C, Banking, RRB, SSC
Spardha Chaitra New Building
FACILITIES OFFERED :
- New Infrastructure with well equipped classrooms
- 24/7 Library (100 seats), Wi-Fi facility
- Hostel for Boys and Girls
- Study Centre, Newspaper and Magazine Section
- Individual care by Faculties
- Free Test Series (Online/Offline)
- Canteen Facility for All Students

ವಿಶೇಷ: ಹೊಸ ಕಟ್ಟಡದಲ್ಲಿ ಸ್ಪರ್ಧಾಚೈತ್ರ
No.78/6, Opp. Veeresh Theatre, Behind NBP PU College, Magadi Main Road Agrahara Dasarahalli, Bangalore - 79.
Ph: 080-23112563 / 81973 07328

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

**ಪ್ರವಾಸ**

**Travel**

★ಶ್ರೇಯಸ್ ಟೂರ್ಸ್★ ದಿನಾಂಕ:08.02.2022 6ದಿನಗಳು ಮಾಘಮಾಸ ಪುಣ್ಯಸ್ನಾನ ಪ್ರವಾಸ ನೈಮಿಷ್ಯಾರಣ್ಯ,ತ್ರಿವೇಣಿಸಂಗಮ, ಸೀತಾಮಡು,ವಿಂದ್ಯಾವಾಸಿನಿ, ಕಾಶಿ.,ದಿನಾಂಕ:16.02.2022 11ದಿನಗಳು ಕಾಶಿ,ಗಯಾ ಅಯೋಧ್ಯ,ನೈಮಿಷ್ಯಾರಣ್ಯ, ಚಿತ್ರಕೂಟ,ಪ್ರಯಾಗರಾಜ್, ಗಯಾ,ರಾಜ್‌ಗಿರ್,ದೇವಘರ್. ಕಾಶಿ.9743351212, 9206979202, 9902050065, 7406112334

★ರೈಲು ಮತ್ತು ವಿಮಾನದಲ್ಲಿ* 20.02.2022 17/13 ದಿನಗಳು ಸಂಪೂರ್ಣ ಕಾಶಿ ಪ್ರವಾಸ.,05.03.2022 12/16ದಿನಗಳು ಸಿಮ್ಲಾ, ಕುಲುಮನಾಲಿ,ವೈಷ್ಣೋದೇವಿ,ಸಪ್ತ ಶಕ್ತಿಪೀಠ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ).9945445809/ 9902433500

★ಶ್ರೇಯಸ್ ಟೂರ್ಸ್★ ದಿನಾಂಕ:28.01.2022 13ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ ಸರ್ದಾರ್ ಪ್ರತಿಮೆ,ಕಚ್‌ಬುಚ್ ಸಹಿತ.,22.01.2022 5ದಿನಗಳು ಶ್ರೀನಗರ,ಗುಲ್‌ಮಾರ್ಗ್,ಷಹಲ್ ಗಾಂ,ಸೊನುಮಾರ್ಗ್., 02.03.2022 11ದಿನಗಳು ಚಂಡೀಗಡ್,ಸಿಮ್ಲಾ, ಕುಲುಮನಾಲಿ,5ದೇವಿಯರು, ಡಾಲ್‌ಹೌಸಿ,ವೈಷ್ಣೋದೇವಿ, ಅಮೃತ್‌ಸರ್,ವಾಘಗಡಿ, ಕುರುಕ್ಷೇತ್ರ.,02.03.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ(ಮುಕ್ತಿನಾಥ ಸಹಿತ),(ಎಲ್ಲಾ ವಿಮಾನದಲ್ಲಿ). 9743351212, 9206979202, 9902050065, 7406112334

21-1-2022 ಕಾಶಿ, ಗಯಾ, ಅಯೋಧ್ಯ 8ದಿನ. 2-2-2022 ಕಾಶಿ, ಆಗ್ರ, ದೆಹಲಿ 13ದಿನ. 25-3-2022 ಗ್ಯಾಂಗ್ಟಾಕ್, ಡಾರ್ಜಿಲಿಂಗ್, ಕಲ್ಕತ್ತಾ, ಭುವನೇಶ್ವರ 12ದಿನ. ನಂದಿನಿ ಟೂರಿಸ್ಟ್ 9916574089.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
**BOOK YOUR CLASSIFIEDS ONLINE** ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ನಿಮಗೆ ಅನಿಸುತ್ತ ದೆಯೇ ದಡ್ಡ
ವಿಶೇಷ ಮಾರಾಟದ ದಿನಗಳಲ್ಲಿ ಖರೀದಿ ಮಾಡಲು ಕಾಯುತ್ತಿರುವಿರಾ?
ನನ್ನ ಹೊಸ ವರ್ಷದ ನಿರ್ಣಯ:
ಪ್ರತಿ ದಿನ ಮಾರಾಟದ ದಿನದಂತಹ ಬೆಲೆಗಳನ್ನು ಪಡೆಯುವ ಸ್ಥಳವನ್ನು ಆರಿಸಿ.
SMART STORES
Smart ಆಗಿರಿ. Smart ಆಯ್ಕೆ ಮಾಡಿ.

# ಮೇಕೆದಾಟು: 'ಸಾಕ್ಷ್ಯ ಶೀಘ್ರ ಬಿಡುಗಡೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮೇಕೆದಾಟು ಯೋಜನೆ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ತೋರಿದ ಹೊಣೆಗೇಡಿತನಕ್ಕೆ ಸಾಕ್ಷ್ಯಗಳನ್ನು ಕೆಲವೇ ದಿನಗಳಲ್ಲಿ ಬಿಡುಗಡೆ ಮಾಡುತ್ತೇನೆ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಗೋವಿಂದ ಕಾರಜೋಳ

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ರಾಜ್ಯದ ಹಿತದೃಷ್ಟಿಯಿಂದ ಮತ್ತು ರಾಜ್ಯದ ಜನರಿಗೆ ಸತ್ಯ ವಿಷಯವನ್ನು ಗಮನಕ್ಕೆ ತರುವ ಉದ್ದೇಶದಿಂದ ಸಾಕ್ಷ್ಯಗಳನ್ನು ಬಿಡುಗಡೆ ಮಾಡಲಾಗುವುದು' ಎಂದರು.

'ಅಂದು ಕೃಷ್ಣೆಗೆ (ಕೂಡಲ ಸಂಗಮ) ಪಾದಯಾತ್ರೆ ನಡೆಸಿ, ಇಂದು ಕಾವೇರಿಗೆ (ಮೇಕೆದಾಟು) ಪಾದಯಾತ್ರೆ ನಡೆಸಲು ಮುಂದಾಗಿರುವ ಕಾಂಗ್ರೆಸ್ ಪಕ್ಷದ ಮಿತ್ರರು, ಅಧಿಕಾರದಲ್ಲಿ ಇದ್ದಾಗ ಮೇಕೆದಾಟು ಯೋಜನೆಯ ಕುರಿತು ತೋರಿಸಿದ್ದ ಹೊಣೆಗೇಡಿತನಕ್ಕೆ ಸಾಕ್ಷ್ಯಗಳು ನಮ್ಮಲ್ಲಿವೆ. ಕೆಲವೇ ದಿನಗಳಲ್ಲಿ ಕೆಲವು ಸ್ಫೋಟಕ ಮಾಹಿತಿಗಳನ್ನು ಹೊರಹಾಕುತ್ತೇನೆ' ಎಂದರು.

'ಕಾಂಗ್ರೆಸ್ ನಾಯಕರು ಪಾದಯಾತ್ರೆ ನಡೆಸುತ್ತಿರುವುದು ಮತ್ತು ರಾಜಕೀಯ ಗಿಮಿಕ್ ಮಾಡುತ್ತಿರುವುದು ಇದೇ ಮೊದಲಲ್ಲ. 2013ರ ಜ. 7ರಿಂದ ಜ. 14ರವರೆಗೆ ಪಾದಯಾತ್ರೆ ಮಾಡಿ ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ ಎಂದು ಗಿಮಿಕ್ ಮಾಡಿದ್ದರು' ಎಂದು ಟೀಕಿಸಿದರು.

'ಅಧಿಕಾರದಲ್ಲಿದ್ದಾಗ ಆಲಸ್ಯತನ ತೋರುವುದು, ಕಡತ ವಿಲೇವಾರಿ ಮಾಡದೆ ಕಾಲಹರಣ ಮಾಡುವುದು, ವಿರೋಧ ಪಕ್ಷದಲ್ಲಿ ಬಂದಾಗ ಆಂದೋಲನಗಳನ್ನು ಕೈಗೊಳ್ಳುವುದು ಕಾಂಗ್ರೆಸ್‌ನವ ಜಾಯಮಾನ. ಅಧಿಕಾರದಲ್ಲಿದ್ದಾಗ ಕಾವೇರಿ ಕಣಿವೆಯ ರೈತರ ಮತ್ತು ಜನಹಿತದ ಕೆಲಸಗಳನ್ನು ವಿಳಂಬ ದ್ರೋಹದ ಮೂಲಕ ಮುಂದೂಡಿ ಈಗ ಪಾದಯಾತ್ರೆ ಮೂಲಕ ಕಾಂಗ್ರೆಸ್ ಗಿಮಿಕ್ ಮಾಡುತ್ತಿದೆ' ಎಂದೂ ಟೀಕಿಸಿದರು.

## ಕಾಂಗ್ರೆಸ್‌ನವರು ಮೈ ಪರಚಿಕೊಳ್ಳುತ್ತಿದ್ದಾರೆ: ಅಶೋಕ

**ಬೆಂಗಳೂರು:** 'ಅಧಿಕಾರದಲ್ಲಿದ್ದಾಗ ಕಾಂಗ್ರೆಸ್‌ನವರು ಮೇಕೆದಾಟು ಯೋಜನೆಗೆ ಏನೂ ಮಾಡಲಿಲ್ಲ. ಈಗ ಮಾಡಲು ಕೆಲಸವಿಲ್ಲ. ಹೀಗಾಗಿ ಪಾದಯಾತ್ರೆ ನಡೆಸಲು ಹೊರಟಿದ್ದಾರೆ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮೇಕೆದಾಟು ಬಗ್ಗೆ ಈಗ ಕಾಂಗ್ರೆಸ್‌ನವರು ಮೈ ಪರಚಿಕೊಳ್ಳುತ್ತಿದ್ದಾರೆ. ಅವರಿಗೆ ನಿಜವಾಗಿ ಕಾಳಜಿ ಇದ್ದರೆ ಅಧಿಕಾರದಲ್ಲಿ ಇದ್ದಾಗಲೇ ಮಾಡುತ್ತಿದ್ದರು. ಯೋಜನೆ ಡಿಪಿಆರ್ ಮಾಡಲು ಆರು ವರ್ಷ ಬೇಕಿತ್ತಾ' ಎಂದು ಶನಿವಾರ ಪ್ರಶ್ನಿಸಿದರು.

'ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ ಎಂದು ಹಿಂದೆ ಪಾದಯಾತ್ರೆ ಮಾಡಿದ್ದರು. ಅಲ್ಲಿ ನೀರೇ ಬತ್ತಿ ಹೋಯಿತು. ಈಗ ಮೇಕೆದಾಟು ಕೂಡ ಅದೇ ಪರಿಸ್ಥಿತಿಗೆ ಬಂದಿದೆ. ಕಾಂಗ್ರೆಸ್‌ನವರ ಪಾದಯಾತ್ರೆಯಿಂದ ಜನರಿಗೆ ಅನುಕೂಲ ಆಗುವುದಿಲ್ಲ. ಅವರ ಪಕ್ಷಕ್ಕೆ ಅನುಕೂಲ ಮಾಡಿಕೊಳ್ಳಲು ಮಾಡುತ್ತಾರೆ ಅಷ್ಟೇ. ಇಷ್ಟು ದಿನ ಏನು ಕಡಲೆಕಾಯಿ ತಿನ್ನುತ್ತಿದ್ದರಾ' ಎಂದೂ ತರಾಟೆಗೆ ತೆಗೆದುಕೊಂಡರು.

## ಪಾದಯಾತ್ರೆಗೆ ಅನುಮತಿ ಏಕೆ– ಡಿಕೆಶಿ

**ಬೆಂಗಳೂರು:** 'ಪಾದಯಾತ್ರೆಗೆ ಗೃಹ ಸಚಿವರ ಅನುಮತಿಯೂ ಬೇಡ, ರಕ್ಷಣೆಯೂ ಬೇಡ. ಯಾರಾದ್ರೂ ಕೋಳಿ ಕೇಳಿ ಮಸಾಲೆ ಅರಿತಾರಾ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ದೇವೇಗೌಡರು, ಚಂದ್ರಶೇಖರ್ ಪಾದಯಾತ್ರೆ ನಡೆಸಿದಾಗ ಸ್ಟ್ಯಾಂಪ್ ಹಾಕಿ ಅನುಮತಿ ಕೊಟ್ಟಿದ್ದರಾ' ಎಂದೂ ಪ್ರಶ್ನಿಸಿದರು.

'ಗೃಹ ಸಚಿವರು ವಯಸ್ಸಿನಲ್ಲಿ ದೊಡ್ಡವರಿರಬಹುದು. ಆದರೆ, ರಾಜಕೀಯದಲ್ಲಿ ಎಳಸು' ಎಂದು ಆರಗ ಜ್ಞಾನೇಂದ್ರ ಅವರನ್ನು ಲೇವಡಿ ಮಾಡಿದ ಶಿವಕುಮಾರ್, 'ಪಾದಯಾತ್ರೆಗೆ ಗೃಹ ಸಚಿವರು ಬಂದರೆ, ಅವರಿಗೆ ಬ್ಯಾಲದ ಹಣ್ಣಿನ ಪಾನಕ ಕುಡಿಸಿ ಕಳಿಸುತ್ತೇವೆ. ರಾಮ ರಸ ಅಲ್ಲ, ಪಾನಕ ಕುಡಿಸಿ ಕಳುಹಿಸುತ್ತೇವೆ' ಎಂದರು.

'ಪಾದಯಾತ್ರೆ ವಿಚಾರದಲ್ಲಿ ಯಾವುದೇ ವೈಯಕ್ತಿಕ ಹಿತಾಸಕ್ತಿ ಇಲ್ಲ. ಇದರಲ್ಲಿ ಯಾರು ಬೇಕಾದರೂ ಭಾಗವಹಿಸಬಹುದು. ಪಾದಯಾತ್ರೆಯಲ್ಲಿ 4–5 ಆಂಬ್ಯುಲೆನ್ಸ್‌ಗಳು ಇರುತ್ತವೆ. ಎಳನೀರು ಕೊಡಲು ಮಂಡ್ಯ, ಮದ್ದೂರು ಜನ ಇರುತ್ತಾರೆ. ನೂರೋ, ಐನೂರೋ ಅಥವಾ ಐದು ಸಾವಿರ ಜನ ಬರುತ್ತಾರೋ ಎಲ್ಲರಿಗೂ ಆಹ್ವಾನ ಕೊಡುತ್ತಿದ್ದೇವೆ. ಯಾರಿಗೂ ಬಲವಂತ ಇಲ್ಲ' ಎಂದರು.

# 'ಸವಾಲು ಎದುರಿಸಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಆಡಳಿತ ಮತ್ತು ಆರ್ಥಿಕ ದೃಷ್ಟಿಯಿಂದ 2022 ಸವಾಲಿನ ವರ್ಷ. ಕೇವಲ ನಿರ್ಬಂಧಗಳನ್ನು ಜಾರಿಗೊಳಿಸಿ ಸುಮ್ಮನಿರಲಾಗದು, ಈ ಸವಾಲನ್ನು ವಿಭಿನ್ನ ಕಾರ್ಯತಂತ್ರದಿಂದ ಎದುರಿಸಬೇಕಾಗಿದೆ' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಿವಿಮಾತು ಹೇಳಿದರು.

ಹೊಸ ವರ್ಷದ ಆರಂಭದ ದಿನವಾದ ಶನಿವಾರ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅಧಿಕಾರಿಗಳಿಗೆ ಶುಭಾಶಯ ಕೋರಿ ಮಾತನಾಡಿದ ಅವರು, 'ಕೋವಿಡ್ ಸಂಭಾವ್ಯ ಮೂರನೇ ಅಲೆಗೆ ನಾವು ಸಿದ್ಧರಾಗಬೇಕಾಗಿದೆ. ಜೊತೆಗೆ, ಆರ್ಥಿಕತೆಯೂ ಮುನ್ನಡೆಯಬೇಕಾಗಿದೆ. ಇದಕ್ಕಾಗಿ ಎಲ್ಲರೂ ಒಗ್ಗೂಡಿ ಕೆಲಸ ಮಾಡುವ ಸಂಕಲ್ಪ ಮಾಡಬೇಕು' ಎಂದರು.

ಬಸವರಾಜ ಬೊಮ್ಮಾಯಿ

'ನಿಮ್ಮ ನಿಮ್ಮ ಇಲಾಖೆಯಲ್ಲಿ ಅನವಶ್ಯಕ ವೆಚ್ಚ ಕಡಿತಗೊಳಿಸಬೇಕು. ತೆರಿಗೆ ಸಂಗ್ರಹಿಸುವ ಇಲಾಖೆಗಳು ಇನ್ನಷ್ಟು ದಕ್ಷತೆಯಿಂದ ಕಾರ್ಯನಿರ್ವಹಿಸಬೇಕು. ಮುಂದಿರುವ ಸವಾಲನ್ನು ಸಕಾರಾತ್ಮಕ ಭಾವನೆಯಿಂದ ಎದುರಿಸಬೇಕು. ಉತ್ತಮ ಚಿಂತನೆ ಉತ್ತಮ ಕೆಲಸಗಳಿಗೆ ಎಡೆ ಮಾಡುತ್ತವೆ. ಉತ್ತಮ ಕೆಲಸಗಳು ಉತ್ತಮ ಜೀವನಕ್ಕೆ ದಾರಿ. ಆದ್ದರಿಂದ ಸಕಾರಾತ್ಮಕವಾಗಿ ಯೋಚಿಸಿ, ಕೆಲಸವನ್ನು ಪ್ರೀತಿಸಿದರೆ ಫಲಿತಾಂಶ ಉತ್ತಮವಾಗಿರುತ್ತದೆ' ಎಂದು ಸಲಹೆ ನೀಡಿದರು.

'ಐದು ತಿಂಗಳಲ್ಲಿ ಆಡಳಿತದಲ್ಲಿ ಅತಿ ಕಡಿಮೆ ಹಸ್ತಕ್ಷೇಪ ಮಾಡಿದ ಸರ್ಕಾರ ನಮ್ಮದು. ಎಲ್ಲರೂ ಅವರವರ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳಬೇಕು' ಎಂದೂ ಹೇಳಿದರು.

ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾನಿರೀಕ್ಷಕ ಪ್ರವೀಣ್ ಸೂದ್ ಮತ್ತು ಇತರ ಅಧಿಕಾರಿಗಳು ಇದ್ದರು.

## ಪಾಕ್‌ಗೆ ಒತ್ತಾಯ

**ನವದೆಹಲಿ:** ಪಾಕಿಸ್ತಾನದ ಜೈಲುಗಳಲ್ಲಿ ಬಂಧಿಗಳಾಗಿರುವ ತನ್ನ ನಾಗರಿಕರನ್ನು ಸಾರ್ಸ್–ಕೋವಿಡ್–2 ವೈರಸ್‌ಗಳಿಂದ ರಕ್ಷಿಸುವಂತೆ ಭಾರತ ಒತ್ತಾಯಿಸಿದೆ.

628 ಭಾರತೀಯರು ಅಥವಾ ಭಾರತೀಯರು ಎಂದು ನಂಬಲಾದ 577 ಮೀನುಗಾರರು ಮತ್ತು ಇತರ 51 ಜನರು ಪ್ರಸ್ತುತ ಪಾಕಿಸ್ತಾನದ ಜೈಲುಗಳಲ್ಲಿ ಬಂಧಿಯಾಗಿದ್ದಾರೆ ಎಂದು ಇಸ್ಲಾಮಾಬಾದ್ ಮಾಹಿತಿ ನೀಡಿದೆ.

## ಜ.7,8ಕ್ಕೆ ಬಿಜೆಪಿ ಚಿಂತನ ಸಭೆ

**ಬೆಂಗಳೂರು:** ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ಇದೇ 7 ಮತ್ತು 8ರಂದು ಬಿಜೆಪಿ ರಾಜ್ಯ ಘಟಕದ ಚಿಂತನಾ ಸಭೆ ನಡೆಯಲಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಸೇರಿದಂತೆ ಹಲವು ಪ್ರಮುಖರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಪದಾಧಿಕಾರಿಗಳು ಮತ್ತು ಇತರ ಪ್ರಮುಖರು ಸಭೆಯಲ್ಲಿ ಪಾಲ್ಗೊಳ್ಳುವರು. ನಡ್ಡಾ ಅವರು ಮುಖ್ಯಮಂತ್ರಿ ಹಾಗೂ ಸಚಿವರ ಜತೆ ಪ್ರತ್ಯೇಕವಾಗಿ ಸಭೆ ನಡೆಸಿ ಪಕ್ಷ ಸಂಘಟನೆ ಕುರಿತು ಚರ್ಚಿಸಲಿದ್ದಾರೆ.

ಜ.8ರಂದು ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿಯ ಸಭೆಯೂ ನಿಗದಿಯಾಗಿದೆ ಎಂದು ಮೂಲಗಳು ಹೇಳಿವೆ. ಚಿಂತನ ಸಭೆಯಲ್ಲಿ ಭಾಗವಹಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನೂ ಕೋರಲಾಗಿದೆ. ಆದರೆ, ಅಮಿತ್ ಶಾ ಭೇಟಿ ಇನ್ನೂ ಖಚಿತವಾಗಿಲ್ಲ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

## ₹ 10ರ ಕೋಳಿ ಮರಿಗೂ ₹ 52 ಬಸ್ ಟಿಕೆಟ್

ಪ್ರಜಾವಾಣಿ ವಾರ್ತೆ

**ಹೊಸನಗರ:** ಬೈಂದೂರು ತಾಲ್ಲೂಕಿನ ಶಿರೂರಿಗೆ ಸರ್ಕಾರಿ ಬಸ್‌ನಲ್ಲಿ ಹೊರಟಿದ್ದ ಅಲೆಮಾರಿ ಕುಟುಂಬವೊಂದು ₹10ಕ್ಕೆ ಖರೀದಿಸಿದ್ದ ಕೋಳಿ ಮರಿಗೆ ₹52 ಬಸ್ ಚಾರ್ಜ್ ಕೊಟ್ಟು ತಬ್ಬಿಬ್ಬಾಗಿದೆ.

ಕೋಳಿ ಮರಿ

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ಕೋಳಿ ಮರಿ ಖರೀದಿಸಿದ್ದ ಮೂವರು ಅಲೆಮಾರಿಗಳು ಪಟ್ಟಣದಲ್ಲಿ ಶಿರೂರು ಬಸ್ ಹತ್ತಿದ್ದರು. ಕಂಡಕ್ಟರ್ ಎಲ್ಲಿಗೆ ಎಂದು ಕೇಳಿದಾಗ, 'ಶಿರೂರಿಗೆ ಹೋಗಬೇಕ್ರಿ, ಮೂರು ಟಿಕೆಟ್ ಕೊಡ್ರಿ' ಅಂದರು. ಆಗ ಪುಟ್ಟ ಚೀಲದಿಂದ 'ಚಿವ್.. ಚಿವ್...' ಶಬ್ದ ಬಂದಿದ್ದನ್ನು ಆಲಿಸಿದ ಕಂಡಕ್ಟರ್, ಅದು ಏನು ಎಂದು ಪ್ರಶ್ನಿಸಿದರು. ಕೋಳಿ ಮರಿ ಅಂದಾಗ, 'ಅದಕ್ಕೂ ಟಿಕೆಟ್ ತೆಗೆದುಕೊಳ್ಳಬೇಕು' ಎಂದು ಹೇಳಿದರು.

'ಇದು ನಮ್ಮ ಸಂಸ್ಥೆ ನಿಯಮ. ಅರ್ಧ ಚಾರ್ಜ್ ಕೊಡಿ' ಎಂದು ₹ 52ರ ಟಿಕೆಟ್ ಕೊಟ್ಟರು. ಟಿಕೆಟ್ ಕಂಡು ಮುಖಮುಖ ನೋಡಿಕೊಂಡ ಮೂವರು ಅಲೆಮಾರಿಗಳು, ಬೇರೆ ದಾರಿ ಕಾಣದೆ ಟಿಕೆಟ್‌ಗೆ ಹಣ ಪಾವತಿಸಿ ಸುಮ್ಮನಾದರು.

ಇದನ್ನು ಕಂಡು ಉಳಿದ ಪ್ರಯಾಣಿಕರು, 'ಮೂಗಿಗಿಂತ ಮೂಗುತಿ ಭಾರ ಅಂದಂಗಾಯ್ತು' ಎಂದು ಮಾತನಾಡಿಕೊಂಡರು. ಈ ಸುದ್ದಿ ಪಟ್ಟಣದ ಎಲ್ಲೆಡೆ ಹಬ್ಬಿತ್ತು.


ಕರ್ನಾಟಕ ಸರ್ಕಾರ
**ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,**
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
ಇ–ಮೇಲ್: commissionerahvs@gmail.com ಫೋನ್: 080–23412767
ಸಂ: CAH:KLDA:FSP & BF Short term :Tender: 2021-22 ದಿನಾಂಕ: 01/01/2022
**ಟೆಂಡರ್ ಪ್ರಕಟಣೆ** (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2021–22 & 2022–23 ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಅವಶ್ಯವಿರುವ Filling Sealing and Printing Machine & Biological Freezer for Bovine Semen ಗಳನ್ನು ಖರೀದಿಸುವುದಕ್ಕೆ ಸಂಬಂಧಿಸಿದಂತೆ, ಅರ್ಹ ಟೆಂಡರದಾರರಿಂದ ಇ–ಪ್ರೊಕ್ಯೂರ್‌ಮೆಂಟ್ https//eproc.karnataka.gov.in ಮೂಲಕ ಎರಡು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ಇಟ್ಟ ಮೊತ್ತ ರೂ.269.00 ಲಕ್ಷಗಳು
ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 01.01.2022 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು e-procurement Platform ನಲ್ಲಿ ದಿನಾಂಕ: 01.01.2022 ರಿಂದ 10.01.2022 ರವರೆಗೆ ಸಾಯಂಕಾಲ 5.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ e-procurement Portal ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.
ಸಹಿ/–
ಮುಖ್ಯ ಪಶುವೈದ್ಯಾಧಿಕಾರಿ (ಕ್ಷೀರ) ಮತ್ತು ಸದಸ್ಯ ಕಾರ್ಯದರ್ಶಿಗಳು ಟೆಂಡರ್ ಆಹ್ವಾನ ಸಮಿತಿ
ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು
DIPR/DDU/Zen/RO-2635/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಚಿತ್ರದುರ್ಗ.**
(ಯೋಜನಾ ವಿಭಾಗ) ದೂರವಾಣಿ: 08194–230294
ಕ್ರ.ಸಂ: ಕಾಇಂ/ಯೋವಿ/ಚಿದು/ತಾಂತ್ರಿಕ/ಟೆಂಡರ್/2021–22/367 ದಿ: 31.12.2021
**ಅಲ್ಪಾವಧಿ ಟೆಂಡರ್ ಪ್ರಕಟಣೆಯ ಅವಧಿ ವಿಸ್ತರಣೆ**
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ ಚಿತ್ರದುರ್ಗ ರವರಿಂದ ಹೊರಡಿಸಲಾದ ಟೆಂಡರ್ ಪ್ರಕಟಣೆ ಸಂ.: ಕ್ರ.ಸಂ: ಕಾಇಂ/ಯೋವಿ/ಚಿದು/ತಾಂತ್ರಿಕ/ಟೆಂಡರ್/2021–22/337 ದಿ: 16.12.2021 ಅನ್ನು ವಿಜಯ ಕರ್ನಾಟಕ ದಿನಪತ್ರಿಕೆ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ ಆಂಗ್ಲ ಮಾಧ್ಯಮ ದಿನಪತ್ರಿಕೆಗಳಲ್ಲಿ ದಿನಾಂಕ: 19.12.2021ರಂದು ಪ್ರಕಟಪಡಿಸಲಾಗಿತ್ತು. ಸದರಿ ಪ್ರಕಟಣೆಯಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕಗಳನ್ನು ಅನಿವಾರ್ಯ ಕಾರಣಗಳಿಂದ ಈ ಕೆಳಕಂಡಂತೆ ವಿಸ್ತರಿಸಿ ನಿಗದಿಪಡಿಸಲಾಗಿದೆ.
1) ಭರ್ತಿ ಮಾಡಿದ ಟೆಂಡರ್‌ಗಳನ್ನು Online ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: 07.01.2022, 16:30 ಗಂಟೆ, (ವ.ಇ.ನಂ.: 5272 ಮತ್ತು 5273). 2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 10.01.2022, 11:00 ಗಂಟೆ, (ವ.ಇ.ನಂ.: 5272 ಮತ್ತು 5273). 3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 12.01.2022, 15:00 ಗಂಟೆ, (ವ.ಇ.ನಂ.: 5272 ಮತ್ತು 5273) ಅಥವಾ ಮುಂದೆ ಸೂಚಿಸುವ ದಿನಾಂಕ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಚಿತ್ರದುರ್ಗ.
RO No. 706: DIPR/CTA/MCA/2021-22



**ಜಿಲ್ಲಾ ಪಂಚಾಯತ್, ದಾವಣಗೆರೆ.**
ಸ್ವಚ್ಛ ಭಾರತ್ ಮಿಷನ್, ಜಿಲ್ಲಾ ನೆರವು ಘಟಕ
ಲೋಕಿಕೆರೆ ರಸ್ತೆ, ದೂರದರ್ಶನ ಕೇಂದ್ರದ ಎದುರು, ದಾವಣಗೆರೆ–577005
ದೂ.08192–261360/261865/262103 ಇಮೇಲ್: tscdaavanagere.kar.nic.in
ಸಂಖ್ಯೆ: ಜಿಪಂದಾ:ಜಿನೆಘ/ಸ್ವಭಾಮಿ:ಸಿಆರ್/2021–22/ ದಿನಾಂಕ: 24.12.2021
**ಟೆಂಡರ್ ಪ್ರಕಟಣೆ**
ದಾವಣಗೆರೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಆಯ್ದ 38 ಗ್ರಾಮ ಪಂಚಾಯಿತಿಗಳಿಗೆ 4 ಗಾಲಿಗಳ 38 ವಾಹನಗಳನ್ನು (Auto Tipper Petrol) ಸರಬರಾಜು ಮಾಡಲು ಪ್ರತ್ಯೇಕವಾಗಿ ಕೆ.ಟಿ.ಪಿ.ಪಿ. ನಿಯಮಾವಳಿಯನ್ವಯ ಸ್ವಚ್ಛಭಾರತ್ ಮಿಷನ್ (ಗ್ರಾ) ಯೋಜನೆಯಡಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನ ದಿನಾಂಕ ನಿಗಧಿಪಡಿಸಿ ಆಹ್ವಾನಿಸಲಾಗಿದೆ. ಈ ಕೆಳಗೆ ಪ್ರಕಟಿಸಿರುವ ಯಾವುದಾದರೂ ದಿನಾಂಕವು ಆಕಸ್ಮಿಕವಾಗಿ ರಜಾ ದಿನವೆಂದು ಘೋಷಿಸಿದ್ದಲ್ಲಿ ನಂತರದ ಕಛೇರಿ ಕೆಲಸದ ದಿನವನ್ನು ಪರಿಗಣಿಸಲಾಗುವುದು.
ಟೆಂಡರ್ ಪ್ರಕ್ರಿಯೆ ವಿವರಗಳು:– (1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ವೆಬ್‌ಸೈಟ್‌ನಲ್ಲಿ ನೋಡಿಕೊಳ್ಳುವ/ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 24.12.2021 ಸಮಯ ಬೆಳಿಗ್ಗೆ 11 ಗಂಟೆ ನಂತರ. (2) ಟೆಂಡರ್ ಅಂದಾಜು ಮೊತ್ತ: ರೂ. 2,47,00,000–00ಗಳು. (3) ಇಎಂಡಿ ಮೊತ್ತ:–(Variable EMD) ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ. (4) ಪ್ರಿ–ಬಿಡ್ ಮೀಟಿಂಗ್ ದಿನಾಂಕ: 28.12.2021 ಮಧ್ಯಾಹ್ನ 3.30ಕ್ಕೆ (5) ಸಾಮಾಗ್ರಿ ಸ್ಯಾಂಪಲ್ ಸಲ್ಲಿಸುವ ಕೊನೆಯ ದಿನಾಂಕ: 30.12.2021 ಮಧ್ಯಾಹ್ನ 3 ಗಂಟೆಯವರೆಗೆ (Manufacturer Catalogue) ಸಲ್ಲಿಸುವುದು. (6) ಅರ್ಜಿಗಳನ್ನು ಸ್ವೀಕರಿಸುವ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 23.01.2022 ಸಂಜೆ 5.30 ಗಂಟೆ. (7) ಟೆಂಡರ್ ತಾಂತ್ರಿಕ ಬಿಡ್ ಹಾಗೂ ದಾಖಲಾತಿಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ: 25.01.2022 ಸಮಯ 11 ಗಂಟೆ ನಂತರ. (8) ಆರ್ಥಿಕ ಟೆಂಡರ್ ಬಿಡ್ ತೆರೆಯುವ ದಿನಾಂಕ: 28.01.2022 ಬೆಳಿಗ್ಗೆ 11 ಗಂಟೆ ನಂತರ.
ವಾಸಾಇ/ಡಿವಿಜಿ/585/ಎಂಸಿಎ/2021–22 ಸಹಿ/–ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು



**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕಾವೇರಿ ಭವನ, ಬೆಂಗಳೂರು–560009,
ದೂರವಾಣಿ: 080–23118888, ವೆಬ್‌ಸೈಟ್: https://ashraya.karnataka.gov.in,
e-mail: knpmayhfanew@gmail.com
**ಅಲ್ಪಾವಧಿ ಟೆಂಡರ್ ಪ್ರಕಟಣೆ**
(ಇ–ಪ್ರಕ್ಯೂರ್‌ಮೆಂಟ್ ಮೂಲಕ)
Tender Notification No: RGRHCL 85 VHK 2018-19 dt: 31-12-2021
Tender Notification No: RGRHCL 139 VHK 2019-20 dt: 31-12-2021
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
**ಕಾಮಗಾರಿಯ ಹೆಸರು:**
(1) ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯ "AHP" ಘಟಕದಡಿ ಹಾವೇರಿ ನಗರದ ಸಿದ್ದೇವಪುರ ಮತ್ತು ನಾಗೇಂದ್ರನಮಟ್ಟಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ 1112 (ಜಿ+1) ಮನೆಗಳ ನಿರ್ಮಾಣ ಕಾಮಗಾರಿ.
**(1) Indent No: RGRHCL/2021-22/BD/WORK_INDENT76**
(2) ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯ "AHP" ಘಟಕದಡಿ ಮೈಸೂರು ನಗರದ ಮಂಡಕಳ್ಳಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ 2446 (ಜಿ+1 & ಜಿ+2) ಮನೆಗಳ ನಿರ್ಮಾಣ ಕಾಮಗಾರಿ.
**(2) Indent No: RGRHCL/2021-22/BD/WORK_INDENT77**
ವಿವರಗಳು ಕೆಳಕಂಡಂತಿವೆ

| ಕ್ರಮ ಸಂಖ್ಯೆ | ಸ್ಥಳ | ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) (ರೂ.ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ) | ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ |
|---|---|---|---|---|
| 1 | ಹಾವೇರಿ | 6470.63 | Exempted as per GONo.:FD:675:EXP-12: 2020, Bengaluru, Dt: 22.12.2020 Declaration/ Annexure to be uploaded as in Section 11. | 16.01.2022 Up to 16.00 Hrs |
| 2 | ಮೈಸೂರು | 14981.91 | | 16.01.2022 Up to 16.00 Hrs |

ಕಾಮಗಾರಿಯ ಬಗ್ಗೆ / ಇನ್ನಿತರೆ ವಿವರಗಳನ್ನು: https://eproc.karnataka.gov.in, https://ashraya.karnataka.gov.in
ಸಹಿ/–
ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ವಾಸಾಸಂಇ/ಬೆಂ.ನ/ಜಿಎ/2630/2020–21
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಚೇರಿ, ವಿಜಯನಗರ ವಿಭಾಗ, 3ನೇ ಮುಖ್ಯರಸ್ತೆ, 1ನೇ ಮಹಡಿ, ಶಾಸಕರ ಭವನ, ವಿಜಯನಗರ, ಬೆಂಗಳೂರು – 560 040.
ಸಂಖ್ಯೆ: ಕಾಪಾಅ(ವಿನ)/ಎಇ/ಟೆಂಡರ್/11/2021–22 ದಿನಾಂಕ: 01.01.2022
**ಅಲ್ಪಾವಧಿ ಟೆಂಡರ್ ಪ್ರಕಟಣೆ** (ದ್ವಿಲಕೋಟೆ & ಏಕಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, (ವಿಜಯನಗರ) ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಬೃ.ಬೆಂ.ಮ.ಪಾ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಎಸ್.ಟಿ.ಡಿ. ಕೆಡಬ್ಲ್ಯೂ–1, 2 &3)

| ಕ್ರ. ಸಂ. | ಕಾಮಗಾರಿಗಳ ಹೆಸರು | ಕಾಮಗಾರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ) | ಇಎಂಡಿ ಘೋಷಣಾ |
|---|---|---|---|
| | (ದ್ವಿಲಕೋಟೆ ಪದ್ಧತಿ) (ಕೆಡಬ್ಲ್ಯೂ–3) | | |
| 1. | **ವಾರ್ಡ್ ಸಂಖ್ಯೆ–122,** ಕೆ.ಪಿ. ಅಗ್ರಹಾರದ 5ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಮರು ಡಾಂಬರೀಕರಣ ಮಾಡುವುದು. (ಸಾಮಾನ್ಯರಿಗೆ) | 60.00 | 120000.00 |
| 2. | **ವಾರ್ಡ್ ಸಂಖ್ಯೆ–122,** ಕೆ.ಪಿ. ಅಗ್ರಹಾರದ 10ನೇ ಅಡ್ಡರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಮರು ಡಾಂಬರೀಕರಣ ಮಾಡುವುದು. (ಸಾಮಾನ್ಯರಿಗೆ) | 60.00 | 120000.00 |
| 3. | **ವಾರ್ಡ್ ಸಂಖ್ಯೆ–124** ಹೊಸಹಳ್ಳಿ ಕೃಷ್ಣಪ್ಪ ಬಡಾವಣೆ ಸುತ್ತಮುತ್ತಲ ಪ್ರದೇಶಗಳಲ್ಲಿ ಚರಂಡಿಗಳನ್ನು ಸುಧಾರಣೆ ಮಾಡುವುದು. (ಸಾಮಾನ್ಯರಿಗೆ) | 52.00 | 104000.00 |
| 4. | **ವಾರ್ಡ್ ಸಂಖ್ಯೆ–158**ರ ವ್ಯಾಪ್ತಿಯಲ್ಲಿ ಆರ್‌ಸಿಸಿ ಚರಂಡಿಗಳ ನಿರ್ಮಾಣ ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) | 90.00 | 180000.00 |
| 5. | **ವಾರ್ಡ್ ಸಂಖ್ಯೆ–158**ರ ವ್ಯಾಪ್ತಿಯ ರಸ್ತೆಗಳಲ್ಲಿ ಬಾಕಿ ಉಳಿದಿರುವ ರಸ್ತೆಗಳಿಗೆ ಮರು ಡಾಂಬರೀಕರಣ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) | 60.00 | 120000.00 |
| 6. | **ವಾರ್ಡ್ ಸಂಖ್ಯೆ–158**ರ ವ್ಯಾಪ್ತಿಯಲ್ಲಿ ರಸ್ತೆಗಳಿಗೆ ಮರು ಡಾಂಬರೀಕರಣ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) | 60.00 | 120000.00 |
| 7. | **ವಾರ್ಡ್ ಸಂಖ್ಯೆ–158**ರ ವ್ಯಾಪ್ತಿಯಲ್ಲಿ ಶಿಥಿಲವಾದ ರಸ್ತೆಗಳಿಗೆ ಡಾಂಬರೀಕರಣ ರೀಸರ್ಫೇಸಿಂಗ್ ಮಾಡುವುದು. (ಸಾಮಾನ್ಯರಿಗೆ) | 65.00 | 130000.00 |
| 8. | **ವಾರ್ಡ್ ಸಂಖ್ಯೆ–158**ರಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) | 95.00 | 190000.00 |
| | (ಏಕಲಕೋಟೆ ಪದ್ಧತಿ) (ಕೆಡಬ್ಲ್ಯೂ–1 & 2) | | |
| 9. | **ವಾರ್ಡ್ ಸಂಖ್ಯೆ–123,** ವಿಜಯನಗರ ಚಾನಲ್ ರಸ್ತೆ ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳಿಗೆ ಸುಧಾರಣೆಗಳನ್ನು ಮಾಡುವುದು. (ಸಾಮಾನ್ಯರಿಗೆ) | 40.00 | 80000.00 |
| 10. | **ವಾರ್ಡ್ ಸಂಖ್ಯೆ–124**ರಲ್ಲಿ ಸಾರ್ವಜನಿಕ ಶೌಚಾಲಯ ನಿರ್ವಹಣೆ ಮಾಡುವುದು. (ಸಾಮಾನ್ಯರಿಗೆ) | 5.00 | 12500.00 |
| 11. | **ವಾರ್ಡ್ ಸಂಖ್ಯೆ–124,** ಹೊಸಹಳ್ಳಿ ಕಾಲೋನಿಯ ಅಂಗನವಾಡಿ ಕಟ್ಟಡ ನಿರ್ವಹಣೆ ಮಾಡುವುದು. (ಪರಿಶಿಷ್ಟ ಜಾತಿ) | 10.00 | 12500.00 |
| 12. | **ವಾರ್ಡ್ ಸಂಖ್ಯೆ–124,** ಹೊಸಹಳ್ಳಿಯ ಟೆಲಿಕಾಮ್ ಬಡಾವಣೆ ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳನ್ನು ಸುಧಾರಣೆ ಮಾಡುವುದು. (ಪರಿಶಿಷ್ಟ ಪಂಗಡ) | 40.00 | 40000.00 |

**ಟೆಂಡರ್ ವೇಳಾಪಟ್ಟಿ:** (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್–ನಲ್ಲಿ ದಿನಾಂಕ: 07.01.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 17.01.2022ರ ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ತೆರೆಯಲಾಗುವುದು. (3) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ (ವಿಜಯನಗರ), 3ನೇ ಮುಖ್ಯರಸ್ತೆ, 1ನೇ ಮಹಡಿ, ಶಾಸಕರ ಭವನ, ವಿಜಯನಗರ, ಬೆಂಗಳೂರು – 560 040. ಇಲ್ಲಿ ದಿನಾಂಕ 13.01.2022ರ ಮಧ್ಯಾಹ್ನ 3:00 ಗಂಟೆಗೆ ನಡೆಸಲಾಗುವುದು. (4) ದ್ವಿಲಕೋಟೆ ಪದ್ಧತಿಗೆ ತಾಂತ್ರಿಕ ಬಿಡ್‌ಗಳನ್ನು & ಏಕಲಕೋಟೆ ಪದ್ಧತಿಗೆ ಆರ್ಥಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ (ವಿಜಯನಗರ) ದಿನಾಂಕ 18.01.2022ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ಸರ್ಕಾರ
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನಿಯರಿಂಗ್ ವಿಭಾಗ**
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಆ&ಕು.ಕ. ಇಂಜನಿಯರಿಂಗ್ ವಿಭಾಗ, ಫೋರ್ಟ್ ರೋಡ್, ಧಾರವಾಡ – 580 008
ದೂರವಾಣಿ ಸಂ : 0836 – 2955800 (e-mail : eehfwedvndwd@gmail.com)
ಸಂಖ್ಯೆ : ಆಕುಕ/ಇಂ.ವಿ/ಕಾ.ಅ/ಧಾ/ಸಇ–1/ಅಮೃತ ಯೋಜನೆ/ಟೆಂಡರ್–760/2021-22 ದಿನಾಂಕ : 01.01.2022
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜನಿಯರಿಂಗ್ ವಿಭಾಗ, ಧಾರವಾಡ ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ **3ನೇ ದರ್ಜೆ ಮತ್ತು ಮೇಲ್ಪಟ್ಟ** ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000 ರೀತ್ಯ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್) ಮೂಲಕ ಅಹ್ವಾನಿಸಲಾಗಿದೆ. **ಕಾಲಾವಧಿ 3 ತಿಂಗಳು** (ಮಳೆಗಾಲ ಸೇರಿದಂತೆ).

| ಕ್ರ. ಸಂ. | ಕಾಮಗಾರಿಗಳ ಹೆಸರು | ಅಂದಾಜು ಮೊತ್ತ(ರೂ. ಲಕ್ಷಗಳಲ್ಲಿ) | ಇ.ಎಂ.ಡಿ. ಮೊತ್ತ(ರೂ. ಲಕ್ಷಗಳಲ್ಲಿ) |
|---|---|---|---|
| | **ಧಾರವಾಡ ಜಿಲ್ಲೆ** | | |
| 1 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಧಾರವಾಡ ತಾಲೂಕಿನ **ಗರಗ, ಉಪ್ಪಿನಬೆಟಗೇರಿ, ಅಳ್ನಾವರ** ಹಾಗೂ **ಮುಗದ.** ಹುಬ್ಬಳ್ಳಿ ತಾಲೂಕಿನ **ಶಿರಗುಪ್ಪಿ, ನೂಲ್ವಿ, ಅರಳಿಕಟ್ಟಿ** ಹಾಗೂ **ಬ್ಯಾಹಟ್ಟಿ,** ನವಲಗುಂದ ತಾಲೂಕಿನ **ಮೊರಬ** (ಪ್ಯಾಕೇಜ್ ಸಂ. 6) | 180.00 | 2.70 |
| 2 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಕಲಘಟಗಿ ತಾಲೂಕಿನ **ಗಂಜಿಗಟ್ಟಿ, ಮುಕ್ಕಲ, ಬಮ್ಮಿಗಟ್ಟಿ** ಹಾಗೂ **ಸಂಗಮೇಶ್ವರ,** ನವಲಗುಂದ ತಾಲೂಕಿನ **ಅಳಗವಾಡಿ, ಜಾವೂರ** ಹಾಗೂ **ಅಣ್ಣಿಗೇರಿ,** ಕುಂದಗೋಳ ತಾಲೂಕಿನ **ಇಂಗಳಗಿ** ಹಾಗೂ **ಗುಡಗೇರಿ** (ಪ್ಯಾಕೇಜ್ ಸಂ. 7) | 180.00 | 2.70 |
| | **ಗದಗ ಜಿಲ್ಲೆ** | | |
| 3 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಗದಗ ತಾಲೂಕಿನ **ಲಕ್ಕುಂಡಿ, ಹುಯಿಲಗೋಳ, ಹೊಂಬಳ, ನಾಗಾವಿ, ಹೊರ್ತಿ** ಹಾಗೂ **ಕುರ್ತಕೋಟಿ,** ಮುಂಡರಗಿ ತಾಲೂಕಿನ **ಖಿದಂಪೂರ, ಬಾಗೇವಾಡಿ** ಹಾಗೂ **ಹಮ್ಮಗಿ** (ಪ್ಯಾಕೇಜ್ ಸಂ. 6) | 180.00 | 2.70 |
| 4 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ರೋಣ ತಾಲೂಕಿನ **ಮುಷಗಿರಿ, ಸೂಡಿ, ಸವದಿ, ಯಾವಗಲ್** ಹಾಗೂ **ಅಬ್ಬಿಗೇರಿ,** ನರಗುಂದ ತಾಲೂಕಿನ **ಶಿರೋಳ,** ಮುಂಡರಗಿ ತಾಲೂಕಿನ **ಬೆಳ್ಳಟ್ಟಿ, ಯಳವತ್ತಿ ಹಾಗೂ ಕಲಕೇರಿ** (ಪ್ಯಾಕೇಜ್ ಸಂ. 7) | 180.00 | 2.70 |
| | **ಹಾವೇರಿ ಜಿಲ್ಲೆ** | | |
| 5 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಹಾವೇರಿ ತಾಲೂಕಿನ **ದೇವಗಿರಿ, ಕರ್ಜಗಿ** ಹಾಗೂ **ಮೇವುಂಡಿ,** ಶಿಗ್ಗಾಂವ ತಾಲೂಕಿನ **ಹಿರೇಬೆಂಡಿಗೇರಿ** ಹಾಗೂ **ಚಂದಾಪೂರ,** ಸವಣೂರ ತಾಲೂಕಿನ **ಹತ್ತಿಮತ್ತೂರ, ಯಲವಗಿ** ಹಾಗೂ **ತಾವರಮಲಹಳ್ಳಿ** ಬ್ಯಾಡಗಿ ತಾಲೂಕಿನ **ಚಿಕ್ಕಬಾಸೂರ** (ಪ್ಯಾಕೇಜ್ ಸಂ. 6) | 180.00 | 2.70 |
| 6 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ರಾಣೆಬೆನ್ನೂರ ತಾಲೂಕಿನ **ಸುಂಕಲಬಿದರಿ** ಹಾಗೂ **ತುಮ್ಮಿನಕಟ್ಟಿ** ಹಾನಗಲ್ ತಾಲೂಕಿನ **ಬೆಳಗಾಲಪೇಠ, ಚಿಕ್ಕಹುಣಸಿ–ಹೊಸೂರ** ಹಾಗೂ **ಶೇಷಗಿರಿ** ಹಿರೆಕೇರೂರ ತಾಲೂಕಿನ **ಚಿಕ್ಕೇರೂರ** ಹಾಗೂ **ಮಡ್ಲೂರ** ರಟ್ಟಿಹಳ್ಳಿ ತಾಲೂಕಿನ **ಹಳ್ಳೂರ** ಹಾಗೂ **ಕಡೂರ** (ಪ್ಯಾಕೇಜ್ ಸಂ. 7) | 180.00 | 2.70 |
| | **ಉತ್ತರ ಕನ್ನಡ ಜಿಲ್ಲೆ** | | |
| 7 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಸಿದ್ದಾಪೂರ ತಾಲೂಕಿನ **ಬಿಳಗಿ** ಹಾಗೂ **ಕೋಲಸಿರ್ಸಿ** ಮುಂಡಗೋಡ ತಾಲೂಕಿನ **ಹುಣದುಂದ** ಶಿರಸಿ ತಾಲೂಕಿನ **ಬನವಾಸಿ, ಮೆಣಸಿ** ಹಾಗೂ **ಸಲಕಣಿ** ಯಲ್ಲಾಪೂರ ತಾಲೂಕಿನ **ಕುಂದರಗಿ** ಹಳಿಯಾಳ ತಾಲೂಕಿನ **ಬೆಳವಟಗಿ** ಹಾಗೂ **ಭಗವತಿ** (ಪ್ಯಾಕೇಜ್ ಸಂ. 6) | 180.00 | 2.70 |
| 8 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಭಟ್ಕಳ ತಾಲೂಕಿನ **ಬೈಲೂರ** ಹಾಗೂ **ಮುರಡೇಶ್ವರ** ಹೊನ್ನಾವರ ತಾಲೂಕಿನ **ಹಳದಿಪೂರ, ಸಲಕೋಡ** ಹಾಗೂ **ಗೇರುಸೊಪ್ಪ** ಅಂಕೋಲಾ ತಾಲೂಕಿನ **ಹತ್ತಿಕೇರಿ,** ಕುಮಟಾ ತಾಲೂಕಿನ **ಬನಕೊಡ್ಲು** ಹಾಗೂ **ಕಾಗಲ,** ಕಾರವಾರ ತಾಲೂಕಿನ **ಹಲಗ** (ಪ್ಯಾಕೇಜ್ ಸಂ. 7) | 180.00 | 2.70 |
| | **ಬೆಳಗಾವಿ ಜಿಲ್ಲೆ** | | |
| 9 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಅಥಣಿ ತಾಲೂಕಿನ **ಕಕಮರಿ,** ಬೆಳಗಾವಿ ತಾಲೂಕಿನ **ವಡಗಾಂವ** ಹಾಗೂ **ಉಚಗಾಂವ,** ಗೋಕಾಕ ತಾಲೂಕಿನ **ಮಮದಾಪೂರ** ಹಾಗೂ **ಶಿಂಧಿಕುರಬೇಟ್** ಹುಕ್ಕೇರಿ ತಾಲೂಕಿನ **ನೋಗಿನಹಾಳ, ಹುಳ್ಳೊಳ್ಳಿ, ಬುಗಟೆಆಲೂರ** ಹಾಗೂ **ಅರ್ಜುನವಾಡ** (ಪ್ಯಾಕೇಜ್ ಸಂ.6) | 180.00 | 2.70 |
| 10 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಚಿಕ್ಕೋಡಿ ತಾಲೂಕಿನ **ಯಡೂರ,** ಖಾನಾಪೂರ ತಾಲೂಕಿನ **ಗಣೇಬೈಲ್,** ಮೂಡಲಗಿ ತಾಲೂಕಿನ **ತುಕ್ಕನಟ್ಟಿ,** ರಾಯಬಾಗ ತಾಲೂಕಿನ **ನಸಲಾಪೂರ, ಹಿಡಕಲ್, ಸುರೇಬಾನ** ಹಾಗೂ **ಕಟಕೋಳ,** ಸವದತ್ತಿ ತಾಲೂಕಿನ **ಇನಾಂಹೊಂಗಲ** ಹಾಗೂ **ಮುನವಳ್ಳಿ** (ಪ್ಯಾಕೇಜ್ ಸಂ. 7) | 180.00 | 2.70 |
| | **ವಿಜಯಪೂರ ಜಿಲ್ಲೆ** | | |
| 11 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ವಿಜಯಪೂರ ತಾಲೂಕಿನ **ಹೊನ್ನೂಟಗಿ, ಹೊನವಾಡ** ಹಾಗೂ **ಕನಮಡಿ** ಬಿ.ಬಾಗೇವಾಡಿ ತಾಲೂಕಿನ **ಮನಗೂಳಿ, ಮುಳವಾಡ, ರೋಣಿಹಾಳ** ಹಾಗೂ **ಗೊಳಸಂಗಿ,** ಮುದ್ದೇಬಿಹಾಳ ತಾಲೂಕಿನ **ಕೊಣ್ಣೂರ** ಹಾಗೂ **ಕರಗಿನೂರ** (ಪ್ಯಾಕೇಜ್ ಸಂ. 6) | 180.00 | 2.70 |
| 12 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಮುದ್ದೇಬಿಹಾಳ ತಾಲೂಕಿನ **ಮದಿಕೇಶ್ವರ,** ಇಂಡಿ ತಾಲೂಕಿನ **ಅಥರ್ಗ, ಇಂಚಗೇರಿ, ತಾಂಬಾ** ಹಾಗೂ **ಲಚ್ಯಾಣ,** ಸಿಂಧಗಿ ತಾಲೂಕಿನ **ಮಲಗಾನ, ಅಸ್ಕಿ, ಕೊರವಾರ** ಹಾಗೂ **ಬಳಗಾನೂರ** (ಪ್ಯಾಕೇಜ್ ಸಂ. 7) | 180.00 | 2.70 |
| | **ಬಾಗಲಕೋಟೆ ಜಿಲ್ಲೆ** | | |
| 13 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಬಾಗಲಕೋಟೆ ತಾಲೂಕಿನ **ಕಲಾದಗಿ,** ಬದಾಮಿ ತಾಲೂಕಿನ **ಹಲಕುರ್ಕಿ, ಪಟ್ಟದಕಲ್ಲು** ಹಾಗೂ **ಕಕನೂರ,** ಬೀಳಗಿ ತಾಲೂಕಿನ **ಗಳಗಲಿ,** ಹುನಗುಂದ ತಾಲೂಕಿನ **ಮರೋಳ, ಹಿರೆಸಿಂಗನಗುತ್ತಿ** ಹಾಗೂ **ಅಮ್ಮೀನಗಡ,** ಮುಧೋಳ ತಾಲೂಕಿನ **ಮಳಲಿ** (ಪ್ಯಾಕೇಜ್ ಸಂ. 6) | 180.00 | 2.70 |
| 14 | 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಮುಧೋಳ ತಾಲೂಕಿನ **ಮೆಟಗುಡ್ಡ** ಹಾಗೂ **ಉತ್ತೂರ,** ಜಮಖಂಡಿ ತಾಲೂಕಿನ **ಗೋಠೆ, ಲಿಂಗನೂರ, ಚಿಕ್ಕಲಿಗಿ ಕ್ರಾಸ್, ಸಾವಳಗಿ, ಕೊನ್ನೂರ, ಹಿಪ್ಪರಗಿ** ಹಾಗೂ **ಚಿಮ್ಮಡ** (ಪ್ಯಾಕೇಜ್ ಸಂ. 7) | 180.00 | 2.70 |

ಟೆಂಡರ್ ಪ್ರಕಿಯೆಯ ದಿನಾಂಕಗಳು ಮತ್ತು ಇತರೇ ವಿವರಗಳು :–
- ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **10.01.2022** ಸಂಜೆ 17.30 ಘಂಟೆಯವರೆಗೆ
- ಟೆಂಡರ್ ತೆರಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : **12.01.2022** ಅಪರಾಹ್ನ 11.00 ಘಂಟೆಗೆ

ಟೆಂಡರ್‌ಗಳ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurment Platform) www.eproc.karnataka.gov.in ದಿಂದ ಡೌನಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್‌ಗಳ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurment Platform) ನೋಂದಾಯಿಸುವ ಅಗತ್ಯ ಇದೆ.
**ಸೂಚನೆ:** (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಆ.&ಕು.ಕ.ಇ. ಇಂಜನೀಯರಿಂಗ್ ವಿಭಾಗ, ಧಾರವಾಡ.
ವಾಸಾಸಂಇ/ಧಾರವಾಡ/ಎಂಸಿಎ/821/2021–22

ನಗರದ ಬನಶಂಕರಿ ದೇವಾಲಯದ ಆವರಣದಲ್ಲಿ ಹೊಸ ವರ್ಷದ ಅಂಗವಾಗಿ ಶನಿವಾರ ದರ್ಶನಕ್ಕೆ ಬಂದಿದ್ದ ಭಕ್ತಾದಿಗಳು ಸಾಲುಗಟ್ಟಿ ನಿಂತಿದ್ದರು (ಎಡಚಿತ್ರ), ಸ್ಯಾಟಲೈಟ್ ಬಸ್ ನಿಲ್ದಾಣ ಬಳಿಯ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಪೂಜೆ ಸಲ್ಲಿಸಲು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದರು – ಪ್ರಜಾವಾಣಿ ಚಿತ್ರಗಳು

### ಅಗತ್ಯ ಅನುದಾನ ಲಭ್ಯ ಇಲ್ಲದಿದ್ದರೂ ₹ 12.40 ಕೋಟಿ ಮೊತ್ತಕ್ಕೆ ಟೆಂಡರ್

# ಜೆಟ್ ಕ್ಲೀನರ್ ಖರೀದಿ ಟೆಂಡರ್‌ನಲ್ಲಿ ಅಕ್ರಮ?

• ಪ್ರವೀಣ್ ಕುಮಾರ್ ಪಿ.ವಿ.

**ಬೆಂಗಳೂರು:** ನಗರದ ಕೇಂದ್ರ ವಾಣಿಜ್ಯ ಪ್ರದೇಶದ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಸ್ವಚ್ಛತೆ ಕಾಪಾಡಲು ಐದು ಪ್ರೆಷರ್ ಜೆಟ್ ಕ್ಲೀನರ್/ ವಾಷರ್ ಯಂತ್ರಗಳನ್ನು ಖರೀದಿಸುತ್ತಿದ್ದು, ಇದರ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಆಕ್ಷೇಪ ವ್ಯಕ್ತವಾಗಿದೆ.

ಯೋಜನೆಯ ಅನುಷ್ಠಾನಕ್ಕೆ ಅಗತ್ಯ-ವಿರುವಷ್ಟು ಅನುದಾನ ಇಲ್ಲದೆಯೇ ಟೆಂಡರ್ ಕರೆಯಲಾಗಿದೆ. ಯಂತ್ರಕ್ಕೆ ಮಾರುಕಟ್ಟೆ ದರಕ್ಕಿಂತ ಮೂರು ಪಟ್ಟು ಹೆಚ್ಚು ಮೊತ್ತ ನೀಡಲು ಪ್ರಸ್ತಾವ ಸಲ್ಲಿಸಲಾಗಿದೆ. ಅರ್ಹತೆ ಹೊಂದಿಲ್ಲದ ಗುತ್ತಿಗೆದಾರರಿಗೆ ಟೆಂಡರ್ ನೀಡಲು ತಯಾರಿ ನಡೆದಿದೆ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ನಗರದ ಕೇಂದ್ರ ವಾಣಿಜ್ಯ ಪ್ರದೇಶದ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ ಸ್ವಚ್ಛತೆ ಕಾಪಾಡುವ ₹12.40 ಕೋಟಿ ವೆಚ್ಚದ ಯೋಜನೆಗೆ ಬಿಬಿಎಂಪಿ 2021ರ ಜೂನ್ 10ರಂದು ಟೆಂಡರ್ ಆಹ್ವಾನಿಸಿತ್ತು. ಟೆಂಡರ್ ಸಲ್ಲಿಕೆಗೆ ಜುಲೈ 13 ಕೊನೆಯ ದಿನ ವಾಗಿತ್ತು. ಜುಲೈ 22ರಂದು ನಡೆದ ತಾಂತ್ರಿಕ ಮೌಲ್ಯಮಾಪನದಲ್ಲಿ ಮೂವರು ಗುತ್ತಿಗೆದಾರರು ಅರ್ಹತೆ ಗಳಿಸಿದ್ದರು. ಸೆ.22ರಂದು ಆರ್ಥಿಕ ಬಿಡ್ ತೆರೆಯಲಾಗಿದ್ದು, ಗುತ್ತಿಗೆದಾರ ಎ.ಎಲ್. ಸತೀಶ್ ಕುಮಾರ್ ಅತಿ ಕಡಿಮೆ ದರ (₹ 9.29 ಕೋಟಿ) ನಮೂದಿಸಿದ್ದರು.

ಪ್ರಜಾವಾಣಿ ವಿಶೇಷ

ಟೆಂಡರ್ ಮೊತ್ತಕ್ಕಿಂತ ಶೇ 24.67ರಷ್ಟು ಕಡಿಮೆ ದರ ನಮೂದಿಸಿದ್ದ ಅವರಿಗೆ ಗುತ್ತಿಗೆ ನೀಡುವುದಕ್ಕೆ ಅನುಮೋದನೆ ಕೋರಿ ಬಿಬಿ ಎಂಪಿಯು ಅಧಿಕಾರಯುಕ್ತ ಸಮಿತಿಗೆ ಪ್ರಸ್ತಾವನೆ ಸಲ್ಲಿಸಿದೆ

ಬಿಬಿಎಂಪಿಯು 2019ನೇ ಸಾಲಿನ 'ಶುಭ್ರ ಬೆಂಗಳೂರು' ಯೋಜನೆಯಡಿ ಈ ಯಂತ್ರಗಳನ್ನು ಖರೀದಿ ಮಾಡುತ್ತಿದೆ. ಈ ಯೋಜನೆಯಡಿ ₹ 5 ಕೋಟಿಯಷ್ಟೇ ಲಭ್ಯವಿದ್ದರೂ ₹ 12.40 ಕೋಟಿ ವೆಚ್ಚಕ್ಕೆ ಟೆಂಡರ್ ಕರೆಯಲಾಗಿದೆ. ಈ ಟೆಂಡರ್ ಅನುಷ್ಠಾನಕ್ಕೆ (ಯಂತ್ರಗಳ ಖರೀದಿ ಮತ್ತು ಮೂರು ವರ್ಷ ಕಾರ್ಯಾಚರಣೆ, ನಿರ್ವಹಣೆ) ತಗಲುವ ₹ 7.40 ಕೋಟಿ ವ್ಯತ್ಯಾಸದ ಮೊತ್ತವನ್ನು ಪಾಲಿಕೆಯ ಆಯಾ ವರ್ಷಗಳ ಬಜೆಟ್ ಅನುದಾನದಲ್ಲಿ ಮರುಹೊಂದಾಣಿಕೆ ಮಾಡುವುದಾಗಿ ಬಿಬಿಎಂಪಿ ಹೇಳಿದೆ.

'ಅನುದಾನವೇ ಲಭ್ಯವಿಲ್ಲದಿದ್ದರೂ ಇಷ್ಟು ಮೊತ್ತಕ್ಕೆ ಟೆಂಡರ್ ಆಹ್ವಾನಿಸಿರುವುದು ಸರಿಯಲ್ಲ. ವ್ಯತ್ಯಾಸದ ಮೊತ್ತವನ್ನು ಬಿಬಿಎಂಪಿ ಅನುದಾನದಲ್ಲಿ ಭರಿಸುವುದಕ್ಕೂ ಕೌನ್ಸಿಲ್, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಥವಾ ಆಡಳಿತಾಧಿಕಾರಿ ಅನುಮೋದನೆ ಅಗತ್ಯ. ಅನುಮೋದನೆ ಪಡೆಯದೆಯೇ ಪಾಲಿಕೆ ಹಣವನ್ನು ವೆಚ್ಚ ಮಾಡಲು ಪ್ರಸ್ತಾವ ಸಲ್ಲಿಸಿರುವುದು ನಿಯಮಬಾಹಿರ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ತಿಳಿಸಿದರು.

'ಶುಭ್ರ ಬೆಂಗಳೂರು ಯೋಜನೆ ಅನುದಾನವನ್ನು ಯಂತ್ರಗಳ ಖರೀದಿಗಷ್ಟೇ ಬಳಸಲಾಗುತ್ತದೆ. ಆದರೆ, ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಬಿಬಿಎಂಪಿ ಅನುದಾನ ಬಳಸುತ್ತೇವೆ. ಇದಕ್ಕೆ ಮುಖ್ಯ ಆಯುಕ್ತರಿಂದ ಅನುಮೋದನೆ ಪಡೆದಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ಕಸ ನಿರ್ವಹಣೆ) ಬಸವರಾಜ ಕಬಾಡೆ 'ಪ್ರಜಾವಾಣಿ'ಗೆ ತಿಳಿಸಿದರು.

#### ಅರ್ಹರಲ್ಲದ ಗುತ್ತಿಗೆದಾರರಿಗೆ ಟೆಂಡರ್?

ಟೆಂಡರ್ ನಿಯಮಗಳ ಪ್ರಕಾರ, ಬಿಡ್‌ದಾರರು ಕನಿಷ್ಠ ನಾಲ್ಕು ಪ್ರೆಷರ್‌ಜೆಟ್ ಕ್ಲೀನರ್ ಯಂತ್ರಗಳನ್ನು ಈ ಹಿಂದೆ ಸರಬರಾಜು ಮಾಡಿರಬೇಕು. ಗುತ್ತಿಗೆದಾರ ಎ.ಎಲ್. ಸತೀಶ್ ಕುಮಾರ್ ಒಂದೂ ಯಂತ್ರವನ್ನೂ ಯಾರಿಗೂ ಸರಬರಾಜು ಮಾಡಿಲ್ಲ, ನಿರ್ವಹಣೆಯನ್ನೂ ಮಾಡಿಲ್ಲ. ಅವರು 'ಕ್ವಾಲಿಟಿ ಎನ್‌ವಿರೊ ಎಂಜಿನಿಯರ್ಸ್' ಸಂಸ್ಥೆಯಿಂದ ಈ ಯಂತ್ರಗಳನ್ನು ಖರೀದಿಸುತ್ತಿದ್ದಾರಷ್ಟೇ. ಈ ಸಂಸ್ಥೆ ದೆಹಲಿಯ ಪಾಲಿಕೆಗೆ ಈ ಯಂತ್ರವನ್ನು ಪೂರೈಸಿರುವ ಅನುಭವವನ್ನೇ ಬಿಡ್‌ದಾರರ ಅರ್ಹತೆ ಎಂದು ಪರಿಗಣಿಸಿರುವುದು ಸರಿಯಲ್ಲ. ಪೂರ್ವಾನುಭವವಿಲ್ಲದ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡಲು ಟೆಂಡರ್ ನಿಯಮಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಲಾಗಿದೆ ಎಂಬ ಟೀಕೆ ವ್ಯಕ್ತವಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಬಿಡ್‌ದಾರರು ಈಚಿನ ಐದು ವರ್ಷಗಳಲ್ಲಿ ಕನಿಷ್ಠ ಮೂರು ವರ್ಷ ₹ 13.86 ಕೋಟಿ ವಾರ್ಷಿಕ ವಹಿವಾಟು ಹೊಂದಿರಬೇಕು. ಬಿಡ್‌ದಾರರು ಯಂತ್ರದ ಅಧಿಕೃತ ಮಾರಾಟಗಾರ/ ಪೂರೈಕೆದಾರ ಆಗಿದ್ದಲ್ಲಿ ಐದು ವರ್ಷಗಳಲ್ಲಿ ಕನಿಷ್ಠ ಮೂರು ವರ್ಷ ವಾರ್ಷಿಕ ವಹಿವಾಟು ₹ 6.93 ಕೋಟಿಗಿಂತ ಹೆಚ್ಚು ಇರಬೇಕು. ಎ.ಎಲ್.ಅನಿಲ್ ಕುಮಾರ್ ಅವರು 'ಕ್ವಾಲಿಟಿ ಎನ್‌ವಿರೊ ಎಂಜಿನಿಯರ್ಸ್' ಸಂಸ್ಥೆಯ ಅಧಿಕೃತ ಮಾರಾಟಗಾರ/ ಪೂರೈಕೆದಾರ ಅಲ್ಲ. 2015ರಿಂದ 2020ರ ಅವಧಿಯಲ್ಲಿ ಅವರ ವಾರ್ಷಿಕ ವಹಿವಾಟು ಒಂದು ಬಾರಿ ಮಾತ್ರ ₹ 13.86 ಕೋಟಿಗಿಂತ ಹೆಚ್ಚು ಇದೆ. ಅವರು ಸಂಸ್ಥೆಯಿಂದ ಪಡೆದಿದ್ದಾಗಿ ಸಲ್ಲಿಸಿರುವ ದಾಖಲೆ ತಿದ್ದಿರುವ ಸಂದೇಹವೂ ಇದೆ. ತನಿಖೆಯಾದರೆ ಸತ್ಯತಿಳಿಯಲಿದೆ' ಎಂದು ಮೂಲಗಳು ತಿಳಿಸಿವೆ.

#### ಮಾರುಕಟ್ಟೆ ದರಕ್ಕಿಂತ ಹೆಚ್ಚು ಮೊತ್ತಕ್ಕೆ ಖರೀದಿ?

ಬಿಬಿಎಂಪಿಯು ಅಧಿಕಾರಯುಕ್ತ ಸಮಿತಿ ಮುಂದೆ ಸಲ್ಲಿಸಿರುವ ಪ್ರಸ್ತಾವನೆ ಪ್ರಕಾರ 'ಕ್ವಾಲಿಟಿ ಎನ್‌ವಿರೋ ಎಂಜಿನಿಯರ್ಸ್' ಸಂಸ್ಥೆಯಿಂದ ಪ್ರೆಷರ್ ಜೆಟ್ ಕ್ಲೀನರ್ಸ್/ ವಾಷರ್ಸ್ ಯಂತ್ರ ಖರೀದಿಸಲಾಗುತ್ತಿದೆ. ಈ ಸಂಸ್ಥೆಯು ಮಾರುಕಟ್ಟೆಯಲ್ಲಿ ₹ 28.9 ಲಕ್ಷ ದರಕ್ಕೆ ಯಂತ್ರವನ್ನು ಪೂರೈಸುತ್ತಿದೆ. ಆದರೂ, ಅದಕ್ಕೆ ₹ 88 ಲಕ್ಷ ವೆಚ್ಚದಲ್ಲಿ ಖರೀದಿ ಮಾಡಲು ಪ್ರಸ್ತಾಪಿಸಲಾಗಿದೆ.

ಅಲ್ಲದೇ ಈ ಯಂತ್ರದ ನಿರ್ವಹಣೆ ವೆಚ್ಚವು ವಾರ್ಷಿಕ ಶೇ 8ರಷ್ಟು ಹೆಚ್ಚು ಆಗುವಂತೆ, (ಅಂದರೆ ಮೊದಲ ವರ್ಷಕ್ಕೆ ₹ 29.12 ಲಕ್ಷ, ಎರಡನೇ ವರ್ಷಕ್ಕೆ ₹ 33.72 ಲಕ್ಷ ಹಾಗೂ ಮೂರನೇ ವರ್ಷಕ್ಕೆ ₹ 35.09 ಲಕ್ಷ) ಪ್ರಸ್ತಾಪಿಸಲಾಗಿದೆ. ಇದೇ ಸಂಸ್ಥೆಯು ನವದೆಹಲಿಯಲ್ಲಿ ಟ್ರಕ್ ಮೌಂಟೆಡ್ ವಾಟರ್ ಸ್ಪ್ರಿಂಕ್ಲರ್ ಸೇವೆಗೆ ವಾರ್ಷಿಕ ₹ 8.7 ಲಕ್ಷ ಮಾತ್ರ ಪಡೆಯುತ್ತಿದೆ.

# ಜೈಲಿನಲ್ಲಿದ್ದ ಕೈದಿಗಳಿಗೆ ಗಾಂಜಾ ಕೊರಿಯರ್: ಠಾಣೆಗೆ ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೈಲಿನಲ್ಲಿದ್ದ ಇಬ್ಬರು ವಿಚಾರಣಾಧೀನ ಕೈದಿಗಳಿಗೆ ಅಪರಿಚಿತ ವ್ಯಕ್ತಿಗಳು ಕೊರಿಯರ್ ಮೂಲಕ ಗಾಂಜಾ ಕಳುಹಿಸಿದ್ದು, ಈ ಬಗ್ಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಯೊಬ್ಬರು ಸ್ಥಳೀಯ ಠಾಣೆಗೆ ದೂರು ನೀಡಿದ್ದಾರೆ.

'2021ರ ಡಿ. 25ರಂದು ವಿಚಾರಣಾಧೀನ ಕೈದಿಗಳಾದ ಕರಿಯಪ್ಪ ಹಾಗೂ ಅಭಿಷೇಕ್ ಎಂಬುವರ ಹೆಸರಿಗೆ ಪಾರ್ಸೆಲ್ ಬಂದಿತ್ತು. ಅಂಚೆ ಸಿಬ್ಬಂದಿಯೊಬ್ಬರು ಕಾರಾಗೃಹದ ಮುಖ್ಯ ದ್ವಾರದ ಬಳಿ ಕರ್ತವ್ಯ-ದಲ್ಲಿದ್ದ ಸಿಬ್ಬಂದಿಗೆ ಅವುಗಳನ್ನು ತಲುಪಿಸಿ ಹೋಗಿದ್ದರು. ಅನುಮಾನ ಮೂಡಿದ್ದರಿಂದ ಅವುಗಳನ್ನು ತೆರೆದು ನೋಡಲಾಗಿತ್ತು. ಕರಿಯಪ್ಪ ಹೆಸರಿಗೆ ಬಂದಿದ್ದ ಪಾರ್ಸೆಲ್‌ನಲ್ಲಿ 10 ಗ್ರಾಂ ಹಾಗೂ ಅಭಿಷೇಕ್ ಹೆಸರಿಗೆ ಬಂದಿದ್ದ ಪಾರ್ಸೆಲ್‌ನಲ್ಲಿ 150 ಗ್ರಾಂ ಗಾಂಜಾ ಪತ್ತೆಯಾಗಿತ್ತು ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ಇಬ್ಬರು ಕೈದಿಗಳನ್ನೂ ವಿಚಾರಣೆಗೆ ಒಳಪಡಿಸಿ ಗಾಂಜಾ ಕಳುಹಿಸಿರುವವರ ಬಗ್ಗೆ ಮಾಹಿತಿ ಪಡೆಯಲು ಪ್ರಯತ್ನಿಸಿದ್ದೆವು. ಅವರು ನಮ್ಮ ಪ್ರಶ್ನೆಗಳಿಗೆ ಸಮಂಜಸ ಉತ್ತರ ನೀಡಲಿಲ್ಲ ಎಂದೂ ದೂರಿನಲ್ಲಿ ಹೇಳಲಾಗಿದೆ. ಆರೋಪಿಗಳು ಸಿಸಿಟಿವಿ ಕ್ಯಾಮೆರಾಗಳಿಲ್ಲದ ಅಂಚೆ ಕಚೇರಿ ಗುರುತಿಸಿ ಅಲ್ಲಿಂದ ಗಾಂಜಾ ಕೊರಿಯರ್ ಮಾಡಿರುವ ಸಾಧ್ಯತೆ ಇದೆ' ಎಂದು ಹೇಳಿದರು.

#### ಪೆಡ್ಲರ್ ಜೊತೆ ನಂಟು ಆರೋಪ ಮುಖ್ಯ ಕಾನ್‌ಸ್ಟೆಬಲ್ ಅಮಾನತು

ಡ್ರಗ್ ಪೆಡ್ಲರ್ ಜೊತೆ ನಂಟು ಹೊಂದಿದ್ದ ಆರೋಪದಡಿ ಸಿದ್ದಾಪುರ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಮುಖ್ಯ ಕಾನ್‌ಸ್ಟೆಬಲ್ ರೆಹಮಾನ್ ಎಂಬುವರನ್ನು ಅಮಾನತು ಮಾಡಲಾಗಿದೆ.

'ಬೇರೆ ರಾಜ್ಯಗಳಿಂದ ಮಾದಕ ವಸ್ತು ತಂದು ನಗರದಲ್ಲಿ ಮಾರಲು ಯತ್ನಿಸಿದ್ದ ಸನಾವುಲ್ಲಾ ಎಂಬಾತನನ್ನು ಬಂಧಿಸಿ ವಿಚಾರಣೆ ನಡೆಸಲಾಗಿತ್ತು. ಈ ವೇಳೆ ಆತ ರೆಹಮಾನ್ ಹೆಸರು ಬಾಯ್ಬಿಟ್ಟಿದ್ದ. ಅವರ ಮೊಬೈಲ್ ವಶಕ್ಕೆ ಪಡೆದು ಪರಿಶೀಲಿಸಲಾಗಿತ್ತು. ಆರೋಪಿಗಳ ಜೊತೆಗೆ ಕಾನ್‌ಸ್ಟೆಬಲ್ ನಿರಂತರ ಸಂಪರ್ಕದಲ್ಲಿರುವುದು ಮೊಬೈಲ್ ಕರೆಗಳ ದಾಖಲೆಯಿಂದ ದೃಢಪಟ್ಟಿತ್ತು. ಈ ಬಗ್ಗೆ ಠಾಣೆಯ ಇನ್‌ಸ್ಪೆಕ್ಟರ್ ನೀಡಿದ ವರದಿ ಆಧರಿಸಿ ಅಮಾನತು ಮಾಡಲಾಗಿದೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಹೇಳಿದ್ದಾರೆ.

# ಪೊಲೀಸರ ಮೇಲೆ ಹಲ್ಲೆ 8 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** ತಾಲ್ಲೂಕಿನ ಚೀಡ-ಚಿಕ್ಕನಹಳ್ಳಿ ಬಳಿಯ ಹೋಂ ಸ್ಟೇಯಲ್ಲಿ ಶುಕ್ರವಾರ ವರ್ಷಾಚರಣೆ ವೇಳೆ ಶುಕ್ರವಾರ ರಾತ್ರಿ ಪೊಲೀಸರ ಮೇಲೆ ಹಲ್ಲೆ ನಡೆಸಿದ ಎಂಟು ಮಂದಿಯನ್ನು ನಂದಿಗಿರಿಧಾಮ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ರಘುವಂಶ್ ಸಿಂಗ್, ಅಕ್ಷಯ್ ಬಜಾಜ್, ತೇಜಸ್, ಆಕಾಶ್, ಆದಿತ್ಯ, ಚಿರಾಗ್, ಸೂರಜ್, ಅರ್ಜುನ್ ಬಂಧಿತರು.

ಆರೋಪಿಗಳು ಮದ್ಯ ಸೇವಿಸುತ್ತಿದ್ದು, ಡಿ.ಜೆ ಬಳಸಿ ನೃತ್ಯಮಾ-ಡುತ್ತಿದ್ದರು. ಪ್ರಶ್ನಿಸಿದ್ದ ಪೊಲೀಸರಿಗೆ ಅವಾಚ್ಯವಾಗಿ ನಿಂದಿಸಿದ್ದು, ಕಾನ್‌ಸ್ಟೆಬಲ್ ಶೇಖರ್ ಅವರನ್ನು ಹಿಡಿದು ಎಳೆದಾಡಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಹೋಂ ಸ್ಟೇ ಮಾಲೀಕ ಮತ್ತು ಎಂಟು ಮಂದಿ ವಿರುದ್ಧ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಪ್ರಕರಣ ದಾಖಲಾಗಿದೆ. 'ಅವರ ವಿರುದ್ಧ ಕ್ರಮ ಜರುಗಿಸುತ್ತೇವೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ತಿಳಿಸಿದರು.

#### ನಗರದ ಯುವಕ ಧರ್ಮಸ್ಥಳದಲ್ಲಿ ಸಾವು

**ಉಜಿರೆ:** ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ಬಂದಿದ್ದ ಯುವಕನೊಬ್ಬ, ಸ್ನಾನಘಟ್ಟದ ಬಳಿ ನೇತ್ರಾವತಿ ನದಿಯಲ್ಲಿ ಸ್ನಾನಕ್ಕೆ ಇಳಿದಾಗ, ಆಯತಪ್ಪಿ ನೀರಿಗೆ ಬಿದ್ದು ಮೃತಪಟ್ಟಿದ್ದಾರೆ.

ಬೆಂಗಳೂರಿನ ಹೆಬ್ಬಾಳ ನಿವಾಸಿ ರಾಜು. ಕೆ (31) ಮೃತ ಯುವಕ. ಹತ್ತು ಮಂದಿ ಯುವಕರ ತಂಡದೊಂದಿಗೆ ರಾಜು ಶನಿವಾರ ಧರ್ಮಸ್ಥಳಕ್ಕೆ ಬಂದಿದ್ದರು.

ಈ ಸಂಬಂಧ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಕಾರಿನಲ್ಲಿ ವಿವಿಧೆಡೆ ಸುತ್ತಾಡಿಸಿ ₹20 ಲಕ್ಷಕ್ಕೆ ಬೇಡಿಕೆ

# ಪೊಲೀಸರ ಸೋಗಿನಲ್ಲಿ ಮನೆಗೆ ನುಗ್ಗಿ ₹19 ಲಕ್ಷ ಕಳವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಪೊಲೀಸರ ಸೋಗಿನಲ್ಲಿ ಮನೆಗೆ ನುಗ್ಗಿದ ಐವರು ದುಷ್ಕರ್ಮಿಗಳು ₹19 ಲಕ್ಷ ನಗದು ಹಾಗೂ 500 ಗ್ರಾಂ ಚಿನ್ನದ ಆಭರಣಗಳನ್ನು ದೋಚಿದ್ದಾರೆ. ಬಳಿಕ ಮನೆಯಲ್ಲಿದ್ದ ಇಬ್ಬರನ್ನು ಕಾರಿನಲ್ಲಿ ಸುತ್ತಾಡಿಸಿ ₹20 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದು, ಅಷ್ಟು ಮೊತ್ತ ಕೊಡಲು ಒಪ್ಪದಿದ್ದಾಗ ನಗರದ ಸ್ಥಳವೊಂದರಲ್ಲಿ ಬಿಟ್ಟು ಪರಾರಿಯಾಗಿದ್ದಾರೆ. ಈ ಸಂಬಂಧ ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಹಾಲಕ್ಷ್ಮಿಪುರ 2ನೇ ಹಂತದ 15ನೇ ಡಿ ಕ್ರಾಸ್‌ನಲ್ಲಿ ವಾಸವಿದ್ದ ಸಿವಿಲ್ ಎಂಜಿನಿಯರ್ ಡಿ.ಸಾಮ್ಯಾ ನಾಯ್ಕ್ ತಮ್ಮ ಮನೆಯಲ್ಲಿ ಕಳವು ಆಗಿರುವ ಬಗ್ಗೆ ದೂರು ನೀಡಿದ್ದು, ತನಿಖೆ ನಡೆಸುತ್ತಿದ್ದೇವೆ' ಎಂದು ಪೊಲೀಸರು ಹೇಳಿದ್ದಾರೆ.

'ಡಿ. 31ರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಪತ್ನಿ ಜೊತೆ ಮನೆಯಲ್ಲಿದ್ದೆ. ಆಗ ಐವರು ದುಷ್ಕರ್ಮಿಗಳು ತಾವು ತಿಪಟೂರು ಠಾಣೆಯ ಅಪರಾಧ ವಿಭಾಗದ ಪೊಲೀಸರೆಂದು ಹೇಳಿಕೊಂಡು ಮನೆ ಬಳಿ ಬಂದಿದ್ದರು. ಈ ಪೈಕಿ ಮೂವರು ಮನೆಯೊಳಗೆ ಪ್ರವೇಶಿಸಿದರು. ನಿಮ್ಮ ಅಳಿಯ ಜಯ ನಾಯ್ಕ್ ಕೊಟ್ಟಿರುವ ಗನ್ ಕೊಡಿ ಎಂದು ಕೇಳಿದರು. ಆ ಪೈಕಿ ಒಬ್ಬ ಮೂರು ದಿನದ ಹಿಂದೆ ನಾನು ನಿಮಗೆ ಹಣ ಮತ್ತು ಒಡವೆ ಕೊಟ್ಟಿದ್ದೆ. ಅದನ್ನು ಹಿಂತಿರುಗಿಸಿ ಎಂದು ತಿಳಿಸಿದ. ತಮ್ಮ ಬಳಿ ಇದ್ದ ಗನ್, ಚಾಕು ತೋರಿಸಿ ಬೆದರಿಸಿದ ಅವರು ನಮ್ಮಲ್ಲಿದ್ದ ಮೊಬೈಲ್‌ಗಳನ್ನು ಕಿತ್ತುಕೊಂಡರು. ಅದರಿಂದಲೇ ಮಗನಿಗೆ ಕರೆ ಮಾಡಿ ಮನೆಗೆ ಕರೆಯಿಸಿಕೊಂಡರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಮಗ ಬಂದೊಡನೆಯೇ ಆತನನ್ನು ಮುಂದಿಟ್ಟುಕೊಂಡು ಸುಮಾರು ಎರಡು ಗಂಟೆ ಮನೆಯನ್ನೆಲ್ಲಾ ಹುಡುಕಾಡಿದರು. ಮಲಗುವ ಕೋಣೆಯ ಸೂಟ್ ಕೇಸ್‌ನಲ್ಲಿದ್ದ ₹19 ಲಕ್ಷ ನಗದು ಪಡೆದರು. ಬೀರುವಿನಲ್ಲಿ ಇಟ್ಟಿದ್ದ ಅರ್ಧ ಕೆ.ಜಿ. ಚಿನ್ನದ ಆಭರಣಗಳನ್ನೂ ಎತ್ತಿಕೊಂಡರು. ಪೊಲೀಸ್ ಠಾಣೆಗೆ ಹೋಗೋಣ ಎಂದು ಹೇಳಿ ನನ್ನ ಜೊತೆ ಮಗನನ್ನೂ ಕರೆದುಕೊಂಡು ಹೊರಗೆ ಬಂದರು. ನಂತರ ನಮ್ಮದೇ ಕಾರಿನಲ್ಲಿ ಕೂರಿಸಿಕೊಂಡು ಗೊರಗುಂಟೆಪಾಳ್ಯ ಮಾರ್ಗವಾಗಿ ಬಿಇಎಲ್ ವೃತ್ತ, ಎಂ.ಎಸ್.ಪಾಳ್ಯ ಹೀಗೆ ವಿವಿಧೆಡೆ ಸುತ್ತಾಡಿಸಿದರು. ವೃತ್ತವೊಂದರ ಬಳಿ ಕಾರು ನಿಲ್ಲಿಸಿ ₹20 ಲಕ್ಷ ಕೊಟ್ಟರೆ ನಿಮ್ಮನ್ನು ಬಿಟ್ಟು ಕಳಿಸುತ್ತೇವೆ ಎಂದರು. ಅದಕ್ಕೆ ನಾನು ಒಪ್ಪಲಿಲ್ಲ. ಹೀಗಾಗಿ ಅಲ್ಲಿಂದ ಜಾಲಹಳ್ಳಿಯ ಗಂಗಮ್ಮ ವೃತ್ತಕ್ಕೆ ಕರೆದುಕೊಂಡು ಬಂದರು ಎಂದೂ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಮಾಹಿತಿ ನೀಡಿದರು.

'ನಿಮ್ಮ ಹಣ ಹಾಗೂ ಆಭರಣಗಳನ್ನು ಜಪ್ತಿ ಮಾಡಿದ್ದೇವೆ. ನಾವು ಕರೆದಾಗ ಠಾಣೆಗೆ ಬರಬೇಕು ಎಂದು ಹೇಳಿ ನಮ್ಮನ್ನು ಕಾರಿನಲ್ಲೇ ಬಿಟ್ಟ ಅವರು ಆಟೊ ಹಿಡಿದು ಪರಾರಿಯಾದರು. ಸಂಜೆ ಮತ್ತೆ ಕರೆ ಮಾಡಿ ಮಗ ಹಾಗೂ ನನ್ನ ಅಣ್ಣನ ಮಗ ರೋಹನ್‌ನನ್ನು ಆರ್.ಜಿ.ರಾಯಲ್ ಹೋಟೆಲ್ ಬಳಿ ಕರೆಸಿಕೊಂಡರು. ಅಲ್ಲಿ ಇಬ್ಬರ ಮೇಲೂ ಹಲ್ಲೆ ನಡೆಸಿದ್ದರು. ಈ ವಿಷಯ ಯಾರಿಗೂ ತಿಳಿಸದಂತೆ ಬೆದರಿಕೆ ಹಾಕಿದ್ದರು ಎಂದೂ ವಿವರಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

# 'ಹಾರ್ನ್' ಮಾಡಬೇಡ ಎಂದಿದ್ದಕ್ಕೆ ಇಬ್ಬರ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಹಿಂದಿನಿಂದ ಬರುತ್ತಿದ್ದ ಯುವಕರಿಬ್ಬರು ಅನವಶ್ಯಕವಾಗಿ 'ಹಾರ್ನ್' ಮಾಡುತ್ತಿದ್ದುದನ್ನು ಪ್ರಶ್ನಿಸಿದ್ದಕ್ಕೆ ಇಬ್ಬರು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಲಾಗಿದ್ದು. ಈ ಸಂಬಂಧ 10 ಮಂದಿ ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಂಜೋಗ್ ರಮೇಶ್, ತರುಣ್, ಕ್ರಿಸ್ಪಿ ಜಾನ್, ಕಾಕಿ, ಆಂಥೋಣಿ, ಇತರ ಐವರ ವಿರುದ್ಧ ಪ್ರಕರಣ ದಾಖಲಿಸಿದ್ದು, ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದೇವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಎಚ್‌ಎಸ್‌ಆರ್ ಬಡಾವಣೆ ನಿವಾಸಿ ಗೌತಮ್ ಕಲ್ಯಾಣ್, ಸಹಪಾಠಿ ಕೆ.ಜಿ. ಶೋಭಿತ್ ಜೊತೆ ಕಾಲೇಜು ಸಮೀಪದ ರಸ್ತೆಯಲ್ಲಿ ಬೈಕ್‌ನಲ್ಲಿ ಹೊರಟಿದ್ದ. ಹಿಂದಿನಿಂದ ಮತ್ತೊಂದು ಬೈಕ್‌ನಲ್ಲಿ ರಮೇಶ್ ಹಾಗೂ ತರುಣ್ ಅನಗತ್ಯವಾಗಿ 'ಹಾರ್ನ್' ಮಾಡುತ್ತಾ ಬರುತ್ತಿದ್ದರು. ಇದಕ್ಕೆ ಕಲ್ಯಾಣ್ ಆಕ್ಷೇಪ ವ್ಯಕ್ತಪಡಿಸಿದ್ದ. ಆಗ ಅವರ ನಡುವೆ ವಾಗ್ವಾದ ನಡೆದಿತ್ತು. ಸ್ಥಳದಲ್ಲಿದ್ದ ಕಾಲೇಜಿನ ಇತರೆ ವಿದ್ಯಾರ್ಥಿಗಳು ಮಧ್ಯಪ್ರವೇಶಿಸಿ ಜಗಳ ಬಿಡಿಸಿದ್ದರು' ಎಂದು ಹೇಳಿದ್ದಾರೆ.

'ಅಷ್ಟಕ್ಕೆ ಸುಮ್ಮನಾಗದ ತರುಣ್, ಮಧ್ಯಾಹ್ನ ಇತರ ಗೆಳೆಯರೊಡನೆ ಬಂದಿದ್ದ. ಕಲ್ಯಾಣ್ ಹಾಗೂ ಶೋಭಿತ್ ಅವರನ್ನು ಸುತ್ತುವರಿದು ಕ್ರಿಕೆಟ್ ಬ್ಯಾಟ್, ವಿಕೆಟ್ ಹಾಗೂ ಹಾಕಿ ಸ್ಟಿಕ್‌ಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದರು' ಎಂದರು.

#### ಹಿಟಾಚಿ ಹರಿದು ಮಗು ಸಾವು

ಸಿಮಿಯಾನ್

**ಬೆಂಗಳೂರು:** ಹಿಟಾಚಿ ಯಂತ್ರ ಹರಿದು ಸಿಮಿಯಾನ್ ಹೆಸರಿನ ಮೂರು ವರ್ಷದ ಗಂಡುಮಗು ಮೃತಪಟ್ಟಿದೆ. ಪ್ರಕರಣ ದಾಖಲಿಸಿಕೊಂಡಿರುವ ಉಪ್ಪಾರಪೇಟೆ ಠಾಣೆ ಪೊಲೀಸರು ಚಾಲಕ ಶಂಕರ್ ನಾಯಕ್ ಎಂಬಾತನನ್ನು ಬಂಧಿಸಿದ್ದಾರೆ.

'ಕಟ್ಟಡ ಕಾರ್ಮಿಕ ಡೇವಿಡ್ ಜಾನ್, ಪತ್ನಿ ನೇತ್ರಾವತಿ ಹಾಗೂ ಮಗನೊಂದಿಗೆ ಶ್ರೀರಾಮಪುರದಲ್ಲಿ ನೆಲೆಸಿದ್ದರು. ಡೇವಿಡ್ ಅವರು ಮುಂಜಾನೆ 5.30ರ ಸುಮಾರಿಗೆ ಧನ್ವಂತರಿ ರಸ್ತೆಯ ಸಂಗಮ್ ಎಂಟರ್‌ಪ್ರೈಸಸ್ ಬಳಿಯ ನಿರ್ಮಾಣ ಹಂತದ ಕಟ್ಟಡದ ಬಳಿ ಹೋಗಿದ್ದರು. ಉತ್ತರಾಖಂಡದ ಶಂಕರ್, ಹಿಟಾಚಿಯನ್ನು ಹಿಂದಕ್ಕೆ ಚಲಾಯಿಸುತ್ತಿದ್ದ ವೇಳೆ ಜಲ್ಲಿ ಕಲ್ಲಿನ ರಾಶಿ ಬಳಿ ಮಗು ಇರುವುದನ್ನು ಗಮನಿಸಿರಲಿಲ್ಲ' ಎಂದು ಪೊಲೀಸರು ಹೇಳಿದರು. 'ಚಾಲಕನ ಅಜಾಗರೂಕತೆಯೇ ಈ ದುರ್ಘಟನೆಗೆ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ತಿಳಿಸಿದರು.

### ಸ್ನಾನದ ಕೋಣೆಯಲ್ಲಿ ಯುವತಿ ಶವ ಪತ್ತೆ

**ಬೆಂಗಳೂರು:** ಸಾಫ್ಟ್‌ವೇರ್ ಕಂಪನಿ ಉದ್ಯೋಗಿಯೊಬ್ಬರ ಮನೆಯಲ್ಲಿ ಕೆಲಸಕ್ಕಿದ್ದ ಯುವತಿಯ ಶವವು ಸ್ನಾನದ ಕೋಣೆಯಲ್ಲಿ ಪತ್ತೆಯಾಗಿದೆ. ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಮಿಳುನಾಡು ಮೂಲದ ಕವಿತಾ (19) ಮೃತ ಯುವತಿ. ಆಕೆ ವಿವೇಕ್ ಎಂಬುವರ ಬೆಳ್ಳಂದೂರಿನ ಮನೆಯಲ್ಲಿ ಮಗು ನೋಡಿಕೊಳ್ಳುವ ಕೆಲಸ ಮಾಡುತ್ತಿದ್ದಳು. ಶನಿವಾರ ಬೆಳಿಗ್ಗೆ ಶವ ಪತ್ತೆಯಾಗಿದೆ. ಯುವತಿಯ ತಾಯಿ ದೂರು ನೀಡಿದ್ದು, ಶಂಕಾಸ್ಪದ ಸಾವು ಪ್ರಕರಣ ದಾಖಲಿಸಿ, ತನಿಖೆ ನಡೆಸುತ್ತಿದ್ದೇವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮರಣೋತ್ತರ ಪರೀಕ್ಷೆ. ಪ್ರಕ್ರಿಯೆ ಮುಗಿದ ಬಳಿಕ ಪೋಷಕರಿಗೆ ಹಸ್ತಾಂತರಿಸಲಾಗುತ್ತದೆ' ಎಂದು ಹೇಳಿದರು.

### ಹೊಸ ವರ್ಷಾಚರಣೆ: ರೆಸಾರ್ಟ್ ಮೇಲೆ ದಾಳಿ

**ಚನ್ನಪಟ್ಟಣ:** ಕಣ್ವ ಜಲಾಶಯ ಬಳಿಯ ಟ್ರೀ ಕ್ಯೂಟ್ರಾ ರೆಸಾರ್ಟ್ ಮೇಲೆ ಶುಕ್ರವಾರ ರಾತ್ರಿ ದಾಳಿ ನಡೆಸಿದ ಪೊಲೀಸರು ಹೊಸ ವರ್ಷಾಚರಣೆ ಪಾರ್ಟಿ ನಡೆಸಲು ಅವಕಾಶ ಮಾಡಿ ಕೊಟ್ಟ ರೆಸಾರ್ಟ್ ಮಾಲೀಕನನ್ನು ಬಂಧಿಸಿದ್ದಾರೆ.

ಕೋವಿಡ್ ನೈಟ್ ಕರ್ಫ್ಯೂ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ರೆಸಾರ್ಟ್ ಮಾಲೀಕ ಸ್ವಾಮಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಬೆಂಗಳೂರು ಹಾಗೂ ಇನ್ನಿತರ ಜಿಲ್ಲೆಗಳಿಂದ ಆಗಮಿಸಿದ್ದ ಯುವಕ ಯುವತಿಯರು ರೆಸಾರ್ಟ್‌ನಲ್ಲಿ ಮೋಜು ಮಸ್ತಿಯಲ್ಲಿ ತೊಡಗಿದ್ದರು. ಅವರಿಗೆ ಬೈದು ಬುದ್ಧಿವಾದ ಹೇಳಿ ವಾಪಸ್ ಕಳುಹಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಿರೀಶ್ ತಿಳಿಸಿದ್ದಾರೆ.

## ರಾತ್ರಿ ಕರ್ಫ್ಯೂ ಉಲ್ಲಂಘನೆ 318 ವಾಹನಗಳ ಜಪ್ತಿ

**ಬೆಂಗಳೂರು:** ರಾತ್ರಿ ಕರ್ಫ್ಯೂ ನಿಯಮ ಉಲ್ಲಂಘಿಸಿ ಡಿ. 28ರಿಂದ 31ರ ಅವಧಿಯಲ್ಲಿ ನಗರದಲ್ಲಿ ರಸ್ತೆಗಿಳಿದಿದ್ದ 318 ವಾಹನಗಳನ್ನು ನಗರದ ಪೊಲೀಸರು ಜಪ್ತಿ ಮಾಡಿದ್ದಾರೆ. ಡಿ. 31ರ ರಾತ್ರಿ 26 ದ್ವಿಚಕ್ರ ವಾಹನ ಸೇರಿ ಒಟ್ಟು 31 ವಾಹನಗಳನ್ನು ಜಪ್ತಿ ಮಾಡಲಾಗಿದೆ.

'ರಾತ್ರಿ ಕರ್ಫ್ಯೂ ಜಾರಿಯಾದ ದಿನದಿಂದ ಈವರೆಗೆ 280 ದ್ವಿಚಕ್ರ ವಾಹನಗಳು, 10 ಆಟೊ, 28 ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆಗೆ ನಿರ್ಬಂಧಿಸುವ ಸಲುವಾಗಿ ಬಿಗಿ ಭದ್ರತೆ ಕೈಗೊಳ್ಳಲಾಗಿತ್ತು. 500ಕ್ಕೂ ಅಧಿಕ ಕಡೆ ಬ್ಯಾರಿಕೇಡ್‌ಗಳನ್ನು ಹಾಕಿ ಪ್ರಮುಖ ರಸ್ತೆಗಳಲ್ಲಿ ಸಂಚಾರ ಬಂದ್ ಮಾಡಲಾಗಿತ್ತು' ಎಂದು ಪೊಲೀಸರು ಹೇಳಿದ್ದಾರೆ.

ಪ್ರಶಸ್ತಿ ಪ್ರದಾನ

ಧಾರವಾಡದ ಸೃಜನಾ ರಂಗಮಂದಿರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಕೊಳಲುವಾದಕ ಮುಂಬೈನ ನಿತ್ಯಾನಂದ ಹಳದಿಪುರ ಅವರಿಗೆ ಡಾ. ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ರಾಷ್ಟ್ರೀಯ ಪ್ರಶಸ್ತಿ ಮತ್ತು ಶಿವಾನಿ ಮೀರಜಕರ್ ಅವರಿಗೆ ಯುವ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಮಂಜುಳಾ ಯಲಿಗಾರ, ಪಂಡಿತ್ ಎಂ. ವೆಂಕಟೇಶ ಕುಮಾರ, ಜಿಲ್ಲಾಧಿಕಾರಿ ನಿತೇಶ್ ಕೆ. ಪಾಟೀಲ, ಬಾಬಣ್ಣ ಹಾನಗಲ್, ಡಾ. ಬಿ.ಗೋಪಾಲಕೃಷ್ಣ, ನೀಲಮ್ಮ ಎಂ. ಕೊಡ್ಲಿ ಇದ್ದಾರೆ –ಪ್ರಜಾವಾಣಿ ಚಿತ್ರ

ಚಿತ್ರದುರ್ಗದ ಮುರುಘಾ ಮಠದಲ್ಲಿ ಶನಿವಾರ ಆರಂಭವಾದ ಜಮುರಾ ರಾಷ್ಟ್ರೀಯ ನಾಟಕೋತ್ಸವದಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆಗಿರುವ ನಟಿ ತಾರಾ ಅನೂರಾಧ ಅವರಿಗೆ 'ಶಿಮುಶ ರಾಷ್ಟ್ರೀಯ ನಾಟಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹ 1 ಲಕ್ಷ ನಗದು ಮತ್ತು ಪಾರಿತೋಷಕ ಒಳಗೊಂಡಿದೆ. ವಸತಿ ಸಚಿವ ವಿ.ಸೋಮಣ್ಣ, ಶಿವಮೂರ್ತಿ ಮುರುಘಾ ಶರಣರು, ನಾಟಕ ಅಕಾಡೆಮಿ ಅಧ್ಯಕ್ಷ ಆರ್‌.ಭೀಮಸೇನ, ಶಾಸಕರಾದ ಕೆ.ಪೂರ್ಣಿಮಾ ಮತ್ತು ಜಿ.ಎಚ್‌.ತಿಪ್ಪಾರೆಡ್ಡಿ ಇದ್ದಾರೆ.

# ಕಾಂಗ್ರೆಸ್ ಪಾದಯಾತ್ರೆಗೆ ಬಿಜೆಪಿ ಸಡ್ಡು

**ರಾಮನಗರ:** ಮುಖ್ಯಮಂತ್ರಿಯಾದ ಬಳಿಕ ಬಸವರಾಜ ಬೊಮ್ಮಾಯಿ ಮೊದಲ ಬಾರಿಗೆ ರಾಮನಗರ ಜಿಲ್ಲೆಗೆ ಆಗಮಿಸುತ್ತಿದ್ದು, 3ರಂದು ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.

ಇದೇ ತಿಂಗಳ 9ರಂದು ಕಾಂಗ್ರೆಸ್ ನೇತೃತ್ವದಲ್ಲಿ ಜಿಲ್ಲೆಯ ಮೇಕೆದಾಟು ಪ್ರದೇಶದಿಂದ ಬೆಂಗಳೂರಿಗೆ ಪಾದ ಯಾತ್ರೆ ನಡೆಯಲಿದೆ. ಅದಕ್ಕೂ ಒಂದು ವಾರ ಮುನ್ನವೇ ಮುಖ್ಯಮಂತ್ರಿ ಕಾರ್ಯಕ್ರಮ ನಿಗದಿ ಆಗಿದ್ದು, ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಮೂಲಕ ವಿರೋಧ ಪಕ್ಷಗಳಿಗೆ ಟಕ್ಕರ್ ನೀಡಲು ಸರ್ಕಾರ ಯೋಜಿಸಿದೆ.

**ಯಾವೆಲ್ಲ ಕಾಮಗಾರಿ?:** ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ₹289.69 ಕೋಟಿ ಮೊತ್ತದ ವಿವಿಧ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ನೆರವೇರಿಸುವರು. ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಒಂದರಲ್ಲಿಯೇ ₹195.41 ಕೋಟಿ ವೆಚ್ಚದ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರುತ್ತಿದೆ. ಉಳಿದ ಮೂರು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ₹94.27 ಕೋಟಿ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡುತ್ತಿದೆ.

ಮಾಗಡಿಯಲ್ಲಿ ₹ 25 ಕೋಟಿ ವೆಚ್ಚದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರ ಹಾಗೂ ಕರ್ನಾಟಕ ಮುಕ್ತ ವಿ.ವಿ. ಅಧ್ಯಯನ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸುವರು.

#### ಬಿಡದಿ: ಯುಜಿಡಿ ಯೋಜನೆಗೆ ಚಾಲನೆ

ಅತಿ ವೇಗದಲ್ಲಿ ಬೆಳೆಯುತ್ತಿರುವ ಬಿಡದಿ ಪಟ್ಟಣಕ್ಕೆ ಅತ್ಯವಶ್ಯವಾದ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಗೆ ಸರ್ಕಾರ ಈಚೆಗೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಿತ್ತು. ಇದೀಗ ಈ ಕಾಮಗಾರಿಗೆ ಚಾಲನೆ ದೊರೆಯಲಿದೆ. ಇದಕ್ಕಾಗಿ ಸರ್ಕಾರ ₹98.20 ಕೋಟಿ ವಿನಿಯೋಗಿಸಲಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಆ&ಕುಕ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು, ಆರೋಗ್ಯ ಸೌಧ, 3ನೇ ಮಹಡಿ, ಬೆಂಗಳೂರು–560 023.

ಸಂಖ್ಯೆ: ಆಕುಕ/ಇ.ವಿ/ಕಾ.ಇಂ/ಬೆಂ/ಟೆಂಡರ್/ಸ.ಇಂ–2/2021–22/36 ದಿನಾಂಕ: 01.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗ ಬೆಂಗಳೂರು ವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ನೋಂದಾಯಿತ ಗುತ್ತಿಗೆದಾರರು ಭಾಗವಹಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

1) Repairs and Renovation works to PHC at (a) Nagaragere and (b) Jagareddihalli in Gowribidanur Taluk, Chikkaballapura District (Package-1). 2) Repairs and Renovation works to PHC at Chelur in Bagepalli Taluk, Chikkaballapura District. 3) Repairs and Renovation works to PHC at Kuruburu in Chintamani Taluk, Chikkaballapura District.

ವೇಳಾ ಪಟ್ಟಿ: 1) ಖಾಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕಡೆಯ ದಿನಾಂಕ: 10.01.2022 ರಂದು ಸಂಜೆ 4.00 ರವರೆಗೆ. 2) ಟೆಂಡರ್‌ಗಳ ತೆರೆಯುವಿಕೆ ದಿನಾಂಕ: 12.01.2022 ಸಂಜೆ 4.00 ಕ್ಕೆ. ಟೆಂಡರಿಗೆ ಸಂಬಂಧಿಸಿದ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್(www.eproc.karnataka.gov.in)ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್
ಆ&ಕುಕ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು.
ವಾ.ಸಾ.ಸಂ.ಇ/ಬೆಂ.ನಗರ/2650/ಆಕಾರ್/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಲಸಂಪನ್ಮೂಲ ಇಲಾಖೆ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ),
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ,
ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ–ಮೇಲ್: eemidklr@rediffmail.com
eemigwddkolar@gmail.com ದೂರವಾಣಿ: 08152–200049

ಸಂ: ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ–ಶಾ/ಸ.ಇಂ–2/ಟೆಂಡರ್ ಪ್ರಕಟಣೆ/1854/21–22 ದಿನಾಂಕ: 29.12.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 07/2021–22 ದಿನಾಂಕ: 29.12.2021

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 17 ಕಾಮಗಾರಿಗಳಿಗೆ ಕೆ.ಡಬ್ಲ್ಯೂ–2,3&4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ 28ರ ಅನ್ವಯ 03ನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ **ರೂ.110.00** ಲಕ್ಷ ಹಾಗೂ ಕನಿಷ್ಠ ಟೆಂಡರ್ ಮೊತ್ತ **ರೂ.25.00** ಲಕ್ಷ. ನಿಗದಿತ ಇ.ಎಂ.ಡಿ ಮೊತ್ತವನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯೂಮೆಂಟ್‌ಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ದಿನಾಂಕ: **10.01.2022 ಸಂಜೆ 4.00 ಗಂಟೆ ಇಂದ 20.01.2022 ಸಂಜೆ 4.00 ಗಂಟೆಯವರೆಗೆ** ಪಡೆಯಬಹುದು (ಡೌನ್‌ಲೋಡ್), ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **21.01.2022ರ ಸಂಜೆ 4.30 ಗಂಟೆಯ ನಂತರ.** ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ308/ಎಂ.ಸಿ.ಎ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕುಶಲಕರ್ಮಿಗಳಿಗೆ ಬೆನ್ನೆಲುಬಾಗಿ ನಿಂತ ಕಾವೇರಿ ಎಂಪೋರಿಯಂ • ಸಾವಿರಾರು ಕಲಾಕೃತಿಗಳ ಮಾರಾಟ

## ಕರುನಾಡಿನ ಕರಕುಶಲ ಕಲೆಯ ಸಿರಿ 'ಕಾವೇರಿ'

• ಮನೋಹರ್ ಎಂ.

ಮಹಾತ್ಮ ಗಾಂಧಿ ರಸ್ತೆ ಬಳಿಯ ಕಾವೇರಿ ಎಂಪೋರಿಯಂ (ಎಡಚಿತ್ರ) ಕಾವೇರಿ ಎಂಪೋರಿಯಂನಲ್ಲಿ ಕಲಾಕೃತಿಗಳನ್ನು ವೀಕ್ಷಿಸುತ್ತಿರುವ ಗ್ರಾಹಕರು —ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್.ಜಿ.

ಕಾವೇರಿ ಎಂಪೋರಿಯಂ ಕರ್ನಾಟಕದ ಹೆಗ್ಗುರುತು ಹಾಗೂ 'ಕಾವೇರಿ' ಬ್ರ್ಯಾಂಡ್‌ಗೆ ಆನೆಬಲವಿದ್ದಂತೆ. ₹20ರಿಂದ ₹80 ಲಕ್ಷದವರೆಗಿನ ಉತ್ಪನ್ನಗಳು ಲಭ್ಯ.

**ಡಿ.ರೂಪಾ**
ಕೆಎಸ್‌ಎಚ್‌ಡಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ

**ಬೆಂಗಳೂರು:** ಕರ್ನಾಟಕದ ಶ್ರೀಗಂಧದ ಕಲಾಕೃತಿಗಳ ಕಂಪನ್ನು 'ಕಾವೇರಿ ಎಂಪೋರಿಯಂ' ಜಗತ್ತಿನಾದ್ಯಂತ ಪಸರಿಸುತ್ತಿದೆ. ಕರುನಾಡಿನ ಕರ ಕುಶಲ ಕಲೆಯನ್ನು ಕಲಾಪ್ರೇಮಿಗಳ ಮಡಿಲಿಗೆ ತಲುಪಿಸುವ ಸೇತುವೆಯಂತೆ ಕಾರ್ಯನಿರ್ವಹಿಸುತ್ತಿದೆ ನಗರದ ಮಹಾತ್ಮ ಗಾಂಧಿ ರಸ್ತೆಯಂಚಿನಲ್ಲಿರುವ ಈ ಮಳಿಗೆ. 58 ವರ್ಷಗಳ ಇತಿಹಾಸ ಈ ಮಳಿಗೆಗೆ ಇದೆ.

1964ರಲ್ಲಿ ಜನ್ಮತಾಳಿದ ಕಾವೇರಿ ಎಂಪೋರಿಯಂನಲ್ಲಿ 'ಕಾವೇರಿ' ಬ್ರ್ಯಾಂಡ್‌ನಡಿ ನಿತ್ಯವೂ ಸಾವಿರಾರು ಕರಕುಶಲ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ (ಕೆಎಸ್‌ಎಚ್‌ಡಿಸಿಎಲ್) ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ 'ಕಾವೇರಿ ಎಂಪೋರಿಯಂ' ಶ್ರೀಗಂಧದ ಕಲಾಕೃತಿಗಳ ಮಾರಾಟಕ್ಕೆ ಅದ್ವಿತೀಯ ತಾಣ.

ಕರುನಾಡಿನ ಕುಶಲಕರ್ಮಿಗಳು ತಯಾರಿಸುವ ಶ್ರೀಗಂಧದ ವಿಗ್ರಹಗಳು, ಪೀಠೋಪಕರಣಗಳು, ಮಂಟಪಗಳು, ಚನ್ನಪಟ್ಟಣದ ಗೊಂಬೆಗಳು, ಶಿವಾನಿ ಮರದಿಂದ ತಯಾರಿಸುವ ಕಲಾಕೃತಿಗಳು, ಮರದ ಉಯ್ಯಾಲೆಗಳು, ಮನೆ ಬಳಕೆ ವಸ್ತುಗಳು, ಅಗರಬತ್ತಿ, ಮಣಿ ಪುಷ್ಪಹಾರ, ಕಂಚಿನ ಮತ್ತು ಲೋಹದ ಕಲಾಕೃತಿಗಳು, ಸುಗಂಧ ದ್ರವ್ಯ, ಸಾಬೂನು, ಗಂಧದ ಮತ್ತು ಬೀಟೆ ಮರದ (ರೋಸ್ ವುಡ್) ಕೆತ್ತನೆಗಳು, ಚನ್ನಪಟ್ಟಣದ ಆಟಿಕೆಗಳು, ಮೈಸೂರು ಸಾಂಪ್ರದಾಯಿಕ ಚಿತ್ರಕಲೆಗಳು, ಬಿದರಿ ಕಲ್ಲಿನ ಕೆತ್ತನೆಗಳು, ಮರದ ಕೆತ್ತನೆಗಳು, ಸಾಂಪ್ರದಾಯಿಕ ಆಭರಣಗಳು, ಕನ್ನಡಿ ಮತ್ತು ಕಸೂತಿ, ಕಿನ್ನಾಳ ಆಟಿಕೆಗಳು, ಕದಂಬ ಮರದಿಂದ ತಯಾರಿಸಲಾದ ಕಲಾಕೃತಿಗಳು, ಜವಳಿ ವಸ್ತುಗಳು ಸೇರಿದಂತೆ ಸಾವಿರಾರು ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುತ್ತಿದೆ. ಕುಶಲಕರ್ಮಿಗಳ ಪರಿಶ್ರಮಕ್ಕೆ ಪ್ರತಿಫಲ ಒದಗಿಸುವ ಮೂಲಕ ಅವರ ಬೆನ್ನೆಲುಬಾಗಿಯೂ ನಿಂತಿದೆ.

ಬೆಂಗಳೂರಿಗೆ ಬರುವ ವಿದೇಶಿ ಪ್ರವಾಸಿಗರು, ಹೊರರಾಜ್ಯಗಳ ಪ್ರವಾಸಿಗರು ತಪ್ಪದೇ ಈ ಮಳಿಗೆಗೆ ಭೇಟಿ ನೀಡುತ್ತಾರೆ. ಇಲ್ಲಿನ ಉತ್ಪನ್ನಗಳ ಕಲಾವಂತಿಕೆಗೆ ಮಾರು ಹೋಗಿ, ಪ್ರವಾಸದ ನೆನಪಿನಾರ್ಥ ಅವುಗಳನ್ನು ಖರೀದಿಸುವುದು ವಾಡಿಕೆಯಾಗಿದೆ. ಅಷ್ಟರಮಟ್ಟಿಗೆ ಈ ಮಳಿಗೆ ಬೆಂಗಳೂರು, ಕರ್ನಾಟಕ ಹಾಗೂ ಇಲ್ಲಿನ ಕಲೆಯ ಪ್ರತೀಕವಾಗಿ ವಿದೇಶಗಳಲ್ಲೂ ಜನಮನ್ನಣೆ ಗಳಿಸಿದೆ.

'ರಾಜ್ಯದ ಕುಶಲಕರ್ಮಿಗಳು ಉತ್ಪನ್ನಗಳಿಗೆ ನೀಡುವ ಅಂತಿಮ ಸ್ಪರ್ಶ ಹಾಗೂ ವಿನ್ಯಾಸ ಬೇರೆ ಕಡೆ ನೋಡಲು ಸಾಧ್ಯವಿಲ್ಲ. ಅಷ್ಟು ಅಚ್ಚುಕಟ್ಟಾಗಿ ವಿಗ್ರಹಗಳು ಹಾಗೂ ಕಲಾಕೃತಿಗಳಿಗೆ ನೈಜ ರೂಪ ನೀಡುತ್ತಾರೆ. ಈ ಕಾರಣದಿಂದಲೇ ಉತ್ಪನ್ನಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿವೆ' ಎಂದು ಕೆಎಸ್‌ಎಚ್‌ಡಿಸಿಎಲ್ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಸಮಯದಲ್ಲಿ ವಿದೇಶಿಗರು ಹೆಚ್ಚಾಗಿ ಎಂ.ಜಿ. ರಸ್ತೆಯ ಕಾವೇರಿ ಮಳಿಗೆಗೆ ಭೇಟಿ ನೀಡುತ್ತಾರೆ. ಈ ಎರಡೂ ತಿಂಗಳಲ್ಲಿ ಹೆಚ್ಚು ವಹಿವಾಟು ನಡೆಯುತ್ತದೆ. ಮಳಿಗೆಯು ಪ್ರತಿದಿನವೂ ಗ್ರಾಹಕರಿಂದ ತುಂಬಿರುತ್ತದೆ. ಕಾರ್ಯಕ್ರಮದ ಆಯೋಜಕ ಸಂಸ್ಥೆಗಳು ಉತ್ಪನ್ನಗಳನ್ನು ನಮ್ಮಿಂದಲೇ ಖರೀದಿಸುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರಾಜಕೀಯ ಗಣ್ಯರಿಗೆ ನೀಡುವ ಬಹುತೇಕ ಉಡುಗೊರೆಗಳು, ಸರ್ಕಾರಿ ಕಾರ್ಯಕ್ರಮಗಳಲ್ಲಿ ನೀಡುವ ಬಹುತೇಕ ಉಡುಗೊರೆಗಳು ಇಲ್ಲಿಂದಲೇ ಪೂರೈಕೆಯಾಗುತ್ತವೆ' ಎಂದು ವಿವರಿಸಿದರು.

'ಕಾವೇರಿ' ಬ್ರ್ಯಾಂಡ್‌ನ ಹೆಸರಿನಲ್ಲೇ ವಾಹನದ ಮೂಲಕ ಉತ್ಪನ್ನಗಳನ್ನು ಮಾರಾಟ ಮಾಡುವ ಯೋಜನೆ ರೂಪಿಸಿದ್ದೇವೆ. ಗ್ರಾಹಕರ ಸ್ಥಳಗಳಿಗೆ ಕಾವೇರಿ ಉತ್ಪನ್ನಗಳನ್ನು ತಲುಪಿಸುವುದು ಇದರ ಉದ್ದೇಶ. ಶ್ರೇಷ್ಠ ಕುಶಲಕರ್ಮಿಗಳಿಗೆ ನಿಗಮದಿಂದ ಪ್ರಶಸ್ತಿ ನೀಡುವ ಚಿಂತನೆಯೂ ಇದೆ' ಎಂದು ಮಾಹಿತಿ ನೀಡಿದರು.

**ವ್ಯಾಪಾರ ಶೇ 30ರಷ್ಟು ಹೆಚ್ಚಳ:** 'ಕೋವಿಡ್‌ನಿಂದ ಮಳಿಗೆಯಲ್ಲಿ ವ್ಯಾಪಾರ ತುಸು ಕ್ಷೀಣಿಸಿತ್ತು. 2020ರಲ್ಲಿ ಕಾವೇರಿ ಮಳಿಗೆಯ ವಾರ್ಷಿಕ ₹7 ಕೋಟಿಯಷ್ಟು ವಹಿವಾಟು ನಡೆದಿತ್ತು. 2021ರಲ್ಲಿ ವಹಿವಾಟು ಶೇ 30ರಷ್ಟು ಹೆಚ್ಚಳ ಕಂಡಿದೆ' ಎಂದು ಕೆಎಸ್‌ಎಚ್‌ಡಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ ಡಿ.ರೂಪಾ (ಐಪಿಎಸ್) ಮಾಹಿತಿ ನೀಡಿದರು.

ಬೆಂಗಳೂರು ನಮ್ಮ ಹೆಮ್ಮೆ...

### ಅಂಕಿ ಅಂಶ

**20 ಸಾವಿರ** ಕಾವೇರಿ ಎಂಪೋರಿಯಂ ಮಳಿಗೆಯಲ್ಲಿ ಲಭ್ಯವಿರುವ ಉತ್ಪನ್ನಗಳು

**₹10 ಕೋಟಿ** 2021ರಲ್ಲಿ ನಡೆದಿರುವ ವಹಿವಾಟು

**2,800** ಕೆಎಸ್‌ಎಚ್‌ಡಿಸಿಎಲ್‌ನ ನೋಂದಾಯಿತ ಕುಶಲಕರ್ಮಿಗಳು

### ಸ್ವಂತ ಕಟ್ಟಡಕ್ಕೆ ಶೀಘ್ರವೇ ಸ್ಥಳಾಂತರ

'ಕಾವೇರಿ ಎಂಪೋರಿಯಂ' ಸದ್ಯ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ನಿಗಮದ ಕೇಂದ್ರ ಕಚೇರಿಯೂ ಬಾಡಿಗೆ ಕಟ್ಟಡದಲ್ಲಿದೆ. ಈ ಎರಡೂ ಕಟ್ಟಡಗಳಿಗೆ ತಿಂಗಳಿಗೆ ಸುಮಾರು ₹30 ಲಕ್ಷ ಬಾಡಿಗೆ ಪಾವತಿಸಲಾಗುತ್ತಿದೆ. ಇದೇ ರಸ್ತೆಯಲ್ಲಿ ನಿಗಮದ ಹೊಸ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಅದು ಪೂರ್ಣಗೊಂಡ ನಂತರ ಮಳಿಗೆಯು ಹೊಸ ಕಟ್ಟಡಕ್ಕೆ ಸ್ಥಳಾಂತರಗೊಳ್ಳಲಿದೆ. ನಿಗಮದ ಕೇಂದ್ರ ಕಚೇರಿಯೂ ಅದೇ ಕಟ್ಟಡದಲ್ಲಿ ಇರಲಿದೆ. ಇದರಿಂದ ನಿಗಮಕ್ಕೆ ವರ್ಷಕ್ಕೆ ₹3.75 ಕೋಟಿ ಉಳಿತಾಯವಾಗಲಿದೆ' ಎಂದು ಬೇಳೂರು ರಾಘವೇಂದ್ರ ಶೆಟ್ಟಿ ತಿಳಿಸಿದರು.

### ಆನ್‌ಲೈನಲ್ಲೂ ಕಂಪು

'ಕಾವೇರಿ ಬ್ರ್ಯಾಂಡ್ ಆನ್‌ಲೈನಲ್ಲೂ ಲಭ್ಯ. ಅಮೆಜಾನ್, ಫ್ಲಿಪ್‌ಕಾರ್ಟ್ ಸೇರಿದಂತೆ ಇ–ಕಾಮರ್ಸ್ ಸಂಸ್ಥೆಗಳ ಜೊತೆ ಕಾವೇರಿ ಕೈ ಜೋಡಿಸಿದೆ. ಎಂ.ಜಿ.ರಸ್ತೆಯ ಮಳಿಗೆ ಸೇರಿದಂತೆ ಬೆಂಗಳೂರಿನಲ್ಲಿ 3 ಮಳಿಗೆಗಳು, ಮೈಸೂರಿನಲ್ಲಿ 3, ಮಂಗಳೂರು, ಹುಬ್ಬಳ್ಳಿ, ನವದೆಹಲಿ, ಸಿಕಂದರಾಬಾದ್, ಕೋಲ್ಕತ್ತದಲ್ಲಿ ತಲಾ ಒಂದು ಮಳಿಗೆ ಇದೆ. ಗುಜರಾತ್ ರಾಜ್ಯನಲ್ಲೂ ಕಾವೇರಿ ಮಳಿಗೆ ಆರಂಭಿಸಲಾಗಿದೆ. ಚೆನ್ನೈನಲ್ಲಿ ಕಾರಣಾಂತರಗಳಿಂದ ಮುಚ್ಚಿದ್ದ ಮಳಿಗೆಯನ್ನು ಶೀಘ್ರದಲ್ಲೇ ಮತ್ತೆ ಆರಂಭಿಸಲಿದ್ದೇವೆ. ದುಬೈನಲ್ಲೂ ಒಂದು ಮಳಿಗೆ ತೆರೆಯಲು ಸಿದ್ಧತೆ ನಡೆಸಿದ್ದೇವೆ' ಎಂದು ವಿವರಿಸಿದರು.

## ಸುದ್ದಿ 2 ನಿಮಿಷ

### ಗ್ರಾಹಕರ ಹಿತ ಕಾಯಲು ಎನ್‌ಇಪಿ ಪೂರಕ: ಅಶ್ವತ್ಥನಾರಾಯಣ

**ಬೆಂಗಳೂರು:** 'ಗ್ರಾಹಕರ ಹಿತ ಕಾಪಾಡುವ ವಿಚಾರದಲ್ಲಿ ತುಂಬಾ ಹಿಂದಿದ್ದೇವೆ. ಗ್ರಾಹಕರ ಹಕ್ಕುಗಳು ಮತ್ತು ಅವರ ಹಿತರಕ್ಷಣೆ ಕಾಪಾಡುವುದಕ್ಕೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒತ್ತು ಕೊಡಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಹೇಳಿದರು.

'ಅಖಿಲ ಭಾರತೀಯ ಗ್ರಾಹಕ ಪಂಚಾಯತಿ'ಯ (ಎಬಿಜಿಪಿ) ರಾಜ್ಯ ಘಟಕವು ಗಿರಿನಗರದಲ್ಲಿ ಏರ್ಪಡಿಸಿದ್ದ ಗ್ರಾಹಕ ಜಾಗೃತಿ ಪಕ್ಷಾಚರಣೆಯ ಸಮಾರೋಪದಲ್ಲಿ ಅವರು ಮಾತನಾಡಿದರು.

ಎಬಿಜಿಪಿ ಅಧ್ಯಕ್ಷ ನಾರಾಯಣಭಾಯ್, ದತ್ತಾತ್ರಿ ನಾಡಿಗೇರ್, ನ್ಯಾಷನಲ್ ಲಾ ಸ್ಕೂಲ್ ಸಂಸ್ಥೆಯ ಡಾ.ಅಶೋಕ್ ಪಾಟೀಲ, ಡಾ.ಕಿಶೋರ್ ಅವರು ಉಪಸ್ಥಿತರಿದ್ದರು.

### 'ಸರ್ಕಾರಿ ಶಾಲೆಗೆ ಮೂಲ ಸೌಕರ್ಯ ಕಲ್ಪಿಸಲು ಸಲಹೆ'

**ಆರ್.ಆರ್.ನಗರ:** 'ನಿರಂತರ ಅಧ್ಯಯನ ಮತ್ತು ಪರಿಶ್ರಮದ ಮೂಲಕ ಜೀವನದಲ್ಲಿ ಸಾಧನೆ ಮಾಡಬೇಕು. ಶಿಕ್ಷಕರ ಮಾರ್ಗದರ್ಶನ ಪಡೆಯಬೇಕು' ಎಂದು ಕಾಂಗ್ರೆಸ್ ಮುಖಂಡರಾದ ಎಚ್.ಕುಸುಮಾ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಚನ್ನಸಂದ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಜೊತೆ ಅವರು ಸಂವಾದ ನಡೆಸಿದರು. ಕಾಂಗ್ರೆಸ್ ಮುಖಂಡರಾದ ಎಚ್. ಕುಸುಮಾ ಅವರು, ವಿದ್ಯಾರ್ಥಿಗಳ ಜತೆ ಹಮ್ಮಿಕೊಂಡಿದ್ದ ಸಂವಾದ, ಪಾಠ ಪ್ರವಚನ, ಉಚಿತ ಆರೋಗ್ಯ ಶಿಬಿರದಲ್ಲಿ ಅವರು ಮಾತನಾಡಿದರು.

ಕೆಪಿಸಿಸಿ ಸಂಯೋಜಕ ಎಂ. ತಿಬ್ಬೇಗೌಡ, 'ಬಡವರು ಮತ್ತು ಗ್ರಾಮೀಣ ಪ್ರದೇಶದ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಉತ್ತಮ ಸೌಲಭ್ಯಗಳನ್ನು ಕಲ್ಪಿಸಲು ಉದ್ಯಮಿಗಳು ನೆರವಾಗಬೇಕು' ಎಂದರು. ರಾಜರಾಜೇಶ್ವರಿನಗರ ಕಾಂಗ್ರೆಸ್ ಘಟಕದ ಅಧ್ಯಕ್ಷ ಪ್ರೀತಮ್, ಮುಖ್ಯ ಶಿಕ್ಷಕಿ ಕೃಷ್ಣಾಬಾಯಿ ಇದ್ದರು.

ಸದ್ಯ ಪ್ರತಿ ದಿನ 50 ಸಾವಿರ ಮಂದಿಯ ಪರೀಕ್ಷೆ

## ಕೋವಿಡ್–19: ಪರೀಕ್ಷೆ ಹೆಚ್ಚಿಸಲು ಚಿಂತನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕೋವಿಡ್ ಪ್ರಕರಣಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಪ್ರತಿ ದಿನ 60 ಸಾವಿರ ಮಂದಿ ಪರೀಕ್ಷೆ ನಡೆಸಲು ಬಿಬಿಎಂಪಿ ಉದ್ದೇಶಿಸಿದೆ.

'ಸದ್ಯ ಬಿಬಿಎಂಪಿ ವ್ಯಾಪ್ತಿಯಲ್ಲಿ ನಿತ್ಯ 50 ಸಾವಿರ ಮಂದಿಯನ್ನು ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಹಂತ ಹಂತವಾಗಿ ಇದನ್ನು ನಿತ್ಯ 60 ಸಾವಿರಕ್ಕೆ ಏರಿಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಶನಿವಾರ ತಿಳಿಸಿದರು.

'ಅಂತರರಾಷ್ಟ್ರೀಯ ಪ್ರಯಾಣಿಕರಲ್ಲೇ ಅತಿ ಹೆಚ್ಚು ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗುತ್ತಿವೆ. ನಗರದಲ್ಲಿ ಮಹದೇವಪುರ, ಬೊಮ್ಮನಹಳ್ಳಿ, ಯಲಹಂಕ ಪ್ರದೇಶಗಳಲ್ಲಿ ಈ ಪ್ರಕರಣಗಳು ಹೆಚ್ಚು ಪ್ರಮಾಣದಲ್ಲಿ ಕಂಡು ಬಂದಿವೆ. ಅಂತರರಾಷ್ಟ್ರೀಯ ಪ್ರವಾಸಿಗರನ್ನು ಗುರುತಿಸಿ ಪರೀಕ್ಷೆ ಮಾಡಲಾಗುತ್ತಿದೆ ಮತ್ತು ಅವರ ಪ್ರತ್ಯೇಕ ವಾಸಕ್ಕೆ ಕ್ರಮಕೈಗೊಳ್ಳಲಾಗಿದೆ' ಎಂದರು.

'ಪೂರ್ವ ವಲಯದ ಕೆಲವು ಅಪಾರ್ಟ್‌ಮೆಂಟ್ ಸಮುಚ್ಚಯಗಳ ನಿವಾಸಿಗಳಲ್ಲಿ ಓಮೈಕ್ರಾನ್ ಪತ್ತೆಯಾಗಿದೆ. ಇವರು ಇತ್ತೀಚೆಗೆ ಬೇರೆಡೆಗೆ ಪ್ರವಾಸ ಕೈಗೊಂಡಿರಲಿಲ್ಲ ಎನ್ನುವುದು ಗೊತ್ತಾಗಿದೆ. ಈ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಈಗಾಗಲೇ ಬಿಗಿ ನಿಯಂತ್ರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ (ಆರ್‌ಡಬ್ಲ್ಯುಎ) ಅಧ್ಯಕ್ಷರ ಜತೆಯೂ ಸಮಾಲೋಚನೆಗಳನ್ನು ನಡೆಸಲಾಗಿದ್ದು, ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಗಿದೆ. ಮೂರಕ್ಕಿಂತ ಹೆಚ್ಚು ಪ್ರಕರಣಗಳು ಕಂಡು ಬಂದ ಪ್ರದೇಶವನ್ನು ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಲಾಗುತ್ತಿದೆ' ಎಂದು ತಿಳಿಸಿದರು.

**ಒಂದೇ ದಿನದಲ್ಲಿ 39 ಕೋವಿಡ್:** ಆನೇಕಲ್ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಆನೇಕಲ್ ತಾಲ್ಲೂಕಿನ ಚಂದಾಪುರ, ಹೆಬ್ಬಗೋಡಿ ಮತ್ತು ಜಿಗಣಿಯಲ್ಲಿ ಶನಿವಾರ ಒಂದೇ ದಿನದಲ್ಲಿ ಒಟ್ಟು 39 ಕೋವಿಡ್ ಪ್ರಕರಣ ಪತ್ತೆಯಾಗಿವೆ.

32 ಸೋಂಕಿತರಿಗೆ ಮನೆಯಲ್ಲಿಯೇ ಪ್ರತ್ಯೇಕವಾಗಿ ವಾಸಿಸಲು ಸೂಚಿಸಲಾಗಿದ್ದು, ಏಳು ಸೋಂಕಿತರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. 10 ದಿನಗಳಲ್ಲಿ ತಾಲ್ಲೂಕಿನಲ್ಲಿ 137 ಕೋವಿಡ್ ಪ್ರಕರಣ ಪತ್ತೆಯಾಗಿವೆ.

'ಹೆಬ್ಬಗೋಡಿಯಲ್ಲಿ ಕಂಡು ಬಂದಿರುವ ಸೋಂಕಿತರು ಗೋವಾ, ಹಿಮಾಚಲ ಪ್ರದೇಶದಿಂದ ಪ್ರಯಾಣ ಮಾಡಿದವರಾಗಿದ್ದಾರೆ' ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ. ವಿನಯ್ ತಿಳಿಸಿದ್ದಾರೆ.

**18 ಪ್ರಯಾಣಿಕರಿಗೆ ಸೋಂಕು:** ದೇವನಹಳ್ಳಿ: ವಿದೇಶಗಳಿಂದ ಶುಕ್ರವಾರ ಮತ್ತು ಶನಿವಾರ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ 18 ಪ್ರಯಾಣಿಕರಲ್ಲಿ ಕೋವಿಡ್–19 ದೃಢಪಟ್ಟಿದೆ.

### 'ಶಾಲೆ ತೊರೆದ ಮಕ್ಕಳಿಗೆ 2ನೇ ಹಂತದಲ್ಲಿ ಲಸಿಕೆ'

'15ರಿಂದ 18 ವರ್ಷದವರಿಗೆ ಲಸಿಕೆ ನೀಡಲು ಬಿಬಿಎಂಪಿ ಎಲ್ಲ ರೀತಿಯ ಸಿದ್ಧತೆಗಳನ್ನು ಕೈಗೊಂಡಿದೆ. ಶಾಲೆಗಳಲ್ಲೇ ಲಸಿಕೆ ನೀಡಲಾಗುವುದು. ಶಾಲೆಗೆ ತೊರೆದ ಮಕ್ಕಳನ್ನೂ ಗುರುತಿಸಿ ಲಸಿಕೆ ನೀಡುವ ಕಾರ್ಯವನ್ನು ಎರಡನೇ ಹಂತದಲ್ಲಿ ಕೈಗೊಳ್ಳಲಾಗುವುದು. ಆನ್‌ಲೈನ್ ಮೂಲಕ ತರಗತಿಗೆ ಹಾಜರಾಗುತ್ತಿರುವ ಮಕ್ಕಳನ್ನು ಶಾಲೆಗೆ ಕರೆಯಿಸಿಕೊಂಡು ಲಸಿಕೆ ನೀಡಲಾಗುವುದು' ಎಂದು ಗೌರವ ಗುಪ್ತ ತಿಳಿಸಿದರು.

### ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

**12,64,428** ಒಟ್ಟು ಸೋಂಕಿತರು (12,63,618 ನಿನ್ನೆಯ ವಿವರ)

| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |
|---|---|---|
| 7,876 ▲ | 12,40,149 ▲ | 16,402 ▲ |

ದಿನದ ಏರಿಕೆ

| | |
|---|---|
| ಹೊಸ ಪ್ರಕರಣ | 810 ▼ |
| ಗುಣಮುಖ | 218 ▲ |
| ಸಾವು | 02 |

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

### ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 28.90 ಕೋಟಿ ▲ | 3.48 ಕೋಟಿ |
| ಸಕ್ರಿಯ ಪ್ರಕರಣ | 2.96 ಕೋಟಿ ▲ | 1.04 ಲಕ್ಷ ▲ |
| ಗುಣಮುಖ | 25.39 ಕೋಟಿ ▼ | 3.42 ಕೋಟಿ |
| ಸಾವು | 54.55 ಲಕ್ಷ ▲ | 4.81 ಲಕ್ಷ |

ದಿನದ ಮಾಹಿತಿ

| | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 16.39 ಲಕ್ಷ ▼ | 22,775 ▲ |
| ಗುಣಮುಖ | 5.06 ಲಕ್ಷ ▼ | 8,949 ▲ |
| ಸಾವು | 5,947 ▼ | 406 ▲ |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

| | |
|---|---|
| ಅಮೆರಿಕ | 4.43 ಲಕ್ಷ ▼ |
| ಫ್ರಾನ್ಸ್ | 2.32 ಲಕ್ಷ ▲ |
| ಬ್ರಿಟನ್ | 1.89 ಲಕ್ಷ |

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

| | |
|---|---|
| ಅಮೆರಿಕ | 1.33 ಕೋಟಿ ▲ |
| ಫ್ರಾನ್ಸ್ | 17.57 ಲಕ್ಷ ▲ |
| ಬ್ರಿಟನ್ | 24.74 ಲಕ್ಷ ▲ |

ಎಲ್ಲಿ ಹೆಚ್ಚು ಸಾವು (ಒಟ್ಟು)

| | |
|---|---|
| ಮಹಾರಾಷ್ಟ್ರ | 1.41 ಲಕ್ಷ |
| ಕೇರಳ | 47,794 ▲ |
| ತಮಿಳುನಾಡು | 36,776 ▼ |

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

| | |
|---|---|
| ಮಹಾರಾಷ್ಟ್ರ | 66.78 ▲ |
| ಕೇರಳ | 52.47 ▲ |
| ತಮಿಳುನಾಡು | 27.48 ▲ |

ಪ್ರಜಾವಾಣಿ ಗ್ರಾಫಿಕ್ಸ್

### 18 ಪ್ರಯಾಣಿಕರಿಗೆ ಕೋವಿಡ್ ದೃಢ

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ:** ಶುಕ್ರವಾರ ಮತ್ತು ಶನಿವಾರ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ 18 ಪ್ರಯಾಣಿಕರಲ್ಲಿ ಕೋವಿಡ್–19 ದೃಢಪಟ್ಟಿದೆ. ಸೋಂಕಿತರನ್ನು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮುಂಜಾಗ್ರತೆಯಾಗಿ ಹೊಸಕೋಟೆಯಲ್ಲಿ ಮೇಕ್ ಶಿಫ್ಟ್ ಆಸ್ಪತ್ರೆಯನ್ನು ಸ್ಥಾಪಿಸಿ, ಚಿಕಿತ್ಸೆಗಾಗಿ 50 ಹಾಸಿಗೆಗಳನ್ನು ಕಾಯ್ದಿರಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ತಿಳಿಸಿದ್ದಾರೆ.

## ಚಿತ್ರಾವಳಿ

ನಗರದ ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯಲ್ಲಿ ಶನಿವಾರ ಏರ್ಪಡಿಸಿದ್ದ 'ವ್ಯಂಗ್ಯಚಿತ್ರ ಉತ್ಸವ'ದಲ್ಲಿ (ಎಡದಿಂದ ಮೂರನೆಯವರು) 'ಕಾರ್ಟೂನ್ ವಾಚ್' ಪತ್ರಿಕೆಯ ಸಂಪಾದಕ ತ್ರಯಂಬಕ ಶರ್ಮಾ ಅವರು(ಎಡದಿಂದ) ವ್ಯಂಗ್ಯಚಿತ್ರಕಾರರಾದ ಬಿ.ಜಿ.ಗುಜ್ಜಾರಪ್ಪ (ಗುಜ್ಜಾರ್), ವಿ.ಜಿ.ನರೇಂದ್ರ, ಕೆ.ಆರ್.ಸ್ವಾಮಿ ಹಾಗೂ ಜಿ.ಎಸ್. ನಾಗನಾಥ್ ಅವರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಿದರು —ಪ್ರಜಾವಾಣಿ ಚಿತ್ರ

ಅಂಚೆ ಇಲಾಖೆಯು ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳ ವಿಶೇಷ ಅಂಚೆ ಲಕೋಟೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಬಿಡುಗಡೆ ಮಾಡಿದರು. ಅಂಚೆ ಇಲಾಖೆ ಅಧಿಕಾರಿಗಳಾದ ಹಿಮಾಂಶು ಚೌಧರಿ, ಎಲ್.ಕೆ. ಡ್ಯಾಶ್, ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಶಾರದಾ ಸಂಪತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್.ಮಂಜುಳಾ ಹಾಗೂ ನಿರ್ದೇಶಕ ಎಸ್. ರಂಗಪ್ಪ ಇದ್ದಾರೆ —ಪ್ರಜಾವಾಣಿ ಚಿತ್ರ




ತ್ಯಾಗರಾಜ ಕೋಆಪರೇಟಿವ್ ಬ್ಯಾಂಕ್ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2022ನೇ ವರ್ಷದ ಡೈರಿ ಮತ್ತು ಕ್ಯಾಲೆಂಡರ್ ಅನ್ನು ಸಂಸದ ತೇಜಸ್ವಿ ಸೂರ್ಯ ಬಿಡುಗಡೆ ಮಾಡಿದರು. ಬ್ಯಾಂಕ್‌ನ ಅಧ್ಯಕ್ಷ ಎಂ.ಆರ್.ವೆಂಕಟೇಶ್, ಉಪಾಧ್ಯಕ್ಷ ಕೆ.ಜಿ.ರಾಮೇಗೌಡ, ಸೌಹಾರ್ದ ಮಹಾಮಂಡಲದ ಅಧ್ಯಕ್ಷ ಕೃಷ್ಣರೆಡ್ಡಿ ಹಾಗೂ ಆಡಳಿತ ಮಂಡಳಿ ಸದಸ್ಯರು ಇದ್ದಾರೆ.



ಕೆ.ಆರ್.ಪುರ ಸಮೀಪದ ಬಸವನಪುರದಲ್ಲಿ ಆದ್ವಿತ ಜಯಪ್ರಕಾಶ್ ಫೌಂಡೇಷನ್ ವತಿಯಿಂದ ಐದು ಸರ್ಕಾರಿ ಶಾಲೆಗಳ 500ಕ್ಕೂ ಹೆಚ್ಚು ಮಕ್ಕಳಿಗೆ ಕಲಿಕಾ ಸಾಮಗ್ರಿ ಹಾಗೂ ಬ್ಯಾಗ್‌ಗಳನ್ನು ಫೌಂಡೇಷನ್ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಜಯಪ್ರಕಾಶ್ ವಿತರಿಸಿದರು.

## ಬೆಟ್ಟಹಲಸೂರು, ಬಾಗಲೂರು ಕೈವಶ; ಸಾತನೂರು ಬಿಜೆಪಿ ತೆಕ್ಕೆಗೆ

ಪ್ರಜಾವಾಣಿ ವಾರ್ತೆ

**ಯಲಹಂಕ:** ತಾಲ್ಲೂಕಿನ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ 3 ಗ್ರಾಮ ಪಂಚಾಯಿತಿಗಳಿಗೆ ನಡೆದ ಚುನಾವಣೆಯಲ್ಲಿ ಬೆಟ್ಟಹಲಸೂರು ಮತ್ತು ಬಾಗಲೂರು ಪಂಚಾಯಿತಿಗಳಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯರು, ಸಾತನೂರು ಪಂಚಾಯಿತಿಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಬಿಜೆಪಿ ವಶದಲ್ಲಿದ್ದ 26 ಸದಸ್ಯಬಲದ ಬೆಟ್ಟಹಲಸೂರು ಗ್ರಾಮಪಂಚಾಯಿತಿಯಲ್ಲಿ ಈ ಬಾರಿ ಕಾಂಗ್ರೆಸ್ ಬೆಂಬಲಿತ 16 ಅಭ್ಯರ್ಥಿಗಳು ಗೆದ್ದಿದ್ದಾರೆ. ಬಿಜೆಪಿ ಬೆಂಬಲಿತ 9 ಮತ್ತು ಒಬ್ಬ ಪಕ್ಷೇತರ ಅಭ್ಯರ್ಥಿ ಜಯಿಸಿದ್ದು, ಪಂಚಾಯಿತಿ ಕಾಂಗ್ರೆಸ್ ವಶವಾಗಿದೆ.

ಬಾಗಲೂರು ಗ್ರಾಮ ಪಂಚಾಯಿತಿಯ ಒಟ್ಟು 26 ಸದಸ್ಯ ಸ್ಥಾನಗಳ ಪೈಕಿ 22 ಸ್ಥಾನಗಳಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯರು ಆಯ್ಕೆಯಾಗಿದ್ದಾರೆ. ಈ ಬಾರಿಯೂ ಕಾಂಗ್ರೆಸ್ ಬೆಂಬಲಿತ ಸದಸ್ಯರ ಆಡಳಿತ ಮುಂದುವರಿಯಲಿದೆ. ಇಲ್ಲಿ ಬಿಜೆಪಿ ಬೆಂಬಲಿತ 4 ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಸಾತನೂರು ಗ್ರಾಮ ಪಂಚಾಯಿತಿಯ ಒಟ್ಟು 11 ಸ್ಥಾನಗಳ ಪೈಕಿ 8 ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು, 3 ಸ್ಥಾನಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಮಾರೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾರಸಂದ್ರ ಪಂಚಾಯಿತಿ ಸದಸ್ಯ ವೆಂಕಟೇಶ್ ನಿಧನದಿಂದ ತೆರವಾಗಿದ್ದ ಒಂದು ಸ್ಥಾನಕ್ಕಾಗಿ ನಡೆದ ಉಪಚುನಾವಣೆಯಲ್ಲಿ ಮುನಿಮುದ್ದೂರಪ್ಪ ಆಯ್ಕೆಯಾಗಿದ್ದಾರೆ.

ನಗರದ ಕೆ.ಸಿ. ಜನರಲ್ ಆಸ್ಪತ್ರೆ ಸಮೀಪದ ಸರ್ಕಾರಿ ಶಾಲಾ ಆವರಣದಲ್ಲಿ ಆರಂಭಿಸಿರುವ ಕೋವಿಡ್ ಲಸಿಕೆ ಕೇಂದ್ರದಲ್ಲಿ ಮಹಿಳೆಯೊಬ್ಬರಿಗೆ ಲಸಿಕೆ ನೀಡಲಾಯಿತು. ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಇದ್ದಾರೆ

ಲಸಿಕೆ, ಮಾಸ್ಕ್ ಅಲಕ್ಷಿಸಬೇಡಿ :ಡಾ.ಸುದರ್ಶನ ಸಲಹೆ

## ಕೋವಿಡ್:'ಫೆಬ್ರುವರಿಗೆ ಮೂರನೇ ಅಲೆ?'

ಪ್ರಜಾವಾಣಿ ವಾರ್ತೆ

**ಕಲಬುರಗಿ:** 'ಜನವರಿ ಅಂತ್ಯ ಅಥವಾ ಫೆಬ್ರುವರಿಯಲ್ಲಿ ಕೋವಿಡ್ ಮೂರನೇ ಅಲೆಯ ಉಪಟಳ ಹೆಚ್ಚುವ ಸಾಧ್ಯತೆ ಇದೆ. ಮುಂಜಾಗ್ರತೆಯಾಗಿ ಎಲ್ಲ ವೈದ್ಯಕೀಯ ಸಿದ್ಧತೆ ಮಾಡಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಲಾಗಿದೆ' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷರೂ ಆದ, ಬೆಂಗಳೂರಿನ ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಎಂ.ಕೆ. ಸುದರ್ಶನ ತಿಳಿಸಿದರು.

ಇಲ್ಲಿನ ಡಾ.ಪಿ.ಎಸ್.ಶಂಕರ ಪ್ರತಿಷ್ಠಾನ ಶನಿವಾರ ಆಯೋಜಿಸಿದ್ದ 22ನೇ ವಾರ್ಷಿಕೋತ್ಸವ, ವಿಜ್ಞಾನ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ 'ಡಾ.ಪಿ.ಎಸ್. ಶಂಕರ ರಾಷ್ಟ್ರೀಯ ವೈದ್ಯಶ್ರೀ' ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

'ಮಕ್ಕಳಿಗೆ ಲಸಿಕೆ ಹಾಗೂ ದೊಡ್ಡವರಿಗೆ ಬೂಸ್ಟರ್ ಡೋಸ್‌ಗಳನ್ನು ನೀಡಲು ತೀರ್ಮಾನಿಸಲಾಗಿದೆ. ಜನರು ಇವುಗಳನ್ನು ಅಲಕ್ಷ್ಯ ಮಾಡಬಾರದು' ಎಂದೂ ಸಲಹೆ ನೀಡಿದರು.

'ಓಮೈಕ್ರಾನ್ ವೈರಾಣು ಬಗ್ಗೆ ಸಾಕಷ್ಟು ಅರಿವು ಮೂಡಿಸಲಾಗಿದೆ. ಇದರ ನಿಯಂತ್ರಣಕ್ಕೆ ಎಷ್ಟು ಸಾಧ್ಯವೋ ಅಷ್ಟು ಬೇಗ ಸಿದ್ಧತೆ ಮಾಡಿಕೊಳ್ಳುವುದು ಒಳ್ಳೆಯದು. ಇದರ ಜಿನೋಮ್ ಸಿಕ್ವೆನ್ಸಿಂಗ್‌ಗೆ 8ರಿಂದ 10 ದಿನ ಬೇಕಾಗಲಿದೆ. ಹಿಂದಿಗಿಂತಲೂ ಹೆಚ್ಚು ಜಾಗ್ರತೆ ವಹಿಸಬೇಕು' ಎಂದು ತಿಳಿಸಿದರು.

ಮಂಗಳೂರಿನ ದಂತವೈದ್ಯ ಡಾ. ಮುರಳಿಮೋಹನ ಚೂಂತಾರುಗೆ 'ಡಾ. ಪಿ.ಎಸ್. ಶಂಕರ ಶ್ರೇಷ್ಠ ವೈದ್ಯ ಸಾಹಿತ್ಯ' ಪ್ರಶಸ್ತಿನೀಡಿ ಗೌರವಿಸಲಾಯಿತು.

ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ದಯಾನಂದ ಅಗಸರ, ಸಾರ್ವಜನಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಜಿ.ಎಂ.ಜಯಕುಮಾರ ಮಾತನಾಡಿದರು. ಪ್ರತಿಷ್ಠಾನದ ಅಧ್ಯಕ್ಷೆ ಅಂಬಿಕಾ ಶಂಕರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.



ಕಲಬುರಗಿಯಲ್ಲಿ ಶನಿವಾರ ಡಾ.ಎಂ.ಕೆ.ಸುದರ್ಶನ ಅವರಿಗೆ 'ಡಾ.ಪಿ.ಎಸ್.ಶಂಕರ್ ರಾಷ್ಟ್ರೀಯ ವೈದ್ಯಶ್ರೀ' ಪ್ರಶಸ್ತಿ ಹಾಗೂ ಡಾ.ಮುರಳಿಮೋಹನ ಚೂಂತಾರು ಅವರಿಗೆ 'ಶ್ರೇಷ್ಠ ವೈದ್ಯ ಸಾಹಿತ್ಯ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರೊ.ದಯಾನಂದ ಅಗಸರ, ಅಂಬಿಕಾ ಶಂಕರ, ಜಿ.ಎಂ.ವಿಜಯಕುಮಾರ, ಡಾ.ಮಹಾದೇವಪ್ಪ, ಡಾ.ಎಚ್.ವೀರೇಭದ್ರಪ್ಪ, ಡಾ.ಪಿ.ಎಸ್.ಶಂಕರ ಇದ್ದರು —ಪ್ರಜಾವಾಣಿ ಚಿತ್ರ

## ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸುಬ್ರಹ್ಮಣ್ಯನಗರ, ವೈಯಾಲಿಕಾವಲ್ ಬಡಾವಣೆಗಳಲ್ಲಿ ಎರಡು ನೂತನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮತ್ತು ದಿನದ 24 ಗಂಟೆ ಕಾರ್ಯನಿರ್ವಹಿಸುವ ಕೋವಿಡ್ ಲಸಿಕಾ ಕೇಂದ್ರಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಶನಿವಾರ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಅವರು, ಸುಬ್ರಹ್ಮಣ್ಯನಗರದ ಗರಡಿ ಮನೆ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. 'ಕ್ಷೇತ್ರ ವ್ಯಾಪ್ತಿಯ ರಾಜಮಹಲ್ ಗುಟ್ಟಹಳ್ಳಿಯಲ್ಲಿ 75 ಹಾಸಿಗೆಗಳ ಅತ್ಯಾಧುನಿಕ ಆಸ್ಪತ್ರೆಯನ್ನು ಸದ್ಯದಲ್ಲೇ ನಿರ್ಮಿಸಲಾಗುವುದು' ಎಂದು ಸಚಿವರು ತಿಳಿಸಿದರು.

'ಈ ಕೇಂದ್ರಗಳಲ್ಲಿ ಡಿಜಿಟಲ್ ಎಕ್ಸ್-ರೇ, ಕಣ್ಣು, ದಂತ ಪರೀಕ್ಷೆಯ ಸೇವೆಗಳು ಕೈಗೆಟಕುವ ದರದಲ್ಲಿ ಲಭ್ಯ. ಕಣ್ಣಿನ ಚಿಕಿತ್ಸೆ ಕುರಿತು ಮಿಂಟೊ ಕಣ್ಣಿನ ಆಸ್ಪತ್ರೆ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದರು.

'ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 60 ಹಾಸಿಗೆಗಳ ಮಕ್ಕಳ ಚಿಕಿತ್ಸೆ ವಿಭಾಗ ಮತ್ತು ಜಯದೇವ ಹೃದ್ರೋಗ ಆಸ್ಪತ್ರೆಯ 100 ಹಾಸಿಗೆಗಳ ಚಿಕಿತ್ಸಾ ಘಟಕ ಏಪ್ರಿಲ್‌ನಲ್ಲಿ ಆರಂಭವಾಗಲಿದೆ. ಮಣಿಪಾಲ್ ಆಸ್ಪತ್ರೆ ಸಹಯೋಗದೊಂದಿಗೆ ಜನರಿಗೆ ಡಿಜಿಟಲ್ ಆರೋಗ್ಯ ಸೇವೆಗಳನ್ನು ಪೂರೈಸಲಾಗುವುದು' ಎಂದು ವಿವರಿಸಿದರು.

ಕೆ.ಸಿ.ಜನರಲ್ ಆಸ್ಪತ್ರೆ ಎದುರಿನಲ್ಲಿರುವ ಸರ್ಕಾರಿ ಶಾಲಾ ಆವರಣದಲ್ಲಿ ದಿನದ 24 ತಾಸು ಕಾರ್ಯನಿರ್ವಹಿಸುವ ಕೋವಿಡ್ ಲಸಿಕಾ ಕೇಂದ್ರಕ್ಕೆ ಅವರು ಚಾಲನೆ ನೀಡಿದರು.

## ‘ಅತಿಥಿ ಉಪನ್ಯಾಸಕರ ಬೇಡಿಕೆಗಳು ಪೂರ್ಣ ನ್ಯಾಯಬದ್ಧ’

ಬೆಂಗಳೂರು: ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರನ್ನು ಅನೇಕ ವರ್ಷಗಳಿಂದ ಅದೇ ರೀತಿಯಲ್ಲಿ ನಡೆಸಿಕೊಂಡು ಬಂದಿರುವುದಕ್ಕೆ ಸರ್ಕಾರಗಳ ನಿರ್ಲಕ್ಷ್ಯವೇ ಕಾರಣ ಎಂದು ಕಾಂಗ್ರೆಸ್ ಮುಖಂಡ ಪ್ರೊ. ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

ಪ್ರಥಮ ದರ್ಜೆ ಕಾಲೇಜುಗಳಲ್ಲಿ 14,200 ಉಪನ್ಯಾಸಕರು ಕೆಲವು ವರ್ಷಗಳಿಂದ ಪಾಠ ಮಾಡುತ್ತಿದ್ದಾರೆ. ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಇಂತಹ ಉಪನ್ಯಾಸಕರಿಗೆ ತಿಂಗಳಿಗೆ ಕನಿಷ್ಠ ₹ 50 ಸಾವಿರ ಸಂಭಾವನೆ ನೀಡಬೇಕು ಎಂದು ಆದೇಶ ನೀಡಿದೆ. ಹಾಗಿದ್ದರೂ ಬಹುತೇಕರಿಗೆ ಅದರ ಅರ್ಧದಷ್ಟೂ ಕೈಗೆ ಸಿಗುತ್ತಿಲ್ಲ. ದಕ್ಕುವ ‘ಗೌರವಧನ’ ಕೇವಲ ₹10 ಸಾವಿರವಷ್ಟೇ ಎಂದು ಉಪನ್ಯಾಸಕರೇ ಹೇಳುತ್ತಿದ್ದಾರೆ. 12 ತಿಂಗಳ ಸಂಬಳ ಹಾಗೂ ಸೇವೆಯಲ್ಲಿ ಮುಂದುವರಿಸುವ ಆಶ್ವಾಸನೆ ನೀಡಬೇಕು ಎಂಬ ಉಪನ್ಯಾಸಕರ ಬೇಡಿಕೆಗಳು ಸಂಪೂರ್ಣ ನ್ಯಾಯಬದ್ಧ ಎಂದು ಅವರು ಪ್ರತಿಪಾದಿಸಿದ್ದಾರೆ.

### ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆ: ಸಿಎಂ ಬಸವರಾಜ ಬೊಮ್ಮಾಯಿಗೆ ಸಿದ್ದರಾಮಯ್ಯ ಪತ್ರ

# ‘ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರನ್ನು ಸರ್ಕಾರ ಶೋಷಣೆ ಮಾಡದೆ, ಅವರ ಬೇಡಿಕೆಗಳನ್ನು ಈಡೇರಿಸಬೇಕು’ ಎಂದು ಒತ್ತಾಯಿಸಿ ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ ಸಚಿವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

‘ರಾಜ್ಯದ 440 ಪ್ರಥಮ ದರ್ಜೆ ಕಾಲೇಜುಗಳ 14,183 ಅತಿಥಿ ಉಪನ್ಯಾಸಕರು ಹಲವು ದಿನಗಳಿಂದ ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಉಪನ್ಯಾಸಕರ ಜೊತೆ ಮಾನವೀಯತೆಯಿಂದ ವರ್ತಿಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ಸೇವೆಗೆ ಕನಿಷ್ಠ ಭದ್ರತೆ ಮತ್ತು ವರ್ಷದ ಎಲ್ಲ ತಿಂಗಳು ಸಂಬಳ ನೀಡಬೇಕು. ಜೊತೆಗೆ, ಘನತೆಯಿಂದ ಬದುಕುವುದಕ್ಕೆ ಬೇಕಾಗುವಷ್ಟು ಸಂಬಳ ನೀಡಬೇಕು ಎಂದು ಅತಿಥಿ ಉಪನ್ಯಾಸಕರು ಬೇಡಿಕೆ ಇಟ್ಟಿದ್ದಾರೆ. ಈಗ ನೀಡುತ್ತಿರುವುದಕ್ಕೆ ₹ 200 ಕೋಟಿ ಹೆಚ್ಚು ಹಣ ನೀಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ. ಆದರೆ, ಸರ್ಕಾರದ ನಿರ್ಲಕ್ಷ್ಯ ಅಮಾನವೀಯವಾದುದು’ ಎಂದೂ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

> ಅತಿಥಿ ಉಪನ್ಯಾಸಕರ ಬಗ್ಗೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿಕೆ ಖಂಡನೀಯ. ಸಾಂತ್ವನ ಹೇಳುವ ಔದಾರ್ಯ ಇಲ್ಲದ ಅವರು, ಸಚಿವರಾಗಿ ಮುಂದುವರಿಯುವುದರಲ್ಲಿ ಅರ್ಥವಿಲ್ಲ.
>
> **ಎಚ್. ವಿಶ್ವನಾಥ್**
> ವಿಧಾನ ಪರಿಷತ್ ಸದಸ್ಯ

‘ಅತಿಥಿ ಉಪನ್ಯಾಸಕರಿಗೆ ತಿಂಗಳಿಗೆ ₹ 11 ಸಾವಿರದಿಂದ ₹ 13 ಸಾವಿರ ಗೌರವಧನ ನೀಡಲಾಗುತ್ತಿದೆ. ಎರಡು ವರ್ಷಗಳಲ್ಲಿ ಪ್ರತಿ ವಸ್ತುಗಳ ಬೆಲೆ ದುಪ್ಪಟ್ಟಾಗಿದೆ. ಸರ್ಕಾರ ನೀಡುತ್ತಿರುವ ಪುಡಿಗಾಸಿನಲ್ಲಿ ಅವರು ಬದುಕುವುದು ಹೇಗೆ? ಅದೂ ವರ್ಷದಲ್ಲಿ ಎಂಟು ತಿಂಗಳು ಮಾತ್ರ. ಯುಜಿಸಿ ಸಂಬಳ ಪಡೆಯುವ ಉಪನ್ಯಾಸಕರಷ್ಟೆ ಪರಿಣಾಮಕಾರಿಯಾಗಿ ಅತಿಥಿ ಉಪನ್ಯಾಸಕರೂ ಪಾಠ- ಪ್ರವಚನಗಳನ್ನು ಮಾಡುತ್ತಾರೆ. ಅತಿ ಕಡಿಮೆ ಗೌರವಧನ ನೀಡುವುದನ್ನು ಕೆಲವರು ಶೋಷಣೆ ಎಂದಿದ್ದಾರೆ. ಅತಿಥಿ ಉಪನ್ಯಾಸಕರ ಈ ಮಾತಿಗೆ ಕೆರಳಿದ ಶಿಕ್ಷಣ ಸಚಿವರು, ಪ್ರತಿಭಟನಾಕಾರರನ್ನು ನಿಂದಿಸಿದ್ದಾರೆಂದು ಪತ್ರಿಕೆಗಳು ವರದಿ ಮಾಡಿವೆ. ಸರ್ಕಾರದ ಈ ನಿಲುವು ಖಂಡನೀಯ’ ಎಂದಿದ್ದಾರೆ.

‘ಸರಿಯಾಗಿ ಸಂಬಳವಿಲ್ಲದೆ ಕೋವಿಡ್ ಸಂದರ್ಭದಲ್ಲಿ ಅನೇಕ ಅತಿಥಿ ಉಪನ್ಯಾಸಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾಯಿಲೆಗಳಿಗೆ ಚಿಕಿತ್ಸೆ ಪಡೆದುಕೊಳ್ಳಲಾಗದೆ ಅಸುನೀಗಿದ್ದಾರೆ. ಹೀಗಾಗಿ, ಬೇಡಿಕೆಗಳನ್ನು ಈಡೇರಿಸಿ, ಅವರು ಬೋಧನೆಯಲ್ಲಿ ತೊಡಗಿಕೊಳ್ಳುವಂತೆ ಕ್ರಮವಹಿಸಬೇಕು’ ಎಂದೂ ಅವರು ಆಗ್ರಹಿಸಿದ್ದಾರೆ.

‘ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದ ಮೊದಲ ರಾಜ್ಯ ತಮ್ಮದು. ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ ಸುಸ್ಥಿರ ಅಭಿವೃದ್ಧಿ ಗುರಿ ಹಾಕಿಕೊಂಡಿದ್ದೇವೆ’ ಎಂದು ಹೇಳಿಕೊಳ್ಳುತ್ತಿರುವ ಸರ್ಕಾರ, ಕಳಪೆ ಯಂತ್ರೋಪಕರಣಗಳನ್ನು ಅಳವಡಿಸಲು ಸಾವಿರಾರು ಕೋಟಿ ಖರ್ಚು ಮಾಡುತ್ತಿದೆ. ಆದರೆ, ತಮ್ಮ ಕೆಲಸಕ್ಕೆ ನ್ಯಾಯ ಒದಗಿಸಿ ಎಂದು ಕೇಳುವ ಅತಿಥಿ ಉಪನ್ಯಾಸಕರನ್ನು ನಿಂದಿಸುವುದು, ಹಂಗಿಸುವುದು ಅಮಾನವೀಯ ನಡವಳಿಕೆ’ ಎಂದೂ ಟೀಕಿಸಿದ್ದಾರೆ.

### ‘ಹಲ್ಲೆಗೆ ಒಳಗಾದ ವಿದ್ಯಾರ್ಥಿ ಜೀವ ಉಳಿಸಿ’



ಸಿದ್ದರಾಮಯ್ಯ

‘ಅತಿಥಿ ಉಪನ್ಯಾಸಕರು ತರಗತಿಗಳನ್ನು ತೆಗೆದುಕೊಳ್ಳದ ಕಾರಣದಿಂದಾಗಿ, ಕಾರಿಡಾರ್‌ಗಳಲ್ಲಿ ಓಡಾಡುತ್ತಿರುವ ವಿದ್ಯಾರ್ಥಿಗಳು ಪರಸ್ಪರ ಹೊಡೆದಾಡಿಕೊಳ್ಳುತ್ತಿದ್ದಾರೆ. ಇಂತಹ ಘಟನೆಯೊಂದರಲ್ಲಿ ಗಾರೆ ಕೆಲಸಗಾರರೊಬ್ಬರ ಮಗ ತೀವ್ರ ಗಾಯಗೊಂಡಿದ್ದು, ಆತನ ಜೀವ ಉಳಿಸಲು ಸರ್ಕಾರ ಮುಂದಾಗಬೇಕು’ ಎಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

‘ಬೆಂಗಳೂರಿನ ಸರ್ಕಾರಿ ಕಾಲೇಜೊಂದರಲ್ಲಿ ವಿದ್ಯಾರ್ಥಿಗಳು ಹೊಡೆದಾಡಿಕೊಂಡಿದ್ದರಿಂದ ಗಾಯಗೊಂಡ ವಿದ್ಯಾರ್ಥಿಯೊಬ್ಬ ಜೀವನ್ಮರಣದ ಸ್ಥಿತಿಯಲ್ಲಿ ಕೆ.ಸಿ. ಜನರಲ್ ಆಸ್ಪತ್ರೆಗೆ ಸೇರಿದ್ದಾನೆ. ತೀವ್ರ ಬಡತನದಲ್ಲಿರುವ ಈತನಿಗೆ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈ ವಿದ್ಯಾರ್ಥಿಗೆ ಉತ್ತಮ ಚಿಕಿತ್ಸೆ ಕೊಡಿಸಿ ಬಡ ಕೂಲಿಕಾರನ ಮಗನನ್ನು ಉಳಿಸಿಕೊಡಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

## ಸುದ್ದಿ 2 ನಿಮಿಷ

### ‘15-18 ವರ್ಷದವರಿಗೆ ಲಸಿಕೆ; ಇಂದಿನಿಂದ ನೋಂದಣಿ’

ನವದೆಹಲಿ: ಕೋವಿಡ್-19 ವಿರುದ್ಧ 15-18 ವರ್ಷದ ಮಕ್ಕಳಿಗೆ ಲಸಿಕೆ ಹಾಕುವ ನೋಂದಣಿ ಕಾರ್ಯಕ್ರಮ ಶನಿವಾರದಿಂದ ಕೋವಿನ್ ಪೋರ್ಟಲ್‌ನಲ್ಲಿ ಪ್ರಾರಂಭವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಕುಟುಂಬದಲ್ಲಿರುವ ಅರ್ಹ ಮಕ್ಕಳನ್ನು ನೋಂದಣಿ ಮಾಡುವಂತೆ ಜನರಿಗೆ ಮನವಿ ಮಾಡಿದ್ದಾರೆ.

'ಹೊಸ ವರ್ಷದ ಸಂದರ್ಭದಲ್ಲಿ, 15 ರಿಂದ 18 ವರ್ಷ ವಯಸ್ಸಿನ ಮಕ್ಕಳಿಗೆ ಕೋವಿಡ್ ವಿರುದ್ಧದ ರಕ್ಷಣೆಗಾಗಿ ಕೋವಿನ್ ಪೋರ್ಟಲ್‌ನಲ್ಲಿ ನೋಂದಣಿಯನ್ನು ಪ್ರಾರಂಭಿಸಲಾಗುತ್ತಿದೆ. ಲಸಿಕೆ ಪಡೆಯಲು ಅರ್ಹ ಮಕ್ಕಳನ್ನು ನೋಂದಾಯಿಸಬೇಕೆಂದು ನಾನು ಕುಟುಂಬದ ಸದಸ್ಯರನ್ನು ವಿನಂತಿಸುತ್ತೇನೆ. #SabkoVaccineMuftVaccine' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಜನವರಿ 3ರಿಂದ 15ರಿಂದ 18 ವರ್ಷ ವಯಸ್ಸಿನವರಿಗೆ ಲಸಿಕೆ ನೀಡಿಕೆ ಆರಂಭಿಸಲಾಗುತ್ತದೆ. ಈ ವಯೋಮಾನದವರಿಗೆ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಕೋವ್ಯಾಕ್ಸಿನ್ ಲಸಿಕೆ ನೀಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

### ಸೇನಾ ಹೆಲಿಕಾಪ್ಟರ್ ಪತನ: ಮುಂದಿನ ವಾರ ತನಿಖಾ ವರದಿ?

ನವದೆಹಲಿ : ಸಿಡಿಎಸ್ ಜನರಲ್ ಬಿಪಿನ್ ರಾವತ್ ಮತ್ತು ಇತರ 13 ಮಂದಿ ಮೃತಪಟ್ಟ ಸೇನಾ ಹೆಲಿಕಾಪ್ಟರ್ ಅಪಘಾತದ ಕುರಿತ ತನಿಖೆಯ ವರದಿಯನ್ನು ಮುಂದಿನ ವಾರ ವಾಯುಪಡೆಯ ಕೇಂದ್ರ ಕಚೇರಿಗೆ ಸಲ್ಲಿಸಲಾಗುವುದು ಎಂದು ಈ ಬೆಳವಣಿಗೆ ಬಗ್ಗೆ ಮಾಹಿತಿ ಹೊಂದಿರುವ ಮೂಲಗಳು ಶನಿವಾರ ತಿಳಿಸಿವೆ.

ತಮಿಳುನಾಡಿನ ಕೂನೂರ್ ಬಳಿ ಡಿಸೆಂಬರ್ 8 ರಂದು ನಡೆದ ಸೇನಾ ಹೆಲಿಕಾಪ್ಟರ್ ಅಪಘಾತದ ತನಿಖೆ ಬಹುತೇಕ ಪೂರ್ಣಗೊಂಡಿದ್ದು, ಮುಂದಿನ ಕೆಲವು ದಿನಗಳಲ್ಲಿ ವರದಿಯನ್ನು ಸಲ್ಲಿಸಲು ಅಂತಿಮಗೊಳಿಸಲಾಗುತ್ತಿದೆ ಎಂದು ಅವರು ಹೇಳಿದರು.

ಏರ್ ಮಾರ್ಷಲ್ ಮಾನವೇಂದ್ರ ಸಿಂಗ್ ನೇತೃತ್ವದ ತನಿಖಾ ತಂಡವು ಮಾನವ ದೋಷ ಸೇರಿದಂತೆ ಅಪಘಾತದ ಎಲ್ಲಾ ಸಂಭವನೀಯ ಸನ್ನಿವೇಶಗಳನ್ನು ಪರಿಶೀಲಿಸಿದೆ. ಹೆಲಿಕಾಪ್ಟರ್ ಲ್ಯಾಂಡಿಂಗ್‌ಗೆ ಸಿದ್ಧತೆ ನಡೆಸುತ್ತಿದ್ದಾಗ ಸಿಬ್ಬಂದಿ ದಿಗ್ಭ್ರಮೆಗೊಂಡಿರುವ ಬಗ್ಗೆಯೂ ತಜ್ಞರು ತನಿಖೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ‘ತನಿಖಾ ತಂಡವು ಎಲ್ಲಾ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸಿದೆ ಎಂದು ಖಚಿತಪಡಿಸಿಕೊಳ್ಳಲು ಕಾನೂನು ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಏರ್ ಮಾರ್ಷಲ್ ಮಾನವೇಂದ್ರ ಸಿಂಗ್ ನೇತೃತ್ವದ ತನಿಖಾ ತಂಡವು ಎಲ್ಲಾ ಸಂಭಾವ್ಯ ಕೋನಗಳಲ್ಲಿ ತನಿಖೆ ನಡೆಸುತ್ತಿದೆ. ಒಂದು ವಾರದೊಳಗೆ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿಗೆ ವರದಿ ಸಲ್ಲಿಸುವ ನಿರೀಕ್ಷೆಯಿದೆ.

**ಭಕ್ತರ ದಂಡು** ಹೊಸ ವರ್ಷದ ಮೊದಲ ದಿನವಾದ ಶನಿವಾರ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆಯಲು ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಸಾವಿರಾರು ಭಕ್ತರು ಭೇಟಿ ನೀಡಿದರು –ಪ್ರಜಾವಾಣಿ ಚಿತ್ರ

# ವಿದೇಶಿ ದೇಣಿಗೆ ಸಂಗ್ರಹ: ಎನ್‌ಜಿಒಗಳ ಪರವಾನಗಿ ರದ್ದು

ಒಂದನೇ ಪುಟದಿಂದ

ಆಕ್ಸ್‌ಫ್ಯಾಮ್ ಇಂಡಿಯಾ, ಬೆಂಗಳೂರು ಮತ್ತು ಕೋಲ್ಕತ್ತದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ನೆಹರೂ ಮೆಮೋರಿಯಲ್ ಮ್ಯೂಸಿಯಂ ಅಂಡ್ ಲೈಬ್ರರಿ, ಉತ್ತರಾಖಂಡದ ವಿಪತ್ತು ನಿರ್ವಹಣಾ ಕೇಂದ್ರ, ಭಾರತದ ಕ್ಷಯರೋಗ ಸಂಸ್ಥೆಗಳು ಈ ಪಟ್ಟಿಯಲ್ಲಿ ಸೇರಿವೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಅಡಿ ಎನ್‌ಜಿಒಗಳು ವಿದೇಶಿ ದೇಣಿಗೆ ಪಡೆಯುವ ಪರವಾನಗಿಯನ್ನು ಮಾ.31ರವರೆಗೆ ವಿಸ್ತರಿಸಲಾಗಿತ್ತು. ಕೆಲವು ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಅಥವಾ ಈ ಸಂಸ್ಥೆಗಳು ಮಾನ್ಯತೆ ನವೀಕರಣಕ್ಕಾಗಿ ಅರ್ಜಿಯನ್ನೇ ಸಲ್ಲಿಸಿಲ್ಲ ಎನ್ನಲಾಗಿದೆ. ಎಫ್‌ಸಿಆರ್‌ಎ ಡೇಟಾಬೇಸ್ ಪ್ರಕಾರ, 5,933 ಸಂಸ್ಥೆಗಳ ಪರವಾನಗಿಯನ್ನು ಗೃಹಸಚಿವಾಲಯವು ಶುಕ್ರವಾರ ತಡರಾತ್ರಿ ರದ್ದುಗೊಳಿಸಿದೆ.

### ರಾಜ್ಯದ 736 ಸಂಸ್ಥೆಗಳ ಪರವಾನಗಿ ರದ್ದು

ತಮಿಳುನಾಡು (1,453), ಪಶ್ಚಿಮ ಬಂಗಾಳ (1,382) ಮತ್ತು ಮಹಾರಾಷ್ಟ್ರ (1,282) ರಾಜ್ಯಗಳ ಅತಿಹೆಚ್ಚು ಎನ್‌ಜಿಒಗಳಿಗೆ ಅನುಮತಿ ನಿರಾಕರಿಸಲಾಗಿದೆ. ಕರ್ನಾಟಕದ 736 ಸರ್ಕಾರೇತರ ಸಂಸ್ಥೆಗಳು ಅನುಮತಿ ಕಳೆದುಕೊಂಡಿವೆ. ಆಂಧ್ರಪ್ರದೇಶದ 973, ಉತ್ತರ ಪ್ರದೇಶದ 872, ಒಡಿಶಾದ 840, ಕೇರಳದ 700, ದೆಹಲಿಯ 662 ಮತ್ತು ಬಿಹಾರದ 629 ಸಂಸ್ಥೆಗಳು ಈ ಪಟ್ಟಿಯಲ್ಲಿವೆ.

16,829 ಎನ್‌ಜಿಒಗಳು ವಿದೇಶಿ ದೇಣಿಗೆ ಸಂಗ್ರಹಿಸಲು ಅನುಮತಿ ಪಡೆದಿವೆ. ಆದರೆ, ಈ ಸಂಸ್ಥೆಗಳು ಸಲ್ಲಿಸಿರುವ ಅರ್ಜಿಗಳಲ್ಲಿ ದೋಷಗಳು ಕಾಣಿಸಿದರೆ ಈ ಸಂಖ್ಯೆ ಇನ್ನಷ್ಟು ಕಡಿಮೆ ಆಗಬಹುದು. ವಿವಿ ಗಿರಿ ನ್ಯಾಷನಲ್ ಲೇಬರ್ ಇನ್‌ಸ್ಟಿಟ್ಯೂಟ್, ಸತ್ಯಜಿತ್ ರೇ ಫಿಲ್ಮ್ ಅಂಡ್ ಟಿವಿ ಇನ್‌ಸ್ಟಿಟ್ಯೂಟ್, ಟೈಮ್ಸ್ ಆಫ್ ಇಂಡಿಯಾ ಪರಿಹಾರ ಧನ, ಅಪ್ನೆ ಆಪ್ ವುಮೆನ್ ವರ್ಲ್ಡ್‌ವೈಡ್, ಬಚ್ಚೋನ್ ಕಾ ಘರ್, ಕಾಮನ್ ಕಾಸ್, ಚಿಲ್ಡ್ರನ್ಸ್ ಬುಕ್ ಟ್ರಸ್ಟ್, ಸುಭಾಷ್ ಚಂದ್ರ ಫೌಂಡೇಷನ್, ಸುಲಭ್, ಹೆಬಿಟೇಟ್ ಸೆಂಟರ್, ದೆಹಲಿ ಪಬ್ಲಿಕ್ ಸ್ಕೂಲ್ ಸೊಸೈಟಿ ವಿದೇಶಿ ದೇಣಿಗೆ ಪಡೆಯಲು ಪರವಾನಗಿ ಕಳೆದುಕೊಂಡ ಇತರ ಸಂಸ್ಥೆಗಳು.

ಮದರ್ ಥೆರೆಸಾ ಅವರು ಸ್ಥಾಪಿಸಿದ್ದ ಮಿಷನರಿ ಆಫ್ ಚಾರಿಟಿ ಸಂಸ್ಥೆಯ ಪರವಾನಗಿ ನವೀಕರಿಸಲು ಕೇಂದ್ರ ಸರ್ಕಾರ ನಿರಾಕರಿಸಿತ್ತು. ಇದು ವಿವಾದವನ್ನು ಹುಟ್ಟು ಹಾಕಿತ್ತು.

# ತಿರುಪತಿ: ವಿಶ್ವದಲ್ಲೇ ದುಬಾರಿ ಬೆಲೆಯ ಸೇವೆ?

ಒಂದನೇ ಪುಟದಿಂದ

‘ಉದಯಾಸ್ತಮಾನ’ದ ಹೆಸರಿನ ಈ ಸೇವೆಗೆ ಟಿಕೆಟ್ ನಿಗದಿಪಡಿಸಲಾಗಿದ್ದು, ಟಿಕೆಟ್‌ವೊಂದರ ಬೆಲೆಯು ₹1 ಕೋಟಿಯಿಂದ ಆರಂಭವಾಗಲಿದೆ. ಶುಕ್ರವಾರ ಅಭಿಷೇಕವನ್ನೊಳಗೊಂಡಂತೆ ಈ ಟಿಕೆಟ್‌ನ ಬೆಲೆ ₹ 1.5 ಕೋಟಿ ಆಗಲಿದೆ.

‘₹ 1ಕೋಟಿಯಿಂದ ₹1.5 ಕೋಟಿವರೆಗಿನ ಬೆಲೆಯು ದೊಡ್ಡ ಮೊತ್ತದಂತೆ ಕಾಣಿಸಬಹುದು. ಆದರೆ, ಉದಯಾಸ್ತಮಾನ ಸೇವೆ ಯಾವಾಗ ಆರಂಭವಾಗುತ್ತದೆ ಎಂದು ವಿಚಾರಿಸಿ ನಿತ್ಯವೂ ಹಲವು ದೂರವಾಣಿ ಕರೆಗಳು ಬರುತ್ತಿವೆ’ ಎಂದು ದೇವಾಲಯದ ಅಧಿಕಾರಿಗಳು ಹೇಳುತ್ತಾರೆ.

‘ಇಂತಹ ದುಬಾರಿ ಬೆಲೆಯ ಸೇವೆಗಳ ಮೂಲಕ ದೇವಾಲಯವು ಹಣ ಗಳಿಸುತ್ತಿದೆ’ ಎನ್ನುವ ಟೀಕೆಗಳನ್ನು ತಳ್ಳಿಹಾಕಿದ ಅಧಿಕಾರಿಗಳು, ‘ಈ ಆದಾಯವನ್ನು ಟಿಟಿಡಿ ಈ ಹಿಂದೆಯೇ ಯೋಜಿಸಿರುವಂತೆ ಮಕ್ಕಳ ಹೃದಯ ಆರೈಕೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಮಾತ್ರ ಬಳಸಲಿದೆ’ ಎಂದು ತಿಳಿಸಿದ್ದಾರೆ.

‘ಎಷ್ಟು ಮಂದಿಗೆ ಅನುಮತಿ ನೀಡಬಹುದು ಮತ್ತು ಎಷ್ಟು ವರ್ಷಗಳವರೆಗೆ ಭಕ್ತರು ಈ ಸೇವೆಯನ್ನು ಪಡೆಯಬಹುದು ಎನ್ನುವ ನಿಯಮಗಳು ಮತ್ತು ಷರತ್ತುಗಳನ್ನು ನಾವು ರೂಪಿಸುತ್ತಿದ್ದೇವೆ. ಈ ಕುರಿತು ಶೀಘ್ರದಲ್ಲೇ ನಿರ್ಧಾರ ಮತ್ತು ಅಧಿಕೃತ ಘೋಷಣೆಯನ್ನು ಮಾಡಲಾಗುವುದು’ ಎಂದೂ ದೇವಸ್ಥಾನದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ದೇವಾಲಯದ ಅಧಿಕಾರಿಗಳ ಪ್ರಕಾರ, ‘80ರ ದಶಕದಲ್ಲಿ ಈ ಸೇವೆ ಲಭ್ಯವಿತ್ತು. ಈ ಸೇವೆಗೆ ಆರಂಭದಲ್ಲಿ ₹ 1 ಲಕ್ಷದಿಂದ ಶುರುವಾಗಿ ನಂತರ ₹ 10 ಲಕ್ಷ ದರ ನಿಗದಿಪಡಿಸಲಾಗಿತ್ತು. ಸ್ಥಳದ ಕೊರತೆ ಮತ್ತು ಇತರ ಕಾರಣಗಳಿಂದ ಈ ಸೇವೆಯು 2010ರಲ್ಲಿ ಸ್ಥಗಿತಗೊಂಡಿತ್ತು’ ಎಂದು ತಿಳಿಸಿದ್ದಾರೆ.

### ಅಜಯ್ ಕಕ್ಕರ್‌ಗೆ ಬ್ರಿಟನ್ ಗೌರವ

ಲಂಡನ್ (ಪಿಟಿಐ): ಭಾರತೀಯ ಮೂಲದ ಶಿಕ್ಷಣ ತಜ್ಞ ಮತ್ತು ಹೌಸ್ ಆಫ್ ಲಾರ್ಡ್ಸ್‌ನ ಸದಸ್ಯ ಅಜಯ್ ಕುಮಾರ್ ಕಕ್ಕರ್ ಅವರು ಬ್ರಿಟನ್ ಸರ್ಕಾರ ನೀಡುವ ‘ನೈಟ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್ (ಕೆಬಿಇ)’ ಗೌರವಕ್ಕೆ ಭಾಜನರಾಗಿದ್ದಾರೆ. ಇದು ಬ್ರಿಟನ್‌ನ ಎರಡನೇ ಅತ್ಯುನ್ನತ ಗೌರವ. 57 ವರ್ಷದ ಅಜಯ್ ಕುಮಾರ್ ಅವರು ಲಂಡನ್‌ನ ಯುನಿವರ್ಸಿಟಿ ಕಾಲೇಜಿನಲ್ಲಿ ಸರ್ಜರಿ ವಿಭಾಗದ ಪ್ರಾಧ್ಯಾಪಕರೂ ಆಗಿದ್ದಾರೆ. ಹೊಸ ವರ್ಷದ ಸಂದರ್ಭದಲ್ಲಿ ಗೌರವಿಸುವ ವಿವಿಧ ಕ್ಷೇತ್ರಗಳ 1,278 ಸಾಧಕರು ಹಾಗೂ 78 ಒಲಿಂಪಿಯನ್, ಪ್ಯಾರಾಲಿಂಪಿಯನ್‌ಗಳ ಪಟ್ಟಿಯನ್ನು ಬ್ರಿಟನ್ ಸರ್ಕಾರ ಶುಕ್ರವಾರ ಬಿಡುಗಡೆ ಮಾಡಿದೆ.

### 1033 ಮಂದಿಗೆ ಸೋಂಕು ದೃಢ: ಬೆಂಗಳೂರಿನಲ್ಲೇ 810 ಹೊಸ ಪ್ರಕರಣಗಳು

# ಸಾವಿರ ದಾಟಿದ ಕೋವಿಡ್ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಅಲೆ ಮುಗಿದ ಬಳಿಕ ರಾಜ್ಯದಲ್ಲಿ ಇಳಿಕೆಯ ಹಾದಿ ಕಂಡಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ, ಮತ್ತೆ ಏರುಗತಿ ಕಂಡಿದ್ದು ಇದೇ ಮೊದಲ ಬಾರಿ ಪ್ರಕರಣಗಳ ಸಂಖ್ಯೆ ಒಂದು ಸಾವಿರ ದಾಟಿದೆ.

ಶನಿವಾರ 1033 ಪ್ರಕರಣಗಳು ದೃಢಪಟ್ಟಿದೆ. ಐವರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ವರದಿ ಹೇಳಿದೆ.ಶುಕ್ರವಾರ 832 ಪ್ರಕರಣಗಳು ದೃಢಪಟ್ಟಿದ್ದವು.

ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.08 ಲಕ್ಷ ದಾಟಿದೆ. ಸೋಂಕಿತರಲ್ಲಿ 354 ಮಂದಿ ಚೇತರಿಸಿಕೊಂಡಿದ್ದಾರೆ. ಇದರಿಂದ, ಗುಣಮುಖರಾದವರ ಒಟ್ಟು ಸಂಖ್ಯೆ 29.60 ಲಕ್ಷ ದಾಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆಯೂ 9 ಸಾವಿರದ ಗಡಿ (9,386) ದಾಟಿದೆ. ಕೋವಿಡ್ ಪರೀಕ್ಷೆಗಳ ಸಂಖ್ಯೆಯೂ ಏರಿಕೆ ಕಂಡಿದ್ದು, ಒಂದು ದಿನದ ಅವಧಿಯಲ್ಲಿ 1.19 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.86ರಷ್ಟಿದೆ. ಏಳು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಮತ್ತು 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ, ಬಾಗಲಕೋಟೆ, ಚಿಕ್ಕಬಳ್ಳಾಪುರ ಸೇರಿದಂತೆ ಒಂಬತ್ತು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲೇ 810 ಹೊಸ ಪ್ರಕರಣಗಳು ಪತ್ತೆಯಾಗಿವೆ.

ದಕ್ಷಿಣ ಕನ್ನಡದಲ್ಲಿ 48, ಮೈಸೂರಿನಲ್ಲಿ 29, ಉಡುಪಿಯಲ್ಲಿ 28, ಮಂಡ್ಯದಲ್ಲಿ 23, ಕೊಡಗಿನಲ್ಲಿ 13, ಬೆಳಗಾವಿ ಮತ್ತು ಚಿಕ್ಕಮಗಳೂರಿನಲ್ಲಿ ತಲಾ 10 ಹೊಸ ಪ್ರಕರಣಗಳು ವರದಿಯಾಗಿವೆ.

### ಶಿಕ್ಷಣ ಸಚಿವ ನಾಗೇಶ್‌ಗೆ ಕೋವಿಡ್ ದೃಢ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಬಿ.ಸಿ. ನಾಗೇಶ್ ಅವರಿಗೆ ಕೋವಿಡ್ ದೃಢಪಟ್ಟಿದೆ.

ಕೊರೊನಾ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡ ಕಾರಣ ಶನಿವಾರ ಅವರು ಕೋವಿಡ್ ಪರೀಕ್ಷೆಗೆ ಒಳಗಾಗಿದ್ದರು. ವರದಿಯಲ್ಲಿ ಕೋವಿಡ್ ಇರುವುದು ದೃಢಪಟ್ಟಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ನಾಗೇಶ್, ‘ಕೋವಿಡ್ ದೃಢಪಟ್ಟಿರುವುದರಿಂದ ನಾನು ಕ್ವಾರಂಟೈನ್‌ನಲ್ಲಿದ್ದು, ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದೇನೆ. ನನ್ನ ಸಂಪರ್ಕಕ್ಕೆ ಬಂದ ಎಲ್ಲರೂ ಪರೀಕ್ಷೆ ಮಾಡಿಸಿಕೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.

### ಅಫ್ಘಾನಿಸ್ತಾನಕ್ಕೆ 5 ಲಕ್ಷ ಡೋಸ್ ಲಸಿಕೆ

ನವದೆಹಲಿ (ಪಿಟಿಐ): ಮಾನವೀಯ ನೆಲೆಯಲ್ಲಿ ಅಫ್ಘಾನಿಸ್ತಾನಕ್ಕೆ 5 ಲಕ್ಷ ಡೋಸ್ ಕೋವಿಡ್ ತಡೆ ಲಸಿಕೆಗಳನ್ನು ಭಾರತ ನೀಡಿದೆ. 5 ಲಕ್ಷ ಕೋವ್ಯಾಕ್ಸಿನ್ ಡೋಸ್‌ಗಳನ್ನು ಪೂರೈಕೆ ಮಾಡಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಶನಿವಾರ ತಿಳಿಸಿದೆ.

ಕಾಬೂಲ್‌ನಲ್ಲಿರುವ ಇಂದಿರಾ ಗಾಂಧಿ ಆಸ್ಪತ್ರೆಗೆ ಲಸಿಕೆ ಕಳುಹಿಸಲಾಗಿದೆ. ಮುಂದಿನ ವಾರ ಮತ್ತೆ 5 ಲಕ್ಷ ಡೋಸ್‌ಗಳನ್ನು ಕಳುಹಿಸಲಾಗುವುದು. ಮುಂಬರುವ ವಾರಗಳಲ್ಲಿ ವೈದ್ಯಕೀಯ ಉಪಕರಣಗಳನ್ನು ಕಳುಹಿಸುವುದಾಗಿ ಸಚಿವಾಲಯ ತಿಳಿಸಿದೆ.

ಅಫ್ಘನ್ ಪ್ರಜೆಗಳಿಗೆ ಆಹಾರ ಧಾನ್ಯ, 10 ಲಕ್ಷ ಲಸಿಕೆ ಡೋಸ್ ಮತ್ತು ಪ್ರಮುಖ ಔಷಧಿಗಳನ್ನು ಪೂರೈಸುವುದಾಗಿ ಭಾರತ ಭರವಸೆ ನೀಡಿತ್ತು.

# ಆಸ್ತಿ ಖರೀದಿಸುವವರಿಗೆ ಒಳ್ಳೆ ಸುದ್ದಿ

ಒಂದನೇ ಪುಟದಿಂದ

‘ಎರಡು ವರ್ಷಗಳಿಂದ ಜಮೀನು ಮತ್ತು ಫ್ಲ್ಯಾಟ್ ಖರೀದಿಸಲು ಎದುರು ನೋಡುತ್ತಿದ್ದ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ’ ಎಂದರು.

‘ಕೋವಿಡ್ ಕಾರಣದಿಂದ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯ ಕೂಡಾ ಕುಸಿದಿದೆ. ಅಲ್ಲದೆ, ಕಳೆದ ಎರಡು ವರ್ಷಗಳಿಂದ ಜನತೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿದ ಬಳಿಕ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ’ ಎಂದರು.

### ರಾಜಸ್ವ ಸಂಗ್ರಹ ಹೆಚ್ಚಳ ನಿರೀಕ್ಷೆ

ರಾಜ್ಯದಾದ್ಯಂತ 2019–20ನೇ ಸಾಲಿನಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ರಾಜಸ್ವ ಸಂಗ್ರಹದಲ್ಲಿ ₹ 2,101 ಕೋಟಿ ಕೊರತೆ ಉಂಟಾಗಿದೆ. ರಾಜಸ್ವ ಸಂಗ್ರಹ ಹೆಚ್ಚಿಲು ಹೊರ ರಾಜ್ಯಗಳು ನಾನಾ ಕ್ರಮಗಳನ್ನು ತೆಗೆದುಕೊಂಡಿದ್ದು, ದೆಹಲಿ ಸರ್ಕಾರ ನಿರ್ದಿಷ್ಟ ಅವಧಿಗೆ ಶೇ 20ರಷ್ಟು ಮಾರ್ಗಸೂಚಿ ದರ ಕಡಿಮೆಗೊಳಿಸಿದೆ. ಇದರಿಂದ ಅಲ್ಲಿ ರಾಜಸ್ವ ಸಂಗ್ರಹ ಹೆಚ್ಚಳವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಕೃಷಿ ಜಮೀನು, ನಿವೇಶನಗಳು, ಕಟ್ಟಡ, ಭೂ ಪರಿವರ್ತಿತ ಜಮೀನುಗಳು, ಅಪಾರ್ಟ್‌ಮೆಂಟ್‌ಗಳು ಸೇರಿದಂತೆ ಎಲ್ಲ ವಿಧದ ಸ್ಥಿರಾಸ್ತಿಗಳ ಖರೀದಿ, ಭೋಗ್ಯದ ಕರಾರು, ಜಂಟಿ ಅಭಿವೃದ್ಧಿ ಕರಾರು, ಸ್ವಾಧೀನಸಹಿತ ಆಧಾರ ಪತ್ರಗಳ ನೋಂದಣಿಗೆ ಮಾರ್ಗಸೂಚಿ ದರ ಆಧರಿಸಿ ಶುಲ್ಕ ಸಂಗ್ರಹಿಸಲಾಗುತ್ತದೆ. ಇದೀಗ ಮಾರ್ಗಸೂಚಿ ದರದಲ್ಲಿ ಶೇ10ರಷ್ಟು ರಿಯಾಯಿತಿ ನೀಡಿದರೆ ನೋಂದಣಿ ಹೆಚ್ಚಳಗೊಂಡು ರಾಜಸ್ವ ಸಂಗ್ರಹ ಕೂಡಾ ಹೆಚ್ಚಬಹುದೆಂದು ನಿರೀಕ್ಷಿಸಲಾಗಿದೆ.

### ಲೆಕ್ಕಾಚಾರ ಹೇಗೆ?

ಒಂದನೇ ಪುಟದಿಂದ

ಸರ್ಕಾರದ ಹೊಸ ಘೋಷಣೆಯಿಂದಾಗಿ ಖರೀದಿದಾರರಿಗೆ ಲಾಭ ಸಿಗುವುದು ಹೀಗೆ. ಉದಾಹರಣೆಗೆ 30X40 ಅಳತೆ (1200 ಚದರ ಅಡಿ) ನಿವೇಶನದ ಬೆಲೆ ಮಾರ್ಗಸೂಚಿ ದರ ಅನುಸಾರ ₹30 ಲಕ್ಷ ಇರುತ್ತದೆ ಎಂದಿಟ್ಟುಕೊಳ್ಳೋಣ. ಹೊಸ ನೀತಿಯಂತೆ ಈ ದರ ಶೇ 10ರಷ್ಟು ಇಳಿಕೆಯಾದರೆ ಪರಿಷ್ಕೃತ ಮಾರ್ಗಸೂಚಿ ದರ ₹27 ಲಕ್ಷ ಆಗಲಿದೆ. ಮೊದಲು ₹30 ಲಕ್ಷ ಮೌಲ್ಯದ ಆಸ್ತಿ ಖರೀದಿಸುವವರು ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಅನ್ವಯ ₹18 ಸಾವಿರ ಕಟ್ಟಬೇಕಾಗುತ್ತಿತ್ತು. ಈಗ ಈ ಮೊತ್ತದಲ್ಲಿ ₹1,800 ಕಡಿಮೆಯಾಗಲಿದೆ.

# ಬೆಂಗಳೂರು ಪ್ರೆಸ್ ಕ್ಲಬ್: ಬಿಎಸ್‌ವೈ ‘ವರ್ಷದ ವ್ಯಕ್ತಿ’

### ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ, ಸಚಿವ ಸುಧಾಕರ್‌ಗೆ ವಿಶೇಷ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬೆಂಗಳೂರು ಪ್ರೆಸ್ ಕ್ಲಬ್‌ನ 2021ನೇ ಸಾಲಿನ ವರ್ಷದ ವ್ಯಕ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾಗಿರುವ ಹರೇಕಳ ಹಾಜಬ್ಬ ಮತ್ತು ಕೋವಿಡ್ ನಿರ್ವಹಣೆಗಾಗಿ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ‘ಪ್ರೆಸ್ ಕ್ಲಬ್’ ವಿಶೇಷ ಪ್ರಶಸ್ತಿ ನೀಡಲಾಗುತ್ತಿದೆ.

ಶನಿವಾರ ನಡೆದ ಕ್ಲಬ್‌ನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪುರಸ್ಕೃತರನ್ನು ಆಯ್ಕೆಮಾಡಿದ್ದು, ‘ಪ್ರಜಾವಾಣಿ’ಯ ಸುದ್ದಿ ಸಂಪಾದಕ ಜಿ.ಡಿ. ಯತೀಶ್ ಕುಮಾರ್ ಸೇರಿದಂತೆ 16 ಮಂದಿಯನ್ನು 2021ನೇ ಸಾಲಿನ ‘ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿ’ಗೆ ಆಯ್ಕೆ ಮಾಡಲಾಗಿದೆ. ‘ಪ್ರಜಾವಾಣಿ’ಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಎಂ.ಕೆ. ಭಾಸ್ಕರ್ ರಾವ್, ಪದ್ಮರಾಜ ದಂಡಾವತಿ, ರಂಜಾನ್ ದರ್ಗಾ ಅವರೂ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಬಿ.ಎಸ್. ಯಡಿಯೂರಪ್ಪ

ಹರೇಕಳ ಹಾಜಬ್ಬ

ಡಾ.ಕೆ. ಸುಧಾಕರ್

ಕೆಸ್ತೂರು ಗುಂಡಪ್ಪ ವಾಸುಕಿ, ಡಾ.ಎನ್. ಜಗದೀಶ್ ಕೊಪ್ಪ, ಬಾಲಸುಬ್ರಮಣ್ಯಂ ಕೆ.ಆರ್., ಬಿ.ವಿ. ಶಿವಶಂಕರ, ಸುದರ್ಶನ್ ಚನ್ನಂಗಿಹಳ್ಳಿ, ದೊಡ್ಡ ಬೊಮ್ಮಯ್ಯ, ಕೆ.ಎಂ. ವೀರೇಶ್, ವಾಸಂತಿ ಹರಿಪ್ರಕಾಶ್, ಪ್ರಶಾಂತ್ ನಾಥೂ, ಪ್ರಕಾಶ್ ಬೆಳವಾಡಿ, ಎಸ್. ಎಚ್. ಮಾರುತಿ ಮತ್ತು ಭಾನುಪ್ರಕಾಶ್ ಚಂದ್ರ ‘ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿ’ಗೆ ಆಯ್ಕೆಯಾಗಿದ್ದಾರೆ.

‘ಇದೇ 6ರಂದು ಸಂಜೆ ಬೆಂಗಳೂರು ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಶಸ್ತಿ ಪುರಸ್ಕೃತರನ್ನು ಗೌರವಿಸುವರು. 2020ನೇ ಸಾಲಿನ ಪ್ರೆಸ್ ಕ್ಲಬ್ ವರ್ಷದ ವ್ಯಕ್ತಿಗೆ ಆಯ್ಕೆಯಾಗಿರುವ ಉದ್ಯಮಿ ಅಜೀಂ ಪ್ರೇಮ್‌ಜಿ, ಚಿತ್ರನಟ ಸುದೀಪ್ ಮತ್ತು ಹೃದ್ರೋಗ ತಜ್ಞ ಡಾ.ದೇವಿಪ್ರಸಾದ್ ಶೆಟ್ಟಿ ಅವರಿಗೆ ವಿಶೇಷ ಪ್ರಶಸ್ತಿ ಮತ್ತು 25 ಪತ್ರಕರ್ತರಿಗೆ ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿಯನ್ನು ಇದೇ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು’ ಎಂದು ಪ್ರೆಸ್ ಕ್ಲಬ್ ಅಧ್ಯಕ್ಷ ಕೆ. ಸದಾಶಿವ ಶೆಣೈ ಮತ್ತು ಪ್ರಧಾನ ಕಾರ್ಯದರ್ಶಿ ಎಚ್‌.ವಿ. ಕಿರಣ್ ತಿಳಿಸಿದ್ದಾರೆ.

### ತಮಿಳುನಾಡು: ಪಟಾಕಿ ಘಟಕದಲ್ಲಿ ಬೆಂಕಿ, 4 ಸಾವು

ವಿರುದುನಗರ, ತಮಿಳುನಾಡು (ಪಿಟಿಐ): ಇಲ್ಲಿಗೆ ಸಮೀಪದ ಗ್ರಾಮವೊಂದರಲ್ಲಿನ ಪಟಾಕಿ ಘಟಕವೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ನಾಲ್ವರು ಕಾರ್ಮಿಕರು ಮೃತಪಟ್ಟಿದ್ದು ಎಂಟು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ಪಟಾಕಿ ತಯಾರಿಕಾ ಘಟಕವೊಂದರ ಆವರಣದಲ್ಲಿ ನಡೆದ ಅಪಘಾತದಿಂದ ಬೆಂಕಿಯ ಕಿಡಿಯೊಂದು ಹೊತ್ತಿಕೊಂಡಿದೆ. ಇದರಿಂದ ಘಟಕದಲ್ಲಿ ಬೆಂಕಿ ವ್ಯಾಪಿಸಿ ನಾಲ್ವರು ಕಾರ್ಮಿಕರು ಆಹುತಿಯಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದರು.

### ಅವಶೇಷಗಳಡಿ ಹಲವರು ಸಿಲುಕಿರುವ ಶಂಕೆ;ಮುಂದುವರಿದ ಶೋಧ

# ಹರಿಯಾಣ: ಗಣಿ ಭೂಕುಸಿತದಲ್ಲಿ ನಾಲ್ವರ ಸಾವು

ಚಂಡೀಗಡ: ಹರಿಯಾಣದ ಭಿವಾನಿ ಜಿಲ್ಲೆಯ ಡಾಡಮ್ ಗಣಿಗಾರಿಕೆ ಪ್ರದೇಶದಲ್ಲಿ ಶನಿವಾರ ಸಂಭವಿಸಿದ ಭೂಕುಸಿತದಲ್ಲಿ ಕನಿಷ್ಠ ನಾಲ್ವರು ಸಾವಿಗೀಡಾಗಿದ್ದು, ಹಲವರು ಸಿಲುಕಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಈ ಪ್ರದೇಶದ ತೋಷಮ್ ಬ್ಲಾಕ್‌ನಲ್ಲಿ ಬೆಳಿಗ್ಗೆ 9 ಗಂಟೆ ವೇಳೆಗೆ ಸಂಭವಿಸಿದ ಭೂಕುಸಿತದಿಂದಾಗಿ ಆರಕ್ಕೂ ಹೆಚ್ಚು ಡಂಪರ್ ಟ್ರಕ್ ಹಾಗೂ ಕಾಮಗಾರಿ ಯಂತ್ರಗಳು ಅವಶೇಷಗಳಡಿಯಲ್ಲಿ ಹೂತು ಹೋಗಿವೆ’ ಎಂದು ಅವರು ಹೇಳಿದ್ದಾರೆ.

‘ಭೂಕುಸಿತದಲ್ಲಿ ಸಾವಿಗೀಡಾದವರನ್ನು ಬಿಹಾರ ಮೂಲದ ತೂಫಾನ್ ಶರ್ಮಾ (30) ಮತ್ತು ಹರಿಯಾಣದ ಜಿಂದ್ ಜಿಲ್ಲೆಯ ಬಗನ್‌ವಾಲಾ ಮೂಲದ ಬಿಂದರ್ (23)ಎಂದು ಗುರುತಿಸಲಾಗಿದೆ. ಉಳಿದವರ ಗುರುತು ಇನ್ನೂ ಪತ್ತೆಯಾಗಿಲ್ಲ’ ಎಂದು ಭಿವಾನಿ ಮುಖ್ಯ ವೈದ್ಯಾಧಿಕಾರಿ ರಘುವೀರ್ ಶಾಂಡಿಲ್ಯ ಅವರು ತಿಳಿಸಿದ್ದಾರೆ.

### ಕಾಂಗ್ರೆಸ್ ಆರೋಪ

‘ಮುಖ್ಯಮಂತ್ರಿ ಖಟ್ಟರ್ ಅವರ ಆಡಳಿತದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೆವಾಲ್ ಅವರು, ‘ಈ ಸಾವಿಗೆ ಯಾರು ಕಾರಣ? ಅಕ್ರಮ ಗಣಿಗಾರಿಕೆ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸುವಿರಾ’ ಎಂದು ಟ್ವೀಟ್‌ನಲ್ಲಿ ಬಿಜೆಪಿ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

**ರಕ್ಷಣಾ ತಂಡಗಳ ನಿಯೋಜನೆ:** ಭೂಕುಸಿತದಲ್ಲಿ ಸಿಲುಕಿರುವವರ ರಕ್ಷಣೆಗಾಗಿ ರಕ್ಷಣಾ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಹರಿಯಾಣದ ಗೃಹಸಚಿವ ಅನಿಲ್ ವಿಜ್ ಅವರು ತಿಳಿಸಿದ್ದಾರೆ.

ಘಟನೆಯ ಕುರಿತು ಟ್ವೀಟ್ ಮಾಡಿರುವ ಅನಿಲ್ ಅವರು, ‘ಹರಿಯಾಣದ ಭಿವಾನಿ ಜಿಲ್ಲೆಯ ಗಣಿಗಾರಿಕೆ ಸ್ಥಳದಲ್ಲಿ ನಡೆದ ಘಟನೆಯ ಬಗ್ಗೆ ನಾನು ತೀವ್ರ ದುಃಖಿತನಾಗಿದ್ದೇನೆ. ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಗಾಜಿಯಾಬಾದ್‌ನಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ತಂಡ, ಮಧುಬನ್‌ನಿಂದ ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಮತ್ತು ಹಿಸಾರ್‌ನಿಂದ ಸೇನಾ ಘಟಕವನ್ನು ಕರೆಸಲಾಗಿದೆ. ಇಲ್ಲಿಯವರೆಗೆ ನಾಲ್ಕು ಮಂದಿಯ ಮೃತದೇಹಗಳನ್ನು ಹೊರಕ್ಕೆ ತೆಗೆಯಲಾಗಿದೆ’ ಎಂದು ತಿಳಿಸಿದ್ದಾರೆ.

‘ಇನ್ನೂ ನಾಲ್ಕೈದು ಮಂದಿ ಅವಶೇಷಗಳಡಿ ಸಿಲುಕಿರುವ ಸಾಧ್ಯತೆ ಇದೆ’ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ (ಸಿವಾನಿ) ಮನೋಜ್ ಕುಮಾರ್ ತಿಳಿಸಿದ್ದಾರೆ.

ಸ್ಥಳೀಯರ ಪ್ರಕಾರ, ಅವಶೇಷಗಳಡಿ ನಾಲ್ಕೈದು ಮಂದಿಗಿಂತಲೂ ಹೆಚ್ಚಿನ ಮಂದಿ ಸಿಲುಕಿರುವ ಸಾಧ್ಯತೆ ಇದೆ ಎನ್ನಲಾಗಿದ್ದು, ಈ ಬಗ್ಗೆ ಅಧಿಕೃತ ಮಾಹಿತಿ ದೊರೆತಿಲ್ಲ.

‘ಕ್ಷಿಪ್ರ ರಕ್ಷಣಾ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾಡಳಿತದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ’ ಎಂದು ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಟ್ವೀಟ್ ಮಾಡಿದ್ದಾರೆ.

‘ಅವಶೇಷಗಳಡಿ ಸಿಲುಕಿರುವವರ ರಕ್ಷಣಾ ಕಾರ್ಯ ಕೈಗೊಳ್ಳಲಾಗಿದ್ದು, ವೈದ್ಯರ ತಂಡವು ಸ್ಥಳದಲ್ಲಿ ಬೀಡು ಬಿಟ್ಟಿದೆ’ ಎಂದು ಸ್ಥಳಕ್ಕೆ ಭೇಟಿ ನೀಡಿದ ಸಚಿವ ಜೆ.ಪಿ. ದಲಾಲ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

# ವೈಷ್ಣೋದೇವಿ ದೇಗುಲದಲ್ಲಿ ಕಾಲ್ತುಳಿತ: 12 ಮಂದಿ ಸಾವು

ಒಂದನೇ ಪುಟದಿಂದ

ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹ 10 ಲಕ್ಷ ಹಾಗೂ ಗಾಯಗೊಂಡವರಿಗೆ ₹ 2 ಲಕ್ಷ ಪರಿಹಾರ ನೀಡಲಾಗುವುದು. ಗಾಯಗೊಂಡವರ ಚಿಕಿತ್ಸೆಯ ವೆಚ್ಚವನ್ನು ದೇಗುಲ ಮಂಡಳಿಯೇ ಭರಿಸಲಿದೆ’ ಎಂದು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ತಿಳಿಸಿದ್ದಾರೆ.

ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತ ಯಾತಾರ್ಥಿಗಳಿಗೆ ತಲಾ ₹ 2 ಲಕ್ಷ, ಗಾಯಾಳುಗಳಿಗೆ ₹50 ಸಾವಿರ ಪರಿಹಾರ ನೀಡಲಾಗುವುದು ಎಂದು ಪ್ರಧಾನಿ ಕಚೇರಿಯು ಘೋಷಣೆ ಮಾಡಿದೆ.

‘ಮಾತಾ ವೈಷ್ಣೋದೇವಿ ದೇಗುಲದಲ್ಲಿ ಕಾಲ್ತುಳಿತದಿಂದ ಉಂಟಾಗುವ ದುರಂತ ಪರಿಸ್ಥಿತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಗಾಯಗೊಂಡವರಿಗೆ ಅಗತ್ಯ ವೈದ್ಯಕೀಯ ನೆರವು ನೀಡುವಂತೆ ಸೂಚಿಸಿದ್ದಾರೆ’ ಎಂದು ಪ್ರಧಾನ ಮಂತ್ರಿ ಕಚೇರಿಯ ರಾಜ್ಯ ಸಚಿವ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದರು.

### ಸಮಿತಿಯಿಂದ ತನಿಖೆ

ಜಮ್ಮು: ಕಾಲ್ತುಳಿತದ ಘಟನೆ ಕುರಿತು ತನಿಖೆ ನಡೆಸಲು ತ್ರಿಸದಸ್ಯ ಸಮಿತಿ ರಚಿಸಲಾಗಿದ್ದು, ಜಮ್ಮು ಮತ್ತು ಕಾಶ್ಮೀರ ಸರ್ಕಾರಕ್ಕೆ ಒಂದು ವಾರದೊಳಗೆ ವರದಿ ಸಲ್ಲಿಸುವಂತೆ ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ.

ಈ ಸಮಿತಿಯು ಘಟನೆ ಹಿಂದಿನ ನಿಖರ ಕಾರಣವನ್ನು ಪರಿಶೀಲಿಸಲಿದೆ. ಅಲ್ಲದೆ ಭವಿಷ್ಯದಲ್ಲಿ ಸಂಭವನೀಯ ಅವಘಡಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಸೂಕ್ತ ಮಾರ್ಗದರ್ಶನವನ್ನೂ ನೀಡಲಿದೆ.

### ಗಾಜಾ ಪಟ್ಟಿಯಿಂದ ರಾಕೆಟ್‌ಗಳ ಉಡಾವಣೆ

ಜೆರುಸಲೇಂ (ಎಪಿ): ‘ಹಮಾಸ್’ ಆಡಳಿತವಿರುವ ಗಾಜಾ ಪಟ್ಟಿ ಕಡೆಯಿಂದ ಶನಿವಾರ ರಾಕೆಟ್‌ಗಳು ಉಡಾವಣೆಯಾಗಿದ್ದು, ಅವು ಮಧ್ಯ ಇಸ್ರೇಲ್‌ನ ಮೆಡಿಟರೇನಿಯನ್ ಸಮುದ್ರದಲ್ಲಿ ಬಿದ್ದಿವೆ ಎಂದು ಇಸ್ರೇಲ್ ಮಿಲಿಟರಿ ತಿಳಿಸಿದೆ.

ಇಸ್ರೇಲ್ ಅನ್ನು ಗುರಿಯಾಗಿಸಿ ಈ ರಾಕೆಟ್‌ಗಳನ್ನು ಉಡಾಯಿಸಲಾಗಿತ್ತೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ಆದರೆ ಇದರಿಂದ ಯಾವುದೇ ಸಾವು–ನೋವುಗಳು ಸಂಭವಿಸಿಲ್ಲ ಎಂದು ವರದಿಯಾಗಿದೆ. ಗಾಜಾ ಮೂಲದ ಉಗ್ರಗಾಮಿ ಗುಂಪುಗಳು ಸಮುದ್ರದ ಕಡೆಗೆ ಈ ರೀತಿಯ ಕ್ಷಿಪಣಿ ಪರೀಕ್ಷೆಗಳನ್ನು ಆಗಾಗ್ಗೆ ನಡೆಸುತ್ತಿರುತ್ತವೆ.

ಜನತಂತ್ರದ ಹಬ್ಬ 2022 ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಇತರ ಪಕ್ಷಗಳಿಂದ ಬಿರುಸಿನ ತಯಾರಿ

# ಚುನಾವಣಾ ಪ್ರಚಾರ ಆರಂಭಿಸದ ಮಾಯಾವತಿ

ಪ್ರಜಾವಾಣಿ ವಾರ್ತೆ

**ಲಖನೌ:** ಚುನಾವಣೆ ನಡೆಯಲಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿ, ಎಸ್‌ಪಿ, ಕಾಂಗ್ರೆಸ್ ಪಕ್ಷಗಳು ಈಗಾಗಲೇ ಬಿರುಸಿನ ಪ್ರಚಾರದಲ್ಲಿ ತೊಡಗಿವೆ. ಆದರೆ ಬಿಎಸ್‌ಪಿ ಇನ್ನೂ ಚುನಾವಣಾ ಕಣಕ್ಕೆ ಇಳಿಯದಿರುವುದನ್ನು ವಿರೋಧಿ ಪಾಳಯದವರು ಲೇವಡಿ ಮಾಡುತ್ತಿದ್ದರೆ, ಸ್ವತಃ ಪಕ್ಷದ ಕಾರ್ಯಕರ್ತರಲ್ಲಿ ಅಚ್ಚರಿ ಉಂಟು ಮಾಡಿದೆ.

ಮಾಯಾವತಿ

ಬಿಜೆಪಿಯು 'ಜನವಿಶ್ವಾಸ ಯಾತ್ರೆ' ಹೆಸರಿನಲ್ಲಿ ರಾಜ್ಯದಾದ್ಯಂತ ಪ್ರಚಾರದಲ್ಲಿ ತೊಡಗಿದ್ದು, ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ ಅವರು ಹಲವು ಸಾರ್ವಜನಿಕ ಸಮಾವೇಶಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು 'ವಿಜಯರಥ ಯಾತ್ರೆ' ನಡೆಸುತ್ತಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಸಹ ಸಾರ್ವಜನಿಕ ಸಭೆ ಹಾಗೂ ಮಹಿಳಾ ಸಭೆಗಳನ್ನು ನಡೆಸುತ್ತಿದ್ದಾರೆ.

ಆದರೆ ಮಾಯಾವತಿ ಅವರು ಕಳೆದ ಮೂರು ತಿಂಗಳಿಂದ ಯಾವುದೇ ಸಾರ್ವಜನಿಕ ಸಭೆಗಳನ್ನು ನಡೆಸಿಲ್ಲ. ಅವರು ಅಕ್ಟೋಬರ್‌ನಲ್ಲಿ ಕೊನೆಯದಾಗಿ ಸಮಾವೇಶದಲ್ಲಿ ಭಾಗವಹಿಸಿದ್ದರು. ಮಾಯಾವತಿ ಅವರು ಚುನಾವಣಾ ಪ್ರಚಾರದಿಂದ ದೂರ ಉಳಿದಿರುವುದು, ಅವರು ಈಗಾಗಲೇ ಸೋಲೊಪ್ಪಿಕೊಂಡಿದ್ದಾರೆ ಎಂಬುದರ ಸೂಚನೆ ಎಂದು ಪ್ರತಿಪಕ್ಷಗಳು ಆರೋಪಿಸಿವೆ.

'ನಾವು ಇತರ ಪಕ್ಷಗಳಿಗಿಂತ ಹಿಂದಿದ್ದೇವೆ. ನಮ್ಮ ಮತದಾರರನ್ನು ಇತರ ಪಕ್ಷಗಳು ಮನವೊಲಿಸುತ್ತಿವೆ. ತಕ್ಷಣವೇ ನಾವು ಪ್ರಚಾರಕ್ಕೆ ಚಾಲನೆ ನೀಡಬೇಕಿದೆ' ಎಂದು ಉತ್ತರ ಪ್ರದೇಶದ ಬಿಎಸ್‌ಪಿ ಮುಖಂಡರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

'ಅನೇಕ ಹಿರಿಯ ಮುಖಂಡರು ಪಕ್ಷ ತೊರೆದಿದ್ದಾರೆ. ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂಬುದು ಮಾಯಾವತಿ ಅವರಿಗೆ ಗೊತ್ತಾಗಿದೆ. ಹೀಗಾಗಿಯೇ ಅವರು ಪ್ರಚಾರಕ್ಕೆ ಚಾಲನೆ ನೀಡಿಲ್ಲ' ಎಂದು ಎಸ್‌ಪಿ ಮುಖಂಡರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿಯಿಂದ 19 ಶಾಸಕರು ಗೆದ್ದಿದ್ದರು. ಈ ಪೈಕಿ 15 ಶಾಸಕರು ಇತರ ಪಕ್ಷಗಳೊಂದಿಗೆ ಕೈಜೋಡಿಸಿದ್ದಾರೆ ಅಥವಾ ಪಕ್ಷ ವಿರೋಧಿ ಚಟುವಟಿಕೆ ಕಾರಣದಿಂದ ಪಕ್ಷದಿಂದ ಉಚ್ಚಾಟನೆಗೊಂಡಿದ್ದಾರೆ. ಹಿರಿಯ ಮುಖಂಡರಾದ ರಾಮ್ ಅಚಲ್ ರಾಜ್‌ಭರ್, ಲಾಲ್‌ಜಿ ವರ್ಮಾ ಅವರು 6 ಶಾಸಕರ ಜೊತೆ ಎಸ್‌ಪಿ ಸೇರ್ಪಡೆಯಾಗಿದ್ದರು. ಇನ್ನೂ ಆರು ಶಾಸಕರು ಬಿಜೆಪಿಗೆ ವಲಸೆ ಹೋಗಿದ್ದಾರೆ.

ಉತ್ತರ ಪ್ರದೇಶದ ರಾಂಪುರದಲ್ಲಿ ಶನಿವಾರ ಆಯೋಜಿಸಿದ್ದ ಜನವಿಶ್ವಾಸ ಸಮಾವೇಶದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ತ್ರಿಶೂಲ ನೀಡಲಾಯಿತು —ಪಿಟಿಐ ಚಿತ್ರ

## ನುಡಿ-ಕಿಡಿ

ಹಿಮಾಚಲ ಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ಸೋತಿದ್ದರಿಂದ ಬಿಜೆಪಿಯು ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಸುಂಕವನ್ನು ಕಡಿಮೆ ಮಾಡಿತು. ಹೀಗಾಗಿ ಮುಂಬರುವ ಚುನಾವಣೆಗಳಲ್ಲಿ ಜನರು ಎಚ್ಚರಿಕೆಯಿಂದ ಮತ ಚಲಾಯಿಸಬೇಕು

**ರಣದೀಪ್ ಸುರ್ಜೇವಾಲ**, ಕಾಂಗ್ರೆಸ್ ವಕ್ತಾರ

ಸಮಾಜವಾದಿ ಪಕ್ಷ ಬೆಂಬಲಿತ ಸಮಾಜವಿರೋಧಿ ಶಕ್ತಿಗಳು ಯೋಗಿ ಆದಿತ್ಯನಾಥ ಸರ್ಕಾರದ ಅವಧಿಯಲ್ಲಿ ಓಡಿಹೋಗಿದ್ದಾರೆ. ಭಯೋತ್ಪಾದನೆ ಹಾಗೂ ಗೂಂಡಾಗಿರಿಗಳು ಇವರ ಗುರುತಾಗಿದ್ದವು

**ಧರ್ಮೇಂದ್ರ ಪ್ರಧಾನ್**, ಉತ್ತರ ಪ್ರದೇಶ ಬಿಜೆಪಿ ಉಸ್ತುವಾರಿ

## 'ಇತರ ಪಕ್ಷಗಳನ್ನು ಅನುಸರಿಸುವುದಿಲ್ಲ'

'ನಾವು ಯಾವ ಪಕ್ಷವನ್ನೂ ಅನುಸರಿಸಲು ಬಯಸುವುದಿಲ್ಲ. ಚುನಾವಣೆ ಕುರಿತಂತೆ ನಮಗೆ ನಮ್ಮದೇ ಆದ ಕಾರ್ಯವಿಧಾನ ಇದೆ' ಎಂದು ಬಿಎಸ್‌ಪಿ ನಾಯಕಿ ಮಾಯಾವತಿ ಹೇಳಿದ್ದಾರೆ. ಮಾಯಾವತಿ ಅವರು ಚಳಿಯಿಂದ ಮನೆಯಲ್ಲೇ ಇದ್ದು, ಇನ್ನೂ ಹೊರಗೆ ಬಂದಿಲ್ಲ ಎಂದು ಅಮಿತ್ ಶಾ ಎರಡು ದಿನಗಳ ಹಿಂದೆ ಲೇವಡಿ ಮಾಡಿದ್ದಕ್ಕೆ ಈ ಪ್ರತಿಕ್ರಿಯೆ ನೀಡಿದ್ದಾರೆ.

'ಚುನಾವಣೆ ಸಮೀಪಿಸಿದ್ದರೂ ಮಾಯಾವತಿ ಇನ್ನೂ ಪ್ರಚಾರಕ್ಕೆ ಬಂದಿಲ್ಲ. ಅವರು ಹೆದರಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ' ಎಂದು ಶಾ ಅವರು ಮೊರಾದಾಬಾದ್‌ನಲ್ಲಿ ನಡೆದ ಬಿಜೆಪಿ ಸಮಾವೇಶದಲ್ಲಿ ಹೇಳಿದ್ದರು.

'ನಾವು ಇತರ ಪಕ್ಷಗಳನ್ನು ಅನುಸರಿಸಿದರೆ, ಚುನಾವಣೆ ಸಮಯದಲ್ಲಿ ಹಣದ ಕೊರತೆ ಉಂಟಾಗಬಹುದು. ಚುನಾವಣೆಗೆ ಸಂಬಂಧಿಸಿದಂತೆ ನಮ್ಮ ಪಕ್ಷದ ಕಾರ್ಯ ನಿರ್ವಹಣೆ ವಿಧಾನವೇ ಬೇರೆ ಇದೆ. ಪ್ರತಿಸ್ಪರ್ಧಿ ಪಕ್ಷಗಳು ನಮ್ಮನ್ನು ಅಪಹಾಸ್ಯ ಮಾಡಿದರೂ ಅಥವಾ ಪತ್ರಿಕೆಗಳು ಈ ಬಗ್ಗೆ ಬರೆದರೂ ಇದನ್ನು ಬದಲಾಯಿಸಲು ನಾವು ಬಯಸುವುದಿಲ್ಲ. ನಮ್ಮ ಬಗ್ಗೆ ಇತರ ಪಕ್ಷಗಳು ಕಾಳಜಿ ವಹಿಸುವುದು ಬೇಡ' ಎಂದು ಅವರು ತಿರುಗೇಟು ನೀಡಿದ್ದಾರೆ.

## ಅಧಿಕಾರಕ್ಕೆ ಬಂದರೆ ಉಚಿತ ವಿದ್ಯುತ್: ಅಖಿಲೇಶ್

ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಗೃಹ ಬಳಕೆಗೆ 300 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡುತ್ತೇವೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಭರವಸೆ ನೀಡಿದ್ದಾರೆ. ನೀರಾವರಿ ಉದ್ದೇಶಕ್ಕೆ ಬಳಸುವ ವಿದ್ಯುತ್ ಅನ್ನೂ ಉಚಿತವಾಗಿ ನೀಡುವ ವಾಗ್ದಾನ ಮಾಡಿದ್ದಾರೆ.

ಜನರಿಗೆ ಹೊಸ ವರ್ಷದ ಶುಭಾಶಯ ಕೋರಿ ಟ್ವೀಟ್ ಮಾಡಿರುವ ಅವರು, 2022ನೇ ವರ್ಷವು ಹೊಸ ಉತ್ತರ ಪ್ರದೇಶಕ್ಕೆ ಹೊಸ ಬೆಳಕು ತರಲಿದೆ ಎಂದು ಉಲ್ಲೇಖಿಸಿದ್ದಾರೆ.

2021ರ ಸೆಪ್ಟೆಂಬರ್‌ನಲ್ಲಿ ಆಮ್ ಆದ್ಮಿ ಪಕ್ಷವು ಇದೇ ಭರವಸೆಯನ್ನು ನೀಡಿತ್ತು. 300 ಯೂನಿಟ್‌ವರೆಗೆ ಮನೆಗಳಿಗೆ ಉಚಿತ ವಿದ್ಯುತ್, 24 ಗಂಟೆಯೂ ವಿದ್ಯುತ್ ಹಾಗೂ 38 ಲಕ್ಷ ಕುಟುಂಬಗಳ ಬಾಕಿ ಬಿಲ್ ಮನ್ನಾ ಮಾಡುವುದಾಗಿ ಪ್ರಕಟಿಸಿತ್ತು.

ವಿಧಾನಸಭೆ ಚುನಾವಣೆ ನಡೆಯಲಿರುವ ಪಂಜಾಬ್, ಉತ್ತರಾಖಂಡ, ಗೋವಾದಲ್ಲೂ ಎಎಪಿ ಇದೇ ರೀತಿಯ ಭರವಸೆ ನೀಡಿದೆ.

# ಪಿಎಂ-ಕಿಸಾನ್ ಯೋಜನೆ ಅಡಿ ₹20,946 ಕೋಟಿ ಬಿಡುಗಡೆ

**ನವದೆಹಲಿ (ಪಿಟಿಐ):** ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ–ಕಿಸಾನ್) ಯೋಜನೆಯ 10ನೇ ಕಂತಿನ ಸಹಾಯಧನವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ವರ್ಚುವಲ್ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು. ₹20,946 ಕೋಟಿಯನ್ನು ದೇಶದಾದ್ಯಂತ 10.09 ಕೋಟಿ ರೈತರಿಗಾಗಿ ಬಿಡುಗಡೆ ಮಾಡಿರುವುದಾಗಿ ಅವರು ಹೇಳಿದರು.

ಈ ವೇಳೆ ಮಾತನಾಡಿದ ಅವರು, ಕೃಷಿ ಕ್ಷೇತ್ರದಲ್ಲಿ ಆವಿಷ್ಕಾರಗಳು ನಡೆಯಬೇಕು. ಜೊತೆಗೆ, ಸಾವಯವ ಕೃಷಿಯನ್ನು ಉತ್ತೇಜಿಸಬೇಕು ಎಂದರು.

ಈ ಯೋಜನೆ ರೈತರಿಗೆ ಅತಿ ದೊಡ್ಡ ಆರ್ಥಿಕ ಬೆಂಬಲವಾಗಿದೆ. ಎಲ್ಲಾ ಕಂತುಗಳನ್ನೂ ಕೇಂದ್ರ ಸರ್ಕಾರ ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೇ ನಿಗದಿತ ಸಮಯದಲ್ಲಿ ವರ್ಗಾಯಿಸುತ್ತದೆ. ಈ ಯೋಜನೆ ಅಡಿ ಈವರೆಗೆ ₹1.8 ಲಕ್ಷ ಕೋಟಿಗೂ ಹೆಚ್ಚು ಹಣ ವರ್ಗಾವಣೆ ಆಗಿದೆ. ಉತ್ತಮ ದರ್ಜೆಯ ಬಿತ್ತನೆ ಬೀಜಗಳು ಮತ್ತು ರಾಸಾಯನಿಕಗಳನ್ನು ಕೊಳ್ಳಲು ರೈತರಿಗೆ ಈ ಹಣದಿಂದ ಉಪಯೋಗವಾಗಿದೆ ಎಂದರು.

**ರೈತ ಉತ್ಪನ್ನ ಕೇಂದ್ರಗಳಿಗೆ ₹14 ಕೋಟಿ ಬಿಡುಗಡೆ:** ಇದೇ ವೇಳೆ, 351 ರೈತ ಉತ್ಪನ್ನ ಕೇಂದ್ರಗಳಿಗೆ(ಎಫ್‌ಪಿಒ) ₹14 ಕೋಟಿ ಬಿಡುಗಡೆ ಮಾಡಿದರು. ಸುಮಾರು 1.24 ಲಕ್ಷ ರೈತರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ ಎಂದು ಹೇಳಿದರು.

ರೈತ ಉತ್ಪನ್ನ ಕೇಂದ್ರಗಳನ್ನು ಎಲ್ಲಾ ಹಂತಗಳಲ್ಲೂ ಸ್ಥಾಪಿಸಲು ಸರ್ಕಾರ ಉತ್ತೇಜನ ನೀಡುತ್ತಿದೆ. ₹15 ಲಕ್ಷ ಸಹಾಯಧನವನ್ನೂ ನೀಡುತ್ತಿದೆ. ಇದರಿಂದಾಗಿ ಸಾವಯವ ರೈತ ಉತ್ಪನ್ನ ಕೇಂದ್ರ, ಎಣ್ಣೆಕಾಳುಗಳು, ಬಿದಿರು ಮತ್ತು ಜೇನು ರೈತ ಉತ್ಪನ್ನ ಕೇಂದ್ರಗಳು ಸ್ಥಾಪನೆ ಆಗುತ್ತಿವೆ ಎಂದರು.

## ರಾಜ್ಯಕ್ಕೆ ₹ 685.28 ಕೋಟಿ

**ಬೆಂಗಳೂರು:** ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಬಿಡುಗಡೆಯಾದ 10ನೇ ಕಂತಿನಲ್ಲಿ ರಾಜ್ಯದ ಒಟ್ಟು 34,26,401 ರೈತರಿಗೆ ₹ 685.28 ಕೋಟಿ ಬಿಡುಗಡೆಯಾಗಿದೆ.

ಆ ಮೂಲಕ, ಈ ಯೋಜನೆಯಡಿ ಈವರೆಗೆ (2019ರ ಫೆ.1ರಿಂದ 2021ರ ಜ. 1) ರಾಜ್ಯದ 54.52 ಲಕ್ಷ ರೈತ ಕುಟುಂಬಗಳಿಗೆ ಕಿಸಾನ್ ಸಮ್ಮಾನ್ ಯೋಜನೆಯ ನೆರವು ಸಿಕ್ಕಿದೆ.

ಈ ಯೋಜನೆಯಡಿ ಅನುದಾನವನ್ನು ₹ 2 ಸಾವಿರದಂತೆ ನಾಲ್ಕು ತಿಂಗಳಿಗೊಮ್ಮೆ ಮೂರು ಕಂತುಗಳಲ್ಲಿ ವಾರ್ಷಿಕ ₹ 6 ಸಾವಿರ ಆರ್ಥಿಕ ನೆರವನ್ನು ಅರ್ಹ ರೈತರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ನೀಡಲಾಗುತ್ತಿದೆ.

ಕೇಂದ್ರ ಸರ್ಕಾರ ತಲಾ ರೈತರಿಗೆ ₹6 ಸಾವಿರ ನೀಡುತ್ತಿದೆ. ಇದಕ್ಕೆ ₹4 ಸಾವಿರ ಸೇರಿಸುತ್ತಿರುವ ಕರ್ನಾಟಕ ಸರ್ಕಾರ ಒಟ್ಟು ₹10 ಸಾವಿರ ಸಿಗುವಂತೆ ಮಾಡಿದೆ. ಈ ಆರ್ಥಿಕ ವರ್ಷದ ಎರಡನೇ ಕಂತಿನ ನೆರವಿಗಾಗಿ ರಾಜ್ಯ ಸರ್ಕಾರ ₹1007.18 ಕೋಟಿ ರೂ. ಬಿಡುಗಡೆ ಮಾಡಿದ್ದು, ರೈತರ ಖಾತೆಗೆ ವರ್ಗಾವಣೆ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ಒಟ್ಟು ₹ 8,022.69 ಕೋಟಿ ಬಿಡುಗಡೆ ಮಾಡಿದ್ದು, ರಾಜ್ಯ ಸರ್ಕಾರವು ₹2,850.54 ಕೋಟಿ ಬಿಡುಗಡೆ ಮಾಡಿದೆ ಎಂದು ಅವರು ಹೇಳಿದ್ದಾರೆ.

# ಜಿಎಸ್‌ಟಿ: ಡಿಸೆಂಬರ್‌ನಲ್ಲಿ ₹1.29 ಲಕ್ಷ ಕೋಟಿ ಸಂಗ್ರಹ

**ನವದೆಹಲಿ (ಪಿಟಿಐ):** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ 2021ರ ಡಿಸೆಂಬರ್‌ನಲ್ಲಿ ₹ 1.29 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ.

2020ರ ಡಿಸೆಂಬರ್‌ನಲ್ಲಿ ಆಗಿದ್ದ ತೆರಿಗೆ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಶೇ 13ರಷ್ಟು ಏರಿಕೆ ಕಂಡುಬಂದಿದೆ. 2019ರ ಡಿಸೆಂಬರ್‌ಗೆ ಹೋಲಿಸಿದರೆ ಶೇ 26ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಶನಿವಾರ ತಿಳಿಸಿದೆ.

2021ರ ನವೆಂಬರ್‌ನಲ್ಲಿ ₹ 1.31 ಲಕ್ಷ ಕೋಟಿಗಳಷ್ಟು ಜಿಎಸ್‌ಟಿ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ಅಗಿರುವ ಸಂಗ್ರಹವು ಕಡಿಮೆ ಇದೆ. ಸತತ ಆರನೇ ತಿಂಗಳಿನಲ್ಲಿಯೂ ತೆರಿಗೆ ಸಂಗ್ರಹವು ₹ 1 ಲಕ್ಷ ಕೋಟಿಯನ್ನು ದಾಟಿದಂತಾಗಿದೆ.

2021ರ ಡಿಸೆಂಬರ್‌ನಲ್ಲಿ ಸರಾಸರಿ ತೆರಿಗೆ ಸಂಗ್ರಹವು ₹ 1,29,780 ಕೋಟಿಗಳಷ್ಟಾಗಿದೆ. ಇದರಲ್ಲಿ ಸಿಜಿಎಸ್‌ಟಿ ₹ 22,578 ಕೋಟಿ, ಎಸ್‌ಜಿಎಸ್‌ಟಿ ₹ 28,658 ಕೋಟಿ, ಐಜಿಎಸ್‌ಟಿ ₹ 69,155 ಕೋಟಿ ಹಾಗೂ ಸೆಸ್ ₹ 9,389 ಕೋಟಿಗಳಷ್ಟಿದೆ ಎಂದು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆರ್ಥಿಕ ಚೇತರಿಕೆಯ ಜೊತೆಗೆ ತೆರಿಗೆ ವಂಚನೆ ತಡೆಯಲು ಕೈಗೊಂಡಿರುವ ಕ್ರಮಗಳಿಂದಾಗಿ ವರಮಾನ ಸಂಗ್ರಹವು ಸುಧಾರಿಸುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

2021ರ ಅಕ್ಟೋಬರ್‌ಗೆ ಹೋಲಿಸಿದರೆ ನವೆಂಬರ್‌ನಲ್ಲಿ ಸೃಷ್ಟಿಯಾಗಿರುವ ಇ–ವೇ ಬಿಲ್‌ಗಳ ಪ್ರಮಾಣವು ಶೇ 17 ರಷ್ಟು ಕಡಿಮೆ ಆಗಿದೆ. ಅಕ್ಟೋಬರ್‌ನಲ್ಲಿ 7.4 ಕೋಟಿ ಇ–ವೇ ಬಿಲ್ ಸೃಷ್ಟಿಯಾಗಿತ್ತು. ನವೆಂಬರ್‌ನಲ್ಲಿ 6.1 ಕೋಟಿಗೆ ಇಳಿಕೆ ಆಗಿದೆ. ಇ–ವೇ ಬಿಲ್ ಸೃಷ್ಟಿಯಲ್ಲಿ ಇಳಿಕೆ ಆಗಿದ್ದರು ಸಹ ಹೆಚ್ಚು ತೆರಿಗೆ ಸಂಗ್ರಹ ಆಗಿದೆ ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಎಂ.ಎಸ್. ಮಣಿ ತಿಳಿಸಿದ್ದಾರೆ. ತೆರಿಗೆ ವಂಚನೆ ತಡೆಯಲು ತಂತ್ರಜ್ಞಾನ ಆಧಾರಿತ ವ್ಯವಸ್ಥೆ ಜಾರಿಗೊಳಿಸಲು ಗಮನ ಹರಿಸಿದ್ದರಿಂದಾಗಿ ಸೇವಾ ವಲಯದಿಂದ ಹೆಚ್ಚು ತೆರಿಗೆ ಸಂಗ್ರಹ ಆಗಿರುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

**ತೆರಿಗೆ ಸಂಗ್ರಹ ವಿವರ** (₹ ಲಕ್ಷ ಕೋಟಿಗಳಲ್ಲಿ)

| ತಿಂಗಳು | ₹ ಲಕ್ಷ ಕೋಟಿ |
|---|---|
| ಜುಲೈ | 1.16 |
| ಆಗಸ್ಟ್ | 1.12 |
| ಸೆಪ್ಟೆಂಬರ್ | 1.17 |
| ಅಕ್ಟೋಬರ್ | 1.30 |
| ನವೆಂಬರ್ | 1.31 |
| ಡಿಸೆಂಬರ್ | 1.29 |

# ಮೂವರು ಮಾಜಿ ಸಿ.ಎಂಗಳಿಗೆ ಗೃಹಬಂಧನ

ಪ್ರಜಾವಾಣಿ ವಾರ್ತೆ

**ಶ್ರೀನಗರ:** ಜಮ್ಮು ಪ್ರಾಂತ್ಯಕ್ಕೆ ಹೆಚ್ಚುವರಿಯಾಗಿ 6 ವಿಧಾನಸಭಾ ಕ್ಷೇತ್ರಗಳನ್ನು ಸೇರ್ಪಡೆ ಮಾಡುವ ಕ್ಷೇತ್ರ ಪುನರ್‌ವಿಂಗಡಣಾ ಆಯೋಗದ ಕರಡು ಪ್ರಸ್ತಾವ ವಿರೋಧಿಸಿ ಗುಪ್ಕಾರ್ ಒಕ್ಕೂಟದ (ಪಿಎಜಿಡಿ) ನೇತೃತ್ವದಲ್ಲಿ ಶನಿವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಜಮ್ಮು ಮತ್ತು ಕಾಶ್ಮೀರದ ಮೂವರು ಮಾಜಿ ಮುಖ್ಯಮಂತ್ರಿಗಳಿಗೆ ಇಲ್ಲಿನ ಆಡಳಿತ ಅವಕಾಶ ನೀಡಲಿಲ್ಲ.

ಮಾಜಿ ಮುಖ್ಯಮಂತ್ರಿಗಳಾದ ಫಾರೂಕ್ ಅಬ್ದುಲ್ಲಾ, ಒಮರ್ ಅಬ್ದುಲ್ಲಾ ಹಾಗೂ ಮೆಹಬೂಬಾ ಮುಫ್ತಿ ಅವರಿಗೆ ಪ್ರತಿಭಟನೆಯಲ್ಲಿ ಪಾಲ್ಗೊಳ್ಳದಂತೆ ನಿರ್ಬಂಧ ವಿಧಿಸಿ ಮೂವರ ನಿವಾಸಗಳ ಪ್ರವೇಶದ್ವಾರದ ಗೇಟ್‌ಗಳಿಗೆ ಬೀಗ ಹಾಕಿ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಗಿತ್ತು.

ಪ್ರತಿಭಟನೆಯ ಹಿನ್ನೆಲೆಯಲ್ಲಿ ಮೂವರು ಮಾಜಿ ಸಿ.ಎಂಗಳ ನಿವಾಸಗಳಿರುವ ಇಲ್ಲಿನ ಗುಪ್ಕಾರ್ ರಸ್ತೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಈ ಮೂವರು ರಾಜಕೀಯ ನಾಯಕರಿಗೆ ನಿರ್ಬಂಧ ವಿಧಿಸಿದ ಹಿನ್ನೆಲೆಯಲ್ಲಿ ಎರಡನೇ ಹಂತದ ನಾಯಕರು ಹಾಗೂ ಪಕ್ಷದ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ವಾಣಿಜ್ಯ ಎಲ್‌ಪಿಜಿ ದರ ಇಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಾಣಿಜ್ಯ ಬಳಕೆಯ 19 ಕೆ.ಜಿಯ ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್ ದರದಲ್ಲಿ ₹102.50 ಇಳಿಕೆ ಆಗಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ 19 ಕೆ.ಜಿ. ವಾಣಿಜ್ಯ ಬಳಕೆಯ ಸಿಲಿಂಡರ್ ದರವು ₹2,083ಕ್ಕೆ ಇಳಿಕೆ ಆಗಿದೆ.

ಈ ಹಿಂದೆ ನವೆಂಬರ್ 1ರಂದು ಸಿಲಿಂಡರ್ ದರದಲ್ಲಿ ₹266 ಮತ್ತು ಡಿಸೆಂಬರ್ 1ರಂದು ಒಂದು ಸಿಲಿಂಡರ್ ದರದಲ್ಲಿ ₹ 100 ಏರಿಕೆ ಮಾಡಲಾಗಿತ್ತು.

ಗೃಹ ಬಳಕೆಯ 14.2 ಕೆ.ಜಿ.ಯ ಎಲ್‌ಪಿಜಿ ಸಿಲಿಂಡರ್‌ಗಳ ದರದಲ್ಲಿ ಯಾವುದೇ ಇಳಿಕೆ ಆಗಿಲ್ಲ.

# ಉಂಡೆ ಕೊಬ್ಬರಿಗೆ ದಾಖಲೆ ಬೆಲೆ

ಪ್ರಜಾವಾಣಿ ವಾರ್ತೆ

**ತಿಪಟೂರು (ತುಮಕೂರು):** ವರ್ಷದ ಮೊದಲ ದಿನವೇ ಉಂಡೆ ಕೊಬ್ಬರಿ ಬೆಲೆ ಗಣನೀಯ ಏರಿಕೆ ಕಂಡಿದ್ದು, ಕ್ವಿಂಟಲ್‌ಗೆ ₹18,333 ದಾಖಲೆ ಬೆಲೆಗೆ ಮಾರಾಟವಾಗಿದೆ.

2021ರ ಡಿಸೆಂಬರ್ ತಿಂಗಳ ಕಡೆಯ ವಾರದಲ್ಲಿ ಕೇಂದ್ರ ಸರ್ಕಾರ ಕೊಬ್ಬರಿಗೆ ₹11 ಸಾವಿರ ಬೆಂಬಲ ಬೆಲೆ ನಿಗದಿಪಡಿಸಿತ್ತು.

ಆಕಾಲಿಕ ಮಳೆಯಿಂದಾಗಿ ಇಳುವರಿ ಕುಸಿತ, ಮಾರುಕಟ್ಟೆಯಲ್ಲಿ ಆವಕ ಕಡಿಮೆಯಾಗಿರುವುದು ಬೆಲೆ ಏರಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

**ಏಲಕ್ಕಿ ಧಾರಣೆ**

**ಸಕಲೇಶಪುರ**

| | |
|---|---|
| ಕೂಳೆ | 500-550 |
| ನಡುಗೋಲು | 600-650 |
| ರಾಶಿ | 700-800 |
| ರಾಶಿ ಉತ್ತಮ | 800-900 |
| ಜರಡಿ | 1000-1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 750-850 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1300-1400 |
| ಕಾಳು ಮೆಣಸು | 480 |

**ಅಡಿಕೆ**

**ಬಂಟ್ವಾಳ**

| | |
|---|---|
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |

**ಕಾರ್ಕಳ**

| | |
|---|---|
| ಹೊಸತು | 40000-45000 |
| ಹಳತು | 46000-53000 |

**ಕುಂದಾಪುರ**

| | |
|---|---|
| ಹಳೆಚಾಲಿ | 51500-52500 |
| ಹೊಸಚಾಲಿ | 43500-44500 |

**ಶಿರಸಿ**

| | |
|---|---|
| ಬೆಟ್ಟೆ | 36199-45599 |
| ಬಿಳಿಗೋಟು | 24699-37589 |
| ಚಾಲಿ | 48699-49299 |
| ರಾಶಿ | 46308-48108 |

**ರಾಮನಗರ ರೇಷ್ಮೆ**

| | |
|---|---|
| ಮಿಶ್ರತಳಿ | 400-620 |
| ದ್ವಿತಳಿ | 466-788 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15400 | 15400 | 15350 | 226.10 ಸೆಂಟ್ಸ್ |
| ಎಸಿ | 7000 | 6800 | 6600 | |
| ಆರ್‌ಪಿ | 6500 | 6500 | 6400 | ಲಂಡನ್ |
| ಆರ್‌ಸಿ | 3900 | 4000 | 3900 | 2370 ಡಾಲರ್ಸ್ |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1310 (1310) |
| ಸೋಯಾ (ರಿಫೈನ್ಡ್) | ₹1185 (1190) |
| ಸೂರ್ಯಕಾಂತಿ (ರಿಫೈನ್ಡ್) | ₹1245 (1250) |
| ಪಾಮೋಲಿನ್ | ₹1141 (1144) |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

ಬೆಂಗಳೂರು

| | |
|---|---|
| 100 ಮೊಟ್ಟೆಗೆ | ₹515 |
| 12 ಮೊಟ್ಟೆಗೆ | ₹68 |

ಮೈಸೂರು

| | |
|---|---|
| 100 ಮೊಟ್ಟೆಗೆ | ₹515 |

**ಮುಂಬೈ ಧಾರಣೆ**

**ಶೇಂಗಾ**

1-1-2022

| | |
|---|---|
| ಜಾವಾ 70/80(ಹೊಸ) | 10500-10550 |
| ಜಾವಾ 80/90(ಹೊಸ) | 10400-10450 |
| ದಪ್ಪ ಮಧ್ಯಪ್ರದೇಶ(ಹೊಸ) | 9850-9900 |
| ದಪ್ಪ ಗುಜರಾತ್(ಹೊಸ) | 8950-9000 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1320 (1320) |
| ಒಂದು ವಾರದ ಡೆಲಿವರಿ | 1315 (1315) |
| ಸೋಯಾ ಕಚ್ಚಾ | 1120 (1140) |
| ಪಾಮ್ ವಾರದ ಡೆಲಿವರಿ | 1139 (1142) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1175 (1175) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

| | |
|---|---|
| ಅಪರಂಜಿ ಚಿನ್ನ 10ಗ್ರಾಂ | 48,200 (48,000) |
| ಬೆಳ್ಳಿ ಕೆ.ಜಿ | 62,300 (62,000) |

ಆವರಣದಲ್ಲಿ ಹಿಂದಿನ ದಿನದ ಧಾರಣೆ


ಕರ್ನಾಟಕ ಸರ್ಕಾರ
**ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ**
ದೂರವಾಣಿ/ಫ್ಯಾಕ್ಸ್ ಸಂಖ್ಯೆ : 08372-297213 ಇ–ಮೇಲ್: gimsgadag@gmail.com
ಸಂ. ಗವೈವಿಸಂ/ಟೆಂಡರ/ ಮಾ.ಸಂ/73/2021-22 ದಿನಾಂಕ:31.12.2021
**ಇ–ಟೆಂಡರ ಪ್ರಕಟಣೆ**
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ ಗದಗ ಇಲ್ಲಿಗೆ ಹೊರಗುತ್ತಿಗೆ ಮೂಲಕ ವಿವಿಧ ಸಿಬ್ಬಂದಿಗಳನ್ನು (ಅಂದಾಜು ಮೊತ್ತ ರೂ.7.25 ಕೋಟಿ) ಮಾನವ ಸಂಪನ್ಮೂಲ ಮೂಲಕ ನೇಮಿಸುವುದಕ್ಕಾಗಿ ಆಸಕ್ತಿಯುಳ್ಳ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ ಮೂಲಕ ದಿನಾಂಕ: 31.12.2021 ರಿಂದ ದಿನಾಂಕ:02.02.2022ರ ಸಾಯಂಕಾಲ 4:30ಗಂಟೆವರೆಗೆ ಇ–ಪೋರ್ಟಾಲ್ ಸಂಖ್ಯೆ: GIMS/TENDER/MP/73/2021-22 (http://www.Eproc.karnataka.gov.in)ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದ್ದು, ದಿನಾಂಕ:12.01.2022 ಬೆಳಗ್ಗೆ: 11.30 ಗಂಟೆಗೆ ಪ್ರಿ–ಬಿಡ್ ಸಭೆಗೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು.
ಸಹಿ/–ನಿರ್ದೇಶಕರು
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ವಾ.ಸಾ.ಇ/ಗದಗ/434/2021–22/ದೇಶಪಾಂಡೆಪಬ್ಲಿಸಿಟಿ



**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಆ&ಕುಕ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು
(ಆರೋಗ್ಯ ಸೌಧ, 3ನೇ ಮಹಡಿ, ಬೆಂಗಳೂರು–560 023)
ಸಂಖ್ಯೆ: ಆಕುಕ/ಇಂ.ವಿ/ಕಾ.ಇಂ/ಬೆಂ/ಟೆಂಡರ್/ಸ.ಇಂ–1,2,3&4/2021–22/31 ದಿನಾಂಕ: 01.01.2022
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗ ಬೆಂಗಳೂರು ವತಿಯಿಂದ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ನೋಂದಾಯಿತ ಗುತ್ತಿಗೆದಾರರು ಭಾಗವಹಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.
1) Repairs and Renovation to the PHC's at (a) Begur, (b) Tavarekere, (c) Sulikere in Bengaluru South Taluk, (d) Doddanekkundi, (e) Halnayakanahalli, (f) Vibuthipura in Bengaluru East Taluk, (g) Dommasandra, (h) Marasuru and (i) Balluru in Anekal Taluk, BengaluruUrban District (Package-1). 2) Repairs and Renovation to the PHC's at (a) Makali, (b) Mallasandra, (c) Abbigere, (d) Laggere, (e) Mallathalli, (f) Bagaluru, (g) Amruthahalli, (h) Velumodaliar Kamaraja Road, Bengaluru North Taluk, Bengaluru Urban District (Package-2). 3) Repairs and Renovation to the PHC at (a) Godlumuddenahalli, (b) Avathi, (c) Nalluru, (d) Budigere and (e) Koyira in Devanahalli Taluk, (f) Jadigenehalli, (g) Mugabala, (h) Nandagudi and (i) Sulibele in Hosakote Taluk, Bengaluru Rural District (Package-3). 4) Repairs and Renovation to the PHC at (a) Doddahejjaji, (b) Tubugere, (c) G Hosahalli, (d) Doddatumkuru, (e) Hulikunte and (f) Arudi in Doddaballapura Taluk, (g) Shivagange, (h) Maragondanahalli, (i) Modalakote and (j) Manne in Nelamangala Taluk, Bengaluru Rural District (Package-4). 5) Repairs and Renovation to the PHC at (a) Kotagal, (b) Sugganahalli, (c) Kodiyala Karenahalli, (d) Jalamangala and (e) Kailancha in Ramanagara Taluk, (f) Gejjagaraguppe, (g) Maniganahalli, (h) Banavadi, (i) Chakrabhavi and (j)Taggikuppein Magadi Taluk, Ramanagara District (Package-5). 6) Repairs and Renovation to the PHC at (a) Nagavara, (b) Yelethotadahalli, (c) Makali, (d) M N Hosahalli and (e) Thimmasandra Channapatna Taluk, (f) Hosadurga, (g) Kodihalli, (h) Kotekoppa, (i) Dombara Doddi, (j) Thokasandra, (k) Doddamaralavadi and (l) V R Doddi in Kanakapura Taluk, Ramanagara District (Package-6).
7) Repairs and Renovation works to PHC at (a) Vakkaleri, (b) Chamarahalli, (c) Kylanuru, (d) Narasapura, (e) Kembod and (f) Urban Primary Health Centre at Kolar, Kolar Taluk, (g) Lakshmipura, (h) Ronuru, (i) Nambihalli and (10) Mudimadagu in SrinivasapuraTaluk, Kolar District (Package-7). 8) Repairs and Renovation works to PHC at (a) Masthi in Malur Taluk, (b) Kurudumale, (c) Devarayasamudra and (d) Byrakuru in Mulabagal Taluk, (e) Budikote, (f) Doddachinnahalli and (g) Thoppanahalli, (h) Guttahalli and (j) Kysamballi in Bangarpet Taluk, Kolar District (Package-8). 9) Repairs and Renovation works to PHC at (a) Paathapalya, (b) Shivapura, (c) Chakavelu, (d) Marganukunte and (e) G.Madhepalli Cross in Bagepalli Taluk, (f) Chinnasandra, (g) Kencharlahalli, (h) Iragampalli and (i) Kaiwara in Chintamani Taluk, (j) Beechaganahalli and (k) Yellodu in Gudibande Taluk, Chikkaballapura District (Package-9). 10) Repairs and Renovation works to PHC at (a) Muddenahalli in Chikkaballapura Taluk, (b) Thondebhavi, (c) Idaguru, (d) Ramapura and (e) Kallinayakanahalli in Gowribidanur Taluk, (f) Ganjigunte, (g) Dibburahalli, (h) E- Thimmasandra, (i) Y.Hunasenahalli and (j) K.Muttakadahalli in Sidlaghatta Taluk, Chikkaballapura District (Package-10). 11) Repairs and Renovation works to PHC at (a) Dasudi, (b) Hoysalakatte and (c) Thirthapura in Chikkanayakanahalli Taluk, (d) Hosakere and (e) C.S. Pura in Gubbi Taluk, (f) Halepalya and (g) Kuppalashettyhalli in Tiptur Taluk, (h) Kanathur, (i) Thandaga and (j) Sampige in Turuvekere Taluk, (k) Huthridurga in Kunigal Taluk, Tumkur District (Package-11). 12) Repairs and Renovation works to PHC at (a) Mallasandra and (b) Honnudike in Tumkur Taluk, (c) Kolala in Koratagere Taluk, (d) Kudlapura in Madhugiri Taluk, (e) Mangalavada and (f) Kotagudda in Pavagada Taluk, (g) Bukkapatna and (h) Pattanayakanahalli in Sira Taluk, Tumkur District (Package-12). 13) Repairs and Renovation works to PHC at (a) Aadivala, (b) Guyilalu and (c) Dindavara in Hiriyur Taluk, (d) Devigere, (e) Baguru and (f) Muthodu in Hosadurga Taluk, (g) Chikkajajur in Holalkere Taluk, Chitradurga District (Package-13). 14) Repairs and Renovation works to PHC at (a) Chikkagondanahalli and (b) Haikal in Chitradurga Taluk, (c) Hirekerehalli, (d) at B.G. Kere, (e) Ashokasiddapura and (f) Kondlahalli in Molakalmuru Taluk, (g) Sanekere, (h) Bedareddyhalli and (i) Nelagethanahatti in Challakere Taluk, Chitradurga District (Package-14). 15) Repairs and Renovation works to PHC at (a) Kumsi, (b) Matturu and (c) Harnahalli in Shivamogga Taluk, (d) B.R.P, (e) Antharagange and (f) Mydolalu Bhadravathi Taluk, (g) Konanduru, (8) Mandagadde and (h) Megaravalli in Thirtahalli Taluk, Shivamogga District (Package-15). 16) Repairs and Renovation works to PHC at (a) Yeduru, (b) Nagara and (c) Huncha in Hosanagara Taluk, (d) Thalguppa and (e) Thyagarti in Sagara Taluk (f) Chandragutti, (g) Ulavi and (h) Kuppagadde Soraba Taluk, (i) Chikkajogihalli, (j) Thogarsi and (k) Hithala in Shikaripura Taluk, Shivamogga District (Package-16). 17) Repairs and Renovation works to PHC at (a) G.K Halli, (b) Goppenahalli, (c) Nalluru, (d) Hebbalagere and (e) Tavarekere in Channagiri Taluk, (f) Savalanga, (g) Sasvehalli and (h) Kathige in Honnali Taluk, Davanagere District (Package-17). 18) Repairs and Renovation works to PHC at (a) Igoor, (b) R G Halli and (c) Hucchavanahalli in Davanagere Taluk, (d) Nandigudi, (e) K Bevinahalli and (f) Ukkadagatri in Harihara Taluk, (g) Musturu, (h) Asagodu and (i) Pallaghatte in Jagaluru Taluk, Davanagere District (Package-18).
**ವೇಳಾ ಪಟ್ಟಿ:** 1) ಖಾಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕಡೆಯ ದಿನಾಂಕ: 10.01.2022 ರಂದು ಸಂಜೆ 4.00 ರವರೆಗೆ. 2) ಟೆಂಡರ್‌ಗಳ ತೆರೆಯುವಿಕೆ ದಿನಾಂಕ: 12.01.2022 ಸಂಜೆ 4.00 ಕ್ಕೆ. ಟೆಂಡರಿಗೆ ಸಂಬಂಧಿಸಿದ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್(www.eproc.karnataka.gov.in)ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್
ಆ&ಕುಕ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು.
ವಾ.ಸಾ.ಸಂ.ಇ/ಬೆಂ.ನಗರ/2591/ಆಕಾರ್/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ**
(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮಕ್ಕೆ ಒಳಪಟ್ಟಿದೆ.)
ಸೈರಾಬಾಗ್, ನಂ.19/4, 3ನೇ ಮಹಡಿ, ಕನ್ನಿಂಗ್ ಹ್ಯಾಂ ರೋಡ್, ಬೆಂಗಳೂರು–560052. ದೂರವಾಣಿ: 080–23221320/29551320
E-mail: ksskdc03@gmail.com Website: www.ksskdc.kar.nic.in
**2021–22ನೇ ಸಾಲಿನ ವಿವಿಧ ಯೋಜನೆಗಳಿಗೆ ಸಫಾಯಿ ಕರ್ಮಚಾರಿ/ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನ**
ಯೋಜನೆ : ಸಫಾಯಿ ಕರ್ಮಚಾರಿ/ಪೌರಕಾರ್ಮಿಕರು ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್/ಪೌರಕಾರ್ಮಿಕರ ಮಕ್ಕಳಿಗೆ ಆನ್‌ಲೈನ್ ಪಾಠ ಕೇಳಲು ಹಾಗೂ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಟ್ಯಾಬ್ ವಿತರಣಾ ಯೋಜನೆ
ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹಾಗೂ ಪೌರಕಾರ್ಮಿಕರ 8th, 9th, 10th, I & II Year PUC ಎಲ್ಲಾ ಪದವೀಧರ (ಬಿ.ಎ, ಬಿ.ಕಾಂ, ಬಿ.ಎಸ್ಸಿ), ಸ್ನಾತಕೊತ್ತರ ಪದವಿ (ಎಂ.ಎ, ಎಂ.ಕಾಂ, ಎಂ.ಎಸ್ಸಿ,), ಇಂಜಿನಿಯರಿಂಗ್ ಮತ್ತು ಡಿಪ್ಲೊಮಾ ಓದುತ್ತಿರುವ ಮಕ್ಕಳಿಗೆ/ವಿದ್ಯಾರ್ಥಿಗಳಿಗೆ ಆನ್‌ಲೈನ್ ಪಾಠ ಕೇಳಲು ಹಾಗೂ ಅವರ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಟ್ಯಾಬ್‌ಗಳ ವಿತರಣೆ.
**ಅರ್ಜಿಸಲ್ಲಿಸುವ ವಿಧಾನ:** ಫಲಾಪೇಕ್ಷಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಮತ್ತು ದಾಖಲೆಗಳನ್ನು ನಿಗಮದ ವೆಬ್‌ಸೈಟ್ www.ksskdc.kar.nic.in ನಲ್ಲಿ ಅಪ್ಲೋಡ್ ಮಾಡಬಹುದು ಮತ್ತು ಫಲಾಪೇಕ್ಷಿಗಳು ಆಫ್‌ಲೈನ್ ಮೂಲಕ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲಾ ಕಛೇರಿ, ಡಾ|| ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ/ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಲ್ಲಿ ಸಲ್ಲಿಸಬಹುದು.
ಪ್ರಾರಂಭಿಕ ದಿನಾಂಕ: 01.01.2022 ಕೊನೆಯ ದಿನಾಂಕ: 31.01.2022
ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ವ್ಯವಸ್ಥಾಪಕರು, ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ/ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಇವರನ್ನು ಸಂಪರ್ಕಿಸಬಹುದು
ಸಹಿ/–
(ಕೆ. ಬಿ. ಮಲ್ಲಿಕಾರ್ಜುನ)
ವ್ಯವಸ್ಥಾಪಕ ನಿರ್ದೇಶಕರು
ವಾ.ಸಾ.ಸಂ.ಇ/ಬೆಂ.ನಗರ/2647/ಆಕಾರ್/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ**
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–4/ಟೆಂಡರ–17/ 2021–22/3859 ದಿನಾಂಕ: 31.12.2021
**ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)**
ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.
(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 29.01.2022 16.30 ಗಂಟೆ ವರೆಗೆ
(2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 31.01.2022 16.30 ಗಂಟೆ ವರೆಗೆ
(3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 01.02.2022 17.00 ಗಂಟೆ ವರೆಗೆ
(4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 02.02.2022 17.00 ಗಂಟೆ ವರೆಗೆ
**ಕಾಮಗಾರಿಯ ಹೆಸರು:** ಲೆಕ್ಕ ಶೀಷಿಕೆ: 4059-80-051-0-29-386: (1) ವರ್ಕ ಇಂಡೆಂಟ್: 136334/CALL-2 (2) ವರ್ಕ ಇಂಡೆಂಟ್: 136826/CALL-2 (3) ವರ್ಕ ಇಂಡೆಂಟ್: 137094/CALL-2
(ಕೆಡಬ್ಲೂ–4) ರಲ್ಲಿನ ನಿಬಂಧನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಬಂಧನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "eproc.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
DIPR/ADK/MCA/644/21-22 dt.01.01.2022



**ಮಂಗಳೂರು ವಿಶ್ವವಿದ್ಯಾನಿಲಯ**
ಸಂಖ್ಯೆ:ಮವಿ/ಅಭಿವೃದ್ಧಿವಿಭಾಗ/ಇ-ಟೆಂಡರ್/ಡಿ9 ದಿನಾಂಕ: 01-01-2022
ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ ಕಛೇರಿಗೆ, ಸಂಬಂಧಪಟ್ಟಂತೆ ಇ-ಟೆಂಡರ್/EOI ಆಹ್ವಾನಿಸಿದ್ದು ಟೆಂಡರಿನ ವಿವರಗಳು ಕೆಳಗಿನಂತಿವೆ. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (E-procurement portal) ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದಾಗಿದೆ.

| Sl. No. | Name of the tender | Category | Date of publish through E-procurement |
|---|---|---|---|
| 1. | Supply of student Table and Chair to PG centre Jnana Kaveri Chikka Aluvara Mangalore University Kushalnagar Coorg.. (ED/2021-22/IND514) | Goods | 27/12/2021 11:31:05 |
| 2. | Mangalore University invites tender for the Disposal of old Vehicle Scorpio (Diesel) KA 19Z 9583 (MU/ADM/9583V/4/2021-22/B3) | Service | 27/12/2021 12:47:11 |
| 3. | Supply of Lab Equipments required for the Department of Physical Education Mangalore University Mangalagangothri. (ED/2021-22/IND496/CALL-3) | Goods | 30/12/2021 15:24:30 |
| 4. | Provision of WIFI services to International Students Accommodation at Venkat Residency, Derlakatte, Mangalore for a period of one year. (MUDEV/14/2021-22/D6/CALL-4) | Services | 30/12/2021 15:59:38 |
| 5 | Toner Reconditioning (Drum Replacing Refilling Charges & all other parts) to Mangalore University for a period of one year. ( MU/REG/ADM (B2)/04/2021/CALL-4) | Services | 30/12/2021 16:15:22 |
| 6 | Supply of Remote Log Software for Remote Access facility to Mangalore University Library (ED/2021-22/IND508/CALL-2) | Goods | 30/12/2021 16:41:58 |

DIPR / MNG / 786 / MPL / 21-22 ಕುಲಸಚಿವರ ಪರವಾಗಿ



ಕರ್ನಾಟಕ ಸರ್ಕಾರ
**ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ**
ರೈಲ್ವೆ ಸ್ಟೇಷನ್ ಎದುರು, ಹಳೇ ಪಿ.ಬಿ.ರಸ್ತೆ, ದಾವಣಗೆರೆ–577002
ನಂ:ದಾಮಪಾ/ಕಾಅ1.ಇ.ಟೆಂಡರ್:33/2021–22 ದಿನಾಂಕ:30–12–2021
**ಟೆಂಡರ್ ಪ್ರಕಟಣೆ** (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2021–22ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್–04 ಕಾಮಗಾರಿಗಳು, 2019–20ನೇ ಸಾಲಿನ 14ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ (ಉಳಿಕೆ)–02 ಕಾಮಗಾರಿಗಳು, 2021–22ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ–43 ಕಾಮಗಾರಿಗಳು, ವಾಜಪೇಯಿ ನಗರ ನಿವೇಶನ ಯೋಜನೆ–01 ಕಾಮಗಾರಿ, 2018–19ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಎಸ್‌ಸಿಎಸ್‌ಪಿ (ಉಳಿಕೆ)–01 ಕಾಮಗಾರಿ ಒಟ್ಟು 51 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜೆನ್ಸಿದಾರರು/ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್‌ಸೈಟ್ www.davanagerecity.mrc.gov.in ರಲ್ಲಿ ಹಾಗೂ ಇ–ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91 8046010000, +91 8068948777 ರಿಂದ ಮಾಹಿತಿ ಪಡೆಯಬಹುದು.

| | |
|---|---|
| ಪ್ರೀ ಬಿಡ್ ಮೀಟಿಂಗ್ ದಿನಾಂಕ & ವೇಳೆ (ರೂ.100.00 ಲಕ್ಷ ಮೇಲ್ಪಟ್ಟ ಕಾಮಗಾರಿಗಳಿಗೆ ಮಾತ್ರ | 11–01–2022 ಸಮಯ: 16.30 |
| ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ | 17–01–2022 ಸಮಯ 16.30 |
| ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ | 17–01–2022 ಸಮಯ 17.00 |
| ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ | 18–01–2022 ಸಮಯ 11.00 |
| ಅಲ್ಪಾವಧಿ ಕಾಮಗಾರಿಗಳು ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ | 11–01–2022 ಸಮಯ: 16.30 |
| ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ | 11–01–2022 ಸಮಯ: 17.00 |
| ಟೆಂಡರ್ ತೆರೆಯುವ ದಿನಾಂಕ & ವೇಳೆ | 13–01–2022 ಸಮಯ: 11.00 |

ಸಹಿ/– ಆಯುಕ್ತರು
ಮಹಾನಗರ ಪಾಲಿಕೆ, ದಾವಣಗೆರೆ.
ವಾಸಾಸಂಇ/ದಾವಣಗೆರೆ/ಎಸ್‌ಎಸ್‌ಸಿ/595/2021–22

ಕರ್ನಾಟಕದ 'ಖಜುರಾಹೋ' 11

ಸುಪ್ತ ಪ್ರಜ್ಞೆಯ ಉತ್ಖನನದೊಳಗೆ 13



# ಇನ್ನು ಹಾರಿ ಬರಲಿದೆ ಊಟ

## ಡಿಶ್ ಬುಟ್ಟಿಯಿಂದ ನೇರ ಇಂಟರ್‌ನೆಟ್

## ಅರೆಕ್ಷಣದಲ್ಲಿ ಸಿನಿಮಾ ಡೌನ್‌ಲೋಡ್ ಮಾಡಲು ಸಿಗಲಿದೆ 5G ಸೌಲಭ್ಯ

## ಕಗ್ಗಾಡಿನಲ್ಲೂ ತೆರೆದುಕೊಳ್ಳಲಿದೆ ದೊಡ್ಡ ಜಗತ್ತು

ಹೊಸವರ್ಷದ ಹೊಸ್ತಿಲು ದಾಟಿರುವ ನಮ್ಮೆದುರು ಮುಂದಿನ ದಿನಗಳಲ್ಲಿ ತಂತ್ರಜ್ಞಾನ ಏನೆಲ್ಲಾ ಚಮತ್ಕಾರ ಮಾಡಲಿದೆ ಗೊತ್ತೆ? ವಿಜ್ಞಾನದ ಕಥೆಗಳಲ್ಲಿ ಹಿಂದೆಂದೋ ಓದಿದ್ದ ಕಾಲ್ಪನಿಕ ವಿವರಗಳೆಲ್ಲ ಧುತ್ತೆಂದು ನೈಜರೂಪದಲ್ಲಿ ಅನಾವರಣಗೊಳ್ಳಲು ಸಜ್ಜಾಗಿವೆ. ಏನೀ ಹೊಸ ತಂತ್ರಜ್ಞಾನದ ಮಜಕೂರು ಎಂದು ಬೆನ್ನು ಹತ್ತಿದಾಗ ಸಿಕ್ಕ ರಸವತ್ತಾದ ವಿವರಗಳು ಇಲ್ಲಿವೆ...

ಜಯಸಿಂಹ ಆರ್.

2021ಅನ್ನು ಹಿಂದೆ ಬಿಟ್ಟು 2022ಕ್ಕೆ ಕಾಲಿಟ್ಟಿದ್ದೇವೆ. ಕೋವಿಡ್ ಸಾಂಕ್ರಾಮಿಕದ ಏಕಾಂತವಾಸದಲ್ಲಿ ಈ ಹಿಂದಿನ ವರ್ಷದಲ್ಲಿ ನಮ್ಮ ಪಯಣಕ್ಕೆ ಜತೆಯಾದದ್ದು ತಂತ್ರಜ್ಞಾನ ಮತ್ತು ಇಂಟರ್‌ನೆಟ್ ಆಫ್ ಥಿಂಗ್ಸ್ (ಐಒಟಿ). 2022ರಲ್ಲಿ ಮತ್ತೆ ಕೋವಿಡ್ ಸಾಂಕ್ರಾಮಿಕದ ಗುಮ್ಮ ಅವುಚಿಕೊಳ್ಳಲು ಕಾದುಕುಳಿತಿದ್ದಾನೆ. ಹೀಗಾಗಿ ಹೊಸ ವರ್ಷದಲ್ಲೂ ನಮ್ಮನ್ನು ಮುನ್ನಡೆಸುವುದು ತಂತ್ರಜ್ಞಾನ ಮತ್ತು ಐಒಟಿಯೇ. ಈ ಎರಡು ವಿಚಾರಗಳು ಸಾಮಾನ್ಯರ ಬದುಕನ್ನೂ ಬದಲಿಸಲಿವೆ ಎಂಬುದರಲ್ಲಿ ಎರಡನೇ ಮಾತಿಲ್ಲ. ಹೀಗೆ ನಮ್ಮ ಬದುಕನ್ನು ಬದಲಿಸುವ ಇತರ ಸಂಗತಿಗಳು ಯಾವುವು ಎಂದು ಯೋಚಿಸಿದರೆ ಸ್ಯಾಟಲೈಟ್ ಇಂಟರ್‌ನೆಟ್, 5ಜಿ, ಡ್ರೋನ್ ಡೆಲಿವರಿ... ಪಟ್ಟಿ ಬೆಳೆಯುತ್ತಾ ಹೋಗುತ್ತದೆ.





ಹಿಂದಿನ ವರ್ಷದ ಬಹುತೇಕ ಸಮಯವು ವರ್ಕ್ ಫ್ರಂ ಹೋಮ್, ಆನ್‌ಲೈನ್ ತರಗತಿ, ವಿಡಿಯೊ ಕಾನ್ಫರೆನ್ಸ್, ಆನ್‌ಲೈನ್ ಶಾಪಿಂಗ್ ಹೀಗೆ ಇಂಟರ್‌ನೆಟ್ ಸಂಪರ್ಕವನ್ನು ಬೇಡುವ ಕಾರ್ಯಗಳಲ್ಲೇ ಕಳೆದುಹೋಗಿದೆ. ಕೈಬೆರಳ ತುದಿಯಲ್ಲೇ ಜಗತ್ತನ್ನು ನೋಡುವಂತಹ ಡಿಜಿಟಲ್ ಭಾರತದ ಕನಸು ಕಾಣುತ್ತಿದ್ದರೂ ಹಳ್ಳಿಗಳಲ್ಲಿ ಮಕ್ಕಳು ಮಾಳಿಗೆಯ ಮೇಲೆ ನಿಂತು ನೆಟ್‌ವರ್ಕ್‌ಗಾಗಿ ಹುಡುಕಾಡುತ್ತಿದ್ದ ದೃಶ್ಯಗಳು ಈಗಲೂ ಕಣ್ಣಮುಂದೆ ಇವೆ. ಮನೆಯಲ್ಲೇ ಕುಳಿತು ಕೆಲಸ ಮಾಡಬೇಕಾದಾಗ ಇಂಟರ್‌ನೆಟ್ ನೆಟ್‌ವರ್ಕ್ ಸಿಗದೇ ಪಡಿಪಾಟಲು ಬಿದ್ದದ್ದನ್ನು ಬಹುತೇಕ ಮಂದಿ ಮರೆತಿರಲಿಕ್ಕಿಲ್ಲ. ನಗರವಾಸದ ಅವಶ್ಯಕತೆ ಇಲ್ಲದಿದ್ದರೂ ನೆಲದ ಜೀವನಕ್ಕೆ ಹತ್ತಿರವಿರುವ ತಮ್ಮೂರಿನಲ್ಲಿ ಇಂಟರ್‌ನೆಟ್ ಸಿಗುವುದಿಲ್ಲ ಎಂಬ ಒಂದೇ ಕಾರಣಕ್ಕೆ ಕಾಂಕ್ರೀಟ್ ಕಾಡುಗಳಲ್ಲೇ ವರ್ಷ ಕಳೆದವರ ಸಂಖ್ಯೆಯೇನೂ ಕಡಿಮೆಯಿಲ್ಲ.

2022ರ ಆರಂಭದೊಂದಿಗೆ 'ವರ್ಕ್ ಫ್ರಂ ಹೋಮ್'ನ ಮನೆವಾಸ ಮುಗಿಸಿ, ಕಚೇರಿಗಳತ್ತ ಮುಖಮಾಡಲು ಬಹುತೇಕ ಮಂದಿ ಸಿದ್ಧರಾಗಿದ್ದರು. ಆದರೆ ಈಗ ಮತ್ತೆ ಕೋವಿಡ್ ಗುಮ್ಮನ ಕಾಟ. ಹೊಸ ವರ್ಷವನ್ನೂ ಮತ್ತದೇ ವರ್ಕ್ ಫ್ರಂ ಹೋಮ್, ಆನ್‌ಲೈನ್ ತರಗತಿ, ವಿಡಿಯೊ ಕಾನ್ಫರೆನ್ಸ್‌ಗಳಲ್ಲಿ ಕಳೆಯಬೇಕಾದ ಆತಂಕದ ಮೂಟೆ. ಆದರೆ, ಈ ಎಲ್ಲಾ ಸಂಗತಿಗಳನ್ನು ಮತ್ತಷ್ಟು ಸಹನೀಯವಾಗಿಸುವ ಸಾಧ್ಯತೆಗಳೂ ನಮ್ಮೆದರು ಕಾದುಕುಳಿತಿವೆ.

ನೆಟ್‌ವರ್ಕ್ ಇಲ್ಲ ಎಂದು ಮಕ್ಕಳು ಮೊಬೈಲ್ ಹಿಡಿದು ಚಾವಣಿ ಏರುವ, ಮರದ ಮೇಲಿನ ಅಟ್ಟಣೆ ಏರುವ ಪರಿಪಾಟವನ್ನು ಇಲ್ಲವಾಗಿಸುವ ಹೊಸ ಸಾಧ್ಯತೆಯೊಂದು ನಮ್ಮೆದುರು ಇದೆ. ಇಂಟರ್‌ನೆಟ್ ಸಂಪರ್ಕಕ್ಕಾಗಿ ಬ್ರಾಡ್‌ಬ್ಯಾಂಡ್ ವೈರುಗಳನ್ನು ಕಿಲೊಮೀಟರ್‌ಗಟ್ಟಲೆ ಎಳೆಯಬೇಕಾದ ಅಗತ್ಯವೇ ಇಲ್ಲದ ಅಥವಾ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಬೇಕಾದ ಜರೂರತ್ತು ಇಲ್ಲದ ಸ್ಯಾಟಲೈಟ್ ಇಂಟರ್‌ನೆಟ್ ಸೇವೆ ಈ ವರ್ಷ ಆರಂಭವಾಗುವ ನಿರೀಕ್ಷೆ ಇದೆ. ಇದಕ್ಕಾಗಿ ದೇಶ–ವಿದೇಶಗಳ ಕಂಪನಿಗಳೂ ದಿಲ್ಲಿ ಗದ್ದುಗೆಯಲ್ಲಿರುವವರ ಎದುರು ಪ್ರಸ್ತಾವ ಹಿಡಿದು ಕಾದಿವೆ. ಒಂದೊಮ್ಮೆ ದಿಲ್ಲಿ 'ದೊರೆ'ಯ ಒಪ್ಪಿಗೆ ದೊರೆತರೆ, ಅದು ಡಿಜಿಟಲ್ ಭಾರತದ ಕನಸನ್ನು ನನಸಾಗಿಸುವ ಮಹತ್ವದ ಮೈಲುಗಲ್ಲಾಗಲಿದೆ.

ವಿದ್ಯುತ್ ಚಾಲಿತ ವಾಹನಗಳಿಗೆ ವೇಗ ಇರುವುದಿಲ್ಲ, ಬಹಳ ದೂರ ಕ್ರಮಿಸುವುದಿಲ್ಲ ಎಂಬ 'ಸತ್ಯ'ವನ್ನು ಟೆಸ್ಲಾ ಮೂಲಕ ಮಿಥ್ಯೆಯಾಗಿಸಿದ ಎಲಾನ್ ಮಸ್ಕ್, ತನ್ನ ಸ್ಪೇಸ್‌ಎಕ್ಸ್ ಸ್ಯಾಟಲೈಟ್ ಇಂಟರ್‌ನೆಟ್ ಸೇವೆಯನ್ನು ಭಾರತದಲ್ಲಿ ನೀಡಲು ಕಾದಿದ್ದಾನೆ. ವಿಶ್ವದಾದ್ಯಂತ ಈ ಸೇವೆ ನೀಡುವ ಉದ್ದೇಶದಿಂದ ಸ್ಪೇಸ್‌ಎಕ್ಸ್ ಕಂಪನಿಯು, ಭೂಮಿಯ ಸುತ್ತ ಡಾಬು ಹಾಕಿದಂತೆ ಸಾಲುಸಾಲು ಉಪಗ್ರಹಗಳನ್ನು ಬಾಹ್ಯಾಕಾಶದಲ್ಲಿ ತೇಲಿಬಿಟ್ಟಿದೆ. ಸಾವಿರಾರು ಸಂಖ್ಯೆಯಲ್ಲಿರುವ ಈ ಉಪಗ್ರಹಗಳ ಮೂಲಕವೇ, ಭೂಮಿಯ ಯಾವುದೋ ಕಗ್ಗಾಡಿನಲ್ಲಿರುವ ಡಿಶ್ ಆ್ಯಂಟೆನಾಗೆ ಇಂಟರ್‌ನೆಟ್ ಸಂಪರ್ಕವನ್ನು ನೀಡಲಾಗುತ್ತದೆ. ಈ ಮೂಲಕ ಕಗ್ಗಾಡಿನಲ್ಲಿ ಮನೆಮಾಡಿ ಕೂತವರೂ, ದಿಲ್ಲಿಯಲ್ಲಿ ಕೂತವರಂತೆ ಬೆರಳ ತುದಿಯಲ್ಲಿ ಜಗತ್ತನ್ನು ನೋಡಲು ಸಾಧ್ಯವಾಗುತ್ತದೆ. ಕುಗ್ರಾಮವೊಂದರಲ್ಲಿನ ಕುಶಲಕರ್ಮಿಯು, ತನ್ನದೇ ಮೊಬೈಲ್ ಮೂಲಕ ಆನ್‌ಲೈನ್ ಮಾರುಕಟ್ಟೆಯಲ್ಲಿ ತನ್ನ ಕರಕುಶಲ ವಸ್ತುಗಳನ್ನು ಮಾರಲು ಸಾಧ್ಯವಾಗುತ್ತದೆ. ಗ್ಲೋಬಲ್ ವಿಲೇಜ್ ಎಂಬ ಪರಿಕಲ್ಪನೆಯನ್ನು ವಾಸ್ತವಕ್ಕೆ ಹತ್ತಿರವಾಗಿಸುವ ಸಂಗತಿಗಳಲ್ಲಿ ಇದೂ ಒಂದು. ಇಷ್ಟೆಲ್ಲಾ ದೊಡ್ಡ ಕನಸು ಬೇಡ ಎನ್ನುವುದಾದರೆ, ಮನೆಯ ಮಕ್ಕಳು ನೆಟ್‌ವರ್ಕ್‌ಗಾಗಿ ಮರ ಏರುವುದನ್ನಾದರೂ ಇದು ತಪ್ಪಿಸಲಿದೆ ಎಂಬುದಂತೂ ಸತ್ಯ.

ಇದಿಷ್ಟನ್ನೇ ನಾವು ಎದುರು ನೋಡಬೇಕಿಲ್ಲ. ಹೊಟ್ಟೆ ಹಸಿದಾಗ, ಬುಕ್ ಮಾಡಿದರೆ ಮನೆಗೆ ಊಟ ತಂದುಕೊಡುವ ಅನ್ನದಾತರ ಕೆಲಸದ ವಿಧಾನವನ್ನು ಬದಲಿಸುವ ಸಂಗತಿಯೂ ನಮ್ಮೆದುರು ಇದೆ. ಈಗ ನಾವು ಊಟ ಬುಕ್ ಮಾಡಿದರೂ ಡೆಲಿವರಿ ಏಜೆಂಟ್ ಸಂಚಾರ ಸಾಗರದ ಹಲವು ಅಡೆತಡೆಗಳನ್ನು ದಾಟಿ ನಮ್ಮನ್ನು ತಲುಪುವಷ್ಟರಲ್ಲಿ ಅದು ತಣ್ಣಗಾಗಿರುತ್ತದೆ. ಹೋಟೆಲ್‌ನಿಂದ ಹೊರಟು, ಆ ತಿನಿಸಿನ ಹಬೆ ಇಲ್ಲವಾಗುವ ಮುನ್ನವೇ ಅದು ನಮ್ಮ ತಟ್ಟೆಯಲ್ಲಿರುವ ಹಾಗಿದ್ದಿದ್ದರೆ ಎಷ್ಟು ಚಂದವಿರುತ್ತಿತ್ತು. ಹೋಟೆಲ್‌ಗೆ ಹೋಗದೇ ಇರುವ ಸ್ಥಿತಿಯಲ್ಲಿ, ಹೋಟೆಲ್‌ನಲ್ಲಿ ದೊರತಷ್ಟೇ ಬಿಸಿಯಾದ ತಿನಿಸು ನಮ್ಮ ನಾಲಿಗೆಯನ್ನೂ ಬೆಚ್ಚಗೆ ಮಾಡುತ್ತಿತ್ತು. ಇಂತಹ ಕಲ್ಪನೆ ಕೇವಲ ಕನಸಾಗಿ ಉಳಿಯಬೇಕಿಲ್ಲ. ಅಷ್ಟು ಬೇಗ ನಮಗೆ ಊಟವನ್ನು ತಂದುಕೊಡಲಿರುವ ಡ್ರೋನ್ ಡೆಲಿವರಿ ಎಂಬ ಪರಿಕಲ್ಪನೆ ಈ ವರ್ಷ ಸತ್ಯವಾಗುವ ನಿರೀಕ್ಷೆ ಇದೆ.

ಫುಡ್ ಡೆಲಿವರಿ ದೈತ್ಯ ಸ್ವಿಗ್ಗಿ ಅಂತಹದ್ದೊಂದು ಪ್ರಯತ್ನಕ್ಕೆ ಕೈಹಾಕಿದೆ. ಪ್ರಾಯೋಗಿಕವಾಗಿ ಹಲವು ಮನೆಗಳಿಗೆ ಡ್ರೋನ್ ಮೂಲಕ ಊಟವನ್ನು ತಲುಪಿಸಿದೆ. ಅತ್ಯಂತ ಸಂಚಾರ ದಟ್ಟಣೆ ಇರುವ ನಗರವೊಂದರಲ್ಲಿ 5 ಕಿ.ಮೀ. ಅಂತರವನ್ನು ಕೇವಲ ಐದು ನಿಮಿಷದಲ್ಲಿ ಕ್ರಮಿಸಿದ ಡ್ರೋನ್ ಭೇಷ್ ಎನಿಸಿಕೊಂಡಿದೆ. ಇದನ್ನು ದೇಶದ ಹಲವೆಡೆಗೆ ಹಂಚುವ ಕನಸಿನ ಬುತ್ತಿಯನ್ನು ದಿಲ್ಲಿ ದೊರೆಯ ಎದುರು ಹಿಡಿದು ಸ್ವಿಗ್ಗಿ ನಿಂತಿದೆ. ದಿಲ್ಲಿ ದೊರೆ ಇದಕ್ಕೂ ಹೂಂಗುಟ್ಟಿದರೆ, ಡ್ರೋನ್ ನಿಮ್ಮ ಮನೆಬಾಗಿಲಿಗೆ ಬಂದು ಕೈಬೀಸುವ ದಿನಗಳು ದೂರದಲ್ಲಿಲ್ಲ. ಬರಿಯ ಊಟ ತಲುಪಿಸುವುದಕ್ಕೆ ಈ ಪ್ರಯತ್ನ ನಿಂತಿಲ್ಲ. ಔಷಧಿ, ಆನ್‌ಲೈನ್ ಶಾಪಿಂಗ್‌ಗಳ ಡೆಲಿವರಿಯನ್ನೂ ಡ್ರೋನ್ ಹೆಗಲೇರಿಸುವ ಪ್ರಯತ್ನಗಳು ನಡೆದಿವೆ. ಇವೆಲ್ಲಾ ಸಾಕಾರವಾದರೆ, ಆಗಸದಲ್ಲಿ ಡ್ರೋನ್ ದಟ್ಟಣೆ ಹೆಚ್ಚುವುದರಲ್ಲಿ ಅನುಮಾನವಿಲ್ಲ ಎಂಬುದು ಹೊಸ ವರ್ಷದ ಹೊಸ ಮಾತಾಗಿದೆ.

ತಂತ್ರಜ್ಞಾನವೇ ನಮ್ಮನ್ನು ನಿಯಂತ್ರಿಸುತ್ತದೆ ಎಂಬುದನ್ನು ಮತ್ತಷ್ಟು ಸತ್ಯವಾಗಿಸುವ ಬೆಳವಣಿಗೆಗಳಿಗೂ ನಾವು ಈ ವರ್ಷದಲ್ಲಿ ಸಾಕ್ಷಿಯಾಗಬೇಕಿದೆ. ಈ ವರ್ಷದಿಂದ ವಿದ್ಯುತ್ ಚಾಲಿತ ವಾಹನಗಳು ನಮ್ಮ ದೈನಂದಿನ ಬದುಕಿನ ಚಟುವಟಿಕೆಗಳನ್ನು ನಿಯಂತ್ರಿಸಲು ಆರಂಭಿಸಲಿವೆ. ಪೆಟ್ರೋಲ್/ಡೀಸೆಲ್ ವಾಹನವಾಗಿರಲಿ ಅಥವಾ ವಿದ್ಯುತ್ ಚಾಲಿತ ವಾಹನವೇ ಆಗಿರಲಿ ನಾವು ಅದನ್ನು ನಿಯಂತ್ರಿಸಬೇಕಲ್ಲವೇ ಎಂದು ಪ್ರಶ್ನಿಸುತ್ತಿದ್ದೀರಾ? ನಿಮ್ಮ ಪ್ರಶ್ನೆ ಸರಿಯಾಗಿಯೇ ಇದೆ.

ವಾಹನವನ್ನು ಚಲಾಯಿಸುವಾಗ ನಾವು ಅದನ್ನು ನಿಯಂತ್ರಿಸುತ್ತೇವೆ ಎಂಬುದು ಸತ್ಯ. ಆದರೆ ವಿದ್ಯುತ್ ಚಾಲಿತ ವಾಹನಗಳು (ಇ.ವಿ.) ನಮ್ಮ ಇತರ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ ಎಂಬುದೂ ಅಷ್ಟೇ ಸತ್ಯ.

ಇ.ವಿ.ಗಳಲ್ಲಿರುವ ಬ್ಯಾಟರಿ ಪೂರ್ಣ ಡಿಸ್ಚಾರ್ಜ್ ಆಗುವವರೆಗೆ ಮಾತ್ರ ಅವನ್ನು ಚಲಾಯಿಸಲು ಸಾಧ್ಯ. ಪೆಟ್ರೋಲ್/ಡೀಸೆಲ್ ವಾಹನಗಳಲ್ಲಿ ಇಂಧನ ಖಾಲಿಯಾಗುತ್ತಿದ್ದಂತೆ ಅಥವಾ ಅದಕ್ಕಿಂತಲೂ ಮೊದಲೇ ಬಂಕ್‌ಗಳಿಗೆ ಹೋಗಿ ಟ್ಯಾಂಕ್ ಭರ್ತಿ ಮಾಡಿಸುತ್ತೇವೆ. ಇದಕ್ಕೆಲ್ಲಾ ಒಂದೆರಡು ನಿಮಿಷ ಖರ್ಚು ಮಾಡಬೇಕಷ್ಟೆ. ಇಂಧನ ಭರ್ತಿ ಮಾಡಲು ನಾವು ಯೋಜನೆ ಹಾಕಬೇಕಿಲ್ಲ. ಆದರೆ ನೀವು ಇ.ವಿ. ಬಳಸಲು ಆರಂಭಿಸುತ್ತೀರಿ ಎಂದಿಟ್ಟುಕೊಳ್ಳಿ, ನಿಮ್ಮ ದೈನಂದಿನ ಬದುಕು ಬದಲಾಗುತ್ತದೆ. ನೀವು ಹೆಚ್ಚು ಓಡಾಡುವವರಾಗಿದ್ದರೆ, ಪ್ರತಿದಿನ ಇ.ವಿ.ಯ ಬ್ಯಾಟರಿ ಚಾರ್ಜ್ ಮಾಡಬೇಕು. ಅದರ ಚಾರ್ಜ್ ಮುಗಿಯುವ ಮುನ್ನ ಮನೆ ಸೇರಬೇಕು. ಇಲ್ಲದಿದ್ದರೆ, ಚಾರ್ಜಿಂಗ್ ಸ್ಟೇಷನ್‌ನಲ್ಲಾದರೂ ಇರಬೇಕು.

13ನೇ ಪುಟಕ್ಕೆ...

# ಹೂವಿನಲ್ಲಡಗಿದೆ ಬಾಳಧರ್ಮ!

ಶ್ರೀರಂಜನಿ ಅಡಿಗ

**ಹೊಸ ಮನೆಯ ಪ್ರವೇಶದ ಸಂಭ್ರಮವನ್ನು ಕಾಣುವುದು ಹೂವಿನ ಅಲಂಕಾರದಲ್ಲೇ ಅಲ್ಲವೇ? ಹೊಸವರ್ಷಕ್ಕೆ ಪದಾರ್ಪಣೆ ಮಾಡಿರುವ ಈ ಸಂದರ್ಭದಲ್ಲಿ ಅಂತಹ ಸಂಭ್ರಮದ ಅಲೆ ಎಬ್ಬಿಸುವ ಒಂದು ಪುಷ್ಪ ಪುರಾಣ**

ಅರಳಿದ ಹೂವುಗಳು ಕಣ್ಣಿಗೆ ಬಿದ್ದಾಗ ಮನಸ್ಸಿಗೆ ಆಗುವ ಮಾಂತ್ರಿಕ ಖುಷಿ ಅಂತಿಂಥದ್ದಲ್ಲ. ಅದು ಸೂಸುವ ಪರಿಮಳ, ಬಣ್ಣಗಳ ಜೋಡಣೆ, ಆಕಾರ ಎಲ್ಲವೂ ಚೇತೋಹಾರಿ ಅಂಶಗಳೇ. ಬೆಂಗಳೂರಿನ ಮಲ್ಲೇಶ್ವರದ ಸಂಪಿಗೆ ರಸ್ತೆ ಇಲ್ಲವೆ ಗಾಂಧಿ ಬಜಾರ್ ರಸ್ತೆಯಲ್ಲಿ ಹಾಗೆ ಒಂದು ಬಾರಿ ಸುತ್ತು ಹಾಕಿದರೆ ಮೈ ಮರೆಸುವಂತಹ ಪರಿಮಳ ತಲೆ ತಿರುಗಿಸುವಂತಿರುತ್ತದೆ. ಮರಕ್ಕೆ ನೇತು ಹಾಕಿದ ಸುಗಂಧಿ ಹೂವಿನ ಹಾರಗಳು, ಬಿಡಿಬಿಡಿಯಾಗಿರುವ ಹೂವುಗಳು, ಬೇರೆ ಹೂವುಗಳನ್ನು ಮಧ್ಯೆ ಸೇರಿಸಿಕೊಂಡು ಹೊಸರೂಪ ತಾಳಿದ ಮಾಲೆಗಳು, ಜರ್ಬೆರಾ, ಡೇಲಿಯಾ, ಹೆಸರು ಗೊತ್ತಿಲ್ಲದ ಇನ್ನೂ ಅನೇಕ ವಿದೇಶಿ ಹೂವುಗಳ ಬೊಕೆಗಳು - ಆ ಹೂವುಗಳ ಲೋಕ ನಗರದ ಸುಂದರ ಉದ್ಯಾನದಂತೆ ಕಾಣಿಸುತ್ತದೆ. ಬೆಂಗಳೂರಿನಲ್ಲಿ ಹಕ್ಕಿಗಳ ಚಿಲಿಪಿಲಿಗಿಂತ ಮುನ್ನ 'ಹೂವೊ...ಹೂವೊ' ಎಂಬ ಸುಪ್ರಭಾತ ಎಂಥ ಗಾಢನಿದ್ರೆಯಲ್ಲಿ ಇರುವವರನ್ನೂ ಎಬ್ಬಿಸಿಬಿಡುತ್ತದೆ.

ಹೆಣ್ಣುಮಕ್ಕಳಿಗೂ ಹೂವಿಗೂ ಬಿಡಿಸಲಾಗದ ನಂಟು. ಪುಷ್ಪ, ಸುಮ, ಗುಲಾಬಿ, ಚಂಪಾ, ಪದ್ಮ, ಮಂದಾರ ಎಂಬ ಹೆಸರುಗಳೆಲ್ಲಾ ಹೆಣ್ಣಿಗೆ ತಾನೆ? ಅದರಲ್ಲಿಯೂ ಬಾಲ್ಯದಲ್ಲಿ ಹೂವುಗಳ ಆಕರ್ಷಣೆ ವಿಶೇಷವಾಗಿರುತ್ತದೆ. ಕರಾವಳಿಯಲ್ಲಿ ಆಷಾಢ, ಶ್ರಾವಣದ ಮಾಸದಲ್ಲಿ ದಂಡಿಯಾಗಿ ಸಿಗುವ ಜಾಜಿ, ಮಲ್ಲಿಗೆಗಳಿಂದಾಗಿ ಬಾಲೆಯರಿಗೆ ಮೊಗ್ಗಿನ ಜಡೆ ಬಿಡಿಸುವ ಸಂಭ್ರಮ (ಉದ್ದಕೂದಲಿರುವ ಪುಟ್ಟಬಾಲಕರಿಗೂ ಉದ್ದಲಂಗ ಹಾಕಿ ಜಡೆ ಬಿಡುವವರಿದ್ದಾರೆ).

ಹೆಣ್ಣಿಗೆ ಹೂವಿನ ಬಗ್ಗೆ ಎಷ್ಟು ಅಸಕ್ತಿಯೊ ಅಷ್ಟೇ ಆಸಕ್ತಿ ಹೂವಿನ ತೋಟ ಮಾಡುವುದರಲ್ಲಿಯೂ ಇರುತ್ತದೆ. ಹಿತ್ತಲಿನಲಿರುವ ಹೂವಿನ ಗುತ್ತಿಗಳು ಮನೆಯ ಹೆಂಗಸರ ಕೈಚಳಕ, ಕಲಾತ್ಮಕತೆಗೆ ಸಾಕ್ಷಿ. ಅದು ಆಕರ್ಷಕ, ವೈವಿಧ್ಯವಾಗಿದ್ದಷ್ಟು ಗೌರವಭಾವನೆ ದುಪ್ಪಟ್ಟಾಗುವುದು. ಮಳೆಗಾಲದಲ್ಲಿ ಹಿತ್ತಲವರೆಗೂ ಪರಿಮಳ ಸೂಸುವ ಜಾಜಿ, ಸಂಜೆಮಲ್ಲಿಗೆ, ಪಾರಿಜಾತ, ಕಾಕಡ, ಸುರಗಿ ಹೂವುಗಳನ್ನು ಉಮೇದಿನಲ್ಲಿ ಕೊಯ್ದು ಉದ್ದ ಮಾಲೆ ಮಾಡಿಕೊಂಡು ಎರಡು ಜಡೆಯ ಮಧ್ಯೆ ಮುಡಿದುಕೊಂಡೇ ಶಾಲೆಗೆ ಹೋಗಬೇಕು. ದಿನಾ ಹೂವು ಮುಡಿದು ಬರುವ ಹುಡುಗಿ ಇವತ್ತು ಯಾವ ಹೂವು ಮುಡಿದು ಬರುವಳೆಂಬ ಕುತೂಹಲ ಇಡೀ ತರಗತಿಗೆ. ಹೂ ಮುಡಿದ ಹೆಣ್ಣುಗಳ ತಲೆಯಿಂದ ಉದುರಿದ ಹೂವುಗಳಿಂದ ತರಗತಿಯೆಲ್ಲಾ ಕಸವಾಗುವುದೆಂದು ಮೇಷ್ಟ್ರುಗಳು 'ಹೂವಿನ ಜೊತೆ ಬುಟ್ಟಿಯನ್ನು ಕಟ್ಟಿಕೊಂಡು ಬನ್ನಿ, ಕಸವಾಗುವ ತಾಪತ್ರಯ ಇಲ್ಲ' ಎಂಬ ಉಪಾಯ ಬೇರೆ ಕೊಡುತ್ತಿದ್ದರು. ಟೀಚರಿಗೆಂದೇ ತರುವ ಹೂವಿನ ಮಾಲೆಯ ಹಿಂದೆ ಅವರ ಪೆಟ್‌ಸ್ಟೂಡೆಂಟ್ ಆಗುವ ಸಂಚು ಇರುತ್ತಿತ್ತು.

ಶ್ರಾವಣದಲ್ಲಿ ವಿವಿಧ ಧಾನ್ಯಗಳನ್ನು ಬಳಸಿ ಮಾಡುವ 'ಕೊಳ್ ಹೂವು' ದೇವರಿಗೆ, ಹೊಸ್ತಿಲಿಗೆ ಶ್ರೇಷ್ಠ ಎಂಬುದು ಕರಾವಳಿಗರ ನಂಬಿಕೆ. ಅಲ್ಲವೇ ಮತ್ತೆ? ದೇವರಿಗೂ ಹೂವಿಗೂ ಅವಿನಾಭಾವ ಸಂಬಂಧ. ವಿಧವಿಧದ ಹೂವುಗಳಿಂದ ದೇವರ ಕೋಣೆಯನ್ನು ಅಲಂಕರಿಸಿ ಅದರ ಅಂದ ಹೆಚ್ಚಿಸಿ ಭಕ್ತಿಪರವಶರಾಗುವುದು ಭಕ್ತರಿಗೆ ನಿತ್ಯದ ಕಾಯಕ. ನವರಾತ್ರಿಯಲ್ಲಿ ನವದುರ್ಗೆಯರಿಗೆ ಒಂಬತ್ತು ದಿನವೂ ಬೇರೆ ಬೇರೆ ಜಾತಿಯ ನಿರ್ದಿಷ್ಟ ಹೂವುಗಳಿಂದ ಪೂಜಿಸಬೇಕೆಂಬ ನಂಬಿಕೆಯಿದೆ.

11ನೇ ಪುಟಕ್ಕೆ...

# 'ಗಾಂಧಿ, ಕೊಲ್ಲಲಾಗದಷ್ಟು ಸಹಜಸತ್ವದ ಮನುಷ್ಯ'

**ಹಿರಿಯ ಸಮಾಜವಾದಿ ಲೇಖಕ-ವಿಮರ್ಶಕ ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟವಾದ ಈ ಹೊತ್ತಿನಲ್ಲಿ ಅವರೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗ...**

ಸಂದರ್ಶನ: ದೇವು ಪತ್ತಾರ

- **'ಗಾಂಧಿ ಕಥನ'ಕ್ಕೆ ಪ್ರಶಸ್ತಿ-ನಿಮ್ಮ ಪ್ರಥಮ ಪ್ರತಿಕ್ರಿಯೆ?**

ದೊಡ್ಡ ಪ್ರಶಸ್ತಿಯೊಂದು, ಅದೂ ಅನಿರೀಕ್ಷಿತವಾಗಿ ಬಂದಾಗ ಆಗುವ ಸಹಜ ಸಂತೋಷ ಆಯಿತು. ಜೊತೆಗೇ, ಇಂತಹ ಪ್ರಶಸ್ತಿ ನನ್ನಂಥವರಿಗೂ ಬರುವ ವಾತಾವರಣ ಇನ್ನೂ ಅಲ್ಪಸ್ವಲ್ಪವಾದರೂ ಉಳಿದಿದೆಯಲ್ಲ ಎಂಬ ಆಶ್ಚರ್ಯ, ಸಂತೋಷ ಎರಡೂ ಆಯಿತು.

- **ಹಲವು + ದಾಖಲೆ ಮುದ್ರಣ ಕಂಡ ಈ 'ಜನಪ್ರಿಯ' ಪುಸ್ತಕಕ್ಕೆ ಪ್ರಶಸ್ತಿ ನಿರೀಕ್ಷಿಸಿದ್ದೀರಾ?**

ಮೊದಲಾಗಿ ಈ ಪುಸ್ತಕ ಇಷ್ಟೊಂದು-22 ಮುದ್ರಣಗಳು- ಜನಮನ್ನಣೆ ಪಡೆಯವುದೆಂದು ನಾನು ಅಥವಾ ಇನ್ನ್ಯಾರೇ ಆಗಲಿ ನಿರೀಕ್ಷಿಸಿರಲಿಲ್ಲ. ಕೊರೊನಾ ಅಡ್ಡ ಬರದಿದ್ದರೆ ಇನ್ನಷ್ಟು ಮುದ್ರಣಗಳನ್ನು ಕಾಣುತ್ತಿತ್ತು ಎಂದೆನ್ನಿಸುವ ವೇಗದಲ್ಲಿ ಈ ಪುಸ್ತಕ ಓದುಗರನ್ನು ಮುಟ್ಟಿತು. ಇದಕ್ಕೆ ಮುಖ್ಯ ಕಾರಣ, ಈ ಪುಸ್ತಕವನ್ನು ನನ್ನಿಂದ ಬರೆಸಿ, ಲಾಭೋದ್ದೇಶವಿಲ್ಲದೆ ಪ್ರಕಟಿಸಿದ ಎಂ.ಸಿ. ನರೇಂದ್ರ ಅವರು ಮತ್ತು ಅವರಿಗೆ ಬೆನ್ನೆಲುಬಾಗಿ ನಿಂತ ಗಾಂಧಿ ಕಾರ್ಯಕರ್ತ ಜಿ.ಬಿ. ಶಿವರಾಜು ಅವರು. ನರೇಂದ್ರ ಈ ಹಿಂದೆ ರಾಜ್ಯದಲ್ಲಿ ಸಚಿವರಾಗಿದ್ದ ಸಜ್ಜನ ಮತ್ತು ಗಾಂಧಿವಾದಿ ಎನಿಸಿದ್ದ ಎಂ. ಚಂದ್ರಶೇಖರರ ಪುತ್ರರು. ವೈಯಕ್ತಿಕ ಶ್ರದ್ಧೆಯಿಂದ ಪುಸ್ತಕದ ಸಾವಿರಾರು ಪ್ರತಿಗಳನ್ನು ಜನರಿಗೆ ಮುಟ್ಟಿಸಲು ಮುಂದಾದ ಹುಲಕೋಟಿಯ ಗಾಂಧಿವಾದಿ ಡಿ.ಆರ್. ಪಾಟೀಲರನ್ನೂ ಇಲ್ಲಿ ನೆನೆಯಬೇಕು.

ಪುಸ್ತಕ 'ಜನಪ್ರಿಯ'ವಾದೊಡನೆ ಅದು ಪ್ರಶಸ್ತಿಗೆ ಭಾಜನವಾಗಲಾರದು ಎಂಬುದು ಜನರ ಅಭಿರುಚಿಯನ್ನು ಕೆಳ ಅಂದಾಜು ಮಾಡುವ ಕೆಲ 'ಪ್ರತಿಷ್ಠಿತ' ಸಾಹಿತ್ಯ ವಲಯಗಳ ಪ್ರವೃತ್ತಿಯ ಪರಿಣಾಮ ಎಂದು ನನ್ನ ಭಾವನೆ.

- **ಗಾಂಧಿಯನ್ನು ಅಪ್ರಸ್ತುತಗೊಳಿಸಿರುವ ಸದ್ಯದ ಭಾರತದಲ್ಲಿ 'ಗಾಂಧಿ ಕಥನ'ಕ್ಕೆ ಪ್ರಶಸ್ತಿ ದೊರೆತಿರುವುದು ವಿರೋಧಾಭಾಸ ಅನ್ನಿಸುವುದಿಲ್ಲವೇ?**

ಗಾಂಧಿ ಅಪ್ರಸ್ತುತಗೊಂಡಿದ್ದಾರೆ ಎನ್ನುವುದಾಗಲಿ, ಅವರನ್ನು ಅಪ್ರಸ್ತುತಗೊಳಿಸಲು ನಡೆಯುತ್ತಿರುವ ಪ್ರಯತ್ನಗಳು ಯಶಸ್ವಿಯಾಗುತ್ತಿವೆ ಎಂಬ ಭಾವನೆಯಾಗಲಿ ಸುಳ್ಳು ಎಂಬುದು ಈ ಕೃತಿಯ ಯಶಸ್ಸೇ ಹೇಳುತ್ತದೆ. ಯಾರೋ ಅದ್ಭುತವಾಗಿ ಹೇಳಿದ ಹಾಗೆ Gandhi is a man who cannot be killed. ನಮ್ಮ ಬದುಕು ಹೆಚ್ಚು ಆಧುನಿಕವಾಗುತ್ತಾ ಹೋದಂತೆ ಬದುಕಿನ ಸತ್ಯಾನ್ವೇಷನಣೆಯ ಪ್ರವೃತ್ತಿ ಕಡಿಮೆಯಾಗುತ್ತಾ ಹೋಗುತ್ತಿರುವುದರಿಂದ ಗಾಂಧಿಯವರ ಸತ್ಯಾನ್ವೇಷಣೆಯ ಬದುಕು ಮತ್ತು ಅದರಲ್ಲಿ ಅವರು ಕಂಡುಕೊಂಡ ಸತ್ಯಗಳು ಅಪ್ರಸ್ತುತವೆನಿಸುವುದು ಸಹಜ. ಆದರೆ ಅದು ಅನಿಸುವುದು ಅಷ್ಟೆ, ಸತ್ಯವಲ್ಲ ಎಂಬುದಕ್ಕೆ ಈ ಪುಸ್ತಕ ಕುರಿತ ಜನರ ಪ್ರೀತಿ ವಿಶ್ವಾಸ ಮತ್ತು ಇದಕ್ಕೆ ಈ ಪ್ರಶಸ್ತಿಯೇ ಸಾಕ್ಷಿ.

- **'ಗಾಂಧಿ ಹತ್ಯೆ' ಒಂದು ಸಾಮಾಜಿಕ -ರಾಜಕೀಯ-ಸಾಂಸ್ಕೃತಿಕ 'ಪ್ರತಿಕ್ರಿಯೆ' ಆಗಿತ್ತು. ಅದೊಂದು 'ರೂಪಕ' ಕೂಡ. ಅದನ್ನು ಬಹಿರಂಗವಾಗಿಯೇ ಸಮರ್ಥಿಸುವ-ಬೆಂಬಲಿಸುವ 'ವ್ಯವಸ್ಥೆ'ಯ ಭಾಗವಾಗಿರುವ ಅಕಾಡೆಮಿಯ ಈ ನಡೆಯನ್ನು ಹೇಗೆ ವ್ಯಾಖ್ಯಾನಿಸಬಹುದು?**

'ವ್ಯವಸ್ಥೆ' ಎಂದರೆ ಸರ್ಕಾರ ಎಂಬ ಒಂದು ಮುಖರಹಿತ ವಿದ್ಯಮಾನ ಎಂದು ಅರ್ಥೈಸಿಕೊಂಡರೆ ಇಂತಹ ಪ್ರಶ್ನೆ ಮೂಡುತ್ತದೆ. ಇದಕ್ಕೆ ಕಾರಣ ನಮ್ಮ ಗ್ರಹಿಕೆಯನ್ನು ಬೇರೆ ಯಾವ ಸಂವೇದನೆಗಳಿಗೂ ಅವಕಾಶವಿಲ್ಲದ ರೀತಿಯಲ್ಲಿ ರಾಜಕೀಯಿಕರಣಗೊಳಿಸಿಕೊಂಡಿರುವುದು. ಆದರೆ ಈ ವ್ಯವಸ್ಥೆಯಲ್ಲಿ ಮುಖಸಹಿತರಾದ ಜನರೂ ಇರುತ್ತಾರೆ ಎಂಬುದನ್ನು ಗುರುತಿಸಬಲ್ಲಿರಾದರೆ ಅರ್ಧ ಸತ್ಯಗಳು ಮಾತ್ರ ಆಗಿರುವ ಸಾರಾಸಗಟಾದ ತೀರ್ಮಾನಗಳು ರೂಪುಗೊಳ್ಳುತ್ತವೆ. ವ್ಯವಸ್ಥೆ ಎಂದರೆ Work on Progress ಎಂಬ ಚಲನಶೀಲ ಅರ್ಥದಲ್ಲಿ ಗ್ರಹಿಸಬಲ್ಲಿರಾದರೆ ಈ work ಹಲವು ರೀತಿಯಲ್ಲಿ ನಡೆಯುತ್ತಿರುತ್ತದೆ ಎಂಬುದು ಅರಿವಾಗುವುದು ಮತ್ತು ನೀವು ಹೇಳುವ ಅಕಾಡೆಮಿಯ ನಡೆ ಇಂತಹ ಒಂದು work ಆಗಿರಬಹುದು ಎಂದು ಗೊತ್ತಾಗಬಹುದು. ನೀವು ನನ್ನ ಪುಸ್ತಕದ 'ಹೇ ರಾಮ್!' ಎಂಬ ಕೊನೆಯ ಹಿಂದಿನ ಅಧ್ಯಾಯವನ್ನು ಓದಿದರೆ ಈ ವಿಷಯದಲ್ಲಿ ನನ್ನ ನಿಲುವು ಇನ್ನಷ್ಟು ಸ್ಪಷ್ಟವಾಗಬಹುದು.

- **ವಾಸ್ತವವಾಗಿ ನೀವು ಗಾಂಧಿ ಪ್ರಿಯರೇನಲ್ಲ. ಲೋಹಿಯಾ-ಸಮಾಜವಾದಿಯಾಗಿರುವ ನೀವು ಗಾಂಧಿಯ ಬೆನ್ನುಹತ್ತಿ 'ಕಥನ' ರೂಪಿಸುವಂತೆ ಆದದ್ದು ಹೇಗೆ? ಏಕೆ?**

ಹೌದು, ನಾನು ಸಮಾಜವಾದಿ ನಂಬಿಕೆಯನ್ನು, ನಿರ್ದಿಷ್ಟವಾಗಿ ಲೋಹಿಯಾ ವಿಚಾರಧಾರೆಗೆ ಒಲಿದು ನನ್ನ ರಾಜಕೀಯ ಅರಿವನ್ನು ಬೆಳೆಸಿಕೊಂಡವನು. ಹಾಗೆ ನೋಡಿದರೆ ಗಾಂಧಿಯವರೇ ತಮ್ಮನ್ನು 'ಹುಟ್ಟು ಸಮಾಜವಾದಿ' ಎಂದು ಕರೆದುಕೊಂಡು ಇತರರನ್ನು 'ಕಲಿತ ಸಮಾಜವಾದಿ'ಗಳೆಂದು ಛೇಡಿಸುತ್ತಿದ್ದುದುಂಟು!

12ನೇ ಪುಟಕ್ಕೆ...

ಡಿ.ಎಸ್. ನಾಗಭೂಷಣ
ಚಿತ್ರ: ಶಿವಮೊಗ್ಗ ನಾಗರಾಜ್

# ಕರ್ನಾಟಕದ ‘ಖಜುರಾಹೊ’

ಮಧ್ಯಪ್ರದೇಶದ ‘ಖಜುರಾಹೊ’ದಲ್ಲಿ ಮಿಥುನ ಶಿಲ್ಪಗಳಿರುವಂತೆ ಹರಪನಹಳ್ಳಿ ಹತ್ತಿರದ ಬಾಗಳಿಯ ‘ಕಲ್ಲೇಶ್ವರ’ ದೇವಾಲಯದ ಹೊರ ಭಿತ್ತಿಗಳಲ್ಲೂ ಮಿಥುನ ಶಿಲ್ಪಗಳಿವೆ. ಹೀಗಾಗಿಯೇ ಇದನ್ನು ‘ಕರ್ನಾಟಕದ ಖಜುರಾಹೊ’ ಎನ್ನುತ್ತಾರೆ. ಬೇಲೂರು ಹಳೆಬೀಡು ದೇವಾಲಯಗಳ ಶಿಲ್ಪಕಲೆಗೆ ಸರಿಸಾಟಿಯೆಂಬಂತೆಯೇ ಇಲ್ಲಿನ ಕೆತ್ತನೆಗಳಿವೆ.

ದೇವಾಲಯದೊಳಗಿರುವ ಆಕರ್ಷಕ ಕೆತ್ತನೆಯ ಕಂಬಗಳು

**ರಘುನಾಥರಾವ್ ತಾಪ್ಸೆ**

ಒಂದೆರಡು ವರ್ಷಗಳ ಹಿಂದೆ ದ್ವಿಚಕ್ರವಾಹನ ಚಾಲನೆ ಮಾಡುವಾಗ ಸ್ಕಿಡ್ ಆಗಿ ಬಿದ್ದಾಗ ಏನೂ ಆಗದ್ದು... ವಾರದ ಹಿಂದಷ್ಟೇ ಎಡಗೈ ಭುಜದ ನೋವಿಗೆ ಕಾರಣವಾಯಿತು. ಇಂತಹ ನೋವು ನಿವಾರಣೆಗೆ ಹರಪನಹಳ್ಳಿ ಹತ್ತಿರದ ಬಾಗಳಿಯ ನಾಟಿ ವೈದ್ಯರ ಔಷಧಿ ಸೂಕ್ತ ಎಂದು ಹಿರಿಯರು ಹೇಳಿದರು. ಬಾಗಳಿ ಗ್ರಾಮದ ಪರಿಣಿತರನ್ನು ಕಾಣಲು ಹೋಗುವಾಗ ದಾರಿಯಲ್ಲಿ ‘ಭಾರತದ ಪುರಾತತ್ವ ಇಲಾಖೆಯ ಕಲ್ಲೇಶ್ವರ ದೇವಸ್ಥಾನಕ್ಕೆ ದಾರಿ’ ಎಂಬ ನಾಮಫಲಕ ನೋಡಿ, ಈ ಪುಟ್ಟ ಗ್ರಾಮದಲ್ಲಿ...ಅಂತಹ ಪ್ರಸಿದ್ಧ ದೇವಸ್ಥಾನ ಇದ್ಯಾವುದೋ....ಎಂದು ಯೋಚಿಸುತ್ತಾ ನಾಟಿ ವೈದ್ಯರ ಬಳಿ ಹೋಗಿ ಮರಳುವಾಗ ಐತಿಹಾಸಿಕ ಮಹತ್ವ ಹೊಂದಿರುವ ‘ಕಲ್ಲೇಶ್ವರ ದೇವಸ್ಥಾನ’ ನೋಡುವಂತಾಯ್ತು.

ಕರ್ನಾಟಕವು ವೈವಿಧ್ಯಮಯ ಸಂಸ್ಕೃತಿ, ವಾಸ್ತುಶಿಲ್ಪ ಕಲೆಗಳ ಬೀಡು ಎಂಬ ಖ್ಯಾತಿ ಪಡೆದಿದೆ. ಹೀಗಿದ್ದರೂ ಕೆಲವೇ ಕೆಲವು ಪ್ರವಾಸಿ ತಾಣಗಳಷ್ಟೇ ಅಭಿವೃದ್ಧಿಯ ಬೆಳಕು ಕಂಡಿವೆ. ಈ ತಾಣಗಳಷ್ಟೇ ದೇಶ-ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಭಾರತೀಯ ಶಿಲ್ಪಕಲೆಯನ್ನು ಪರಿಚಯಿಸುತ್ತಿವೆ. ಆದರೆ, ಬಹಳಷ್ಟು ದೇವಾಲಯಗಳಲ್ಲಿ ಹಲವು ವಿಶೇಷಗಳು ಅಡಗಿಕೊಂಡಿದ್ದರೂ, ಪ್ರಚಾರದ ಕೊರತೆಯಿಂದಾಗಿ ಇವು ಪ್ರವಾಸಿಗರನ್ನು ಸೆಳೆಯುವಲ್ಲಿ ವಿಫಲವಾಗಿವೆ. ಅಂತಹ ವಿಶಿಷ್ಟ ದೇವಾಲಯಗಳಲ್ಲಿ ‘ಕಲ್ಲೇಶ್ವರ ದೇವಾಲಯ’ವೂ ಒಂದಾಗಿದೆ ಎನ್ನುವುದು ನಮಗಾದ ಅರಿವು.

ಬಾಗಳಿಯ ಕಲಿದೇವ ಎಂದು ಕರೆಯಲ್ಪಡುವ ‘ಕಲ್ಲೇಶ್ವರ ದೇವಾಲಯ’ವು ಕಲ್ಯಾಣ ಚಾಲುಕ್ಯ ದೊರೆ ಅಹವಮಲ್ಲನ ಕಾಲದಲ್ಲಿ ಕ್ರಿ.ಶ.987ರಲ್ಲಿ ದುಗ್ಗಿಮಯ್ಯನಿಂದ ನಿರ್ಮಾಣಗೊಂಡಿದೆ. ನಾಲ್ಕು ಶೈಲಿಗಳಲ್ಲಿ ನಿರ್ಮಿಸಲಾಗಿರುವ ದೇವಾಲಯದ ಗರ್ಭಗುಡಿ ರಾಷ್ಟ್ರಕೂಟರ ಶೈಲಿಯಲ್ಲಿದ್ದರೆ, ನವರಂಗ ಚಾಲುಕ್ಯರ ಶೈಲಿಯಲ್ಲಿ, ಸುಖನಾಸಿ ಹೊಯ್ಸಳರ ಶೈಲಿಯಲ್ಲಿ ಹಾಗೂ ದೇವಾಲಯದ ಗೋಪುರ ವಿಜಯನಗರ ಶೈಲಿಯಲ್ಲಿ ನಿರ್ಮಾಣಗೊಂಡಿರುವುದು ವಿಶೇಷವೆಂದೇ ಹೇಳಬಹುದು.

ದೂರದಿಂದಲೇ ಆಕರ್ಷಿಸುವ ದೇವಾಲಯವನ್ನು ಬಾಗಳಿ ಗ್ರಾಮದ ವಿಶಾಲವಾದ ಕೆರೆಯ ಉತ್ತರ ಭಾಗದಲ್ಲಿ ನಿರ್ಮಿಸಲಾಗಿರುವ ಮೆಟ್ಟಿಲುಗಳ ಮೂಲಕ ತಲುಪಬಹುದು.

ದೇಗುಲದ ತಲ ವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳಗಳಿದ್ದು ಇವಕ್ಕೆ ಹೊಂದಿಕೊಂಡಂತೆ ದಕ್ಷಿಣದಲ್ಲಿರುವ ಪ್ರವೇಶ ದ್ವಾರದ ಚೌಕಟ್ಟು ಅತ್ಯಂತ ಕಲಾತ್ಮಕವಾಗಿ ಹಾಗೂ ಆಕರ್ಷಕವಾಗಿ ನಿರ್ಮಿಸಿದ್ದಾರೆ. ಹಾಗೆಯೇ, ಪೂರ್ವ ಮತ್ತು ಪಶ್ಚಿಮದಿಂದ ಪ್ರವೇಶಿಸಿದಲ್ಲಿ ಮಹಾಮಂಟಪ ಕಾಣಿಸುತ್ತದೆ.

ಪೂರ್ವದಿಂದ ಪ್ರವೇಶಿಸುವಾಗ ಅಲ್ಲಿನ ಪುಟ್ಟ ಮಂದಿರದಲ್ಲಿರುವ ಕಪ್ಪು ಶಿಲೆಯ ಅಶ್ವಾರೂಢ ಸೂರ್ಯನಾರಾಯಣನ ವಿಗ್ರಹದೊಂದಿಗೆ ಸಂಜ್ಞಾದೇವಿ, ಛಾಯಾದೇವಿಯರ ಆಕರ್ಷಕ ಶಿಲ್ಪಗಳನ್ನು ನೋಡಬಹುದು. ದೇಶದ ಹಲವು ದೇವಾಲಯಗಳಲ್ಲಿ ವಿಶೇಷ ದಿನಗಳಂದು ಸೂರ್ಯರಶ್ಮಿಯು ಗರ್ಭಗೃಹದಲ್ಲಿರುವ ದೇವರ ಮೂರ್ತಿಯನ್ನು ಸ್ಪರ್ಶಿಸುವಂತೆ, ಯುಗಾದಿಯ ಸಂದರ್ಭದಲ್ಲಿ ಸೂರ್ಯನ ಪ್ರಥಮ ಕಿರಣಗಳು ಕಲ್ಲೇಶ್ವರ ಲಿಂಗದ ಮೇಲೆ ಬೀಳುವುದನ್ನು ಭಕ್ತರು ನೋಡಿ ಪಾವನರಾಗುತ್ತಾರೆ. ಈ ವಿಶೇಷವನ್ನು ನೋಡಲೆಂದೇ ಅಕ್ಕ ಪಕ್ಕದ ಗ್ರಾಮಗಳಿಂದ ಭಕ್ತರು ಬಹುಸಂಖ್ಯೆಯಲ್ಲಿ ಈ ದೇವಾಲಯಕ್ಕೆ ಬರುತ್ತಾರೆ.

### ತಲುಪುವುದು ಹೇಗೆ?

ಪ್ರಸ್ತುತ ವಿಜಯನಗರ ಜಿಲ್ಲೆಯ ಭಾಗವಾಗಿರುವ ಹರಪನಹಳ್ಳಿ ತಾಲ್ಲೂಕಿನಲ್ಲಿ ಬಾಗಳಿ ಗ್ರಾಮವಿದೆ. ದಾವಣಗೆರೆಯಿಂದ ಹರಿಹರದ ಮೂಲಕ ಹರಪನಹಳ್ಳಿಗೆ (55 ಕಿ.ಮೀ) ಬಸ್ ಮೂಲಕ ಬರಬಹುದು. ಬಾಗಳಿ ಗ್ರಾಮೀಣ ರಸ್ತೆಯ ಪಕ್ಕದಲ್ಲಿ ತಂಗುದಾಣವನ್ನು ನಿರ್ಮಿಸಿ ಅಲ್ಲಿ ಸೂಕ್ತ ಮಾಹಿತಿಯೊಂದಿಗೆ, ಛಾಯಾಚಿತ್ರ, ಫಲಕಗಳನ್ನು ಸಂಬಂಧಪಟ್ಟ ಇಲಾಖೆ ಅಳವಡಿಸಿದರೆ ಹೆಚ್ಚಿನ ಪ್ರವಾಸಿಗರು ದೇವಾಲಯಕ್ಕೆ ಭೇಟಿ ನೀಡಲು ಅನುಕೂಲವಾಗುತ್ತದೆ. ಅಲ್ಲಿಂದ ಬಾಗಳಿ ಗ್ರಾಮ ಒಂದು ಕಿ.ಮೀ ದೂರವಿದ್ದು ಆಟೊ ಮೂಲಕ ತಲುಪಬಹುದು. ಬಾಗಳಿಯಲ್ಲಿ ಉತ್ತಮ ಉಪಹಾರ ಮಂದಿರಗಳಿಲ್ಲದ ಕಾರಣ ಹರಪನಹಳ್ಳಿಯಿಂದಲೇ ಊಟ–ತಿಂಡಿ ಕೊಂಡೊಯ್ದರೆ ಉತ್ತಮ.

ವಿಶಾಲವಾದ ಸಭಾಮಂಟಪ ಪ್ರವೇಶಿಸಿಸುತ್ತಿರುವಂತೆ ಮೂರು ಅಡಿ ಎತ್ತರದ ಸುಂದರ ನಂದಿ ವಿಗ್ರಹ ದರ್ಶನ ನೀಡುತ್ತದೆ. ಛಾವಣಿಯಲ್ಲಿ ಅಷ್ಟದಿಕ್ಪಾಲಕರ ಉಬ್ಬು ಶಿಲ್ಪಗಳಿದ್ದು, ನೃತ್ಯ ಮಂಟಪದಲ್ಲಿರುವ 8 ಅಡಿ ಎತ್ತರದ 64 ಕಂಬಗಳಲ್ಲಿನ ಕೆತ್ತನೆ ಆಕರ್ಷಕವಾಗಿವೆ. ಇವು ಶಿಲ್ಪಿಗಳ ಕಲಾಪ್ರೌಢಿಮೆಗೆ ಸಾಕ್ಷ್ಯವಾಗಿವೆ. ಕಂಬಗಳೆಲ್ಲವೂ ವಿವಿಧ ಕೋನಾಕೃತಿಯಲ್ಲಿ ಕೆತ್ತಲ್ಪಟ್ಟವುಗಳಾಗಿದ್ದು, ನೋಡಲು ಒಂದೇ ರೀತಿಯಲ್ಲಿ ಕೆತ್ತಿರುವಂತೆ ಕಂಡರೂ, ಸೂಕ್ಷ್ಮವಾಗಿ ಗಮನಿಸಿದರೆ ಅವುಗಳೆಲ್ಲವೂ ವಿಭಿನ್ನ ಆಕಾರಗಳಲ್ಲಿರುವುದು ಅಚ್ಚರಿ ಮೂಡಿಸುತ್ತದೆ. ಕಂಬಗಳನ್ನು ಬಳಪದ ಕಲ್ಲಿನಿಂದ ರಚಿಸಲಾಗಿದ್ದು, ವರ್ತುಲ, ಚೌಕ, ನಕ್ಷತ್ರ ಹಾಗೂ ಷಟ್ಕೋಣಾಕಾರಗಳಲ್ಲಿವೆ. ಕೇವಲ ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸಿ ಮೂಡಿಸಬಹುದಾದಂತಹ ರಚನೆಗಳನ್ನು, ಯಾವುದೇ ಯಂತ್ರೋಪಕರಣಗಳಿಲ್ಲದೆ, ಲಭ್ಯವಿದ್ದ ಕೆಲವೇ ಕೆಲವು ಉಪಕರಣಗಳನ್ನು ಉಪಯೋಗಿಸಿ ರಚಿಸಿರುವುದು ಅಚ್ಚರಿಪಡುವಂತಹ ವಿಷಯವಾಗಿದೆ. ಕೆಲವು ಕಂಬಗಳ ಕೆಳಭಾಗದಲ್ಲಿ ಲತಾಂಗಿಯರ, ನರ್ತಕಿಯರ, ಬೇಲೂರಿನ ಶಿಲಾಬಾಲಿಕೆಯರ, ರತಿಮನ್ಮಥ, ನೃತ್ಯಾಂಗನೆಯರ ಸೂಕ್ಷ್ಮ ಕೆತ್ತನೆಗಳು ಹಾಗೂ ಜಪದಲ್ಲಿ ತಲ್ಲೀನವಾಗಿರುವ ಶಾರದೆ ಮುಂತಾದ ವೈವಿಧ್ಯಮಯ ಕೆತ್ತನೆಗಳು ನಯನ ಮನೋಹರವಾಗಿವೆ.

ದೇವಾಲಯದ ಹೊರಾಂಗಣದಲ್ಲಿ ಮಿಥುನ ಶಿಲ್ಪಗಳು

ಪ್ರವಾಸ

ಉತ್ತರ ದಿಕ್ಕಿನಲ್ಲಿ ಉಗ್ರ ನರಸಿಂಹ ಸ್ವಾಮಿಯ ದೇವಾಲಯವಿದ್ದು, ವಿಗ್ರಹ ಚಿತ್ತಾಕರ್ಷಕವಾಗಿದೆ.

ದೇವಾಲಯಗಳು ಕೇವಲ ಪ್ರಾರ್ಥನಾ ಮಂದಿರಗಳಾಗಿರದೆ, ಕಲೆ, ಸಂಸ್ಕೃತಿಗಳನ್ನು ಮುಂದಿನ ಜನಾಂಗಕ್ಕೆ ತಿಳಿಪಡಿಸುವ ಕೇಂದ್ರಗಳಾಗಿವೆ. ಕೆತ್ತನೆಗಳ ಮೂಲಕ ಲೈಂಗಿಕತೆಯ ವಿವರ ನೀಡುವುದನ್ನು ನಾವು ಹಲವು ದೇವಾಲಯಗಳ ಭಿತ್ತಿಗಳಲ್ಲಿ ಕಂಡಿದ್ದೇವೆ. ಮಧ್ಯಪ್ರದೇಶದ ‘ಖಜುರಾಹೊ’ದಲ್ಲಿ ಮಿಥುನ ಶಿಲ್ಪಗಳಿರುವಂತೆ ಈ ದೇವಾಲಯದ ಹೊರ ಭಿತ್ತಿಗಳಲ್ಲೂ ಮಿಥುನ ಶಿಲ್ಪಗಳಿರುವುದರಿಂದ ‘ಬಾಗಳಿ ಕ್ಲಲೇಶ್ವರ’ ದೇವಾಲಯವನ್ನು ‘ಕರ್ನಾಟಕದ ಖಜುರಾಹೊ’ ಎಂದು ಕರೆಯುತ್ತಾರೆ. ಈ ದೇವಾಲಯದ ಹೊರ ಭಿತ್ತಿಗಳಲ್ಲಿ (ಸುಮಾರು ನೆಲಮಟ್ಟದಿಂದ ಹದಿನೈದು ಅಡಿ ಎತ್ತರದಲ್ಲಿ) ಕಾಮಸೂತ್ರದ ಹಲವಾರು ಭಂಗಿಗಳಲ್ಲಿ ಸ್ತ್ರೀ ಪುರುಷರ ಹಾಗೂ ಮಾನವರು ಮತ್ತು ಪ್ರಾಣಿಗಳು ಅಸಹಜ ಮಿಥುನ ಕ್ರಿಯೆಯಲ್ಲಿ ನಿರತರಾಗಿರುವ ಅನೇಕ ಶಿಲ್ಪಗಳನ್ನು ಕಾಣಬಹುದಾಗಿದೆ. ಈ ದೇಗುಲದ ಆವರಣದಲ್ಲಿ ಎಂಟು ಉಪ ಮಂದಿರಗಳಿದ್ದು, ‘ಕಲ್ಲೇಶ್ವರ’ ದೇವಾಲಯ ಚಿಕ್ಕ ದೇವಾಲಯವಾದರೂ, ಬೇಲೂರು ಹಳೆಬೀಡು ದೇವಾಲಯಗಳ ಶಿಲ್ಪಕಲೆಗೆ ಸರಿಸಾಟಿಯಾಗಿದೆ ಎಂದರೂ ತಪ್ಪಾಗಲಾರದು. ❖

ಕಥೆ
ಅಜಯ್ ಕುಮಾರ್ ಎಂ. ಗುಂಬಳ್ಳಿ ಅವರ ಪ್ರೀತಿ
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವನ
ಎಂ.ವಿ. ಶಶಿಭೂಷಣ ರಾಜು ಅವರ ಹೊಸವರುಷದ ಹರುಷಕೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

# ಹೂವಿನಲ್ಲಡಗಿದೆ...

10ನೇ ಪುಟದಿಂದ...

ಹಾಗೆಂದು ಎಲ್ಲಾ ಹೂವುಗಳು ಅರ್ಪಣೆಗೆ ಯೋಗ್ಯವಲ್ಲ. ಪರಿಮಳವಿಲ್ಲದ, ಕೇಸರಿ ಇಲ್ಲದ ಹೂವುಗಳು ದೇವರಿಗೆ ಪ್ರಿಯವಲ್ಲವಂತೆ. ಕೇತಕಿ, ಬಕುಲ ಶಿವನಿಗೆ ಊಹೂಂ... ಅಂತೆಯೇ ವಿವಿಧ ದೇವರುಗಳ ಕತೆ ಹೂವಿನೊಂದಿಗೆ ಬೆಸೆದುಕೊಂಡಿರುವುದು ಅದೆಷ್ಟಿದೆ! ಮನ್ಮಥ ತನ್ನ ಹೂಬಾಣವನ್ನೇ ಬಿಟ್ಟು ಶಿವನ ಧ್ಯಾನವನ್ನು ಕೆಡಿಸಿಬಿಟ್ಟ. ಪದ್ಮನಾಭ ಹೆಸರು ಬಂದಿದ್ದೇ ಹೊಕ್ಕಳಿನಲ್ಲಿ ಕಮಲವನ್ನು ಇಟ್ಟುಕೊಂಡಿದ್ದಕ್ಕಲ್ಲವೇ? ದೂರ್ವಾಸ ಮುನಿ ಎಸೆದ ಹೂವಿನ ಹಾರವನ್ನು ಐರಾವತ ಮೆಟ್ಟಿದ್ದರಿಂದ ಸಮುದ್ರಮಥನಕ್ಕೆ ಮೊದಲಾಯಿತು ಎನ್ನಲಾಗುತ್ತದೆ.

ಈ ದೇವರುಗಳಂತೆ ಹೆಂಗಳೆಯರೂ ಹೂವನ್ನು ಮುಡಿದುಕೊಳ್ಳಲು ಬಲು ಚ್ಯೂಸಿ. ಮದುವೆ ಮನೆಗೆ ಹೋಗಲು ಉದ್ದದ ಮಲ್ಲಿಗೆ ಮಾಲೆಯೇ ಆಗಬೇಕು. ಜಾಜಿ, ಸೇವಂತಿಗೆ ಮುಡಿದರೆ ಮರ್ಯಾದೆಗೆ ಕಡಿಮೆ. ಕನಕಾಂಬರ ಗೊರಟೆಗಳು ಬೇಲಿ ಮೇಲಿನ ಹೂವುಗಳೆಂಬ ಸಸಾರ. ಮಲ್ಲಿಗೆಯ ದಂಡೆಯನ್ನು ತುರುಬಿನ ಸುತ್ತ ಸುತ್ತಿಕೊಂಡು ಅದಕ್ಕೆ ಕಾಂಟ್ರಸ್ಟ್ ಆಗಿ ಕೆಂಪು ಗುಲಾಬಿ ಹೂವನ್ನು ಅಡಿ ಭಾಗದಲ್ಲಿ ಮುಡಿದಾಗಲೇ ಒಂದು ಹಂತದ ಅಲಂಕಾರ ಮುಗಿದಂತೆ. ಈಗಂತೂ ಬಹು ಆಕರ್ಷಕವಾಗಿರುವ, ಎಂದಿಗೂ ಬಾಡದಿರುವ ಆದರೆ ಪರಿಮಳ ಸೂಸದ ಕೃತಕ ಹೂವುಗಳು ನಿಜವಾದ ಹೂವಿಗೆ ಸಡ್ಡು ಹೊಡೆಯುತ್ತಿವೆ.

ಮಳೆಗಾಲದಲ್ಲಿ ಸುರಗಿ, ರಂಜೆ, ಬಕುಲ, ಚಳಿಗಾಲದಲ್ಲಿ ಸಂಪಿಗೆ, ಬೇಸಿಗೆ ಕಾಲದಲ್ಲಿ ಮಲ್ಲಿಗೆ - ಕಾಲಧರ್ಮಕ್ಕನುಗುಣವಾಗಿ ಅರಳಿದರೆ ಎಲ್ಲ ಕಾಲಕ್ಕೂ ದಾಸವಾಳ, ಗುಲಾಬಿಗಳು. ಸೂರ್ಯಕಾಂತಿ ಹೂವಿಗೆ ಸೂರ್ಯನಿದ್ದರೆ ಮಾತ್ರ ಉಳಿಗಾಲ. ದಿನಪನೊಂದಿಗೆ ಅದು ತನ್ನ ಬದುಕನ್ನು ಕಂಡುಕೊಂಡಿದೆ, ಹೀಗಾಗಿ ಸೂರ್ಯಕಾಂತಿ ಹೂವು ‘ನಂಬಿ ಕೆಟ್ಟವರಿಲ್ಲವೋ’ ಎಂಬ ದಾಸರ ಪದದಂತೆ ‘ನಂಬಿಕೆಯೇ ಜೀವನಕ್ಕೆ ಶಕ್ತಿ’ ಎಂದು ಸೂಚಿಸುವಂತೆ ಕಾಣುತ್ತದೆ. ಆದರೆ ಅದೇ, ಬ್ರಹ್ಮಕಮಲ ಚಂದಿರನ ಪಕ್ಷಪಾತಿ. ನೈದಿಲೆ ಕೂಡಾ ಚಂದಿರನ ಸಂಗಾತಿ ಅನ್ನುತ್ತದೆ ಕವಿಸಮಯ. ರಾತ್ರಿ ಮಾತ್ರ ಬಿರಿವ, ಹಗಲಾದೊಡನೆ ಮುದುಡುವ ಬ್ರಹ್ಮಕಮಲದ ಆಕರ್ಷಣೆಗೆ ಮನಸೋತವರಿಲ್ಲ, ಆ ಹೂವಿನ ಸೀಸನ್ನಿನಲ್ಲಿ ಎಲ್ಲರೂ ಫೋಟೊ ತೆಗೆದು ಜಾಲತಾಣದಲ್ಲಿ ಹಂಚಿಕೊಳ್ಳುವವರೇ! ಬದುಕಿನ ಕ್ಷಣಿಕತೆಗೆ ಕ್ಷಣಭಂಗುರತೆಗೆ ಬ್ರಹ್ಮಕಮಲಕ್ಕಿಂತ ಬೇರೆ ಸಾಕ್ಷಿ ಬೇಕೆ? ನೀಲಗಿರಿ ಬೆಟ್ಟದಲ್ಲಿ 12 ವರ್ಷಗಳಿಗೊಮ್ಮೆ ನೀಲಿ

ಹಾಸಿಗೆ ಹಾಸಿದಂತೆ ಅರಳುವ ಕುರುಂಜಿ ಹೂಗಳು ತಾಳ್ಮೆಗೆ ಪ್ರತಿರೂಪದಂತೆ ಭಾಸವಾಗುತ್ತವೆ. ಮನೆಮನೆಗಳಲ್ಲಿರುವ ಗುಲಾಬಿಯೊಂದಿಗಿನ ಮುಳ್ಳು ಸಂತೋಷದೊಂದಿಗೆ ನೋವೂ ಇದ್ದು ಜೀವನ ಸಿಹಿಕಹಿಗಳ ಮಿಶ್ರಣ ಎಂದು ಉಪದೇಶಿಸುವಂತಿರುತ್ತದೆ.

ಖುಷಿಗೂ, ದುಃಖಕ್ಕೂ ಹೂವನ್ನು ನಿರೀಕ್ಷಿಸುವ ಸಂಸ್ಕೃತಿ ನಮ್ಮದು. ಬದುಕಿನಲ್ಲಿ ಹೊಸ ಸಂಬಂಧಗಳು ಉದಯವಾಗುವುದು, ಜೀವ ಮಣ್ಣಿನಲ್ಲಿ ಅಂತ್ಯವಾಗುವುದು ಕೂಡಾ ಹೂವಿನಿಂದಲೇ ಎನ್ನಬಹುದು. ಮಕರಂದ ಹೀರಲು, ಬೀಜ ಪ್ರಸರಣಕ್ಕಾಗಿ ಕೀಟಗಳನ್ನು ಆಕರ್ಷಿಸಲು ಹೂವುಗಳು ಚೆಲುವನ್ನೆಲ್ಲ ತಮ್ಮದಾಗಿಸಿಕೊಂಡಿದ್ದರೂ ಇದಕ್ಕೆ ವ್ಯತಿರಿಕ್ತವಾಗಿ ವೀನಸ್ ಫ್ಲೈ ಟ್ರಾಪ್, ಪಿಚರ್ ಪ್ಲಾಂಟಿನ ಆಕರ್ಷಣೀಯ ಹೂಗಳು ತನ್ನೆಡೆಗೆ ಬಂದ ಜೀವಿಯನ್ನು ಭಕ್ಷಿಸಿಬಿಡುವ ವಿಲಕ್ಷಣ ಗುಣವನ್ನೊಳಗೊಂಡಿವೆ. ಸಸ್ಯಲೋಕದ ಮಾಂಸಾಹಾರಿ ಗಿಡದ ಬಗ್ಗೆ ಪ್ರಕೃತಿಯ ವೈಶಿಷ್ಟ್ಯದ ಕಾರಣಗಳು ಏನೇ ಇದ್ದರೂ ಬಾಹ್ಯರೂಪದಲ್ಲಿ ಸುಂದರವಾಗಿ ಕಂಡದ್ದು ಆಂತರಿಕವಾಗಿಯೂ ಸುಂದರವಾಗಿರುತ್ತದೆ ಎಂದೇನೂ ಇಲ್ಲ ಎಂದು ಮನುಜನಿಗೆ ಪಾಠ ಹೇಳುವಂತೆ ಕಾಣುತ್ತದೆ! ಇನ್ನೊಬ್ಬರ ಮಾತಿಗೆ ಮರುಳಾಗಿ ಜಾಲದೊಳಗೆ ಸಿಲುಕುವ ನೀತಿಯೂ ಇದರಲ್ಲಿದೆ.

ಹೂವುಗಳು ತಮ್ಮ ಸೌಂದರ್ಯ, ಪರಿಮಳದಿಂದಲೆ ಉಳಿದ ಜೀವಿಗಳನ್ನು ಆಕರ್ಷಿಸುತ್ತವೆ ಎಂದೆನಷ್ಟೆ! ಕೆಲವೊಂದು ಹೂವುಗಳ ಪರಿಮಳ, ಲವಲವಿಕೆಗೆ, ಆಹ್ಲಾದತೆಗೆ, ಔಷಧಕ್ಕೆ ಬಳಸುವುದುಂಟು. ಆದರೆ ‘ಕಾರ್ಪ್ಸ್ ಫ್ಲವರ್’ ಎಂಬ ಗಿಡದ ಹೂವು ಕೊಳೆತ ಶವದ ವಾಸನೆಯಂತಿರುತ್ತದೆ. ಇಂಡೋನೇಷ್ಯಾದ ಮಳೆಕಾಡುಗಳಲ್ಲಿ ಕಂಡುಬರುವ ಈ ಹೂವು ಹತ್ತು ವರ್ಷಗಳಿಗೊಮ್ಮೆ ಅರಳುವುದಂತೆ. ಒಳ್ಳೆಯದೇ ಆಯ್ತು, ದಿನಾ ಬಿರಿವ ಹೂವಾದರೆ ನೆಟ್ಟವರ ಗತಿಯನ್ನು ಒಮ್ಮೆ ಊಹಿಸಿ! ಇನ್ನು ಹಿತ್ತಲಿನಲ್ಲಿ ಬೆಳೆಯುವ ಸುವರ್ಣ ಗಡ್ಡೆಯ ಹೂವು ಕೂಡ ಇಂಥದ್ದೇ. ನೋಡಲು ಎಷ್ಟು ಚಂದವೋ ಅದರ ವಾಸನೆ ಅಷ್ಟೇ ವಾಕರಿಕೆ ತರಿಸುವಂತದ್ದು. ಹೂವು ಅರಳಿದ ಕೂಡಲೇ ಸುವರ್ಣದ ಜೀವನವೂ ಅಂತ್ಯವಾದಂತೆ.

ಹೂವು ಅರಳುವುದು ಸಸ್ಯದ ಜೀವಂತಿಕೆಯ ಲಕ್ಷಣ, ಮುಂದೆ ಕಾಯಿ, ಹಣ್ಣು, ಬೀಜ ಎಂದು ಅದರ ಪೀಳಿಗೆಯ ಮುಂದುವರಿಕೆಗೆ ಸಾಕ್ಷಿಯಾಗುತ್ತದೆ. ಆದರೆ ವಿಚಿತ್ರವೆಂದರೆ ಬಿದಿರು ಹೂವು ಬಿಟ್ಟರೆ ಅದರ ಅಂತ್ಯ ನಿಶ್ಚಿತ. 50, 60 ವರ್ಷಗಳಿಗೊಮ್ಮೆ ಹೂವು ಬಿಟ್ಟಾಗ ಊರಿಗೆ ಬರಗಾಲ ಎಂಬ ನಂಬಿಕೆಯಿದೆ. ಹಾಗೆಯೇ ಆಲೂಗಡ್ಡೆ ಗಿಡದ ಹೂವು ಅರಳಿತೆಂದರೆ ಗಿಡ ಬಲಿತಿದೆ ಎಂಬುದಕ್ಕೆ ಸೂಚಕ.

ಕರಾವಳಿಯಲ್ಲಿ ಧಾರಾಳವಾಗಿರುವ ದಾಸವಾಳದ ಗಿಡದ ಹೂವುಗಳಿಂದ ತಂಬುಳಿ, ಗೊಜ್ಜು, ದೋಸೆ, ಸೆಕೇಟು (ನಿಜವಾಗಿ ಅದು ಸೆಕೆ + ಹಿಟ್ಟು, ಇಡ್ಲಿಯಂತೆ ಆವಿಯಲ್ಲಿ ಬೇಯುವುದು, ಆಡುಮಾತಿನಲ್ಲಿ ಸೆಕೇಟು ಆಗಿದೆ, ಅಷ್ಟೇ!) ಗುಲಾಬಿ ಹೂವಿನಿಂದ ಗುಲ್ಕನ್, ಸಿಹಿಗುಂಬಳದ ಹೂವಿನಿಂದ ದೋಸೆ ಮಾಡಿದರೆ ಮನೆಯಲ್ಲಿ ಹಬ್ಬ. ತರಕಾರಿಯಂತೆ ತೋರುವ ಆದರೆ ಹೂವಿನ ವರ್ಗಕ್ಕೆ ಸೇರಿದ ಬಾಳೆ ಹೂವು, ಈರುಳ್ಳಿ ಹೂವು, ಹೂಕೋಸು, ಬ್ರೊಕೋಲಿಗಳು ಈಗ ರಸಿಕರ ಬಾಯಿತಣಿಸುವಷ್ಟು ರೀತಿಯಲ್ಲಿ ಅಡುಗೆಯಲ್ಲಿ ಸ್ಥಾನ ಪಡೆಯುತ್ತಿವೆ. ಆದರೆ ಕ್ಯಾಲೋಟ್ರೋಪಿಸ್, ಬಿಳಿ ಓಲಿಯಾಂಡರ್, ನಾರ್ಸಿಸಸ್, ಲಂಟಾನ, ಪಾರ್ಥೇನಿಯಂ ಮುಂತಾದ ಗಿಡಗಳ ಹೂವುಗಳು ಎಷ್ಟೇ ಆಕರ್ಷಕವಾಗಿದ್ದರೂ ಅವುಗಳ ಮೈಯೆಲ್ಲಾ ವಿಷಕಾರಿಯಾಗಿದ್ದು ಅಲರ್ಜಿ, ವಾಕರಿಕೆ, ಉಸಿರಾಟ ಸಂಬಂಧಿ ತೊಂದರೆಗಳನ್ನು ತರುತ್ತವೆ.

‘ಬೆಳ್ಳಗಿರುವುದೆಲ್ಲ ಹಾಲಲ್ಲ’ ಎಂಬಂತೆ ಹೂವುಗಳೆಲ್ಲವೂ ನಯವಾದ ಸೃಷ್ಟಿಯಾಗಿರದೆ ಹಾವಿನಂಥ ಅಪಾಯಕಾರಿ ಗುಣಗಳು ಇರುತ್ತವೆ. ಕಾಣುವ ಸೌಂದರ್ಯದ ಹಿಂದೆ ಗೋಮುಖ ವ್ಯಾಘ್ರನಂತೆ ಅರಿಯದ ಮುಖವಾಡ ಇರಬಹುದು. ಗುಣವೆನ್ನುವುದು ಮುಖದಲ್ಲಿಲ್ಲ, ಅಂತರಂಗದಲ್ಲಿರಬೇಕು ಎಂದು ಹೂವುಗಳು ಮನುಜನಿಗೆ ಪಾಠ ಹೇಳುವಂತಿದೆ. ಏನಂತೀರಿ? ❖

## ಮುನ್ನೋಟ 02-01-2022 ರಿಂದ 08-01-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

**ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ**

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1
ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ವೃತ್ತಿರಂಗದಲ್ಲಿ ಅಧಿಕ ಒತ್ತಡದಿಂದಾಗಿ ಉದ್ವೇಗಕ್ಕೆ ಒಳಗಾಗುವಿರಿ. ದಾಂಪತ್ಯದಲ್ಲಿ ಅನಗತ್ಯ ವಿವಾದಗಳು ಮೂಡಬಹುದು. ನೌಕರಿಯಲ್ಲಿ ಉನ್ನತ ಸ್ಥಾನ ಅಥವಾ ಆಶಿಸಿದ ಸ್ಥಾನಕ್ಕೆ ವರ್ಗಾವಣೆಯನ್ನು ಪಡೆಯಬಹುದು. ವಿದ್ಯಾರ್ಥಿಗಳ ಉನ್ನತ ವ್ಯಾಸಂಗದ ದಾರಿ ಸುಗಮವಾಗುತ್ತದೆ. ವದಂತಿಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ತಾಳ್ಮೆ ಮತ್ತು ಸಮಾಧಾನ ಚಿತ್ತದಿಂದ ವ್ಯವಹರಿಸುವುದು ಬಹಳ ಒಳ್ಳೆಯದು. ವಿದೇಶಿ ವ್ಯಾಪಾರ ವ್ಯವಹಾರಗಳನ್ನು ಮಾಡುವವರ ವ್ಯವಹಾರ ವಿಸ್ತರಣೆಯಾಗುತ್ತದೆ. ಮೂಳೆ ವೈದ್ಯರಿಗೆ ಹೆಚ್ಚಿನ ಬೇಡಿಕೆ ಬಂದು ಸಂಪಾದನೆ ವೃದ್ಧಿಸುತ್ತದೆ. ಹಣದ ಒಳಹರಿವು ಸಾಮಾನ್ಯ ಮಟ್ಟದಲ್ಲಿರುತ್ತದೆ. ಅನಗತ್ಯ ಖರ್ಚುಗಳು ತಲೆದೋರಬಹುದು.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಾಹನ ಖರೀದಿಯ ಅವಕಾಶಗಳು ಕಂಡುಬರುತ್ತಿವೆ. ಸ್ವಯಂ ಉದ್ಯೋಗವನ್ನು ಆರಂಭಿಸಬೇಕೆಂದು ಇರುವವರು ಈಗ ಆರಂಭಮಾಡಬಹುದು. ಗುಡಿ ಕೈಗಾರಿಕೆ ಮಾಡುವವರಿಗೆ ಬೇಡಿಕೆ ಬಂದು ಹೆಚ್ಚು ವ್ಯವಹಾರಗಳಾಗುತ್ತವೆ. ಬಹಳ ಹಿಂದೆ ಕೊಟ್ಟಿದ್ದ ಸಾಲ ಹಂತ ಹಂತವಾಗಿ ವಾಪಸ್ಸು ಬರುವ ಸಾಧ್ಯತೆಗಳಿವೆ. ಸರ್ಕಾರಿ ಕಚೇರಿಯ ಕೆಲಸಗಳಲ್ಲಿ ನಿಮಗೆ ಯಶಸ್ಸು ಇರುತ್ತದೆ.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ
ದೂರ ಪ್ರಯಾಣದಿಂದ ಆಗಬೇಕಿದ್ದ ಕೆಲಸಗಳು ಈಗ ಸುಗಮವಾಗಿ ಆಗುತ್ತವೆ. ನಿಮ್ಮ ವ್ಯವಹಾರಗಳ ಬಗ್ಗೆ ಸರಿಯಾಗಿ ಮೇಲ್ವಿಚಾರಣೆ ಮಾಡುವುದು ಬಹಳ ಮುಖ್ಯ. ಹಿರಿಯರೊಂದಿಗೆ ಹೆಚ್ಚಿನ ವಾದ-ವಿವಾದಗಳು ನಿಮಗೆ ಹಿನ್ನಡೆಯನ್ನು ತರುತ್ತವೆ. ನಿಮ್ಮ ಹುಡುಗಾಟದ ನಡವಳಿಕೆ ನಿಮ್ಮನ್ನು ಅಪಹಾಸ್ಯಕ್ಕೆ ಗುರಿ ಮಾಡಬಹುದು. ಮಹಿಳೆಯರಿಗೆ ಧಾರ್ಮಿಕ ಕೆಲಸಗಳಲ್ಲಿ ಅತೀವ ಆಸಕ್ತಿ ಮೂಡುತ್ತದೆ.

**ಸಿಂಹ** — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಮಕ್ಕಳ ವಿದ್ಯಾಭ್ಯಾಸದ ಪ್ರಗತಿ ಉತ್ತಮವಾಗಿರುತ್ತದೆ. ಆದಾಯಕ್ಕೆ ಮೀರಿದ ಖರ್ಚು ತಲೆದೋರುವ ಸಾಧ್ಯತೆಗಳಿವೆ. ಆದ್ದರಿಂದ ಹಣದ ನಿರ್ವಹಣೆ ಸರಿಯಾಗಿರಲಿ. ಭೂ ವಿವಾದಗಳು ನಿಮಗೆ ಮುತ್ತಿಕೊಳ್ಳುವ ಸಾಧ್ಯತೆಯಿದೆ. ಈ ಬಗ್ಗೆ ಸರಿಯಾಗಿ ತಿಳಿದು ವ್ಯವಹರಿಸಿರಿ. ಅರ್ಥಪೂರ್ಣ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿ ವಿಚಾರವಿನಿಮಯವನ್ನು ಮಾಡಿ ಸಂತಸ ಪಡೆಯುವಿರಿ.

**ಕನ್ಯಾ** — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಆರ್ಥಿಕ ಅನುಕೂಲ ಸ್ವಲ್ಪಮಟ್ಟಿಗೆ ಉತ್ತಮವಾಗಿರುತ್ತದೆ. ಭೂಮಿಯ ಅಭಿವೃದ್ಧಿ ಕೆಲಸಗಳನ್ನು ಮಾಡುವವರಿಗೆ ಸಾಕಷ್ಟು ಮುನ್ನಡೆ ಇರುತ್ತದೆ. ಸಾರ್ವಜನಿಕ ಕೆಲಸಗಳನ್ನು ಮಾಡುವಾಗ ಅಪವಾದ ಬರುವ ಸಾಧ್ಯತೆಗಳಿವೆ. ಎಚ್ಚರದಿಂದ ಇರಿ. ನಿಮ್ಮ ಆದಾಯದಷ್ಟೇ ಖರ್ಚು ಇರುವುದರಿಂದ ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡಿರಿ. ಆಹಾರ ವ್ಯತ್ಯಾಸದಿಂದ ಆರೋಗ್ಯ ತಪ್ಪಬಹುದು.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ನಿಮ್ಮ ಹಿಂಬಾಲಕರು ನಿಮಗೆ ಶತ್ರುಗಳಾಗಬಹುದು. ನಿಮ್ಮ ಒರಟು ಮಾತಿನಿಂದ ಕೆಲವು ಸಂಬಂಧಗಳು ಕಡಿತಗೊಳ್ಳಬಹುದು. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಸ್ವಲ್ಪ ನಿರುತ್ಸಾಹವನ್ನು ಕಾಣಬಹುದು. ಬೆನ್ನು ನೋವು ಅಥವಾ ಮೂಳೆ ನೋವು ಕಾಣಿಸಬಹುದು. ಹಿರಿಯರ ಮಾತಿಗೆ ಮನ್ನಣೆ ನೀಡುವುದರಿಂದ ಬರಲಿರುವ ಅವಘಡ ತಪ್ಪುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

**ವೃಶ್ಚಿಕ** — ವಿಶಾಖೆ 4 ಅನೂರಾಧ, ಜ್ಯೇಷ್ಠ
ನಿಮ್ಮ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣಬಹುದು. ಉದ್ಯೋಗಾಂಕ್ಷಿಗಳಿಗೆ ಹೊಸ ಉದ್ಯೋಗದ ಕಾರಣ ದೂರದೂರಿಗೆ ಹೋಗಬೇಕಾದ ಸಂದರ್ಭವಿದೆ. ಧನ ಆದಾಯವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಒಡಹುಟ್ಟಿದವರಿಂದ ನಿಮಗೆ ಸಾಕಷ್ಟು ಸಹಾಯ ಸಿಗುವ ಸಂದರ್ಭವಿದೆ. ನಿಮ್ಮ ಸಂಸಾರದಲ್ಲಿ ಹೊಸಸಂತೋಷ ಮೂಡುತ್ತದೆ. ಹೊಸ ಆಸ್ತಿಯನ್ನು ಕೊಳ್ಳುವ ಯೋಗ ಇದೆ.

**ಧನುಸ್ಸು** — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ನಿರೀಕ್ಷಿತ ಕಾರ್ಯಗಳಲ್ಲಿ ಪ್ರಗತಿಯನ್ನು ಕಂಡು ಸಂತಸಪಡುವಿರಿ. ವಿದೇಶದಲ್ಲಿ ವಿದ್ಯೆ ಮುಗಿಸಿ ಉದ್ಯೋಗ ಹುಡುಕುತ್ತಿರುವವರಿಗೆ ಶುಭಸಮಾಚಾರವಿರುತ್ತದೆ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಸ್ತ್ರೀ ವರ್ಗದವರಿಗೆ ಬಹಳಷ್ಟು ಸಂತೋಷಕರ ವಾತಾವರಣವಿರುತ್ತದೆ. ನಿಮ್ಮ ಸಂಗಾತಿಯ ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಆರ್ಥಿಕ ಪರಿಸ್ಥಿತಿಯಲ್ಲಿ ಪ್ರಗತಿಯನ್ನು ಕಾಣಬಹುದು. ನಿಮ್ಮ ಶತ್ರುಗಳು ಯಾರೆಂದು ಗೊತ್ತಾಗಿ ಅವರ ಮೇಲೆ ಕ್ರಮಕೈಗೊಳ್ಳುವ ಅವಕಾಶ ಒದಗಿ ಬರುತ್ತದೆ. ನಿಮ್ಮ ವ್ಯವಹಾರಗಳು ವಿಸ್ತರಣೆ ಆಗುವ ಲಕ್ಷಣಗಳಿವೆ. ವಿದೇಶಿ ಭಾಷಾ ಕಲಿಕೆಯನ್ನು ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರಗತಿ ಇರುತ್ತದೆ. ಭೂ ವ್ಯವಹಾರಗಳನ್ನು ಮಾಡುವ ಕಮಿಷನ್ ಏಜೆಂಟ್‌ಗಳಿಗೆ ಆದಾಯ ಹೆಚ್ಚುತ್ತದೆ.

**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿಂದೆ ನೀವು ನಿಮ್ಮ ವ್ಯವಹಾರದಲ್ಲಿ ಕೈಗೊಂಡ ನಿರ್ಣಯಗಳು ಈಗ ಉತ್ತಮ ಫಲವನ್ನು ಕೊಡುತ್ತವೆ. ಆರ್ಥಿಕ ಸ್ಥಿತಿಯು ಸಮತೋಲನವಾಗಿರುತ್ತದೆ. ಹೊಸ ವಾಹನವನ್ನು ಕೊಳ್ಳುವ ಯೋಗವಿದೆ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಆದಾಯದಲ್ಲಿ ಹೆಚ್ಚಳವಿರುತ್ತದೆ. ಕೃಷಿ ಸಂಬಂಧಿತ ಯಂತ್ರೋಪಕರಣಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಖಾದ್ಯತೈಲಗಳನ್ನು ಮಾರಾಟ ಮಾಡುವವರ ವ್ಯಾಪಾರ ಹೆಚ್ಚಾಗಿ ಲಾಭವೂ ಹೆಚ್ಚಾಗುತ್ತದೆ. ನಿಮ್ಮ ಒಡಹುಟ್ಟಿದವರಿಗೆ ವರ್ತಮಾನದ ವಿಷಯಗಳನ್ನು ಅವಲೋಕಿಸಿ ಸಹಾಯ ಮಾಡುವುದು ಒಳ್ಳೆಯದು. ಆರ್ಥಿಕ ಸ್ಥಿತಿಯು ಹೇಳಿಕೊಳ್ಳುವಂತೆ ಇರುವುದಿಲ್ಲ. ಸ್ವಂತ ಆರೋಗ್ಯದಲ್ಲಿ ವ್ಯತ್ಯಯವನ್ನು ಕಾಣಬಹುದು. ದ್ರವರೂಪದ ವಸ್ತುಗಳನ್ನು ಮಾರಾಟ ಮಾಡುವವರ ವ್ಯವಹಾರ ವೃದ್ಧಿಸುತ್ತದೆ.

## ಪದಬಂಧ 2720



**ಮೇಲಿನಿಂದ ಕೆಳಕ್ಕೆ**

1. ಮನಸ್ಸಿನಲ್ಲೇ ಮೆಲುಕು ಹಾಕಬಹುದಾದ ಸುಮಧುರವಾದ ಸ್ಮೃತಿ 5
2. ಮದವೇರಿದ ಗಜ 3
3. ಗಾಳಿಗೆ ಉದುರಿ ಹೋದ ಒಣಗಿದ ಪತ್ರೆ 4
4. ಒಳ್ಳೆಯದಕ್ಕೆ ಮಾತ್ರ ಹೆಸರಾದ ದ್ವೀಪ 3
6. ಬೃಹತ್ತಾದ ಪುರಾತನ ಕಥೆ 5
8. ಸ್ಪಷ್ಟವಾಗಿ ನುಡಿ 3
9. ಅಧಿಕಾರಿಯ ಮೂಲಕ ಬರದೇ ಇದ್ದದ್ದು ಮನ್ನಣೆಗೆ ಅಪಾತ್ರ 5
10. ವಾಹನದ ಚಾಲನೆಗೆ ಬೇಕಾದ ಶಕ್ತಿಯ ಮೂಲ 3
11. ಸತ್ಯವಾದ ವಿಷಯ 5
12. ದುಃಖ ನೋವು ತಗ್ಗಿ ಕಡಿಮೆಯಾಗಿದೆ 3
15. ಮತ್ತೆ ಅದೇ ಬಿಂದುವಿಗೆ ತಂದಿಡುವ ಆಕಾರ 3
17. ಶಿವನ ಕಾಲಕ್ಕೆ ಸೇರುವ ಭಕ್ತಿ ಸಮೂಹ 5
18. ರಾಶಿಯಾಗಿ ಸಂಗ್ರಹಿತವಾದದ್ದು 4
19. ಪಕ್ವತೆಯಿಲ್ಲದ ಎಳಸು ಗುಣ 3
20. ನಕಲಿ ಚೇಷ್ಟೆ 3

**ಎಡದಿಂದ ಬಲಕ್ಕೆ**

1. ಮನ್ನಿಸುವ ಗುಣ ಪರಸ್ಪರ ಎದುರು ಬದರಾದಾಗ ಬಂದೀತೆ 5
3. ಶಿರಕ್ಕೆ ಬಿಸಿಯೇರಿಸು 5
5. ಭೂಮಿಯೊಳಗಿನ ಗೃಹ 4
7. ಸ್ನೇಹಿತೆಯಿಂದ ಬಂದ ಓಲೆ 5
9. ಸಾಗರದ ದಡಕ್ಕೆ ಬಡಿಯುವ ನೀರಿನ ತರಂಗ 2
10. ಸುಮಧುರ ದನಿಯ ಜೊತೆ ಸುವಾಸನೆ 4
11. ಯಾರ ಅಧೀನವೂ ಇಲ್ಲದ ಮಿತಿ 4
13. ದೊರೆಯದೊರೆ ಹೀಗಾಗುತ್ತಾನೆ 5
14. ಹೊಸ ರೀತಿಯ ಒಂಭತ್ತು ಗುಂಪು 4
16. ಹರಡುತ್ತಾ ವ್ಯಾಪಿಸುವ ಮಾಧ್ಯಮ 4
18. ಸಂತೆಯಲ್ಲಿ ಮಲಗಬಹುದಾದ ಫಕೀರ 2
19. ಮಕ್ಕಳಿಗೆ ಮೀಸಲಾದ ವಿಶ್ವ 5
20. ಬಹಳ ದ್ರವವಿರುವ ಕಜ್ಜಾಯ 4
21. ಹಾಡಿನಲ್ಲಿ ನೂರು ನಮಸ್ಕಾರ 5
22. ಕೆಟ್ಟ ಆವರಣದ ನೈದಿಲೆ 4

## ಪದಬಂಧ ಉತ್ತರ -2719

**ಮೇಲಿಂದ ಕೆಳಕ್ಕೆ**

1.ಪ್ರಭಾವಲಯ 2.ಸುಮ್ಮಸುಮ್ಮನೆ 3.ಸ್ವಸ್ತಿವಾಚನ 4.ತರಂಗಾತರ 6.ಕರಿಯಾ 8.ಬೆರಸು 10.ತತ್ಸಮ 12.ನಗಣ್ಯ 13.ಜನಜೀವನ 14.ಕಟ್ಟಿಗೆ 15.ಲಕ್ಷ್ಮೀಕುಮಾರ 16.ನಾಡಿಮಿಡಿತ 17.ಸಂಧಾನ 18.ಹಣದುಬ್ಬರ

**ಎಡದಿಂದ ಬಲಕ್ಕೆ**

1.ಪ್ರತಿಪಾದಿಸು 3.ಸ್ವಯಂಪ್ರೇರಿತ 5.ವರ್ಧಕ 7.ಸುಗ್ರೀವಾ 8.ಬೆಳಗಾಂ 9.ಯಮಯಾತನೆ 11.ಕನಸುಗಾರ 13.ಜಲಕಮಲ 16.ನಾಣ್ಯಸಂಗ್ರಹ 19.ಜೀರಿಗೆ 20.ಕುಡುಮಿ 21.ನಗದು 22.ನಗರೇಶ್ವರ 23.ತದನಂತರ

# ಕಲಾವಿದೆ ಕಥೆ, ಗ್ರಾಮಭಾರತದ ಬಿಂಬ

ಎಚ್. ದಂಡಪ್ಪ

ಡಾ. ಚಂದ್ರಶೇಖರ ಕಂಬಾರರ 'ಚಾಂದಬೀ ಸರಕಾರ' ಕಾದಂಬರಿಯು ಕೃಷ್ಣ ಪಾರಿಜಾತ ನಾಟಕ ತಂಡದ ಕಲಾವಿದೆಯೊಬ್ಬಳ ಜೀವನದ ಯಶೋಗಾಥೆ.

ದೇವದಾಸಿಯ ಮಗಳಾಗಿ ಹುಟ್ಟಿದ ಚಾಂದಬೀ ಅತ್ಯುನ್ನತ ನಟಿಯಾಗಿ ಜನಮನ್ನಣೆ ಗಳಿಸುತ್ತಾಳೆ. ಮುಂದೆ ಖ್ಯಾತ ಗಾಯಕನೊಬ್ಬನನ್ನು ಮದುವೆಯಾಗುತ್ತಾಳೆ. ಆದರೆ, ಆತನ ಮೊದಲ ಹೆಂಡತಿಯ ಅಸಹನೀಯ ಕಿರುಕುಳದಿಂದಾಗಿ ಈ ಮದುವೆಯ ಬಂಧ ಹೆಚ್ಚು ಕಾಲ ಮುಂದುವರೆಯುವುದಿಲ್ಲ, ಮುರಿದು ಬೀಳುತ್ತದೆ. ಮುಂದೆ ದೇಶಪಾಂಡೆ ಎಂಬವರ ಆಶ್ರಯ ಲಭಿಸಿ ಅವರ ಮನೆಮಗಳಂತೆ ಇರುತ್ತಾಳೆ. ಈ ಸಂದರ್ಭದಲ್ಲಿ ಆಕಸ್ಮಾತ್ತಾಗಿ ಶಿವಾಪುರದ ಬಲದೇವ ನಾಯಕನೆಂಬ ಜಮೀನ್ದಾರನ ಕಣ್ಣಿಗೆ ಬಿದ್ದು, ಆತ ಆಕೆಯನ್ನು ವಿವಾಹವಾಗುತ್ತಾನೆ. ಅಲ್ಲಿಂದ ಮುಂದೆ ಆಕೆ 'ಚಾಂದಬೀ ಸರಕಾರ' ಆಗುತ್ತಾಳೆ. ಇದು ಕಾದಂಬರಿಯ ಕಥಾ ಹಂದರ.

ಪ್ರಾತಿನಿಧಿಕವಾಗಿ ಶಿವಾಪುರ ಎಂಬ ಗ್ರಾಮದ ಆವರಣದಲ್ಲಿ ಸುತ್ತುತ್ತಲೇ ಕತೆ ಸಮಕಾಲೀನ ಕೌಟುಂಬಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ವಿಸ್ತಾರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. 'ಸರಕಾರ' ಅನಿಸಿಕೊಳ್ಳುವ ಚಾಂದಬೀಯು ತನ್ನ ಸುತ್ತಮುತ್ತಲಿನ ಪರಿಸರವನ್ನು ಕ್ರಿಯಾಶೀಲಗೊಳಿಸುವ, ಸಮೃದ್ಧಿಯೆಡೆಗೆ ಚಲಿಸುವಂತೆ ಮಾಡುವ ಕೌತುಕದ ಕಥನವನ್ನು ಬಹಳ ಧ್ವನಿಪೂರ್ಣವಾಗಿ ಓದುಗರಿಗೆ ವಾಸ್ತವದ ಅನುಭವವಾಗುವಷ್ಟು ಸಹಜವಾಗಿ ತಮ್ಮದೇ ಆದ ವಿಶಿಷ್ಟ ಭಾಷಾ ಶೈಲಿಯಲ್ಲಿ ಕಂಬಾರರು ಹೆಣೆದಿದ್ದಾರೆ.




ಪು: 128 ₹150

**ಚಾಂದಬೀ ಸರಕಾರ**
ಲೇ: ಚಂದ್ರಶೇಖರ ಕಂಬಾರ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಸಂ:080-26617100

ಈ ಕೃತಿಯಲ್ಲಿ ಕೆಲವು ಘಟನೆಗಳು, ವಿವರಗಳು, ಸಂಗತಿಗಳು ಅಸಹಜವೆನಿಸಿದರೂ ಇವು ಕೃತಿಯ ವಸ್ತುವಿಗೆ ಪೂರಕವಾಗಿದ್ದು, ಈ ವಸ್ತುವಿನ ಅಂತರಂಗದ ಶೋಧ ನಡೆಸುತ್ತವೆ. ಗಂಡು-ಹೆಣ್ಣು ಸಂಬಂಧ, ಅಧಿಕಾರ ದಾಹ, ಭೂ ಸುಧಾರಣೆ, ಶೋಷಣೆ, ಚುನಾವಣೆಯ ಸಮಸ್ಯೆ, ಕುಡಿತ, ಬಡತನ, ಭೂ ಆಕ್ರಮಣ, ಆಧುನಿಕತೆಯ ಪ್ರಭಾವದಿಂದ ಉಂಟಾಗಿರುವ ಸಮಸ್ಯೆ, ಎಲ್ಲವೂ ಇಲ್ಲಿ ಶೋಧನೆಗೆ ಒಳಗಾಗಿ ಅವುಗಳ ಸಾಧಕ ಬಾಧಕ ಓದುಗರ ಎದೆತಟ್ಟುತ್ತವೆ. ಇವುಗಳನ್ನು ಆಯಾ ಪಾತ್ರಗಳ ಬದುಕಿನಲ್ಲೇ ಗ್ರಹಿಸಿ ಅನಾವರಣಗೊಳಿಸಿರುವ ರಚನಾ ವಿನ್ಯಾಸ ಈ ಕಾದಂಬರಿಯದ್ದು. ಇಲ್ಲಿ ಆಕರ್ಷಕವಾದ ನಿರೂಪಣೆಯು ವಸ್ತುವಿನೊಂದಿಗೆ ಬೆರೆತು ಹೋಗಿ ಕಾದಂಬರಿಯ ಅರ್ಥ ಸಾಧ್ಯತೆಯನ್ನು ಹಿಗ್ಗಿಸಿದೆ.

ಬಲದೇವ ನಾಯಕನನ್ನು ವರಿಸಿ ಶಿವಾಪುರ ಸೇರುವ ಚಾಂದಬೀ ಅಯ್ಯಾ ಸರಕಾರನ ದ್ವೇಷ ಕುಟಿಲೋಪಾಯಗಳನ್ನು ಉಪಾಯದಿಂದ ಎದುರಿಸಿ ಶಿವಾಪುರದಲ್ಲಿ ಹೆಣ್ಣುಮಕ್ಕಳ ಶಾಲೆ ಆರಂಭಿಸುವುದು; ಆಧುನಿಕತೆಯ ಪ್ರಭಾವಕ್ಕೊಳಗಾದ ಬಡ್ಡಿಬಂಗಾರಮ್ಮ ಬಾರ್ ತೆರೆದಾಗ ಗಂಡಸರು ಕುಡಿತದ ದಾಸರಾಗಿ ಜಮೀನು ಕಳಕೊಳ್ಳುವುದು, ಹೆಂಗಸರು ಒಗ್ಗಟ್ಟಿಂದ ವಿರೋಧಿಸುವುದು; ಅಯ್ಯಾ ಸರಕಾರನ ಚುನಾವಣಾ ತಂತ್ರ, ಬಲದೇವನ ಕೊಲೆಗಾಗಿ ಮಾಡುವ ಪಿತೂರಿ... ಹೀಗೆ ಚಾಂದಬೀಯ ಸುತ್ತ ನಡೆಯುವ ಘಟನೆಗಳು ಅವಳ ಹಾಗೂ ಆ ಗ್ರಾಮದ ಕತೆ ಮಾತ್ರ ಆಗಿರದೆ ಒಂದು ರಾಜ್ಯದ, ಒಂದು ರಾಷ್ಟ್ರದ ಕತೆಯೂ ಆಗಿದೆ. ಮಾನವೀಯತೆ ಎತ್ತ ಸಾಗುತ್ತಿದೆ ಎಂಬುವುದಕ್ಕೆ ಕನ್ನಡಿ ಹಿಡಿಯುವುದಷ್ಟೇ ಅಲ್ಲ, ಕಾಡುವ ಸಮಸ್ಯೆಗಳಿಗೆ ಏನು ಚಿಕಿತ್ಸೆಯೆಂದು ಚಿಂತಿಸುವಂತೆಯೂ ಮಾಡುತ್ತದೆ.

ವಿಮರ್ಶೆ

ಕಾದಂಬರಿಯುದ್ದಕ್ಕೂ ಹರಿಯುವ ರಾಜಕೀಯ ಲೋಕ ವಿಶಿಷ್ಟವಾದುದು. ಇಲ್ಲಿನ ಊಳಿಗಮಾನ್ಯ ವ್ಯವಸ್ಥೆ, ಆಧುನಿಕ ಚುನಾವಣಾ ಸ್ವರೂಪ ಬದಲಾಗದ ಜನಸಾಮಾನ್ಯರ ಸ್ಥಿತಿಗತಿ ಕುರಿತು ಹೇಳುತ್ತಲೇ ಸಮಾಜವೊಂದು ಆಧುನಿಕ ಬಾಹ್ಯ ಪ್ರಚೋದನೆ ಹಾಗೂ ಆಂತರಿಕ ವಿಚ್ಛಿದ್ರಕಾರಿ ಶಕ್ತಿಗಳಿಂದ ಅವನತಿಯತ್ತ ನಡೆದಾಗ ಅದನ್ನು ಸುಸ್ಥಿತಿಯತ್ತ ಚಲಿಸುವಂತೆ ಮಾಡುವ ಮತ್ತೊಂದು ವ್ಯವಸ್ಥೆಯೂ ಅದರೊಳಗೇ ಹುಟ್ಟಿಕೊಳ್ಳುತ್ತದೆ ಎಂಬುದನ್ನು ಹಿಡಿದಿಡುತ್ತದೆ. ಇಲ್ಲಿನ ಸಾಂಕೇತಿಕ 'ಸಂಪಿಗೆ ಮರ' ಇದಕ್ಕೆ ನಿದರ್ಶನ. ಕಾದಂಬರಿಯಲ್ಲಿ ಈ ಮರವೂ ಒಂದು ಜೀವಂತ ಪಾತ್ರವಾಗಿ ಗಂಡು-ಹೆಣ್ಣು ಸಂಬಂಧ, ದೇಹ-ಆತ್ಮ, ದೈವ-ಮನುಷ್ಯ, ಪ್ರಕೃತಿ-ಮನುಷ್ಯ ತೊಳಲಾಟಗಳ ಸಂಬಂಧಗಳ ಗೂಢ ಸ್ವರೂಪಕ್ಕೆ ಬಳಸಿರುವ ಜನಪದ ತಂತ್ರಗಾರಿಕೆಯ ಪ್ರತಿಮೆಯಾಗಿ ವಿವಿಧ ಸಾಧ್ಯತೆಗಳನ್ನು ಶೋಧಿಸಲು ಓದುಗನಿಗೆ ನೆರವಾಗುತ್ತದೆ.

ದೇವದಾಸಿಯೊಬ್ಬಳು ತನ್ನ ಕಲಾಬಲದಿಂದ, ಆತ್ಮಬಲದಿಂದ ಅಗಾಧ ಶಕ್ತಿಯಾಗಿ ಬೆಳೆಯುವ, ಗ್ರಾಮವನ್ನು ಬೆಳೆಸುವ ಚಿತ್ರದ ಈ ಕೃತಿಯು ಕೇವಲ ಒಂದು ಗ್ರಾಮದ ಕಥನವಾಗದೆ ಆಧುನಿಕ ಪ್ರಭಾವಗಳಿಗೆ ಒಳಗಾದರೂ ಮೂಲ ಸ್ವರೂಪ ಕಳಕೊಳ್ಳದೆ, ಸಮೃದ್ಧಿಯತ್ತ ಸಾಗಬೇಕು ಎಂಬ ಆಶಯದ ಎಲ್ಲ ಭಾರತೀಯ ಗ್ರಾಮಗಳ ಪ್ರಾತಿನಿಧಿಕ ಕಥನವಾಗಿದೆ. ❖

# 'ದೇವುಡು' ಬರೆದ ಶಾಸ್ತ್ರವೂ ಕಾವ್ಯವೇ!

ಎಸ್. ಸೂರ್ಯಪ್ರಕಾಶ ಪಂಡಿತ್

**'ದೇವುಡು'** ಎಂದ ಕೂಡಲೇ ಕನ್ನಡದ ಸಹೃದಯ ಓದುಗರಿಗೆ ನೆನಪಾಗುವುದು 'ದರ್ಶನತ್ರಯ' – ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಮತ್ತು ಮಹಾದರ್ಶನ. ಈ ಕಾದಂಬರಿಗಳನ್ನಷ್ಟೇ ಅಲ್ಲದೆ, ಹಲವು ಪ್ರಕಾರಗಳಲ್ಲಿ ಹತ್ತಾರು ಮೌಲಿಕ ಕೃತಿಗಳನ್ನು ಅವರು ರಚಿಸಿದ್ದಾರೆ. ಆದರೆ ಅವರನ್ನು ಸಾರಸ್ವತಲೋಕದಲ್ಲಿ ಧ್ರುವತಾರೆಯಂತೆ ಸ್ಥಾಪಿಸಿದ್ದು ಈ ದರ್ಶನತ್ರಯವೇ ಹೌದು. ಕನ್ನಡದಲ್ಲಿ ಅವರಂತೆ ನಮ್ಮ ಭಾರತೀಯ ಪುರಾಣಪ್ರಪಂಚವನ್ನು ಕಟ್ಟಿಕೊಟ್ಟವರು ಮತ್ತೊಬ್ಬರಿಲ್ಲ ಎನ್ನಬಹುದು. ಅವರ ಈ ಕಾದಂಬರಿಗಳಲ್ಲಿ ಕಲ್ಪನೆಯೊಂದೇ ಸಮೃದ್ಧವಾಗಿಲ್ಲ, ಶಾಸ್ತ್ರಪ್ರಪಂಚದ ಸೂಕ್ಷ್ಮ ವ್ಯಾಖ್ಯಾನವೂ ಅಷ್ಟೇ ಸಮೃದ್ಧವಾಗಿದೆ. ಪ್ರಾಚೀನ ಭಾರತದ ವಿದ್ಯಾಪರಂಪರೆಯನ್ನೂ ಶಾಸ್ತ್ರೀಯ ತಿಳಿವಳಿಕೆಯನ್ನೂ ಗಟ್ಟಿ ಮಾಡಿಕೊಳ್ಳಲು ನಮಗೆ ಅವರ ಈ ಬರಹಗಳು ತುಂಬ ನೆರವಾಗುತ್ತವೆ. ಅವರ ಪ್ರತಿಭೆ ಮತ್ತು ಪಾಂಡಿತ್ಯಗಳಿಗೆ ಅವರ ಲೇಖನಗಳೂ ಸಾಕ್ಷಿಯಾಗಿವೆ. ಹಲವು ಕಡೆ ಚೆದುರಿಹೋಗಿದ್ದ, ಸಂಪಾದಿಸಲು ಕಷ್ಟಸಾಧ್ಯವಾದ ಹಲವು ಲೇಖನಗಳನ್ನು ಶ್ರಮಪಟ್ಟು ಸಂಪಾದಿಸಿದ್ದಾರೆ, ಮಲ್ಲೇಪುರಂ ಜಿ. ವೆಂಕಟೇಶ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಪ್ರಕಟವಾಗಿದ್ದ ಈ ಕೃತಿ ಹೊಸ ಹೆಸರಿನಲ್ಲಿ ಈಗ ಇನ್ನಷ್ಟು ಅಚ್ಚುಕಟ್ಟಾಗಿ ಪ್ರಕಟವಾಗಿದೆ.

'ದೇವುಡು ಲೋಕಕಥನ' – ಈ ಕೃತಿಯಲ್ಲಿ ದೇವುಡು ನರಸಿಂಹಶಾಸ್ತ್ರಿಗಳ 59 ಬಿಡಿ ಲೇಖನಗಳು ಸಂಕಲನಗೊಂಡಿವೆ. ಇವುಗಳಲ್ಲಿ ಮುಕ್ಕಾಲು ಭಾಗ ಭಾರತೀಯ ಪ್ರಾಚೀನ ಸಂಸ್ಕೃತಿ ಮತ್ತು ಜ್ಞಾನಪರಂಪರೆಗೆ ಮೀಸಲಾಗಿದೆ; ಇದೇ ಈ ಕೃತಿಯ ವಿಶೇಷ ಕೂಡ.




ಪು: 548 ₹500

**ದೇವುಡು ಲೋಕಕಥನ (ದೇವುಡು ಸಮಗ್ರ ಲೇಖನಗಳ ಮಹಾಸಂಪುಟ)**
ಸಂ: ಮಲ್ಲೇಪುರಂ ಜಿ. ವೆಂಕಟೇಶ
ಪ್ರ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್
ಸಂ: 9448291802

ಏಕೆಂದರೆ ಪ್ರಾಚೀನ ಭಾರತೀಯ ಸಂಸ್ಕೃತಿಯ ಅರಿವನ್ನು ದೇವುಡು ಅವರು ಉಣಬಡಿಸುವ ರೀತಿ ಅಪೂರ್ವವಾಗಿದೆ. ಆಳವಾದ ಅಧ್ಯಯನ, ಸೂಕ್ಷ್ಮವಾದ ಲೋಕಾನುಭವ, ಅಂತರಂಗಕ್ಕೆ ಇಳಿದಿರುವ ಅರಿವಿನ ಸೌರಭವನ್ನು ಅವರ ಬರಹಗಳಲ್ಲಿ ಸಮೃದ್ಧವಾಗಿ ಕಾಣಬಹುದು. ಅವರ ಗದ್ಯದ ಶೈಲಿ ಅತ್ಯಂತ ಸರಳ; ಆದರೆ ತುಂಬ ಸುಂದರ. ಶಾಸ್ತ್ರವನ್ನು ಸತ್ಯವಾಗಿಯೂ ಸುಂದರವಾಗಿಯೂ ಶಿವವಾಗಿಯೂ ಅವರಂತೆ ನಿರೂಪಿಸಿದವರು ಕಡಿಮೆ. ಶಾಸ್ತ್ರವಿಷಯ ಇರಲಿ, ಸಾಮಾನ್ಯ ಸಂಗತಿಗಳನ್ನೂ ಅವರು ಲಕ್ಷಣೀಕರಿಸುವ, ವಿವರಿಸುವ ರೀತಿ ಮನೋಜ್ಞವಾದುದು. ಉದಾಹರಣೆಗೆ: ಬಂಧು ಎಂದರೆ ಯಾರು? ನಾವು ಏನೆಲ್ಲ ತರ್ಕಗಳ ಮೂಲಕ, ಭಾವಭಂಗಿಗಳ ಮೂಲಕ ಬಂಧುತ್ವದ ಲಕ್ಷಣವನ್ನು ವಿವರಿಸಲು ಮುಂದಾಗುತ್ತೇವೆ. ಆದರೆ ದೇವುಡು ಅವರು ನಿರೂಪಿಸುವ ರೀತಿ ಹೀಗೆ: ಬಂಧು ಎಂದರೆ 'ಮನೆಯಲ್ಲಿ ಹಬ್ಬವಾಗಿ ಪಾಯಸ ಮಾಡಿದರೆ, ತಿಥಿಯಾಗಿ ವಡೆ ಮಾಡಿದರೆ, ಎರಡೂ ತಿನ್ನುವುದಕ್ಕೆ ಬರುವ, ಬರಬೇಕಾದ ಜನ.'

ಒಳನೋಟ

ವೇದಗಳು, ಉಪನಿಷತ್ತುಗಳು, ವೇದಾಂತ, ಭಗವದ್ಗೀತೆ, ಶಾಂಕರಸಿದ್ಧಾಂತ, ರಾಮಾಯಣ, ಕಾಲಿದಾಸ, ಪಂಚತಂತ್ರ – ಈ ವಿಷಯಗಳ ಅಂತರಂಗವನ್ನು ಕಾಣಬೇಕಾದರೆ ಇಲ್ಲಿರುವ ದೇವುಡು ಅವರ ಪ್ರಬಂಧಗಳನ್ನು ಓದಲೇಬೇಕು. ಇವುಗಳ ಜೊತೆಗೆ ನಾಟಕಕಲೆ, ಕರ್ನಾಟಕದ ಏಕೀಕರಣ, ಗ್ರಾಮವಿದ್ಯಾಭ್ಯಾಸ, ನಮ್ಮ ಕೆಲಸ – ಇವುಗಳನ್ನು ಕುರಿತ ಬರಹಗಳೂ ಇವೆ; ಕಾದಂಬರೀಕಾರರ ಸಮ್ಮೇಳನದಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣ, 'ಭೇರುಂಡೇಶ್ವರ'ವನ್ನು ಕುರಿತ ಬರಹಗಳೂ ತುಂಬ ಮೌಲಿಕವಾಗಿವೆ; 'ಕರ್ಣಾಟಕ ಶಿಕ್ಷಾ' ಕನ್ನಡಭಾಷೆಯ ಬಗ್ಗೆ ವಿಶಿಷ್ಟ ಪ್ರಬಂಧವಾಗಿದೆ.

ನಮಗೆ ಶಾಸ್ತ್ರಗಳ ಅಧ್ಯಯನ ಏಕೆ ಬೇಕು? ಈ ಪ್ರಶ್ನೆಗೆ ಉತ್ತರವೋ ಎಂಬಂತೆ ದೇವುಡು ಅವರು ಗೀತೆಯನ್ನು ಕುರಿತಂತೆ ಹೇಳಿರುವ ಈ ಮಾತುಗಳನ್ನು ನೋಡಬಹುದು: 'ಸಂಜೆಗಳು ಎರಡು. ಸಾಯಂಸಂಧ್ಯೆಯೊಂದು ಪ್ರಾತಸ್ಸಂಧ್ಯೆಯೊಂದು. ಸಾಯಂಸಂಧ್ಯೆಯನ್ನೇ ನಾವು ಸಂಜೆಯೆನ್ನುವುದು. ಕೊಂಚ ಪ್ರಯತ್ನಪಟ್ಟರೆ ಸಾಯಂಸಂಧ್ಯೆಯನ್ನು ಪ್ರಾತಃಸಂಧ್ಯೆ ಮಾಡಿಕೊಳ್ಳಲು ಸಾಧ್ಯ. ಸಾಯಂಸಂಧ್ಯೆಯಲ್ಲಿ ಕತ್ತಲಿನ ಪ್ರಭಾವ ಹೆಚ್ಚು. ಪ್ರಾತಃಸಂಧ್ಯೆಯಲ್ಲಿ ಬೆಳಗಿನ ಪ್ರಭಾವ ಹೆಚ್ಚು.'

ನಮ್ಮ ಜೀವನದಲ್ಲಿ ಎದುರಾಗುವ ಕತ್ತಲೆಯನ್ನೂ ಅದರ ಭಯವನ್ನೂ ಹೋಗಲಾಡಿಸಬಲ್ಲದ್ದು ಶಾಸ್ತ್ರಗಳಿಂದ ಒದಗುವ ಸರಿಯಾದ ತಿಳಿವಳಿಕೆ ಎಂಬುದು ದೇವುಡು ಅವರ ಸಂದೇಶ. ಇದನ್ನು ಸ್ಪಷ್ಟಪಡಿಸುವುದಕ್ಕಾಗಿ ಅವರು ನಮ್ಮ ನಿತ್ಯಜೀವನದ ಉಪಮೆ–ರೂಪಕಗಳ ಮೂಲಕವೇ ನಮಗೆ ಅರಿವಿನ ಬೆಳಕನ್ನು ತಮ್ಮ ಬರಹಗಳ ಮೂಲಕ ದಾಟಿಸುತ್ತಿರುತ್ತಾರೆ. ಈ ವಿವರಗಳು ಎಷ್ಟು ಸಹಜವಾಗಿಯೂ ಶಕ್ತವಂತವಾಗಿಯೂ ಇರುತ್ತವೆ ಎಂದರೆ ಶಾಸ್ತ್ರವೇ ಮಾನುಷಾಕಾರವನ್ನು ತಾಳಿ, ನಮ್ಮೆದುರು ನಿಂತು ಸಂಭಾಷಿಸುತ್ತಿರುವಂತೆ ಆಹ್ಲಾದಕಾರಿಯಾಗಿರುತ್ತವೆ. ಇಲ್ಲಿಯ ಬರಹಗಳು ಶಾಸ್ತ್ರ ಎಂದವರಿಗೆ ಶಾಸ್ತ್ರ, ವಿದ್ಯೆ ಎಂದವರಿಗೆ ವಿದ್ಯೆ, ಕಾವ್ಯ ಎಂದವರಿಗೆ ಕಾವ್ಯ, ಜೀವನದರ್ಶನ ಎಂದವರಿಗೆ ಜೀವನದರ್ಶನ.

ದೇವುಡು ಅವರಂಥವರ ಅನುಭವನಿಷ್ಠವಾದ ಅರಿವು ನಮ್ಮ ಪರಂಪರೆಯ ದಿಟವಾದ ಗೊತ್ತು–ಗುರಿಗಳನ್ನು ಕಾಣಿಸಬಲ್ಲದ್ದು. ಇಂದಿನ ಕಾಲಕ್ಕೆ ಬೇಕಾದ ವಿವೇಕವನ್ನು ಶಾಸ್ತ್ರಗಳು ಹೇಗೆ ಒದಗಿಸಬಲ್ಲದ್ದು ಎಂಬುದನ್ನು ಅವರು ಹೀಗೆಂದಿದ್ದಾರೆ:

'ಈಗ ಬೇಕಾಗಿರುವುದು ಇಳಿದ ಶ್ರುತಿಯ ತಂತಿಯನ್ನು ಬಿಗಿಮಾಡಿ ಶ್ರುತಿಯನ್ನು ಏರಿಸುವ ಕೆಲಸ. ಅದು ಹೋರಾಡುವ ಸಿದ್ಧಾಂತಗಳಿಗಿಂತ, ಸಮನ್ವಯ ಸಿದ್ಧಾಂತದಿಂದ ಸುಲಭವಾಗುವುದು. ಸಮನ್ವಯ ಸಿದ್ಧಾಂತವು ತೆರೆದ ಮನಸ್ಸಿನ ವಿಚಾರಲಹರಿ. ಅದು ತಲೆಗಳು ಒಡೆದು ರಕ್ತಪ್ರವಾಹ ಹರಿಯಿಸುವ ಕಡೆ ತಿರುಗುವುದಿಲ್ಲ. ಶ್ರೀ ಭಗವಾನ್ ವ್ಯಾಸರು ಬ್ರಹ್ಮಸೂತ್ರಗಳಲ್ಲಿ ರಚಿಸಿದ ನಾಲ್ಕು ಅಧ್ಯಾಯಗಳಲ್ಲಿ ಮೊದಲನೆಯದರ ಹೆಸರು ಸಮನ್ವಯ; ಎರಡನೆಯದು ಅವಿರೋಧ. ಅದು ನೆನಪಿನಲ್ಲಿರಬೇಕು.'

ಒಂದು ಮೌಲಿಕ ಕೃತಿಯನ್ನು ಸಂಪಾದಿಸಿ, ನಮಗೆ ಒದಗಿಸಿರುವ ಮಲ್ಲೇಪುರಂ ಜಿ. ವೆಂಕಟೇಶ ಪ್ರಶಂಸಾರ್ಹರೇ ಹೌದು. ❖

# 'ಗಾಂಧಿ ಸಹಜಸತ್ವದ ಮನುಷ್ಯ'

10ನೇ ಪುಟದಿಂದ...

ಹಾಗಾಗಿ ಸಮಾಜವಾದಿಯಾಗಿ ಗಾಂಧಿಯ ಬಗ್ಗೆ ಆಸಕ್ತಿ ವಹಿಸುವುದು ಅಸಹಜವೆಂದೇನೂ ಎನಿಸಲಾರದು. ಗಾಂಧಿ ಹೇಳಿದ 'ಕಲಿತ ಸಮಾಜವಾದ'ದಲ್ಲಿ ಕಾಲಾನುಕಾಲದಲ್ಲಿ ಕಲಿತ ಪಾಠಗಳ ಪರಿಣಾಮವಾಗಿ ಕೆಲ ಭಾಗಗಳನ್ನು ಬಿಡಬೇಕಾಗಿ ಬಂದಾಗ ನಾನು ಗಾಂಧಿಗೆ ಹೆಚ್ಚು ಹತ್ತಿರವಾದೆ ಎನಿಸುತ್ತದೆ.

ಸಮಾಜವಾದ, ನಿರ್ದಿಷ್ಟವಾಗಿ ಲೋಹಿಯಾ ಸಮಾಜವಾದ ಎಷ್ಟೆಲ್ಲ ನೆಲೆಗಳಲ್ಲಿ ಸಮಾನತೆಯನ್ನು ಅರ್ಥೈಸುವ, ಅದನ್ನು ಸಾಧಿಸುವ ಎಷ್ಟೆಲ್ಲ ಸಂವೇದನಾಶೀಲ ರಾಜಕೀಯ ರಚನೆಯನ್ನು ರೂಪಿಸಿದ್ದರೂ ಆ ಚಳವಳಿ ದಾರಿ ತಪ್ಪಿ ವಿಘಟಿತವಾಗುವ ಹಂತ ತಲುಪಿತು. ಈ ಕುರಿತು ಯೋಚಿಸಿದಾಗ ನಮ್ಮ ಕಾಲದ ಸಮಾಜವಾದದ ಅಡಿಪಾಯವೆನ್ನಿಸುವ 'ಅನ್ಯಾಯವನ್ನು ಕಂಡಾಗ ನಮ್ಮ ಒಂದು ಕಣ್ಣಿನಲ್ಲಿ ಅನ್ಯಾಯಕ್ಕೊಳಗಾದವರ ಬಗ್ಗೆ ಕರುಣೆಯ ಕಣ್ಣೀರೂ ಇನ್ನೊಂದು ಕಣ್ಣಿನಲ್ಲಿ ಅನ್ಯಾಯಗೈದವರ ವಿರುದ್ಧ ಕ್ರೋಧದ ಕಿಡಿಯೂ ಉತ್ಪತ್ತಿಯಾಗಬೇಕು' ಎಂಬ ಅರ್ಥದ ಲೋಹಿಯಾ ಅವರ ಮಾತು ಕೇಳಲು ಕಾವ್ಯಮಯ, ಸ್ಫೂರ್ತಿದಾಯಕ ಎನಿಸಿದರೂ ಅದು ಆಂತರಿಕವಾಗಿ ದೋಷಪೂರ್ಣ ಹಾಗೂ ದಾರಿ ತಪ್ಪಿಸುತ್ತದೆ ಎನಿಸತೊಡಗಿತು.

ಒಬ್ಬ ಮನುಷ್ಯನಲ್ಲಿ ಎರಡು ಪರಸ್ಪರ ವಿರುದ್ಧ ಭಾವಗಳು ಒಟ್ಟಿಗೇ ಕ್ರಿಯಾಶೀಲವಾಗಿರಲಾರವು; ಹಾಗಿದ್ದಲ್ಲಿ ಆ ಸ್ಥಿತಿ ಅನ್ಯಾಯವೆಂದು ಹೇಳಲಾಗುವ ಕ್ರಿಯೆಯನ್ನು ಸ್ಪಷ್ಟ ಕಣ್ಣುಗಳಲ್ಲಿ ನೋಡಿರಲಾರದು ಎನಿಸತೊಡಗಿತು. ಹಾಗಾಗಿ ಸಮಾಜವಾದಿ ಚಳವಳಿಯಲ್ಲಿ ಮನುಷ್ಯನಿಗೆ ಸುಲಭ ಭಾವವೆನಿಸುವ ಕ್ರೋಧದ ಅಂಶವೇ ಹೆಚ್ಚಾಯಿತೇನೋ ಎಂದು ನನಗನ್ನಿಸಿದೆ. ಅದು ಸಮಾಜವಾದದ ಕೇಂದ್ರವೆನಿಸಿದ ಸಾಮಾಜಿಕ ನ್ಯಾಯ ಎನ್ನುವುದನ್ನು ಕೇವಲ ಜಾತಿಗಳ ತಲೆ ಎಣಿಕೆ ಮಟ್ಟಕ್ಕೆ ಇಳಿಸಿ, ಸಮಾಜವಾದವೆಂದರೆ ಸಾಮಾನ್ಯ ಜನರ ಕಣ್ಣಿನಲ್ಲಿ ಇಂತಹ ಸಾಮಾಜಿಕ ನ್ಯಾಯ ಕಾರ್ಯಕ್ರಮವೆಂಬಂತಾಗಿರುವ ದುರಂತವನ್ನು ನಾವು ನೋಡುತ್ತಿರುವುದು.

ಇದು ಹೀಗಾಗಲು ಮುಖ್ಯ ಕಾರಣವೆಂದರೆ ಸಮಾಜವಾದವೂ ಸೇರಿದಂತೆ ಇಡೀ ಎಡಪಂಥ ಇಡೀ ಮಾನವ ಇತಿಹಾಸವನ್ನು ಯುದ್ಧಗಳ ಅಥವಾ ಘರ್ಷಣೆಗಳ ಚರಿತ್ರೆಯನ್ನಾಗಿ ನೋಡಿ ತಮ್ಮ ರಾಜಕೀಯ ಮೀಮಾಂಸೆಗಳನ್ನು ರೂಪಿಸಿಕೊಂಡಿರುವುದು. ಮುಖ್ಯವಾಗಿ ಕೈಗಾರಿಕಾ ಕ್ರಾಂತಿ ಯೂರೋಪ್‌ನ ಸಾಮಾಜಿಕ ವ್ಯವಸ್ಥೆಯಲ್ಲಿ ಉಂಟು ಮಾಡಿದ ಪಲ್ಲಟಗಳು ಮತ್ತು ತಲ್ಲಣಗಳ ಅನುಭವಗಳ ಹಿನ್ನೆಲೆಯಲ್ಲಿ ರೂಪಿಸಿಕೊಂಡ ವರ್ಗ ವ್ಯವಸ್ಥೆ, ಶೋಷಣೆ, ಅಸಮಾನತೆ, ವರ್ಗ ಹೋರಾಟ ಮುಂತಾದ ಪರಿಕಲ್ಪನೆಗಳು ನಮ್ಮ ರಾಜಕೀಯ ಸಂಕಥನಗಳನ್ನು ಈಗಲೂ ಆಳುತ್ತಿರುವುದರಿಂದ ಇವು ಹಕ್ಕುಗಳ ಸಂಕಥನಗಳಾಗಿ ಕರ್ತವ್ಯಗಳ ಸುಳಿವೇ ಇಲ್ಲದೆ ಸಾಮಾಜಿಕ ಚಲನೆಯನ್ನುಂಟು ಮಾಡುವ ಹೋರಾಟಗಳು ಕೇವಲ ಹಕ್ಕು ಪ್ರತಿಪಾದನೆಯ ಏಕಮುಖಿ ಕ್ರಿಯೆಗಳಾಗಿವೆ.

ಆದರೆ ಗಾಂಧಿ ಮಾನವ ಇತಿಹಾಸವನ್ನು ಅಲ್ಪಕಾಲಿಕ ಘರ್ಷಣೆಗಳು ಕಾಣುವ ದೀರ್ಘ ಕಾಲಾವಧಿಗಳ ಶಾಂತಿ-ಸೌಹಾರ್ದದ ಬಾಳುವೆಗಳ ಚರಿತ್ರೆಯನ್ನಾಗಿ ಕಾಣುತ್ತಾರೆ. ಹಾಗಾಗಿಯೇ ಅಲ್ಲಿ ಹಕ್ಕು ಮತ್ತು ಕರ್ತವ್ಯಗಳು ಎಂಬ ಪಾರಿಭಾಷಿಕಗಳನ್ನು ಬೇಡದ ಧರ್ಮ ಕ್ರಿಯಾಶೀಲವಾಗಿದೆ. ಅಷ್ಟೇ ಅಲ್ಲ, ಧರ್ಮವನ್ನು ಅದರ ವಿಂಗಡಿಸುವ ಗುಣದಿಂದ ಪಾರು ಮಾಡಲು ಆವರೆಗೆ ಪ್ರಚಲಿತವಿದ್ದ ಧರ್ಮವೇ ಸತ್ಯ ಎಂಬುದನ್ನು ಸತ್ಯವೇ ಧರ್ಮವೆಂದು ಮಾರ್ಪಡಿಸಿ ಮಾನವ ಇತಿಹಾಸದ ಚಲನೆಗೆ ಹೊಸದೊಂದು ದಿಕ್ಕು ತೋರಿಸಿದರು. ಅಲ್ಲಿ, ಆಧುನಿಕ ಕಾಲವೆಂದು ಕೈಗಾರಿಕಾ ಕ್ರಾಂತಿಯ ಚರಿತ್ರೆ ಘರ್ಷಣೆಯನ್ನೇ ತನ್ನ ಚೈತನ್ಯವನ್ನಾಗಿ ಮಾಡಿಕೊಂಡಿದೆ ಎಂದು ಗ್ರಹಿಸಿದ ಗಾಂಧಿ ಈ ಕ್ರಾಂತಿ ಹುಟ್ಟುಹಾಕಿದ ನಾಗರೀಕತೆಯನ್ನು ಹಿಂಸೆಯ ನಾಗರೀಕತೆಯನ್ನಾಗಿ ಮುನ್ನೋಡಿದರು. ಅದರ ವಿವಿಧ ಅವತಾರಗಳನ್ನು ನಾವಿಂದು 'ಜಾಗತೀಕರಣ' ಎಂಬ ಹೆಸರಿನಡಿ ನೋಡುತ್ತಿದ್ದೇವೆ. ಹಾಗಾಗಿಯೇ ಇವುಗಳಿಗೆ ಗಾಂಧಿ ಪ್ರತಿಪಾದಿಸಿದ ಅಹಿಂಸೆ, ಸತ್ಯಾಗ್ರಹ ಹಾಗೂ ಮಿತಿ ಇರುವ ಸಮತ್ವದ ಜೀವನವೇ ನಿಜವಾದ ಪರಿಹಾರಗಳೆಂದು ನನಗನ್ನಿಸಿದ್ದರಿಂದ ನಾನು ಈಗ ಹೆಚ್ಚು ಗಾಂಧಿ ಸಮೀಪಕ್ಕೆ ಬಂದೆ ಎನಿಸುತ್ತದೆ. ಆದರೆ ಗಾಂಧಿಯನ್ನು ಹೀಗೆ ಆಧುನಿಕ ನಾಗರೀಕತೆಯ ವಿಮರ್ಶಕನನ್ನಾಗಿ ನೋಡುವ ಕಣ್ಣುಗಳನ್ನು ಸ್ವತಃ ಲೋಹಿಯಾ ಅವರೇ ನೀಡಿದ್ದರಿಂದ ನಾನೇನೂ ಲೋಹಿಯಾರಿಂದ ದೂರವಾಗಿದ್ದೇನೆ ಎಂದೂ ಹೇಳಲಾಗದು.




- **ಗಾಂಧಿ ಬಹುತ್ವದ ಭಾರತ + ಸಹಿಷ್ಣುತೆ-ಸಮನ್ವಯ-ಸಹಬಾಳ್ವೆಯ 'ಪ್ರತೀಕ'. ಅದು ಕೇವಲ ಸಾಂಕೇತಿಕವಾಗಿ ಮಾತ್ರ 'ಜೀವಂತ'ವಾಗಿದೆ ಎಂದು ಅನ್ನಿಸುವುದಿಲ್ಲವೇ?**

ಅವನತಿಯೂ ಒಂದು ಪ್ರಕ್ರಿಯೆ. ಅದರೊಳಗೇ ಉನ್ನತಿಯ ಬೀಜಗಳು ಅಡಗಿರುತ್ತವೆ ಎಂದು ನಂಬಿದವನು ನಾನು.



ಕಲೆ: ಎಂ.ಎಸ್. ಮೂರ್ತಿ

- **ಗಾಂಧಿ ಮಾದರಿಯ ಹೋರಾಟ ಪ್ರಭುತ್ವವನ್ನು ಮಣಿಸಿದ ಇತ್ತೀಚಿನ ದಿನಗಳ ಅಪರೂಪದ ಅಪೂರ್ವ ಬೆಳವಣಿಗೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕು?**

ನೀವು ಇತ್ತೀಚಿನ ಕೃಷಿ ಕಾಯ್ದೆ ವಿರುದ್ಧದ ರೈತ ಹೋರಾಟದ ಬಗ್ಗೆ ಹೇಳುತ್ತಿರುವಿರಾದರೆ, ಇಂದಿನ ಕಾಲದ ಗಾಂಧಿ ಹೋರಾಟದ ಮಾರ್ಗಕ್ಕೆ ಅತ್ಯುತ್ತಮ ಮಾದರಿ ಎನ್ನಬಹುದು. ಇದರ ಪರಿಣಾಮಗಳು ಇನ್ನಿತರ ಹಲವು ವಲಯಗಳಲ್ಲಿ ಇದು ಪ್ರತಿಧ್ವನಿಸಬಹುದು.

- **ಗಾಂಧಿಯ ಮಿತಿ-ಶಕ್ತಿಗಳೆರಡನ್ನೂ ಕಂಡರಿಸುವಾಗ 'ಭಂಜಿತ' ಗಾಂಧಿ ಇದ್ದದ್ದು ನಿಮಗೆ 'ಸುಲಭ'ವಾಯಿತೇ? ಅದೇ ನಿಮ್ಮ ಬರವಣಿಗೆಯ ಸ್ವರೂಪ ನಿರ್ಧರಿಸಿತೇ?**

ಮೊದಲೇ ಹೇಳಿದ ಹಾಗೆ ವಿಗ್ರಹ ಭಂಜನೆಯ ಲೋಹಿಯಾ ನೋಟವೇ ನಾನು ಗಾಂಧಿಯನ್ನು ನೋಡುವ ಕ್ರಮವನ್ನು ಕಲಿಸಿದ್ದರಿಂದಾಗಿ ಅದೇ ಇಡಿಯಾಗಿ ಅಲ್ಲ ಎನ್ನಬಹುದು. ಏಕೆಂದರೆ ಲೋಹಿಯಾ ಅವರ ಗಾಂಧಿ ವಿಮರ್ಶೆ ಸಮಾಜವಾದಿ ಪರಂಪರೆ ಇತಿಹಾಸವನ್ನು ಮತ್ತು ಆಧುನಿಕತೆಯನ್ನು ನೋಡುವ ಕ್ರಮದ ದೋಷಗಳಿಂದಾಗಿ ಕೆಲವು ಮಿತಿಗಳಿಗೆ ಒಳಗಾಗಿದೆ. ಉದಾ: ಅಹಿಂಸೆ, ರಾಷ್ಟ್ರ, ಪ್ರಜಾಪ್ರಭುತ್ವ ಅಥವಾ ತಂತ್ರಜ್ಞಾನ ಕುರಿತಂತೆ ಲೋಹಿಯಾರ ಭಿನ್ನಾಭಿಪ್ರಾಯಗಳ ಹರಹು.

- **ಅಂಬೇಡ್ಕರ್ ಕಣ್ಣಲ್ಲಿ ಗಾಂಧಿಯನ್ನು ಎದುರಾಗುವ 'ಮಾರ್ಗ'ವೊಂದಿದೆ. ಆ ಕುರಿತ ನಿಮ್ಮ ಮೌನ/ ಕಡೆಗಣನೆಯನ್ನು ಹೇಗೆ ನೋಡಬೇಕು?**

ನಾನು ಈ ಪುಸ್ತಕವನ್ನು ಬರೆಯಲು ತೊಡಗಿದ ಕ್ರಮವನ್ನು ನೀವು ಗ್ರಹಿಸಿದರೆ ಇಂತಹ ಪ್ರಶ್ನೆಗಳು ಅಸಂಗತವಾದಾವು. ಹಾಗೆ ನೋಡಿದರೆ ನಾನು ಈ ಪುಸ್ತಕವನ್ನು ಯಾವ ಅಕ್ಕಪಕ್ಕವನ್ನೂ ನೋಡದೆ ಗಾಂಧಿಯನ್ನು ನೆಟ್ಟಗೆ ದಿಟ್ಟಿಸಿ ನೋಡಿ ಬರೆಯುತ್ತಾ ಹೋಗಿದ್ದೇನೆಯೇ ಹೊರತು ಪ್ರಚಲಿತ ವಿವಾದಗಳ ನೆಲೆಯಲ್ಲಿ ಅವರ ಬದುಕನ್ನು ವಿಮರ್ಶಿಸುವ ಪ್ರಯತ್ನ ಮಾಡಿಲ್ಲ. ಆದರೆ ಗಾಂಧಿ-ಅಂಬೇಡ್ಕರ್ ಸಮೀಕರಣದ ಸುತ್ತಮುತ್ತ ಕನ್ನಡದಲ್ಲಿ ಈವರೆಗೆ ಕಾಣಿಸಿಕೊಂಡಿಲ್ಲದಷ್ಟು ವಿಸ್ತಾರದ ವಿವರಗಳನ್ನು ಈ ಪುಸ್ತಕದಲ್ಲಿ ನೋಡಬಹುದು. ಅವುಗಳನ್ನು ಗಮನಿಸಿ ಈ ಸಮೀಕರಣದ ಸ್ವರೂಪವನ್ನು ಕುರಿತು ನಿಮ್ಮ ತೀರ್ಮಾನಕ್ಕೆ ಬರಲು ಅವಕಾಶವಿದೆ.

- **ಹಿಂಸೆ-ಅಹಿಂಸೆಯ ಮುಖಾಮುಖಿಯಲ್ಲಿ ಹಿಂಸೆಯ ಸಮರ್ಥನೆ-ಸಹಜವಾಗುತ್ತಿರುವ ಸಾಮಾಜಿಕ ಸ್ಥಿತಿ ಮುಂದುವರೆಯಬಹುದೇ? ನಾಳೆ ಗಾಂಧಿ ಉಳಿಯಬಹುದೇ?**

ಗಾಂಧಿ ನಂಬಿದಂತೆ ಸಮುದ್ರ ಪರ್ವತಗಳನ್ನು ಜೊತೆಗಿಟ್ಟಿರುವ ಶಕ್ತಿಯೇ ಅಹಿಂಸೆ. ಅಹಿಂಸೆ ಪ್ರಕೃತಿಯಲ್ಲಿ, ಅದರ ವಿಕಾಸದಲ್ಲಿ ಅಂತಸ್ಥವಾಗಿದೆ. ಹಿಂಸೆ ಎಂಬುದು ಎಂದೂ ಸಹಜವಾಗದು. ಆರಂಭದಲ್ಲೇ ಹೇಳಿದಂತೆ ಕೊಲ್ಲಲಾಗದಷ್ಟು ಸಹಜಸತ್ವದ ಮನುಷ್ಯ ಗಾಂಧಿ. ಕೊಲ್ಲುವ ಪ್ರಯತ್ನ ಮಾಡುವವರು ಮಾಡಬಹುದು.

- **ಗಾಂಧಿ ಅಂದರೆ 'ಸತ್ಯ-ಪ್ರಾಮಾಣಿಕತೆ-ಅಹಿಂಸೆ'. ಕಾರ್ಪೋರಿಟೀಕರಣ-ಖಾಸಗೀಕರಣಗೊಳ್ಳುತ್ತಿರುವ ಭಾರತದಲ್ಲಿ ಅವುಗಳ ಸ್ಥಿತಿ-ಪರಿಸ್ಥಿತಿಯ ಬಗೆಗಿನ ಆತಂಕ ಬರೀ ಲಿಬರಲ್‌ಗಳ ಆತಂಕವೇ? ಭಾರತ ಎದುರಿಸುತ್ತಿರುವ/ ಬೇಕಾಗಿರುವ ಸವಾಲೇ?**

ಸತ್ಯ-ಪ್ರಾಮಾಣಿಕತೆ-ಅಹಿಂಸೆಗಳೆಂಬ ಮೌಲ್ಯಗಳಿಗೆ ಧಕ್ಕೆಯೇನೂ ಈ ಖಾಸಗೀಕರಣ-ಕಾರ್ಪೋರೇಟೀಕರಣಗಳು ಆರಂಭವಾದ ನಂತರ ಶುರುವಾದುದಲ್ಲ. ಧಕ್ಕೆಯ ರೂಪವೈವಿಧ್ಯಗಳು ಹೆಚ್ಚಿವೆಯಷ್ಟೆ. ಆದ್ದರಿಂದ ಲಿಬರಲ್-ಪಬರಲ್‌ಗಳೆಂಬ ಇಂದಿನ ಪಾರಿಭಾಷಿಕ ಸವಾಲುಗಳ ಮೂಲಗಳಿಗಿಂತ ಈ ಎರಡರ ಮೂಲ ಎಲ್ಲಿದೆ ಎಂಬುದನ್ನು ಗುರುತಿಸಿ ಪರಿಹಾರದ ಪ್ರಯತ್ನಗಳನ್ನು ಮಾಡುವುದು ಒಳ್ಳೆಯದು.

- **ಗಾಂಧಿವಾದ-ವಾದಿಗಳು ಗಾಂಧಿಯನ್ನು ಅಪ್ರಸ್ತುತಗೊಳಿಸುವ ಪ್ರಕ್ರಿಯೆಯನ್ನು ತೀವ್ರಗೊಳಿಸಿದವೇ? ಅಥವಾ ಅದು ಗಾಂಧಿ + ಗಾಂಧಿವಾದದ ಮಿತಿಯೇ ಆಗಿತ್ತಾ?**

ನನ್ನ ಬದುಕೇ ನನ್ನ ಸಂದೇಶ ಎಂದ ವ್ಯಕ್ತಿಯನ್ನು ಯಾರೂ ಅಪ್ರಸ್ತುತಗೊಳಿಸಲಾರರು. ಅಂತಹ ವಿದ್ಯಮಾನಗಳು ತಾತ್ಕಾಲಿಕ ಪರಿಣಾಮದವು. ಭೂಮಿಯಂತಹ ಗಾಂಧಿಯ ಮಿತಿಗಳ ಬಗ್ಗೆ ಮಾತಾಡುವುದು ಭೂಮಿಯ ಮಿತಿಗಳ ಬಗ್ಗೆ ಮಾತಾಡಿದಂತೆ. ಅಂದರೆ ಅವರು ಮಾಡಿದ್ದೆಲ್ಲ ಸರಿ ಎಂದಲ್ಲ. ನಂನಮ್ಮ ದೃಷ್ಟಿಕೋನಗಳನ್ನು ಅನುಸರಿಸಿದಂತೆ ಅವರು ಹಲವು ತಪ್ಪುಗಳನ್ನು ಮಾಡಿರಬಹುದು/ ಮಾಡಿದ್ದಾರೆನಿಸುತ್ತದೆ. ಆದರೆ ಅವು ಅವರ ಮಿತಿಗಳೆಂದು ಹೇಳಲಾಗದು. ಯಾಕೆಂದರೆ ಅವರು ಮನುಷ್ಯ ದೇವರಾಗುವ ತನಕ ಆತನಿಗೆ ಶಾಂತಿಯಿಲ್ಲ ಎಂದು ಸಂಪೂರ್ಣ ಶಾಂತಿಯೆಡೆಗೆ ಹೆಜ್ಜೆ ಹಾಕಿದವರು. ಆ ಆತ್ಯಂತಿಕ ಪರಮ ಶಾಂತಿಯ ಮುಂಚಿನ ಅಶಾಂತಿಯಿಂದಾದ ತಪ್ಪುಗಳು ಅವು ಎನ್ನಬಹುದು. ❖

ಮೊದಲ ಓದು

## ಸಾಹಿತ್ಯದ ಫ್ರೇಮಿನ ಶರ್ಮರ ವ್ಯಕ್ತಿಚಿತ್ರ




ಪು: 132 ₹50

**ಬಿ.ಸಿ. ರಾಮಚಂದ್ರ ಶರ್ಮ**
ಲೇ: ಶೂದ್ರ ಶ್ರೀನಿವಾಸ್
ಪ್ರ: ಸಾಹಿತ್ಯ ಅಕಾಡೆಮಿ
ಸಂ:www.sahitya-akademi.gov.in

**ನವ್ಯ ಸಾಹಿತ್ಯ** ಸಂದರ್ಭದಲ್ಲಿ ಗೋಪಾಲಕೃಷ್ಣ ಅಡಿಗರ ಪ್ರಖರ ಪ್ರಭಾವಳಿಯ ಎದುರಿನಲ್ಲಿಯೂ ಭಿನ್ನ ಧ್ವನಿಯನ್ನು ಉಳಿಸಿಕೊಂಡು ಕನ್ನಡ ಕಾವ್ಯಪರಂಪರೆಯಲ್ಲಿ ತಮ್ಮದೇ ಛಾಪು ಮೂಡಿಸಿದ ಕವಿ, ಬಿ.ಸಿ. ರಾಮಚಂದ್ರ ಶರ್ಮ. ಇಪ್ಪತ್ಮೂರು ವರ್ಷಗಳ ಕಾಲ ವಿದೇಶಗಳಲ್ಲಿದ್ದರೂ ಅವರು ಕನ್ನಡ ಸಾಹಿತ್ಯಲೋಕದ ಜೊತೆಗೆ ನಿರಂತರವಾದ ಒಡನಾಟ ಉಳಿಸಿಕೊಂಡವರು. ಕವಿಯಾಗಿ ಸಾಕಷ್ಟು ಪ್ರಸಿದ್ಧರಾಗಿರುವ ಶರ್ಮರು ಹಲವು ಮಹತ್ವದ ಕಥೆಗಳನ್ನೂ, ನಾಟಕಗಳನ್ನೂ ಬರೆದಿದ್ದಾರೆ. ಕನ್ನಡ ಸಾಹಿತ್ಯದ ಅಂತಃಸತ್ವವನ್ನು ಬೆಳೆಸಿದ, ಜಾಗೃತಗೊಳಿಸಿದ ಹಲವು ವಾಗ್ವಾದಗಳಲ್ಲಿ, ಚರ್ಚೆಗಳಲ್ಲಿ ಸಕ್ರಿಯರಾಗಿ ಪಾಲ್ಗೊಂಡಿದ್ದಾರೆ. ಇಂಥ ಮುಖ್ಯ ಸಾಹಿತಿಯ ಬದುಕನ್ನೂ ಬರಹವನ್ನೂ ಒಟ್ಟೊಟ್ಟಿಗೇ ಕಟ್ಟಿಕೊಡುವ ಪ್ರಯತ್ನವನ್ನು ಶೂದ್ರ ಶ್ರೀನಿವಾಸ್ ಮಾಡಿದ್ದಾರೆ. ಸಾಹಿತ್ಯ ಅಕಾಡೆಮಿಯ 'ಭಾರತೀಯ ಸಾಹಿತ್ಯ ನಿರ್ಮಾಪಕರು' ಸರಣಿಯಲ್ಲಿ ಪ್ರಕಟವಾಗಿರುವ 'ಬಿ.ಸಿ. ರಾಮಚಂದ್ರ ಶರ್ಮ' ಎಂಬ ಈ ಕೃತಿ ಆಪ್ತ ಒಡನಾಡಿಯೊಬ್ಬನ ಕಣ್ಣಿನಿಂದ ಶರ್ಮರ ವ್ಯಕ್ತಿತ್ವವನ್ನೂ, ಗಾಢ ಓದುಗನೊಬ್ಬನ ಕಣ್ಣಿನಿಂದ ಅವರ ಸಾಹಿತ್ಯವನ್ನೂ ಪರಿಚಯಿಸಿಕೊಡುತ್ತದೆ.

ಆರು ಅಧ್ಯಾಯಗಳಲ್ಲಿ ಹಂಚಿಕೊಂಡಿರುವ ಈ ಕೃತಿಯ ಮೊದಲ ಅಧ್ಯಾಯ ಶರ್ಮರ ಹುಟ್ಟು, ಬಾಲ್ಯ ಮತ್ತು ಬೆಳವಣಿಗೆಯ ಕುರಿತಾಗಿದೆ. ಇದು ಬರೀ ಮಾಹಿತಿಯಾಗಿರದೇ ಅವರು ಹುಟ್ಟಿ ಬೆಳೆದ ಪರಿಸರ ಅವರಲ್ಲಿ ಸಾಹಿತ್ಯ, ಮನಃಶಾಸ್ತ್ರಗಳ ಕುರಿತು ಆಸಕ್ತಿ ಬೆಳೆಸಿಕೊಳ್ಳಲು ಹೇಗೆ ಕಾರಣವಾಯಿತು ಎಂಬುದನ್ನೂ ಲೇಖಕರು ವಿಶ್ಲೇಷಿಸುತ್ತಾ ಹೋಗುತ್ತಾರೆ. ಹಾಗಾಗಿ ವಿವರಗಳ ಜೊತೆಗೇ ಒಂದು ವ್ಯಕ್ತಿಚಿತ್ರವನ್ನೂ ಗಟ್ಟಿಯಾಗಿ ಕಟ್ಟಿಕೊಡುತ್ತ ಹೋಗುತ್ತದೆ. ನಂತರ ಅವರ ಕಾವ್ಯ ರಚನೆಯ ಕುರಿತು, ಸಾನೆಟ್ ರಚನೆಗಳ ಕುರಿತು, ಕವಿಯಾಗಿ ಪ್ರಸಿದ್ಧರಾದ ಶರ್ಮರ ಕಥಾಲೋಕದ ಕುರಿತು, ನಾಟಕಗಳ ಕುರಿತು, ಅನುವಾದದ ಕುರಿತು ಅವರ ಒಲವಿನ ಕುರಿತು ಅನುಸಂಧಾನ ನಡೆಸುವ ಅಧ್ಯಾಯಗಳಿವೆ. ಮೇಲ್ನೋಟಕ್ಕೆ ಇದು ಒಂದು ಕಾಲದ ಒಂದು ಕವಿಯ ಬದುಕಿನ ಕುರಿತ ಚಿತ್ರಕೃತಿಯಾಗಿ ಕಂಡರೂ ಇದಕ್ಕೆ ಆ ಮಿತಿಯನ್ನೂ ಮೀರಿದ ಮಹತ್ವವಿದೆ. ಆ ಕಾಲದ ಶರ್ಮರ ಒಡನಾಡಿಗಳಾದ ಲಂಕೇಶ್, ಅನಂತಮೂರ್ತಿ, ಡಿ.ಆರ್. ನಾಗರಾಜ್ ಹೀಗೆ ಹಲವರ ಕುರಿತಾದ ವಿವರಗಳೂ ಇಲ್ಲಿ ಪೂರಕವಾಗಿ ಬರುತ್ತವೆ. ಹಾಗಾಗಿ ಇದು ಒಂದು ಕಾಲದ ಸಾಹಿತ್ಯ ಜಗತ್ತಿನ ಚಹರೆಗಳನ್ನು ಹಿಡಿದಿಡುವ ಕೃತಿಯೂ ಆಗಿದೆ. ❖

## ಮಿದುಳಿನ ಆರೈಕೆಗೊಂದು ಕೈಪಿಡಿ

**ಅಧ್ಯಯನವೊಂದರ** ಪ್ರಕಾರ, ಪ್ರತೀ ಒಂದು ಲಕ್ಷ ಜನರಲ್ಲಿ ಸರಾಸರಿ 180 ಜನರು ಮಿದುಳಿನ ಆಘಾತದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ವಾರ್ಷಿಕ 17.5 ಲಕ್ಷ ಜನ ಪಾರ್ಶ್ವವಾಯುವಿನಿಂದ ಬಾಧಿತರಾಗುತ್ತಿದ್ದಾರೆ. ಕ್ಯಾನ್ಸರ್‌ಗಿಂತಲೂ ಹೆಚ್ಚು ಕಾಡುತ್ತಿರುವ ಇಂಥ ಆರೋಗ್ಯ ಸಮಸ್ಯೆಯ ಸಾಮಾಜಿಕ ಪರಿಣಾಮ ಊಹಿಸಲಾಗದು. ಈ ಆರೋಗ್ಯ ಮತ್ತು ಆರ್ಥಿಕ ಸಮಸ್ಯೆಯ ಬಗ್ಗೆ ವಾಸ್ತವಾಂಶ ತೆರೆದಿಡುವ ಕೃತಿ ಡಾ.ಎನ್.ಕೆ. ವೆಂಕಟರಮಣ ಅವರ 'ಮಿದುಳಿನ ಆಘಾತ–ವಾಸ್ತವಾಂಶಗಳು'.

ಆಂಗ್ಲ ಭಾಷೆಯ ಪದಗಳನ್ನು ಹೆಚ್ಚಾಗಿ ಬಳಸದೆ ವೈಜ್ಞಾನಿಕ ವಿಷಯಗಳನ್ನು ವಿವರಿಸುವುದು ಕಷ್ಟಸಾಧ್ಯ. ಆದರೆ ವೆಂಕಟರಮಣ ಅವರು ಇಂಗ್ಲಿಷ್‌ನಲ್ಲಿ ಬರೆದ ಈ ಕೃತಿಯನ್ನು ಪತ್ರಕರ್ತ ವೆಂಕಟೇಶ ಪ್ರಸಾದ್ ಬಿ.ಎಸ್. ಅವರು ಸರಳ ರೂಪದಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಮಿದುಳಿನ ಆಘಾತದ ಬಗೆಗಳು, ರಕ್ತಪೂರೈಕೆ ವ್ಯವಸ್ಥೆ, ಮಿದುಳಿನ ಕಾರ್ಯವೈಖರಿ, ಗೋಲ್ಡನ್ ಅವರ್, ಚಿಕಿತ್ಸಾ ಕ್ರಮಗಳ ಕುರಿತು ಛಾಯಾಚಿತ್ರಗಳ ಸಹಿತ ವಿವರಣೆ ಇಲ್ಲಿದೆ. ಸೂಕ್ತವಲ್ಲದ ಜೀವನಶೈಲಿಯೂ ಮಿದುಳಿನ ಆಘಾತದ ಸಂಭಾವ್ಯವನ್ನು ಹೆಚ್ಚಿಸುತ್ತದೆ ಎನ್ನುವ ಅಂಶದ ಬಗ್ಗೆ ಲೇಖಕರು ಗಮನ ಸೆಳೆಯುತ್ತಾರೆ. ಮಿದುಳಿನ ಆಘಾತದ ಕುರಿತು ಜನರಲ್ಲಿರುವ ಮೂಢನಂಬಿಕೆಗಳು ಮತ್ತು ತಪ್ಪುತಿಳುವಳಿಕೆಗಳು ಯಾವುವು ಮತ್ತು ವಾಸ್ತವಾಂಶಗಳೇನು ಎನ್ನುವುದರ ವಿವರವಾದ ಮಾಹಿತಿ ಇಲ್ಲಿದೆ. ಮಿದುಳಿನ ಕುರಿತ ಪಠ್ಯಪುಸ್ತಕವಿದ್ದಂತಿರುವ ಈ ಕೃತಿಯನ್ನು ಕೆ.ಆರ್.ಕಮಲೇಶ್ ಸಂಪಾದಿಸಿಕೊಟ್ಟಿದ್ದಾರೆ. ❖




ಪು: 232 ₹195

**ಮಿದುಳಿನ ಆಘಾತ ವಾಸ್ತವಾಂಶಗಳು**
ಲೇ: ಡಾ.ಎನ್.ಕೆ. ವೆಂಕಟರಮಣ
ಅನು: ವೆಂಕಟೇಶ ಪ್ರಸಾದ್ ಬಿ.ಎಸ್.
ಸಂ: ಡಾ.ಕೆ.ಆರ್. ಕಮಲೇಶ್
ಪ್ರ: ಸಪ್ನ, ಬೆಂಗಳೂರು
ಸಂ:080-40114455

## ಸುಸ್ವರದ ಗೀತ ಗೊಂಚಲು




ಪು: 340 ₹325

**ಮನಸು ಮಾಗಿದ ಸುಸ್ವರ**
ಲೇ: ಜ್ಯೋತಿ ಗುರುಪ್ರಸಾದ್
ಪ್ರ: ದೇಸಿ ಪುಸ್ತಕ
ಸಂ: 9342326655

ಆಕಾಶವಾಣಿಗೆ ಕಿವಿಯಾಗುವ ಸುಖವೇ ಬೇರೆ. ಬಾಲ್ಯದಲ್ಲಿ ಕೇಳಿದ ಸುಮಧುರ ಗೀತೆಗಳು ಈಗಲೂ ಕಿವಿಯಲ್ಲಿ ಗುಂಯ್‌ಗುಡುತ್ತವೆ. ಅಂತಹ ಆಕಾಶವಾಣಿಯ ಸಂಗೀತವನ್ನು ಬಾಲ್ಯದಿಂದಲೂ ಕೇಳಿಸಿಕೊಂಡ ಲೇಖಕಿ ಜ್ಯೋತಿ ಗುರುಪ್ರಸಾದ್, ಆಯ್ದ 73 ಕನ್ನಡದ ಚಿತ್ರಗೀತೆಗಳ ಅರ್ಥ, ಒಳಾರ್ಥ ಮತ್ತು ಕವಿತೆಯ ಹಿಂದಿನ ಕಥೆಯನ್ನು ವಿಶ್ಲೇಷಿಸಿದ ಕೃತಿ 'ಮನಸು ಮಾಗಿದ ಸುಸ್ವರ'. ಪತ್ರಿಕೆಯಲ್ಲಿ ಪ್ರಕಟವಾದ ಅಂಕಣ ಬರಹಗಳ ಗುಚ್ಛವಿದು. ಚಿತ್ರಗೀತೆಗಳ ಸಮೃದ್ಧ ಸಾಹಿತ್ಯ, ಭಾಷಾ ಗಟ್ಟಿತನವನ್ನು ಓದುಗನ ಮುಂದೆ ತೆರೆದಿಡುವಲ್ಲಿ ಕೃತಿ ಯಶಸ್ವಿಯಾಗಿದೆ.

ಸುಮ್ಮನೆ ಚಿತ್ರಗೀತೆಗಳನ್ನು ಓದಿ ವಿಶ್ಲೇಷಿಸಿದ್ದಲ್ಲ. ಕೇಳಿ, ಸ್ಮರಿಸಿ ರಸಗ್ರಹಣ ಮಾಡಿ ಬರೆದ ಲೇಖನಗಳಿವು. ಇಲ್ಲಿನ ಗೀತೆಗಳ ಪೈಕಿ ಬಹುತೇಕ ಚಿತ್ರಗಳನ್ನು ವೀಕ್ಷಿಸಿದ ಲೇಖಕಿ ಗೀತ–ಚಿತ್ರ ಎರಡನ್ನೂ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಆಯಾ ಚಿತ್ರ, ಸಾಹಿತಿ, ಗಾಯಕರ ಪುಟ್ಟ ಪರಿಚಯವೂ ಇರುವುದು ಕೃತಿಯ ಮಹತ್ವವನ್ನು ಹೆಚ್ಚಿಸಿದೆ. ಕಪ್ಪು ಬಿಳುಪು ಯುಗದಿಂದ 90ರ ದಶಕದ ಅಂಚಿನವರೆಗಿನ ಗೀತೆಗಳನ್ನು ಆಯ್ದು ವಿಶ್ಲೇಷಿಸಲಾಗಿದೆ. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಸೌಖ್ಯಗಳ ತತ್ವದ ಅಡಿಯಲ್ಲಿ ಈ ಗೀತೆಗಳನ್ನು ಒರೆಗೆ ಹಚ್ಚಲಾಗಿದೆ ಎಂದಿದ್ದಾರೆ ಲೇಖಕಿ. ಹಾಡಿನಲ್ಲಿ ಪೂರ್ಣ ಕಥೆಯೇ ಹೆಣೆದುಕೊಂಡು ಪಾತ್ರಗಳನ್ನು ನಿರ್ದೇಶಿಸುವ ಸಂಗತಿಯನ್ನೂ ಅವರು ರತ್ನಗಿರಿ ರಹಸ್ಯ ಚಿತ್ರದ 'ಅಮರ ಮಧುರಾ ಪ್ರೇಮ... ನೀ ಬಾ ಬೇಗ ಚಂದಮಾಮ...' ಗೀತೆಯಲ್ಲಿ ಗುರುತಿಸಿದ್ದಾರೆ. ಇಂಥದ್ದೇ ಚಿತ್ರಣ 'ಮೆಲ್ಲುಸಿರೇ ಸವಿಗಾನ...' ಗೀತೆಯ ವಿಶ್ಲೇಷಣೆಯಲ್ಲೂ ಕಾಣಬಹುದು. ❖

## ಸಾವಿತ್ರಿಬಾಯಿಯ ಸೇವಾಜೀವನ

**ದೀನೋದ್ಧಾರಕಿ**, ಭಾರತದ ಮಹಿಳೆಯರ ಬಾಳಿಗೆ ಹೊಸಬೆಳಕಾದ ಸಾವಿತ್ರಿಬಾಯಿ ಫುಲೆ ಕುರಿತು ರಚನೆಯಾದ ಸಾಹಿತ್ಯಕ್ಕೆ ಲೆಕ್ಕವುಂಟೇ...? ಆ ಸಾಲಿನಲ್ಲಿ ಮತ್ತೊಂದು ಕೃತಿ, 'ಸಾವಿತ್ರಿಬಾಯಿ ಫುಲೆ ಮತ್ತು ನಾನು'. ಆದರೆ ಇದು ಹತ್ತರೊಳಗೆ ಮತ್ತೊಂದು ಎನ್ನುವಂತಹ ಕೃತಿಯಲ್ಲ. ಫುಲೆ ಅವರ ಜೀವನಗಾಥೆಯನ್ನು ವಿಶಿಷ್ಟ ರೀತಿಯಲ್ಲಿ ನಿರೂಪಿಸಿರುವುದು ಇದರ ಹೆಗ್ಗಳಿಕೆ.

ಮೀಸಲಾತಿಯ ಸೌಲಭ್ಯದಿಂದ ಓದುವುದಕ್ಕಾಗಿ ಪಟ್ಟಣ ಸೇರಿದ ಶಬರಿ ಎಂಬ ಹೆಣ್ಣುಮಗಳೊಬ್ಬಳು ಅನುಭವಿಸುವ ಸಮಸ್ಯೆ, ದೊಡ್ಡವರ ಕಾಟ, ನಂತರ ಸ್ವಂತ ಶಕ್ತಿಯಿಂದ ಬದಲಾವಣೆಗೆ ತೆರೆದುಕೊಳ್ಳುವುದು ಮತ್ತು ಸಮಾಜದಲ್ಲಿ ಸೇವಾಕೈಂಕರ್ಯದಲ್ಲಿ ತೊಡಗಿಕೊಳ್ಳುವುದು ಕೃತಿಯ ವಸ್ತು. ಇದನ್ನು ಕಥಾನಕದ ಶೈಲಿಯಲ್ಲಿ ಹೆಣೆಯುವ ಮೂಲಕ ಲೇಖಕಿ ಹೊಸತನ ಮೆರೆದಿದ್ದಾರೆ.

ಶೋಧ, ಸಂಯೋಜನೆ ಮತ್ತು ಬಂಡಾಯ ಎಂಬ ಭಾಗಗಳ ಮೂಲಕ ಕೃತಿ ಸಾಗುತ್ತದೆ. ಶಬರಿಗೆ ಸಿಕ್ಕಿದ, ಸಾವಿತ್ರಿಬಾಯಿ ಅವರದು ಎಂದು ತೋರುವ ದಿನಚರಿಯ ಘಟನೆಗಳು ಮತ್ತು ಶಬರಿಯ ಶೈಕ್ಷಣಿಕ ಸಂಸ್ಥೆಯ ಘಟನಾವಳಿಗಳು ಒಂದಕ್ಕೊಂದು ಸಂವಾದಿಯಾಗಿ ಮುಂದೆ ಸಾಗುವುದು ಕೃತಿಗೆ ಕಾವ್ಯಾತ್ಮಕ ಸೊಬಗನ್ನು ತಂದುಕೊಟ್ಟಿವೆ. ಜ್ಯೋತಿಬಾ ಹಾಗೂ ಸಾವಿತ್ರಿಬಾಯಿ ದಂಪತಿಯ ಋಣ ಸಮಾಜದ ಮೇಲೆ ದೊಡ್ಡದಾಗಿದೆ. ಅದನ್ನು ತೀರಿಸುವ ಪುಟ್ಟ ಯತ್ನವಿದು ಎನ್ನುತ್ತಾರೆ ಮೂಲ ಲೇಖಕಿ ಸಂಗೀತಾ ಮುಳೆ. ಕೆಸ್ತಾರ ಮತ್ತು ವಿಕಾಸ್ ಮೌರ್ಯ ದಂಪತಿ ಈ ಕೃತಿಯನ್ನು ಅಷ್ಟೇ ಸೊಗಸಾಗಿ ಕನ್ನಡಕ್ಕೆ ತಂದಿದ್ದಾರೆ. ❖




ಪು: 120 ₹120

**ಸಾವಿತ್ರಿಬಾಯಿ ಫುಲೆ ಮತ್ತು ನಾನು**
ಮೂಲ: ಸಂಗೀತಾ ಮುಳೆ
ಕನ್ನಡಕ್ಕೆ: ಕೆಸ್ತಾರ ವಿ ಮೌರ್ಯ, ವಿಕಾಸ್ ಆರ್.ಮೌರ್ಯ
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಸಂ: 9449174662

# ಸುಪ್ತಪ್ರಜ್ಞೆಯ ಉತ್ಖನನದೊಳಗೆ...

ಜನಸಾಮಾನ್ಯರ ಮನದೊಳಗಿರುವ ತಾಕಲಾಟಗಳು ಇಲ್ಲಿ ನವ್ಯ ಕಲಾರೂಪಕವಾಗಿ ಗೋಚರಿಸುತ್ತವೆ. ರೇಖಾಚಿತ್ರಗಳ ಜತೆಗೆ ಬಹುಮಾಧ್ಯಮದ ಬಳಕೆಯೂ ಇಲ್ಲಿದೆ. ರಹಸ್ಯವನ್ನು ಉತ್ಖನನ ಮಾಡುವಂಥ ಚಿ.ಸು.ಕೃಷ್ಣಸೆಟ್ಟಿ ಅವರ ಕಲಾಕೃತಿಗಳು ನೋಡುಗರನ್ನು ಸೆಳೆಯುತ್ತವೆ.

ಕಲೆ

**ಮಂಜುಶ್ರೀ ಎಂ. ಕಡಕೋಳ**

**ನಾಣ್ಯವೊಂದಕ್ಕೆ** ಎರಡು ಮುಖಗಳಿರುವಂತೆ ಮನುಷ್ಯನೊಳಗಿರುವ ದ್ವಿಮುಖಗಳ ಅನಾವರಣಕ್ಕೆ ಕಾಲವೊಂದು ವೇದಿಕೆ. ಕೋವಿಡ್ ಕಾಲ ಮನುಷ್ಯನ ಹೊರ-ಒಳಗಣ ಅನಾವರಣಕ್ಕೆ ಅಂಥದ್ದೊಂದು ವೇದಿಕೆ ಕಲ್ಪಿಸಿದೆ. ಈ ದುರಿತ ಕಾಲದೊಳಗಿನ ವಿಕಾರತೆಗಳನ್ನಿಟ್ಟುಕೊಂಡು ಕಲಾವಿದ ಚಿ.ಸು. ಕೃಷ್ಣಸೆಟ್ಟಿ ಅವರು ರಚಿಸಿರುವ ಕಲಾಕೃತಿಗಳು ಮನುಷ್ಯನ ಸುಪ್ತಪ್ರಜ್ಞೆಯ ಉತ್ಖನನದೊಳಗಿನ ಪ್ರತಿಬಿಂಬಗಳಾಗಿವೆ.

ಬೆಂಗಳೂರಿನ ಬನಶಂಕರಿಯ ಕಾಲೇಜ್ ಆಫ್ ಫೈನ್ ಆರ್ಟ್ಸ್‌ನಲ್ಲಿ ಡಿ. 20ರಿಂದ ಆರಂಭವಾಗಿರುವ ಕೃಷ್ಣಸೆಟ್ಟಿ ಅವರ ಕಲಾಕೃತಿಗಳ ಏಕವ್ಯಕ್ತಿ ಪ್ರದರ್ಶನವು ಹಲವು ಕಾರಣಗಳಿಂದಾಗಿ ಕಲಾಸಕ್ತರ ಮನಸೆಳೆಯುತ್ತಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಚನೆಯಾಗಿರುವ ಈ ಕಲಾಕೃತಿಗಳಲ್ಲಿ ಮನುಷ್ಯನ ಕರಾಳ ವ್ಯಕ್ತಿತ್ವದ ಅನಾವರಣವಾಗಿದೆ. ವಿಶ್ವದ ಪ್ರಾಥಮಿಕ ತತ್ತ್ವಗಳಾದ ಮೀನು ಮತ್ತು ನೀರಿನ ರೂಪಕಗಳ ಮೂಲಕ ಪ್ರಸ್ತುತ ಸಾಮಾಜಿಕ, ರಾಜಕೀಯ ಸಂಗತಿಗಳು ಸೇರಿದಂತೆ ಸುತ್ತಮುತ್ತಲಿನ ಸಮಕಾಲೀನ ಸಂಗತಿಗಳ ಸೂಕ್ಷ್ಮ ವಿಶ್ಲೇಷಣೆ ಇಲ್ಲಿದೆ. ಇಲ್ಲಿನ ಕಲಾಕೃತಿಗಳಲ್ಲಿ ಕೆಲವು ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಪ್ರದರ್ಶನಗೊಂಡಿರುವುದು ವಿಶೇಷ.

‘ಕಲಾಕೃತಿಗಳ ರಚನೆ ಕೆಲವರಿಗೆ ಪ್ರಜ್ಞಾಪೂರ್ವಕವಾದ ರಚನೆಯಾಗಿದ್ದರೆ ಮತ್ತೆ ಕೆಲವರಿಗೆ ಅಪ್ರಜ್ಞಾಪೂರ್ವಕವಾದ ರಚನೆ. ಇಲ್ಲಿರುವ ಯಾವುದೇ ಕಲಾಕೃತಿಯನ್ನು ನಾನು ಪ್ರಜ್ಞಾಪೂರ್ವಕವಾಗಿ ರಚಿಸಿಲ್ಲ. ಇವು ಒಂದು ರೀತಿಯಲ್ಲಿ ಮನುಷ್ಯನ ಸುಪ್ತಪ್ರಜ್ಞೆಯ ಉತ್ಖನನದ ಮಾದರಿಯವು. ನಮ್ಮ ಮನಸಿನೊಳಗೆ ಅಡಗಿರುವ ವಿಕೃತಿಗಳು ಇಲ್ಲಿನ ಕಲಾಕೃತಿಗಳ ಮೂಲಕ ಹೊರಗೆ ಬಂದಿವೆ. ಹಾಗಾಗಿಯೇ ಇಲ್ಲಿ ದಟ್ಟ ವರ್ಣಗಳನ್ನು ಬಳಸಿಲ್ಲ. ಕರಾಳತೆಯ ಪ್ರತೀಕವಾದ ಕಪ್ಪು, ಬೂದು ಬಣ್ಣಗಳ ಬಳಕೆಯೇ ಸಹಜವಾಗಿ ಮೇಲುಗೈ ಸಾಧಿಸಿವೆ. ಸುತ್ತಮುತ್ತಲಿನ ವಿದ್ಯಮಾನಕ್ಕೆ ಇಲ್ಲಿನ ಕಲಾಕೃತಿಗಳು ಸ್ಪಂದಿಸಿವೆ’ ಎಂದು ವಿಶ್ಲೇಷಿಸುತ್ತಾರೆ ಕಲಾವಿದ ಕೃಷ್ಣಸೆಟ್ಟಿ.



70ಕ್ಕೂ ಹೆಚ್ಚಿನ ಕಲಾಕೃತಿಗಳಲ್ಲಿ ದಟ್ಟವರ್ಣಗಳ ಬಳಕೆ ಅತ್ಯಪರೂಪ. ಮನುಷ್ಯನ ಅಂತರಂಗದ ಅಕರಾಳ-ವಿಕರಾಳವು ಇಲ್ಲಿ ಬೂದು, ಕಪ್ಪು, ಕೆಂಪು ಬಣ್ಣಗಳಲ್ಲಿ ದಟ್ಟೈಸಿದೆ. ರೂಪಕಗಳಾಗಿ ಬಳಕೆಯಾಗಿರುವ ಮೀನು, ಹಾವು, ನೀರು, ನಡೆದಾಡುವ ವೃಕ್ಷ, ಹಸ್ತ, ಕುರ್ಚಿ ಇವೆಲ್ಲವೂ ಪ್ರಸ್ತುತ ಸಮಾಜದ ಆಗುಹೋಗುಗಳ ಪ್ರತಿಬಿಂಬಗಳಾಗಿವೆ. ಶೀರ್ಷಿಕೆರಹಿತವಾಗಿರುವ ಕಲಾಕೃತಿಗಳು ನೋಡುಗರಿಗೆ ತಮ್ಮದೇ ಸ್ವಂತ ಕಥೆಗಳನ್ನು ಕಟ್ಟಿಕೊಳ್ಳಲು, ಕಲಾಕೃತಿಯ ಅಂತರಂಗವನ್ನು ಅರಿಯಲು ಒರೆ ಹಚ್ಚುತ್ತವೆ. ಬೂದು ಬಣ್ಣದೊಳಗೆ ಅಡಗಿರುವ ಕೆಂಡದಂತ ಸತ್ಯವನ್ನು ಅರಿಯಲು ಇಲ್ಲಿ ಯಾವುದೇ ನಿರ್ದಿಷ್ಟ ಕಟ್ಟುಪಾಡುಗಳಾಗಲೀ, ನಿರ್ದೇಶನವಾಗಲೀ ಇಲ್ಲ. ಹಾಗಾಗಿ, ಕಲಾಕೃತಿಯಷ್ಟೇ ಸ್ವತಂತ್ರ ಅವಕಾಶ ನೋಡುಗರದ್ದೂ ಆಗಿದೆ. ಅಂತೆಯೇ ಕೃತಿಯೊಂದಕ್ಕೆ ನಿರ್ದಿಷ್ಟ ವಿಸ್ತರಣೆಯ ಚೌಕಟ್ಟಿನ ಹಂಗೂ ಇಲ್ಲಿಲ್ಲ. ವೀಕ್ಷಕರ ಭಾವಲೋಕದೊಳಗೆ ಅನಿರ್ದಿಷ್ಟ ವಿಸ್ತರಣೆಯ ಸಾಧ್ಯತೆಗೂ ಇಲ್ಲಿನ ಕಲಾಕೃತಿಗಳು ನಿಲುಕುವಂಥವು.



ಚಿ.ಸು.ಕೃಷ್ಣಸೆಟ್ಟಿ

ಮೂರು ವರ್ಷಗಳ ಅವಧಿಯಲ್ಲಿ ಸಮಾಜದೊಳಗಿನ ರಾಜಕೀಯ, ಸಾಮಾಜಿಕ ಬೆಳವಣಿಗೆಗಳು ಜನಸಾಮಾನ್ಯನ ಮೇಲೆ ಬೀರಿರುವ ಸಂಗತಿಗಳು ಇಲ್ಲಿ ಸುಪ್ತಪ್ರಜ್ಞೆಯ ರೂಪದಲ್ಲಿ ಹರಳುಗಟ್ಟಿವೆ. ಮಾಧ್ಯಮದ ಅಭಿವ್ಯಕ್ತಿ ಸ್ವಾತಂತ್ರ್ಯ, ಅಧಿಕಾರದ ಲಾಲಸೆ, ರಾಜಕಾರಣ, ಹೆಣ್ಣು- ಗಂಡಿನ ನಡುವಣ ಸ್ವಾತಂತ್ರ್ಯ, ಸುಪ್ತವಾಗಿ ಅಡಗಿರುವ ಲೈಂಗಿಕ ಅಭೀಪ್ಸೆಗಳ ಅಭಿವ್ಯಕ್ತಿ, ಮನುಷ್ಯ ಮತ್ತು ಸಾಮಾಜಿಕ ಮಾಧ್ಯಮಗಳ ನಡುವಣ ಸಂಬಂಧವು ಇಲ್ಲಿನ ಚಿತ್ರಚೌಕಟ್ಟಿನೊಳಗೆ ಅಡಗಿವೆ. ಕೆಲ ಕೃತಿಗಳು ಮೂರ್ತವಾಗಿದ್ದರೆ ಮತ್ತೆ ಕೆಲವು ಅಮೂರ್ತವಾಗಿದ್ದು, ಅವುಗಳಲ್ಲಿ ಅಡಗಿರಬಹುದಾದ ರಹಸ್ಯವನ್ನರಿಯಲು ನೋಡುಗರನ್ನು ಕುತೂಹಲದ ಕೇಂದ್ರಬಿಂದುವಿಗೆ ಕರೆದೊಯ್ಯುತ್ತವೆ. ಶಾಯಿ, ಪೆನ್ಸಿಲ್, ಕಲರ್ ಪೆನ್ಸಿಲ್, ಅಲ್ಲಲ್ಲಿ ಆ್ಯಕ್ರಿಲಿಕ್ ಹೀಗೆ ಭಿನ್ನ ಮಾಧ್ಯಮದ ಬಳಕೆಯೂ ಕಲಾಸಕ್ತರ ಗಮನ ಸೆಳೆಯುತ್ತದೆ.

‘ಇಲ್ಲಿನ ಕಲಾಕೃತಿಗಳು ನೋಡುಗನನ್ನು ಕಟ್ಟಿ ಹಾಕುವುದಿಲ್ಲ. ನೀವು ಕಲಾಕೃತಿಯೊಳಗೆ ಎಲ್ಲಿ ಬೇಕಾದರೂ ಹಾರಿ, ಇಡೀ ವಿಶ್ವದ ರೂಪವನ್ನು ನೋಡಬಹುದು. ವಿಕೃತಿ ಸೌಂದರ್ಯ ಮೀಮಾಂಸೆಗೆ ಇಲ್ಲಿನ ಕಲಾಕೃತಿಗಳು ಉದಾಹರಣೆಗಳಾಗಬಲ್ಲವು. ಆದಿಮ ಪ್ರಜ್ಞೆಯೂ ಇಲ್ಲಿದೆ. ಪ್ರಭಾವದ ಆತಂಕವನ್ನು ಮೀರಿ ತಮ್ಮದೇ ಆದ ಅನನ್ಯತೆಯನ್ನು ಕೃಷ್ಣಸೆಟ್ಟಿ ಅವರು ಕಂಡುಕೊಂಡಿದ್ದಾರೆ’ ಎಂದು ವಿಶ್ಲೇಷಿಸುತ್ತಾರೆ ಹಿರಿಯ ಕಲಾ ವಿಮರ್ಶಕ ಕೆ.ವಿ. ಸುಬ್ರಹ್ಮಣ್ಯಂ.

ವರ್ಷಾಂತ್ಯ ಮತ್ತು ವರ್ಷಾರಂಭದ ನಡುವಣದ ದಿನಗಳಲ್ಲಿ ಪ್ರದರ್ಶನಗೊಂಡಿರುವ ಈ ಕಲಾಕೃತಿಗಳು ಮನುಷ್ಯನ ಕರಾಳತೆಯನ್ನು ಬಿಂಬಿಸುತ್ತಲೇ, ಅದರಿಂದ ಕಳಚಿಕೊಳ್ಳುವ ಸಕಾರಾತ್ಮಕ ಅಶಯವನ್ನೂ ಒಳಗೊಂಡಿವೆ. ಮೇರು ಕಲಾವಿದರೊಬ್ಬರ ಒಳಮನಸಿನ ತುಡಿತಗಳಲ್ಲಿ ಸಾಮಾನ್ಯ ಮನುಷ್ಯನ ಅಂತರಂಗವು ಇಲ್ಲಿ ಗೋಚರಿಸುತ್ತದೆ. ಮಹತ್ವಾಕಾಂಕ್ಷೆಯತ್ತ ಚಿತ್ತ ಮೇಳೈಸುವ ಮನುಷ್ಯ, ತನ್ನೊಳಗಿನ ಅಹಂ ಕಳೆದುಕೊಂಡು ವಿನಯವಂತಿಕೆಯನ್ನು ರೂಢಿಸಿಕೊಳ್ಳುವ ಅಗತ್ಯವನ್ನೂ ಇಲ್ಲಿನ ಕಲಾಕೃತಿಗಳು ಮನಗಾಣಿಸುತ್ತವೆ.

ಕಲಾ ಪ್ರದರ್ಶನವು ಬೆಂಗಳೂರಿನ ಬನಶಂಕರಿ 6ನೇ ಹಂತದ ಕಾಲೇಜ್ ಆಫ್ ಫೈನ್ ಆರ್ಟ್ಸ್‌ನ ಕಲಾ ಗ್ಯಾಲರಿಯೊಳಗೆ ಜ. 8ರವರೆಗೆ ನಡೆಯಲಿದೆ. ಮಾಹಿತಿಗೆ ಮೊ.: 98450 84557, 63649 17676.

ಕೃಷ್ಣಸೆಟ್ಟಿ ಅವರ ಕಲಾಕೃತಿ

# ...ಬರಲಿದೆ ಊಟ

10ನೇ ಪುಟದಿಂದ...

ದೂರದ ಪ್ರಯಾಣಕ್ಕೆ ಯೋಜಿಸುವುದಾದರೆ, ನಿಮಗಿಷ್ಟವಿಲ್ಲದಿದ್ದರೂ ಚಾರ್ಜಿಂಗ್‌ಗೆಂದು ಅಲ್ಲಲ್ಲಿ ನಿಲ್ಲಬೇಕು. ಇ.ವಿ. ಚಾರ್ಜ್ ಆಗುವವರೆಗೆ ಸುಮ್ಮನೆ ಕಾಲ ಕಳೆಯಬೇಕು. ಇಲ್ಲವೇ ಕಾಲ ಕಳೆಯಲು ಟೀ-ಕಾಫಿ ಹೀರಬೇಕು. ಇದ್ಯಾವುದೂ ನಿಮಗೆ ಇಷ್ಟವಿಲ್ಲದಿದ್ದರೂ ಮಾಡಲೇಬೇಕು.

ಇನ್ನು ಮನೆ ಹುಡುಕುವಾಗ ಇ.ವಿ. ನಿಲ್ಲಿಸಲು ಸರಿಯಾದ ಪಾರ್ಕಿಂಗ್ ವ್ಯವಸ್ಥೆ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಪೆಟ್ರೋಲ್-ಡೀಸೆಲ್ ವಾಹನಗಳಾದರೆ ಪಕ್ಕದ ಮನೆಯ ಮುಂದೆಯೂ ನಿಲ್ಲಿಸಿ ಬೆಳಿಗ್ಗೆ ತೆಗೆದುಕೊಂಡು ಹೋಗಬಹುದು. ಆದರೆ ನಿಮ್ಮ ಇ.ವಿ.ಯನ್ನು ಪಕ್ಕದ ಮನೆಯ ಮುಂದೆ ನಿಲ್ಲಿಸಿ, ಆ ಮನೆಯಿಂದಲೇ ಚಾರ್ಜು ಮಾಡಿಕೊಳ್ಳಲು ಸಾಧ್ಯವೇ? ಇದಕ್ಕಾಗಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಇದ್ದು, ಅಲ್ಲಿ ಚಾರ್ಜಿಂಗ್‌ಗೆ ವ್ಯವಸ್ಥೆ ಇದ್ದರಷ್ಟೇ ಮನೆಯಲ್ಲಿ ಬದುಕು ನಡೆಸಲು ಸಾಧ್ಯ. ಹೊಸದಾಗಿ ಮನೆ ಕಟ್ಟಿಸುವವರೂ ತಮ್ಮ ಇ.ವಿ.ಗೆ ಅಥವಾ ಬಾಡಿಗೆದಾರರ ಇ.ವಿ.ಗೆ ಇಂಥದ್ದೊಂದು ಗೂಡನ್ನೂ ನಿರ್ಮಿಸದೆ ಅನ್ಯ ವಿಧಿಯಿಲ್ಲ.

ಇವಿಗಳು ಹಿಂದಿನ ವರ್ಷದಲ್ಲೂ ಇದ್ದವು, ಹೊಸ ವರ್ಷದಲ್ಲೂ ಇರಲಿವೆ ಎಂದು ನೀವು ವಾದ ಮುಂದಿಡಬಹುದು. ಆದರೆ ಹೊಸ ವರ್ಷದಲ್ಲಿ, ಹೊಸ ಕಂಪನಿಗಳು ಮತ್ತಷ್ಟು ಹೊಸ ಇವಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ತುದಿಗಾಲಲ್ಲಿ ನಿಂತಿವೆ. ಆಕರ್ಷಕವಾದ, ಹೆಚ್ಚು ಶಕ್ತಿ, ಹೆಚ್ಚಿನ ವೇಗದ, ಹೆಚ್ಚು ದೂರ ಕ್ರಮಿಸುವ ಇ-ಸ್ಕೂಟರ್ ಮತ್ತು ಇ-ಬೈಕ್‌ಗಳು ರಸ್ತೆಗಿಳಿಯಲು ಸಿದ್ಧವಾಗಿವೆ. ಅವುಗಳನ್ನು ಖರೀದಿಸಲೇಬೇಕಾದ ಅನಿವಾರ್ಯತೆಯನ್ನು ಪೆಟ್ರೋಲ್ ಬೆಲೆ ಏರಿಕೆ ನಿರ್ಮಿಸುತ್ತಿದೆ. ಮಧ್ಯಪ್ರಾಚ್ಯದ ತೈಲದೊರೆಗಳು, ತಾವು ನೆಲದಾಳದಿಂದ ಮೇಲಕ್ಕೆತ್ತುವ ಕಚ್ಚಾತೈಲದ ಪ್ರಮಾಣವನ್ನು ಹೆಚ್ಚಿಸಲು ಉಹೂಂಗುಟ್ಟಿದ್ದಾರೆ. ಇದರಿಂದ ಈ ವರ್ಷದಲ್ಲಿ ತೈಲದ ಬೆಲೆ ಮತ್ತಷ್ಟು ಏರಿಕೆಯಾಗಲಿದೆ. ಪೆಟ್ರೋಲ್-ಡೀಸೆಲ್‌ಗೆ ಸುರಿಯಬೇಕಾದ ಹಣವನ್ನು ಪ್ರತಿ ತಿಂಗಳು ಇಎಂಐ ಕಟ್ಟುತ್ತಾ, ಪ್ರತಿ ಕಿ.ಮೀ.ಗೆ ಪೈಸೆಗಳ ವೆಚ್ಚದಲ್ಲಿ ಓಡಾಡಲು ಇ.ವಿ.ಯನ್ನೇ ನೆಚ್ಚಿಕೊಳ್ಳಬೇಕಾದ ಸ್ಥಿತಿ ಎದುರಾಗಲಿದೆ. ನಮ್ಮ ವಾಹನ ಖರೀದಿಯನ್ನೂ ಇ.ವಿ. ಪ್ರಭಾವಿಸಲಿದೆ. ಈಗ ಹೇಳಿ, ಇ.ವಿ.ಗಳು ನಮ್ಮ ದೈನಂದಿನ ಚಟುವಟಿಕೆಗಳನ್ನು ನಿಯಂತ್ರಿಸುವುದಿಲ್ಲವೇ?

ಹೊಸ ವರ್ಷದ ಹೊಸ ಪ್ರಭಾವಗಳ ಸರಪಳಿ ಇಲ್ಲಿಗೇ ಮುಗಿಯುವುದಿಲ್ಲ. ಸಿನಿಮಾವೊಂದನ್ನು ಅರೆಕ್ಷಣದಲ್ಲಿಯೇ ಡೌನ್‌ಲೋಡ್ ಮಾಡುವಷ್ಟು ವೇಗದ ಇಂಟರ್‌ನೆಟ್ ಸಂಪರ್ಕ ನೀಡುವ 5ಜಿ ಈ ವರ್ಷ ನಮ್ಮ ಮೊಬೈಲ್‌ಗಳಿಗೆ ಬರಲಿದೆ. ಮನೆವಾಳ್ತೆಯ ಹಲವು ಕೆಲಸಗಳನ್ನು ತಾವೇ ಮಾಡಿಕೊಳ್ಳುವ ಬಾಟ್-ರೊಬಾಟ್‌ಗಳು ಕೈಗೆಟುವ ಬೆಲೆಯಲ್ಲಿ ನಮ್ಮ ಮನೆ ತುಂಬಿಕೊಳ್ಳಲಿವೆ. ಚಾಲನೆ ವೇಳೆ ನಾವು ಎಚ್ಚರತಪ್ಪಿದರೂ ತನ್ನಿಂದ ತಾನೇ ಬ್ರೇಕ್ ಹಾಕಿಕೊಳ್ಳುವ ಬುದ್ಧಿಯಿರುವ ಮತ್ತಷ್ಟು ಕಾರುಗಳು ನಮ್ಮ ಮನೆಬಾಗಿಲಿಗೆ ಬರಲಿವೆ. ಹೀಗೆ ಈ ಹೊಸ ವರ್ಷದಲ್ಲಿ, ಹೊಸದನ್ನು ಕಲಿಸುತ್ತಾ, ಬದುಕು ಬದಲಿಸಲು ಹಲವು ಸಂಗತಿಗಳು ನಮಗೆ ಜತೆಯಾಗಲಿವೆ.

# ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

## ಡಶ್ಮ ಚಕ್ಕು ಕೀಶ್ರಷ್ಟು ಕಥೆಯ

## ನರಿ ಮತ್ತು ಕಾಗೆ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಂದು ಊರಿನಲ್ಲಿ ಒಬ್ಬ ಅಜ್ಜಿ ವಡೆ ತಯಾರಿಸಿ ಮಾರುತ್ತಿದ್ದರು. ಮರದಲ್ಲಿದ್ದ ಕಾಗೆ ವಡೆ ನೋಡಿ ಆಸೆಪಡುತ್ತಿತ್ತು

ಕಾಗೆಯು ಒಮ್ಮೆ ವಡೆಯನ್ನು ಕದ್ದು ಒಯ್ಯಲು ತೀರ್ಮಾನಿಸಿ ಹೊಂಚು ಹಾಕಿ ಕಾದು ಕುಳಿತಿತು

ಒಂದು ದಿನ ಕಾಗೆ ಅಜ್ಜಿಯ ಬುಟ್ಟಿಯಿಂದ ವಡೆಯನ್ನು ಎಗರಿಸಿಕೊಂಡು ದೂರ ಹಾರಿ ಹೋಯಿತು

ಹಾಗೆ ಹಾರಿ ಹೋದ ಕಾಗೆಯು ಊರ ಹೊರಗಿನ ಕಾಡಿನ ಪಕ್ಕದ ಮರದಲ್ಲಿ ಕುಳಿತು, ವಡೆ ತಿನ್ನಲು ಅಣಿಯಾಯಿತು



ಕಾಗೆಯ ಬಾಯಲ್ಲಿದ್ದ ವಡೆ ಪಡೆಯಲು ನರಿ ಹೊಂಚು ಹಾಕಿ, ‘ಕಾಗೆಯೇ ನೀನು ಸುಂದರ, ನಿನ್ನ ಧ್ವನಿ ಮಧುರ’ ಎಂದು ಹೊಗಳಿತು

ಹೊಗಳಿಕೆಗೆ ಮರುಳಾದ ಕಾಗೆಯು ಹಾಡಲೆಂದು ಬಾಯ್ತೆರೆಯಿತು. ಆಗ ವಡೆ ಕೆಳಗೆ ಬಿತ್ತು. ನರಿ ಅದನ್ನು ಎತ್ತಿಕೊಂಡು ಓಡಿ ಹೋಯಿತು

## ಶಬ್ದಗಳೊಡನೆ ಸರಸ

ಇಲ್ಲಿ ಕೊಟ್ಟಿರುವ ನೀಳ ಸಾಲಿನ ಪದಗಳಿಗೆ ಪಟ್ಟಿಯಿಂದ ಎರಡಕ್ಷರದ ಪದಗಳನ್ನು ಆಯ್ದು ಪ್ರತಿ ಅಕ್ಷರಗಳಿಗೆ ತುಂಬುತ್ತ ಹೋದರೆ ಮೂರಕ್ಷರದ 10 ಪದಗಳಾಗುತ್ತವೆ. ಪ್ರಯತ್ನಿಸಿ

| | | | | | |
|---|---|---|---|---|---|
| ನ | | | ಕ | | |
| ವ | | | ನ | | |
| ಸಾ | | | ಕ | | |
| ಗ | | | ದಾ | | |
| ರ | | | ಸ | | |

1. ಮಣ 2. ಮನ 3. ಮಾನ 4. ವನ
5. ರತಿ 6. ಕೀಲ 7. ನಮ್ಮ 8. ನಗೆ
9. ದರ 10. ಮರು

ಉದಾ: ನ-ಮನ = ನಮನ

## ಟ್ವೆಂಟಿ – 20 ಮ್ಯಾಚ್

**A. ಪದಗಳಿಗೂ ಅರ್ಥಗಳಿಗೂ ಹೊಂದಿಸಿ**

| | | | |
|---|---|---|---|
| 1. | ಆಳ | A. | ನಳಿಕೆ |
| 2. | ನೀಳ | B. | ಕುಂಟೆ |
| 3. | ದಳ | C. | ಸರೋವರ |
| 4. | ಕೊಳ | D. | ಲೆತ್ತ |
| 5. | ಕೋಳ | E. | ಎರಡು ಗೇಣು |
| 6. | ದಾಳ | F. | ಬೇಡಿ |
| 7. | ಕುಳ | G. | ಗಾಢತೆ |
| 8. | ಮೊಳ | H. | ಉದ್ದ |
| 9. | ತಾಳ | I. | ಪಕಳೆ |
| 10. | ನಾಳ | J. | ಕಂಚಿನ ವೃತ್ತಾಕಾರದ ಜೋಡು ವಾದ್ಯ |

**B. ಆಡು ಮಾತಿನ ಜೋಡಿ ಪದಗಳನ್ನು ಹೊಂದಿಸಿ**

| | | | |
|---|---|---|---|
| 1. | ಹಿಡಿ | A. | ಮಾಲೆ |
| 2. | ವಜ್ರ | B. | ವೇಗ |
| 3. | ಜಪ | C. | ಕಡಲೆ |
| 4. | ಒಂಟಿ | D. | ದೀಪ |
| 5. | ಹೊಟ್ಟೆ | E. | ಶಾಪ |
| 6. | ಕಬ್ಬಿಣ | F. | ಧಾನ್ಯ |
| 7. | ನಂದಾ | G. | ಕವಚ |
| 8. | ಮೂಢ | H. | ಕಿಚ್ಚು |
| 9. | ಶರ | I. | ಸಲಗ |
| 10. | ತೃಣ | J. | ನಂಬಿಕೆ |

## ಪಂಚವಾರ್ಷಿಕ ಕ್ಯಾಲೆಂಡರ್ ಯೋಜನೆ

| ದಿನಾಂಕ ಹಾಗೂ ತಿಂಗಳು | | | | | ಜನವರಿ ಅಕ್ಟೋಬರ್ | ಏಪ್ರಿಲ್ ಜುಲೈ + ಜನವರಿ | ಸೆಪ್ಟೆಂಬರ್ ಡಿಸೆಂಬರ್ | ಜೂನ್ | ಫೆಬ್ರುವರಿ ಮಾರ್ಚ್ ನವೆಂಬರ್ | ಆಗಸ್ಟ್ + ಫೆಬ್ರುವರಿ | ಮೇ | ವಾರಗಳು |
|---|---|---|---|---|---|---|---|---|---|---|---|---|
| 1 | 8 | 15 | 22 | 29 | ಪ್ರ | ಜಾ | ವಾ | ಣಿ | ದೈ | ನಿ | ಕ | ರವಿವಾರ |
| 2 | 9 | 16 | 23 | 30 | ಕ | ಪ್ರ | ಜಾ | ವಾ | ಣಿ | ದೈ | ನಿ | ಸೋಮವಾರ |
| 3 | 10 | 17 | 24 | 31 | ನಿ | ಕ | ಪ್ರ | ಜಾ | ವಾ | ಣಿ | ದೈ | ಮಂಗಳವಾರ |
| 4 | 11 | 18 | 25 | - | ದೈ | ನಿ | ಕ | ಪ್ರ | ಜಾ | ವಾ | ಣಿ | ಬುಧವಾರ |
| 5 | 12 | 19 | 26 | - | ಣಿ | ದೈ | ನಿ | ಕ | ಪ್ರ | ಜಾ | ವಾ | ಗುರುವಾರ |
| 6 | 13 | 20 | 27 | - | ವಾ | ಣಿ | ದೈ | ನಿ | ಕ | ಪ್ರ | ಜಾ | ಶುಕ್ರವಾರ |
| 7 | 14 | 21 | 28 | - | ಜಾ | ವಾ | ಣಿ | ದೈ | ನಿ | ಕ | ಪ್ರ | ಶನಿವಾರ |
| | | | | | 2023 | - | +2024 | 2025 | - | 2021 | 2022 | - |

### ಕ್ಯಾಲೆಂಡರ್ ನೋಡುವ ವಿಧಾನ

ಮೊದಲು ನೀವು ತಿಳಿಯಬೇಕಾದ ತಿಂಗಳು(ಮೇಲಿಂದ ಕೆಳಕ್ಕೆ) ಹಾಗೂ ದಿನಾಂಕ (ಎಡದಿಂದ ಬಲಕ್ಕೆ) ಸಂಧಿಸುವ ಸ್ಥಳದಲ್ಲಿ ಯಾವ ಅಕ್ಷರವಿದೆ ಪತ್ತೆ ಹಚ್ಚಿರಿ. ಮುಂದೆ ಅದೇ ಅಕ್ಷರವು ನಿಮಗೆ ಬೇಕಾದ ಇಸ್ವಿಯ ಕಂಬಸಾಲಿನಲ್ಲಿ ಮೇಲೆ ಎಲ್ಲಿ ಇದೆ ಪತ್ತೆ ಹಚ್ಚಿ. ಆ ಅಕ್ಷರದ ಸಾಲಿನಲ್ಲಿರುವ ಬಲಗಡೆ ಯಾವ ವಾರವಿದೆ ನೋಡಿ. ಅದೇ ನಿಮಗೆ ಬೇಕಾಗಿರುವ ವಾರವಾಗಿರುತ್ತದೆ.

**ಉದಾ: 2022 ಆಗಸ್ಟ್ 15 ಯಾವ ವಾರ?**

ಆಗಸ್ಟ್ ತಿಂಗಳು ಹಾಗೂ 15ನೇ ದಿನಾಂಕ ಎರಡೂ ಸಂಧಿಸುವಲ್ಲಿ ನಿ ಅಕ್ಷರವಿದೆ. ಮುಂದೆ 2022ರ ಕಂಬ ಸಾಲಿನ ಮೇಲೆ ನಿ ಅಕ್ಷರ ಪತ್ತೆಹಚ್ಚಿದರೆ ಅದರ ಬಲಗಡೆಯಲ್ಲಿ ಸೋಮವಾರ ಸಿಗುತ್ತದೆ.

**2022ರ ಆಗಸ್ಟ್ 15-ಸೋಮವಾರ**

**ವಿಶೇಷ ಸೂಚನೆ:** + ಗುರುತಿರುವ ವರ್ಷವನ್ನು ಅಧಿಕ ವರ್ಷವೆಂದು ತಿಳಿಯತಕ್ಕದ್ದು. ಅಲ್ಲದೇ ಆ ಲೀಪ್ ವರ್ಷದಲ್ಲಿ (2024) + ಗುರುತಿನ ಜನವರಿ ಹಾಗೂ ಫೆಬ್ರುವರಿಗಳನ್ನು ಉಪಯೋಗಿಸತಕ್ಕದ್ದು

## ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಬರಿಕಾದ ಶ್ರಮ = ___________
2. ಕವಿಧ್ವಂಸ = ___________
3. ಮರಿನಾದ = ___________
4. ಸಂಗೀ ಮಗ ಸಂತ = ___________

## ಪದ ಹಿಗ್ಗು

ಕೆಳಗೆ ಕೊಟ್ಟಿರುವ ಚೌಕಗಳಲ್ಲಿರುವ ಮಧ್ಯದ ಅಕ್ಷರಕ್ಕೆ ಮುಂದಿರುವ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1.ಅಣಿ 2.ಮರು
3.ಕೊಳ 4.ಬೇರು
5.ಬರಿ 6.ಕಾಳ
7.ಇಲಿ 8.ಹುಳ್ಳಿ

| | | | | | | | |
|---|---|---|---|---|---|---|---|
| 1. | | ದ್ದೂ | | 5. | | ಪ್ಪ | |
| 2. | | ರ್ಕ | | 6. | | ಳ್ಳಾ | |
| 3. | | ಥ | | 7. | | ಬ್ಬ | |
| 4. | | ಲೂ | | 8. | | ಟ | |

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಕಳೆದ ಸಂಚಿಕೆಯ ಸರಿ ಉತ್ತರಗಳು

**ಪದಹಿಗ್ಗು:**
1.ಇಬ್ಬರು 2. ಎಪ್ಪತ್ತು 3. ಹರಿತ್ತು 4. ಆರೇಳು
5. ನೂರಾರು 6. ಮೂವರು 7. ಇಪ್ಪತ್ತು 8. ನಾಲ್ವರು

**ಅದಲು ಬದಲು ಕಂಚಿ ಕದಲು**
1. ಅತಿ ಸಣ್ಣ 2. ಅರಳಿದ ಹೂ
3. ಚದರ ಅಡಿ 4. ತುಳಸಿದಾಸ

**ಟ್ವೆಂಟಿ-20 ಮ್ಯಾಚ್**

ಅ ವಿಭಾಗ
1-D 2-F 3-C 4-J 5-B
6-E 7-I 8-A 9-G 10-H

ಬ ವಿಭಾಗ
1-B 2-D 3-C 4-A 5-I
6-D 7-H 8-G 9-J 10-F

## ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಮೈತ್ರಿ ಮಾದಗುಂಡಿ
ಬೇಲೂರು (ಹಾಸನ)

ಸಿದ್ಧಾರ್ಥ ಬಟಕುರ್ಕಿ
ವಿಜಯಪುರ

ವಿನುತ್ ವಾರಿಕಲ್ಲಮಠ
ಬಾಗಲಕೋಟೆ

## ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:
majakoora@prajavani.co.in

ಪ್ರೊ ಕಬಡ್ಡಿ ಲೀಗ್: ಟೈ ಪಂದ್ಯಗಳಲ್ಲಿ ಯು ಮುಂಬಾ–ಯು.ಪಿ ಯೋಧಾ, ಡೆಲ್ಲಿ– ತಲೈವಾಸ್

# ಬುಲ್ಸ್–ಟೈಟನ್ಸ್ ಸಮಬಲದ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು ಬುಲ್ಸ್ ತಂಡದ ಪವನ್ ಶೆರಾವತ್ ಎದುರಾಳಿ ಪಾಳಯದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು

**ಬೆಂಗಳೂರು:** ಜಿದ್ದಾಜಿದ್ದಿಯ ಹೋರಾಟದಲ್ಲಿ ಬೆಂಗಳೂರು ಬುಲ್ಸ್ ಮತ್ತು ತೆಲುಗು ಟೈಟನ್ಸ್ ತಂಡಗಳು ಸಮಬಲದ ಹೋರಾಟ ಪ್ರದರ್ಶಿಸಿದವು. ಚಂದ್ರನ್ ರಂಜಿತ್ ಮತ್ತು ಪವನ್ ಶೆರಾವತ್ ಅವರು ಬುಲ್ಸ್ ಪರವೂ ಅಂಕಿತ್ ಬೆನಿವಾಲ್ ಮತ್ತು ಅದರ್ಶ್ ಟೈಟನ್ಸ್ ಪರವೂ ಮಿಂಚಿದರು. ಇವರ ಅಮೋಘ ಆಟದ ಬಲದಿಂದ ಪಂದ್ಯ 34–34ರಲ್ಲಿ ಟೈ ಆಯಿತು.

ನಗರದ ವೈಟ್‌ಫೀಲ್ಡ್‌ನಲ್ಲಿರುವ ಹೋಟೆಲ್ ಶೆರಟಾನ್ ಗ್ರ್ಯಾಂಡ್‌ನಲ್ಲಿ ಶನಿವಾರ ರಾತ್ರಿ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯದ ಮೊದಲಾರ್ಧದಲ್ಲಿ ಸ್ವಲ್ಪ ಹಿನ್ನಡೆ ಅನುಭವಿಸಿದ್ದ ಟೈಟನ್ಸ್ (12–14) ದ್ವಿತೀಯಾರ್ಧದಲ್ಲಿ ದಿಟ್ಟ ಆಟದ ಮೂಲಕ ಬುಲ್ಸ್‌ಗೆ ಆಘಾತ ನೀಡಿತು.

ದ್ವಿತೀಯಾರ್ಧದ ಕೊನೆಯ ಘಟ್ಟದಲ್ಲಿ ಬೆಂಗಳೂರು ಕೂಡ ತಿರುಗೇಟು ನೀಡಿತು. ಹೀಗಾಗಿ ಪಂದ್ಯ ರೋಚಕವಾಯಿತು. ಕೊನೆಯ ಐದು ನಿಮಿಷ ಬಾಕಿ ಇರುವಾಗ ಟೈಟನ್ಸ್ 27–25ರ ಮುನ್ನಡೆ ಗಳಿಸಿತು. ತಿರುಗೇಟು ನೀಡಿದ ಬೆಂಗಳೂರು ಕೊನೆಯಲ್ಲಿ 30–28ರ ಮುನ್ನಡೆ ಗಳಿಸುವಲ್ಲಿ ಯಶಸ್ವಿಯಾಯಿತು. ಪಟ್ಟು ಬಿಡದ ಟೈಟನ್ಸ್ ಪಾಯಿಂಟ್‌ಗಳನ್ನು ಕಲೆ ಹಾಕಿತು. ಆದರೆ ಸಮಬಲ ಸಾಧಿಸುವಲ್ಲಿ ಬುಲ್ಸ್ ಯಶಸ್ವಿಯಾಯಿತು.

ಚಂದ್ರನ್ ರಂಜಿತ್ 9 ಮತ್ತು ಪವನ್ ಶೆರಾವತ್ 8 ಪಾಯಿಂಟ್ ಗಳಿಸಿದರೆ ಟೈಟನ್ಸ್ ಪರ ಅಂಕಿತ್ ಬೆನಿವಾಲ್ ಸೂಪರ್ 10 ಸಾಧನೆ ಮಾಡಿದರು. ಟ್ಯಾಕ್ಲಿಂಗ್‌ನಲ್ಲಿ ಆದರ್ಶ್ 5 ಪಾಯಿಂಟ್ ಕಲೆ ಹಾಕಿದರು.

**ಮುಂಬಾ–ಯೋಧಾ ಪಂದ್ಯ ಟೈ:** ಅಂತಿಮ ನಿಮಿಷದಲ್ಲಿ ನಾಯಕ ಮಾಡಿದ ತಪ್ಪಿನಿಂದಾಗಿ ಯು ಮುಂಬಾ ಟೈಗೆ ಸಮಾಧಾನಪಟ್ಟುಕೊಳ್ಳಬೇಕಾಯಿತು. ಡಿಫೆಂಡರ್‌ಗಳು ಮಿಂಚಿದ ಯು ಮುಂಬಾ ಮತ್ತು ಯು.ಪಿ.ಯೋಧಾ ತಂಡಗಳ ನಡುವಿನ ಪಂದ್ಯ 28–28ರ ಟೈ ಆಯಿತು. ಪಂದ್ಯ ಮುಕ್ತಾಯಕ್ಕೆ ಒಂದು ನಿಮಿಷ ಇದ್ದಾಗ ಮುಂಬಾ ಒಂದು ಪಾಯಿಂಟ್‌ನ ಮುನ್ನಡೆಯಲ್ಲಿತ್ತು. ಆದರೆ ಫಜಲ್ ಅತ್ರಾಚಲಿ ಮಾಡಿದ ಪ್ರಮಾದವು ಎದುರಾಳಿ ತಂಡಕ್ಕೆ ಸಮಬಲ ಸಾಧಿಸಲು ಅವಕಾಶ ಒದಗಿಸಿತು.

ಯು.ಪಿ.ಯೋಧಾ ತಂಡದ ಸುಮಿತ್ (6 ಟ್ಯಾಕಲ್ ಪಾಯಿಂಟ್ಸ್) ಎದುರಾಳಿ ತಂಡದ ಪ್ರಮುಖ ರೇಡರ್‌ಗಳಾದ ಪ್ರದೀಪ್ ನರ್ವಾಲ್ ಮತ್ತು ಅಭಿಷೇಕ್ ಸಿಂಗ್ ಅವರನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದರು. ಮೊದಲಾರ್ಧದ-ಲ್ಲಿ ಯು ಮುಂಬಾ 3 ಪಾಯಿಂಟ್‌ಗಳ (16-13) ಮುನ್ನಡೆ ಗಳಿಸಿತ್ತು. ನಂತರ ಪಂದ್ಯ 19–19ರಲ್ಲಿ ಸಮ ಆಯಿತು.

ದಿನದ ಮೂರನೇ ಪಂದ್ಯದಲ್ಲಿ ದಬಂಗ್ ಡೆಲ್ಲಿ ತಂಡವೂ 30–30ರಿಂದ ತಮಿಳ್ ತಲೈವಾಸ್ ತಂಡದೊಂದಿಗೆ ಟೈ ಸಾಧಿಸಿತು.

**ಪಾಯಿಂಟ್ಸ್ ಪಟ್ಟಿ**

| ತಂಡ | ಪಂದ್ಯ | ಜಯ | ಸೋಲು | ಟೈ | ಪಾಯಿಂಟ್ಸ್ |
|---|---|---|---|---|---|
| ದಬಂಗ್ ಡೆಲ್ಲಿ | 5 | 3 | - | 2 | 21 |
| ಬೆಂಗಳೂರು ಬುಲ್ಸ್ | 5 | 3 | 1 | 1 | 18 |
| ಯು ಮುಂಬಾ | 5 | 2 | 1 | 2 | 17 |
| ಪಟ್ನಾ ಪೈರೇಟ್ಸ್ | 4 | 3 | 1 | - | 16 |
| ತಮಿಳ್ ತಲೈವಾಸ್ | 5 | 1 | 1 | 3 | 14 |
| ಯುಪಿ ಯೋಧಾ | 5 | 1 | 2 | 2 | 13 |
| ಗುಜರಾತ್ ಜೈಂಟ್ಸ್ | 4 | 1 | 1 | 2 | 12 |
| ಜೈಪುರ್ ಪಿಂಕ್ ಪ್ಯಾಂಥರ್ಸ್ | 4 | 2 | 2 | - | 11 |
| ಬೆಂಗಾಲ್ ವಾರಿಯರ್ಸ್ | 5 | 2 | 3 | - | 11 |
| ತೆಲುಗು ಟೈಟನ್ಸ್ | 4 | - | 2 | 2 | 8 |
| ಹರಿಯಾಣ ಸ್ಟೀಲರ್ಸ್ | 4 | 1 | 3 | - | 7 |
| ಪುಣೇರಿ ಪಲ್ಟನ್ | 4 | 1 | 3 | - | 5 |

(ಶನಿವಾರದ ಪಂದ್ಯಗಳ ಅಂತ್ಯಕ್ಕೆ)

**ಇಂದಿನ ಪಂದ್ಯ (ರಾತ್ರಿ)**
ಗುಜರಾತ್ ಜೈಂಟ್ಸ್ Vs ಹರಿಯಾಣ ಸ್ಟೀಲರ್ಸ್ 7.30
ಪುಣೇರಿ ಪಲ್ಟನ್ – ಬೆಂಗಳೂರು ಬುಲ್ಸ್ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

# ‘ಕೊಹ್ಲಿಗೆ ಟಿ20 ನಾಯಕತ್ವ ತೊರೆಯದಿರಲು ಹೇಳಲಾಗಿತ್ತು’

## ರಾಷ್ಟ್ರೀಯ ಆಯ್ಕೆ ಸಮಿತಿ ಮುಖ್ಯಸ್ಥ ಚೇತನ್ ಶರ್ಮಾ



ವಿರಾಟ್ ಕೊಹ್ಲಿ

ಚೇತನ್ ಶರ್ಮಾ

**ನವದೆಹಲಿ(ಪಿಟಿಐ):** ಭಾರತ ಟಿ20 ಕ್ರಿಕೆಟ್ ತಂಡದ ನಾಯಕತ್ವವನ್ನು ತೊರೆಯುವ ನಿರ್ಧಾರವನ್ನು ಮರುಪರಿ-ಶೀಲಿಸಬೇಕು. ಇದರಿಂದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡದ ಮೇಲೆ ಪರಿಣಾಮವಾಗುತ್ತದೆ ಎಂದು ವಿರಾಟ್ ಕೊಹ್ಲಿಗೆ ಹೇಳಿದ್ದೆವು ಎಂದು ರಾಷ್ಟ್ರೀಯ ಆಯ್ಕೆ ಸಮಿತಿ ಮುಖ್ಯಸ್ಥ ಚೇತನ್ ಶರ್ಮಾ ಹೇಳಿದರು.

ಭಾರತ ತಂಡವು ಹೋದ ತಿಂಗಳು ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳುವ ಮುನ್ನ ಪತ್ರಿಕಾಗೋಷ್ಠಿಯಲ್ಲಿ ವಿರಾಟ್ ನೀಡಿದ್ದ ಹೇಳಿಕೆಗೆ ಶರ್ಮಾ ಅವರ ಮಾತುಗಳು ವ್ಯತಿರಿಕ್ತವಾಗಿವೆ.

ಟಿ20 ತಂಡದ ನಾಯಕತ್ವ ತೊರೆಯದಂತೆ ತಮಗೆ ಯಾರೂ ಕೇಳಿರಲಿಲ್ಲ. ಏಕದಿನ ತಂಡದ ನಾಯಕತ್ವದಿಂದ ಕೆಳಗಿಳಿಸುವ 90 ನಿಮಿಷಗಳ ಮುನ್ನವಷ್ಟೇ ತಿಳಿಸಿದ್ದರು ಎಂದು ವಿರಾಟ್ ಹೇಳಿದ್ದು ಚರ್ಚೆಗೆ ಗ್ರಾಸವಾಗಿತ್ತು.

‘ಟಿ20 ವಿಶ್ವಕಪ್ ಸಮೀಪಿಸುತ್ತಿದ್ದ ಸಂದರ್ಭದ ಸಭೆಯಲ್ಲಿ ಈ ವಿಷಯವನ್ನು ಕೊಹ್ಲಿ ಹೇಳಿದಾಗ ಎಲ್ಲರಿಗೂ ಅಚ್ಚರಿ, ಆಘಾತ ವಾಗಿತ್ತು. ಈ ಕುರಿತು ಆಳವಾಗಿ ಯೋಚಿಸಿ. ವಿಶ್ವಕಪ್ ಮುಗಿದ ನಂತರ ಚರ್ಚಿಸೋಣ ಎಂದು ಹೇಳಿದ್ದೆವು. ಬಿಸಿಸಿಐ ಪದಾಧಿಕಾರಿಗಳೂ ಇದೇ ಮಾತುಗಳನ್ನು ಹೇಳಿದ್ದರು’ ಎಂದರು.

‘ಭಾರತದ ಕ್ರಿಕೆಟ್ ಹಿತದೃಷ್ಟಿಯಿಂದ ನಾಯಕತ್ವ ತೊರೆಯುವ ನಿರ್ಧಾರದಿಂದ ಹಿಂದೆ ಸರಿಯಬೇಕೆಂದು ವಿರಾಟ್‌ಗೆ ಹೇಳಿದೆವು. ಆದರೂ ಅವರು ನಾಯಕತ್ವ ತೊರೆಯುವ ದೃಢ ನಿಲುವು ತೆಗೆ-ದುಕೊಂಡಿದ್ದರು. ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಸೇರಿದಂತೆ ಉಳಿದ ಪದಾಧಿಕಾರಿಗಳು ಸಭೆಯಲ್ಲಿದ್ದರು. ಪ್ರತಿಯೊಬ್ಬರೂ ಕೊಹ್ಲಿಗೆ ಇದೇ ಮಾತು ಹೇಳಿದ್ದರು’ ಎಂದು ಶರ್ಮಾ ತಿಳಿಸಿದರು.

‘ಟಿ20 ವಿಶ್ವಕಪ್ ಸನಿಹದಲ್ಲಿ-ದ್ದ ಕಾರಣ ವಿಷಯವನ್ನು ಗೋಜಲು ಮಾಡದಿರಲು ನಿರ್ಧರಿಸಿದ್ದೆವು. ವಿರಾಟ್ ನಿರ್ಧಾರವನ್ನು ಗೌರವಿಸಿದ್ದೆವು. ಅವರು ತಂಡದ ಆಧಾರಸ್ತಂಭ’ ಎಂದರು.

‘ಟಿ20 ತಂಡದ ನಾಯಕತ್ವ ತೊರೆಯಲು ಅವರಿಗೆ ಯಾರೂ ಹೇಳಿರಲಿಲ್ಲ. ಅದು ಅವರ ಸ್ವಯಂ ನಿರ್ಧಾರವಾಗಿದೆ. ಆದರೆ ಏಕದಿನ ಕ್ರಿಕೆಟ್ ತಂಡದ ನಾಯಕತ್ವ ಕುರಿತು ಆಯ್ಕೆ ಸಮಿತಿಯು ನಿರ್ಧರಿಸಿತು. ಅದೊಂದು ಸಹಜವಾದ ಕ್ರಿಯೆ; ಬಿಳಿಚೆಂಡಿನ ಕ್ರಿಕೆಟ್ ತಂಡಗಳಿಗೆ ಒಬ್ಬರದ್ದೇ ನಾಯಕತ್ವ ಇದ್ದರೆ ಒಳಿತು ಎಂಬ ಕಾರಣಕ್ಕೆ ಕೈಗೊಂಡಿದ್ದು’ ಎಂದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

## ವಾಲಿಬಾಲ್: ಕರ್ನಾಟಕಕ್ಕೆ ಬೆಳ್ಳಿ

**ಹುಬ್ಬಳ್ಳಿ:** ಕರ್ನಾಟಕ ಬಾಲಕರ ತಂಡ, ಪಶ್ಚಿಮ ಬಂಗಾಳದ ಬರ್ದ್ವಾನ್ ಜಿಲ್ಲೆಯಲ್ಲಿ ನಡೆದ 47ನೇ ರಾಷ್ಟ್ರೀಯ ಜೂನಿಯರ್ ವಾಲಿಬಾಲ್ ಚಾಂಪಿಯ-ನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದೆ.

ಕರ್ನಾಟಕ ತಂಡ ಲೀಗ್ ಹಂತದಲ್ಲಿ ಮಣಿಪುರ, ಆಂಧ್ರ, ಲಡಾಕ್, ಉತ್ತರ ಪ್ರದೇಶ, ಭಾರತ ಕ್ರೀಡಾ ಪ್ರಾಧಿಕಾರ ಮತ್ತು ಮಧ್ಯಪ್ರದೇಶ ಎದುರು ಗೆದ್ದು ಕ್ವಾರ್ಟರ್ ಫೈನಲ್ ಪ್ರವೇಶಿಸಿತ್ತು.

ಎಂಟರ ಘಟ್ಟದಲ್ಲಿ ಮಿಜೋರಾಂ ಮೇಲೂ, ಸೆಮಿಫೈನಲ್‌ನಲ್ಲಿ ರಾಜಸ್ಥಾನ ವಿರುದ್ಧವೂ ಜಯಿಸಿ ಪ್ರಶಸ್ತಿ ಸುತ್ತು ತಲುಪಿತ್ತು. ಫೈನಲ್‌ನಲ್ಲಿ ಕರ್ನಾಟಕ 1–4 ಸೆಟ್‌ಗಳಿಂದ ತಮಿಳುನಾಡು ಎದುರು ಪರಾಭವಗೊಂಡು ಬೆಳ್ಳಿ ಪಡೆದುಕೊಂಡಿತು.

ರಾಜ್ಯ ತಂಡಕ್ಕೆ ಟಿ.ಬಿ. ರವೀಂದ್ರ ತರಬೇತುದಾರ, ನವೀನ್ ಶೆಟ್ಟಿ (ಕರ್ನಾಟಕ ರಾಜ್ಯ ಪೊಲೀಸ್) ಸಹಾಯಕ ತರಬೇತುದಾರರಾಗಿದ್ದರು. ನಾಗರಾಜ ಟ್ರೈನರ್ ಆಗಿದ್ದರು.

# ನ್ಯೂಜಿಲೆಂಡ್‌ಗೆ ಕಾನ್ವೆ ಶತಕದ ಬಲ

## ಬಾಂಗ್ಲಾದೇಶದ ಶರೀಫುಲ್‌ಗೆ 2 ವಿಕೆಟ್; ಯಂಗ್, ಟೇಲರ್ ತಾಳ್ಮೆಯ ಬ್ಯಾಟಿಂಗ್

**ಮೌಂಟ್ ಮಾಂಗನೂಯಿ, ನ್ಯೂಜಿಲೆಂಡ್ (ಎಎಫ್‌ಪಿ):** ನಾಲ್ಕನೇ ಓವರ್‌ನಲ್ಲೇ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ನ್ಯೂಜಿಲೆಂಡ್ ಇನಿಂಗ್ಸ್‌ಗೆ ಡೇವೊನ್ ಕಾನ್ವೆ ತಾಳ್ಮೆಯ ಆಟದ ಮೂಲಕ ಬಲ ತುಂಬಿದರು.

ಕಾನ್ವೆ (122; 227 ಎಸೆತ, 16 ಬೌಂಡರಿ, 1 ಸಿಕ್ಸರ್) ಅವರ ತಾಳ್ಮೆಯ ಶತಕದ ಬಲದಿಂದ ಆತಿಥೇಯ ತಂಡ ಬಾಂಗ್ಲಾದೇಶ ಎದುರಿನ ಮೊದಲ ಟೆಸ್ಟ್ ಪಂದ್ಯದ ಮೊದಲ ದಿನ 5 ವಿಕೆಟ್‌ಗಳಿಗೆ 258 ರನ್ ಗಳಿಸಿ ಸುಸ್ಥಿತಿಯಲ್ಲಿದೆ.

ಟಾಸ್ ಗೆದ್ದ ಬಾಂಗ್ಲಾದೇಶ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಂಡದ ಮೊತ್ತ ಒಂದು ರನ್ ಆಗಿದ್ದಾಗ ನ್ಯೂಜಿಲೆಂಡ್ ಆರಂಭಿಕ ಬ್ಯಾಟರ್ ಟಾಮ್ ಲಥಾಮ್ ಅವರ ವಿಕೆಟ್ ಕಳೆದುಕೊಂಡಿತು. ವಿಲ್ ಯಂಗ್ ಅವರ ಜೊತೆಗೂಡಿದ ಡೇವೊನ್ ಕಾನ್ವೆ ಇನಿಂಗ್ಸ್ ಕಟ್ಟಿದರು.

ಇದು ಅವರ ನಾಲ್ಕನೇ ಟೆಸ್ಟ್. ಕೈಗೆ ಗಾಯಗೊಂಡು ವಿಶ್ರಾಂತಿ ಪಡೆದ ನಂತರ ಮೊದಲ ಬಾರಿ ಕ್ರೀಸ್‌ಗೆ ಇಳಿದ ಅವರು ಮೋಹಕ ಬ್ಯಾಟಿಂಗ್ ಮೂಲಕ ಮಿಂಚಿದರು. ತವರಿನಲ್ಲಿ ಇದು ಕಾನ್ವೆ ಅವರ ಮೊದಲ ಟೆಸ್ಟ್ ಪಂದ್ಯವಾಗಿದೆ. ಈ ಶತಕದೊಂದಿಗೆ ಆಡಿರುವ ಏಳು ಇನಿಂಗ್ಸ್‌ಗಳ ಪೈಕಿ ನಾಲ್ಕರಲ್ಲಿ 50ಕ್ಕೂ ಹೆಚ್ಚು ರನ್ ಗಳಿಸಿದ ಸಾಧನೆ ಮಾಡಿದರು.

ಟಾಮ್ ಲಥಾಮ್ ವಿಕೆಟ್ ಉರುಳಿದಾಗ ಬಾಂಗ್ಲಾ ಪಾಳಯದಲ್ಲಿ ಸಂಭ್ರಮ ಮೂಡಿತು. ಆದರೆ ಯಂಗ್ ಮತ್ತು ಕಾನ್ವೆ 138 ರನ್‌ಗಳ ಜೊತೆಯಾಟವಾಡಿ ಆ ಸಂತಸಕ್ಕೆ ತಣ್ಣೀರು ಸುರಿದರು. ಅರ್ಧಶತಕ ದಾಟಿದ ಕೂಡಲೇ ಯಂಗ್ ರನೌಟ್ ಆದರು.

ನಿವೃತ್ತಿಯ ಅಂಚಿನಲ್ಲಿರುವ ಅನುಭವಿ ರಾಸ್ ಟೇಲರ್ ಕ್ರೀಸ್‌ಗೆ ಬಂದ ನಂತರ ಬಾಂಗ್ಲಾ ಬೌಲರ್‌ಗಳು ಮತ್ತೆ ನಿರಾಸೆಗೆ ಒಳಗಾದರು. ಇಬ್ಬರೂ 50 ರನ್‌ಗಳ ಜೊತೆಯಾಟವಾಡಿದರು.

ಟೇಲರ್ ಔಟಾದ ನಂತರ ಹೆನ್ರಿ ನಿಕೊಲ್ಸ್ ಉತ್ತಮ ಬ್ಯಾಟಿಂಗ್ ಮಾಡಿದರು. ನಿಕೊಲ್ಸ್ ಜೊತೆ 31 ರನ್‌ಗಳನ್ನು ಸೇರಿಸಿದ ಟಾಮ್ ಬ್ಲಂಡೆಲ್ 88ನೇ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರು. ಆಗ ದಿನದಾಟವನ್ನು ಮುಕ್ತಾಯಗೊಳಿ-ಸಲಾಯಿತು.

ಡೇವೊನ್ ಕಾನ್ವೆ ಅವರ ಬ್ಯಾಟಿಂಗ್ ಶೈಲಿ –ಎಎಫ್‌ಪಿ ಚಿತ್ರ

**ಸ್ಕೋರ್ ಕಾರ್ಡ್**

**ನ್ಯೂಜಿಲೆಂಡ್ 5ಕ್ಕೆ258 (87.3 ಓವರ್)**
ಲಥಾಮ್ ಸಿ ಲಿಟನ್ ಬಿ ಶರೀಫುಲ್ 1 (14 ಎ), ಯಂಗ್ ರನೌಟ್ (ನಜ್ಮುಲ್/ಲಿಟನ್) 52 (135 ಎ, 4x6), ಕಾನ್ವೆ ಸಿ ಲಿಟನ್ ಬಿ ಮೊಮಿನುಲ್ 122 (227 ಎ, 4x16, 6x1), ಟೇಲರ್ ಸಿ ಶಾದ್ಮನ್ ಬಿ ಶರೀಫುಲ್ 31 (64 ಎ, 4x5), ನಿಕೊಲ್ಸ್ ಬ್ಯಾಟಿಂಗ್ 32 (63 ಎ, 4x5), ಬ್ಲಂಡೆಲ್ ಬಿ ಇಬಾದತ್ 11 (25 ಎ, 4x2)
**ಇತರೆ** (ಬೈ 1, ಲೆಗ್‌ಬೈ 3, ನೋಬಾಲ್ 3, ವೈಡ್ 2) 9
**ವಿಕೆಟ್ ಪತನ:** 1-1 (ಟಾಮ್ ಲಥಾನ್, 3.3), 2-139 (ವಿಲ್ ಯಂಗ್, 48.3), 3-189 (ರಾಸ್ ಟೇಲರ್, 66.4), 4-227 (ಡೇವೊನ್ ಕಾನ್ವೆ, 79.1), 5-258 (ಟಾಮ್ ಬ್ಲಂಡೆಲ್, 87.3)
**ಬೌಲಿಂಗ್:** ರಾತಸ್ಕಿನ್ ಅಹಮ್ಮದ್ 20–5–61–0, ಶರೀಫುಲ್ ಇಸ್ಲಾಂ 20–5–53–2, ಇಬಾದತ್ ಹೊಸೇನ್ 15.3–3–53–1, ಮೆಹದಿ ಹಸನ್ 27–7–72–0, ನಜ್ಮುಲ್ ಹೊಸೇನ್ 2–0–10–0, ಮೊಮಿನುಲ್ ಹಕ್ 3–0–5–1

## ಈಕ್ವೆಸ್ಟ್ರಿಯನ್: ಅನೀಶ್ ಚಿನ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಅನೀಶ್ ಕಾಮತ್ ಅವರು ಇತ್ತೀಚೆಗೆ ನಡೆದ ರಾಷ್ಟ್ರೀಯ ಜೂನಿಯರ್ ಈಕ್ವೆಸ್ಟ್ರಿಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಮುಂಬೈನಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಶೋ ಜಂಪಿಂಗ್ ನಾರ್ಮಲ್ (ವೈಯಕ್ತಿಕ) ವಿಭಾಗದಲ್ಲಿ ಅವರು 47.72 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಬೆಂಗಳೂರಿನ ರೇವಾ ಸ್ವತಂತ್ರ ಪಿಯು ಕಾಲೇಜು ವಿದ್ಯಾ-ರ್ಥಿಯಾಗಿರುವ ಅನೀಶ್, ಎಂಬೆಸಿ ರೈಡಿಂಗ್ ಸ್ಕೂಲ್‌ನಲ್ಲಿ ತರಬೇತಿ ಪಡೆ-ಯುತ್ತಿದ್ದಾರೆ. ಸತತ ಮೂರನೇ ವರ್ಷ ಅವರು ರಾಷ್ಟ್ರೀಯ ಜೂನಿಯರ್ ಈಕ್ವೆ-ಸ್ಟ್ರಿಯನ್ ಚಾಂಪಿಯನ್‌ಷಿಪ್‌ಗೆ ಅವರು ಅರ್ಹತೆ ಗಳಿಸಿದ್ದಾರೆ.

ಅನೀಶ್ ಅವರು ಮುಂಬೈನ ಶ್ಲೋಕ್ ಜುಂಜುನ್‌ವಾಲಾ ಅವರೊಂದಿಗೆ ಶ್ರೇಷ್ಠ ರೈಡರ್ ಕೂಡ ಎನಿಸಿಕೊಂಡರು.

## ಗಂಗೂಲಿಗೆ ಡೆಲ್ಟಾ ಪ್ಲಸ್ ಸೋಂಕು

ಸೌರವ್ ಗಂಗೂಲಿ

**ಕೋಲ್ಕತ್ತ (ಪಿಟಿಐ):** ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಅವರಿಗೆ ಕೋವಿಡ್-19ನ ರೂಪಾಂತರಿತ ಸೋಂಕು ಡೆಲ್ಟಾ ಪ್ಲಸ್ ಇರುವುದು ಖಚಿತವಾಗಿದೆ.

ನಾಲ್ಕು ದಿನಗಳ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಗಂಗೂಲಿ ಶುಕ್ರವಾರ ಮನೆಗೆ ಮರಳಿದ್ದರು. ಅವರಿಗೆ ಸೋಂಕಿನ ಲಕ್ಷಣಗಳು ತೀವ್ರವಾಗಿಲ್ಲ ಮತ್ತು ಮನೆಯಲ್ಲಿ ಪ್ರತ್ಯೇಕವಾಸದ-ಲ್ಲೇ ಚೇತರಿಸಿಕೊಳ್ಳಬಹುದು ಎಂದು ಆಸ್ಪತ್ರೆಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

‘ಸೌರವ್ ಅವರಿಂದ ಸಂಗ್ರಹಿಸಿದ್ದ ಮಾದರಿಯಲ್ಲಿ ಡೆಲ್ಟಾ ಪ್ಲಸ್ ಇರುವುದು ದೃಢಪಟ್ಟಿದೆ. ಅದಕ್ಕೆ ನಾವು ಚಿಕಿತ್ಸೆ ನೀಡುತ್ತಿದ್ದೇವೆ’ ಎಂದು ಅಧಿಕಾರಿ ತಿಳಿಸಿದ್ದಾರೆ.

## ಹೊಸ ವರ್ಷದ ಸಂಭ್ರಮ...

ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿರುವ ಭಾರತ ಕ್ರಿಕೆಟ್ ತಂಡದ ಆಟಗಾರರು, ನೆರವು ಸಿಬ್ಬಂದಿ ಮತ್ತು ಹೋಟೆಲ್ ಸಿಬ್ಬಂದಿ ಮತ್ತಿತರರು ಹೊಸ ವರ್ಷದ ಸಂಭ್ರಮ ಆಚರಿಸಿದರು – ಟ್ವಿಟರ್ ಚಿತ್ರ

## ಉದ್ದೀಪನ ಮದ್ದು: ಸಿಕ್ಕಿಬಿದ್ದ ತರಂಜೀತ್

**ನವದೆಹಲಿ (ಪಿಟಿಐ):** ಭಾರತದ 23 ವರ್ಷದೊಳಗಿನವರ ಅಥ್ಲೆಟಿಕ್ಸ್‌ನಲ್ಲಿ ಅತಿ ವೇಗದ ಓಟಗಾರ್ತಿ ತರಂಜೀತ್ ಕೌರ್ ಉದ್ದೀಪನ ಮದ್ದು ಸೇವಿಸಿರುವುದು ದೃಢಪಟ್ಟಿದೆ.

ದೆಹಲಿಯ 20 ವರ್ಷದ ಅಥ್ಲೀಟ್ ತರಂಜೀತ್ ಅವರು ಸೆಪ್ಟೆಂಬರ್‌ನಲ್ಲಿ ನಡೆದಿದ್ದ 23 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ 100 ಮೀಟರ್ಸ್ ಮತ್ತು 200 ಮೀಟರ್ಸ್ ಓಟಗಳಲ್ಲಿ ಚಿನ್ನದ ಪದಕ ಜಯಿಸಿದ್ದರು. ಈ ಸ್ಪರ್ಧೆಗಳಲ್ಲಿ ಅವರು ಕ್ರಮವಾಗಿ 11.54 ಸೆಕೆಂಡು ಮತ್ತು 23.57 ಸೆಕೆಂಡುಗಳ ಕಾಲ ತೆಗೆದುಕೊಂಡಿದ್ದರು.

‘ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು (ನಾಡಾ) ಸ್ಪರ್ಧೆಯ ಸಂದರ್ಭದಲ್ಲಿ ಮಾಡಿದ ಪರೀಕ್ಷೆಯಲ್ಲಿ ತರಂಜೀತ್ ಮದ್ದು ಸೇವಿಸಿರುವ ಖಚಿತವಾಗಿದೆ’ ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರೀಯ 23 ವರ್ಷದೊಳಗಿ-ನವರ ಅಥವಾ ರಾಷ್ಟ್ರೀಯ ಮುಕ್ತ ಚಾಂಪಿಯನ್‌ಷಿಪ್‌ಗಳಲ್ಲಿ ಅವರು ಈ ಮದ್ದು ಸೇವನೆ ಮಾಡಿದ್ದರು ಎಂದು ಹೇಳಲಾಗಿದೆ.

## ಮ್ಯಾಂಚೆಸ್ಟರ್ ಸಿಟಿ ಜಯಭೇರಿ

**ಲಂಡನ್ (ಎಎಫ್‌ಪಿ):** ಇಂಜುರಿ ಟೈಮ್‌ನಲ್ಲಿ ರೋಡ್ರಿ ಹೆಮಾಂಜ್ ಗಳಿಸಿದ ಗೋಲಿನ ಬಲದಿಂದ ಮ್ಯಾಂಚೆಸ್ಟರ್ ಸಿಟಿ ತಂಡವು ಇಂಗ್ಲಿಷ್ ಪ್ರೀಮಿಯರ್ ಲೀಗ್ (ಇಪಿಎಲ್) ಫುಟ್‌ಬಾಲ್ ಟೂರ್ನಿಯಲ್ಲಿ 2–1 ರಿಂದ ಅರ್ಸೆನಲ್ ವಿರುದ್ಧ ಜಯಿಸಿತು.

ಅರ್ಸೆನಲ್ ತಂಡದ ಬುಕಾಯೊ ಸಾಕಾ (31ನೇ ನಿ) ಮೊದಲ ಗೋಲು ಗಳಿಸಿದರು. ಆದರೆ, 57ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಮ್ಯಾಂಚೆಸ್ಟರ್ ಸಿಟಿಯ ರಿಯಾದ್ ಮೆಹರೇಜ್ ಗೋಲು ಗಳಿಸಿ ಸಮಬಲಕ್ಕೆ ಕಾರಣರಾದರು. ರೊಡ್ರಿ (90 + 3ನಿ) ಗೋಲು ಹೊಡೆದರು. ಇದರೊಂದಿಗೆ ಮ್ಯಾಂಚೆಸ್ಟರ್ ಸಿಟಿ ಜಯ ಸಾಧಿಸಿತು.

**ಹೈದರಾಬಾದ್ ರೇಸ್**

### ಬ್ಯಾಲೆರಿನಾ ಗೆಲ್ಲುವ ನಿರೀಕ್ಷೆ

ಬೈರ್ಲಿ ಟರ್ಕ್ ಮಿಲಿಯನ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಬ್ಯಾಲೆರಿನಾ ಈ ರೇಸ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.15ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅಡಮಾಸ್ 1, ಕಾರ್ಲಿಸ್ಲ್ 2, ಹೈ ರಿವಾರ್ಡ್ 5
2ನೇ ರೇಸ್: ಮಲ್ಟಿ ಮೊಮೆಂಟ್ 2, ಬ್ಲೂಮ್ ಬಡ್ಡಿ 1, ಮಲಾಲ 3
3ನೇ ರೇಸ್: ಏರಿಯಲ್ ಕಂಬಾಟ್ 11, ಬ್ರಿಲಿಯಂಟ್ ವ್ಯೂ 4, ಗ್ರೀನ್ ಟರ್ಫ್ 10
4ನೇ ರೇಸ್: ಕ್ಯಾಂಪೇನಿಯಾ 3, ಡ್ರೀಮ್ ಸ್ಟೇಷನ್ 4, ಗುರ್ಬಾಜ್ 9
5ನೇ ರೇಸ್: ಬ್ಯಾಲೆರಿನಾ 1, ಎನ್.ಆರ್.ಐ ಸೂಪರ್‌ಸ್ಟಾರ್ 7, ಹ್ಯಾಪಿ ಗೋ ಲಕಿ 2
6ನೇ ರೇಸ್: ಕ್ಯಾಷ್ ರಿಜಿಸ್ಟರ್ 2, ವಾಟ್ಸ್ ಅಪ್ ಜಾಯ್ 8, ಓವರ್ ಜಾಯ್ 4

**ಉತ್ತಮ ಬೆಟ್: ಅಡಮಾಸ್**

| ಜಾಕ್‌ಪಾಟ್ | ಮಿನಿ ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|---|
| 2,3,4,5,6 | 3,4,5,6 | 1,2,3 | 4,5,6 |

## ಐಎಸ್‌ಎಲ್: ಅಗ್ರಸ್ಥಾನದ ಮೇಲೆ ಕೇರಳ ಕಣ್ಣು

**ವಾಸ್ಕೊ (ಪಿಟಿಐ):** ಎರಡು ದಿನಗಳ ವಿರಾಮದ ನಂತರ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿ ಭಾನುವಾರ ಮತ್ತೆ ಕಳೆಗಟ್ಟಲಿದ್ದು ಹೊಸ ವರ್ಷದಲ್ಲಿ ಹೊಸ ನಿರೀಕ್ಷೆಯೊಂದಿಗೆ ತಂಡಗಳು ಸವಾಲಿಗೆ ಸಜ್ಜಾಗಿವೆ.

ಭಾನುವಾರ ಎರಡು ಪಂದ್ಯಗಳು ನಡೆಯಲಿದ್ದು ವಾಸ್ಕೊದಲ್ಲಿ ನಡೆಯಲಿರುವ ಮೊದಲ ಹಣಾಹಣಿಯಲ್ಲಿ ಕೇರಳ ಬ್ಲಾಸ್ಟರ್ಸ್ ಮತ್ತು ಅತಿಥೇಯ ಎಫ್‌ಸಿ ಗೋವಾ ಮುಖಾ-ಮುಖಿಯಾಗಲಿವೆ. ಅಮೋಘ ಲಯದಲ್ಲಿರುವ ಕೇರಳ ತಂಡ ಪಾಯಿಂಟ್ ಪಟ್ಟಿಯ ಅಗ್ರಸ್ಥಾನದ ಮೇಲೆ ಕಣ್ಣಿಟ್ಟು ಆಡಲಿದೆ. ಗೋವಾಗೆ ಈ ಬಾರಿ ನಿರೀಕ್ಷಿತ ಸಾಮರ್ಥ್ಯ ತೋರಲು ಸಾಧ್ಯವಾಗದೇ ಇರುವ ಕಾರಣ ಕೇರಳದ ನಿರೀಕ್ಷೆ ಗರಿಗೆದರಿದೆ. ಹಿಂದಿನ ಏಳು ಪಂದ್ಯಗಳಲ್ಲಿ ಕೇರಳ ಬ್ಲಾಸ್ಟರ್ಸ್ ಸೋಲು ಕಂಡಿಲ್ಲ. ಇವಾನ್ ವುಕೊಮನೊವಿಚ್ ತರಬೇತಿ ನೀಡುತ್ತಿರುವ ತಂಡ ಈ ಬಾರಿ ಅತ್ಯುತ್ತಮ ಫಾರ್ಮ್‌ನಲ್ಲಿದೆ. ಮಿಡ್‌ಫೀಲ್ಡ್ ಮತ್ತು ಫಾರ್ವರ್ಡ್ ವಿಭಾಗದ ಆಟಗಾರರು ತಂಡದ ಆಧಾ-ರವಾಗಿದ್ದಾರೆ.

**ಜೆಮ್ಶೆಡ್‌ಪುರ–ಚೆನ್ನೈಯಿನ್ ಹಣಾಹಣಿ:** ಬ್ಯಾಂಬೊಲಿಮ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಜೆಮ್ಶೆಡ್‌ಪುರ ಎಫ್‌ಸಿ (ಜೆಎಫ್‌ಸಿ) ಮತ್ತು ಚೆನ್ನೈಯಿನ್ ಎಫ್‌ಸಿ ತಂಡಗಳು ಸೆಣಸಲಿವೆ. ಹಿಂದಿನ ಎರಡು ಪಂದ್ಯಗಳಲ್ಲಿ ಸೋತಿರುವುದರಿಂದ ಚೆನ್ನೈಯಿನ್ ನಿರಾಸೆಯಲ್ಲಿದೆ.

ಜೆಮ್ಶೆಡ್‌ಪುರ ಹಿಂದಿನ ಎರಡು ಪಂದ್ಯಗಳಲ್ಲಿ ಸೋತಿದೆ.

**ಇಂದಿನ ಪಂದ್ಯ**
ಕೇರಳ ಬ್ಲಾಸ್ಟರ್ಸ್–ಎಫ್‌ಸಿ ಗೋವಾ
ಸ್ಥಳ: ತಿಲಕ್ ಮೈದಾನ್, ವಾಸ್ಕೊ
ರಾತ್ರಿ 7.30
ಜೆಮ್ಶೆಡ್‌ಪುರ ಎಫ್‌ಸಿ–ಚೆನ್ನೈಯಿನ್ ಎಫ್‌ಸಿ
ಸ್ಥಳ: ಅಥ್ಲೆಟಿಕೊ ಕ್ರೀಡಾಂಗಣ, ಬ್ಯಾಂಬೊಲಿಮ್
9.30 ರಾತ್ರಿ
ಲೈವ್: ಸ್ಟಾರ್ ಸ್ಪೋರ್ಟ್ಸ್